ಶುಕ್ರವಾರ, ನವೆಂಬರ್ 10, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಾಯು ಮಾಲಿನ್ಯ
ದೆಹಲಿಯಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತ

ಕಿಯೋನಿಕ್ಸ್ ಅವ್ಯವಹಾರ: ಲೆಕ್ಕಪರಿಶೋಧನಾ ವರದಿ ಆಧಾರದಲ್ಲಿ ಕ್ರಮ– ಸಚಿವ ಪ್ರಿಯಾಂಕ್ ಖರ್ಗೆ

₹500 ಕೋಟಿ ಹಗರಣದ ತನಿಖೆ ಆಯೋಗಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ₹500 ಕೋಟಿ ಅವ್ಯವಹಾರದ ತನಿಖೆಯನ್ನು ನಿವೃತ್ತ ನ್ಯಾ. ನಾಗಮೋಹನ್ ದಾಸ್ ವಿಚಾರಣಾ ಆಯೋಗಕ್ಕೆ ವಹಿಸಲಾಗುವುದು ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಲೆಕ್ಕಪರಿಶೋಧನಾ ವರದಿಯನ್ನು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, 2018–19ರಿಂದ 2022–23ರ ಅವಧಿಯಲ್ಲಿ ಅವ್ಯವಹಾರ ನಡೆದಿರುವುದನ್ನು ಲೆಕ್ಕಪರಿಶೋಧಕರು ಪತ್ತೆ ಮಾಡಿದ್ದರು. ಹಣ ದುರುಪಯೋಗದ ವಿವರಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ನಮೂದಿಸಲಾಗಿದೆ.

ಮುಖ್ಯಾಂಶಗಳು

- ಶೇ 38ರಿಂದ ಶೇ 1,577ರಷ್ಟು ಅಧಿಕ ದರ ನಮೂದು
- ಅಧಿಕ ದರ ನಮೂದಿಸಿ ₹47.76 ಕೋಟಿ ವಂಚನೆ
- ಪರಿಶೀಲನೆ ನಡೆಸದೇ ₹76.5 ಕೋಟಿ ಬಿಡುಗಡೆ

ಇಲಾಖೆಯಿಂದ ಪ್ರಾಥಮಿಕ ತನಿಖೆ ನಡೆಸಿ, ನಂತರ ಇಡೀ ಪ್ರಕರಣವನ್ನು ಆಯೋಗಕ್ಕೆ ಹಸ್ತಾಂತರಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಂಪ್ಯೂಟರ್, ಲ್ಯಾಪ್‌ಟಾಪ್, ಯುಪಿಎಸ್, ಸಿಸಿಟಿವಿ ಕ್ಯಾಮೆರಾ, ಸ್ಮಾರ್ಟ್ ತರಗತಿಯ ಉಪಕರಣಗಳು, ಟೇಬಲ್‌ಗಳು ಸೇರಿದಂತೆ ವಿವಿಧ ಸಾಮಗ್ರಿಗಳ ಖರೀದಿ, ಪೂರೈಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ವಿವರ ನೀಡಿದರು.

ಬಿಲ್ ನೀಡಿದ್ದ ₹60 ಸಾವಿರಕ್ಕೆ ₹1 ಲಕ್ಷ ಪಾವತಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಸಾಮಗ್ರಿ ಪೂರೈಸಿದ ಕುರಿತು ಸ್ಥಳ ಪರಿಶೀಲನಾ ವರದಿ ಪಡೆಯದೇ ₹71.5 ಕೋಟಿ ನೀಡಲಾಗಿದೆ. ಮೂರನೇ ಸಂಸ್ಥೆ ನಡೆಸಿದ ಪರಿಶೀಲನಾ ವರದಿ ಪಡೆಯುವ ಮೊದಲೇ ₹9.98 ಕೋಟಿಯನ್ನು ಸಾಮಗ್ರಿ ಪೂರೈಕೆ ಸಂಸ್ಥೆಗೆ ಪಾವತಿಸಲಾಗಿದೆ. ಸಂಸ್ಥೆಯೊಂದು ₹9.98 ಕೋಟಿಯ ಬಿಲ್ ನೀಡಿದರೆ, ಕಿಯೋನಿಕ್ಸ್ ಅವರಿಗೆ ₹10.51 ಕೋಟಿ ಪಾವತಿಸಿದೆ ಎಂದರು.

ಯಾವುದೇ ಸಾಮಗ್ರಿ ಪೂರೈಸುವ ಮೊದಲು, ಪೂರೈಸಿದ ನಂತರ ಗುತ್ತಿಗೆದಾರರು ಎರಡು ಬಿಲ್ ನೀಡಬೇಕು. ಒಂದು ಪ್ರಕರಣದಲ್ಲಿ ನಕಲಿ ಬಿಲ್ ಆಧಾರದಲ್ಲೇ ₹9.30 ಕೋಟಿ ಹಾಗೂ ಬಿಲ್‌ನ ಛಾಯಾಪ್ರತಿ ಪಡೆದು ₹1.26 ಕೋಟಿ ನೀಡಲಾಗಿದೆ. ಆಶ್ರಮಶಾಲೆ, ಪರಿಶಿಷ್ಟರ ಹಾಸ್ಟೆಲ್‌ಗಳಿಗೆ ಕಂಪ್ಯೂಟರ್ ಲ್ಯಾಬ್, ಸಾಫ್ಟ್‌ವೇರ್ ಅಳವಡಿಸದೇ ₹6 ಕೋಟಿ, 474 ಸಿಸಿಟಿವಿ ಕ್ಯಾಮೆರಾ ಅಳವಡಿಗೆ ಆದೇಶ ಪಡೆದು ಕೇವಲ 79 ಅಳವಡಿಸಿದ್ದಕ್ಕೆ ₹4.43 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಕಡಿಮೆ ದರ ನಮೂದಿಸಿ, ನಂತರ ಹೆಚ್ಚು ದರದ ಬಿಲ್ ಪಡೆದ ಪ್ರಕರಣದಲ್ಲಿ ₹2 ಕೋಟಿ, ಮೂಲ ದರ ವ್ಯತ್ಯಾಸ ಮಾಡಿ ₹1.55 ಕೋಟಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಭ್ರಷ್ಟಾಚಾರ ತಡೆಗೆ ಮೂರು ಸಮಿತಿ

ಕಿಯೋನಿಕ್ಸ್‌ನಲ್ಲಿ ಹಗರಣಗಳು ಮತ್ತೆ ಮರುಕಳಿಸದಂತೆ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು. ಟೆಂಡರ್ ಆಹ್ವಾನದಿಂದ ಸಾಮಗ್ರಿ ಪೂರೈಕೆಯವರೆಗೆ ಕಣ್ಗಾವಲು ಇಡಲು ಮೂರು ಸಮಿತಿಗಳನ್ನು ರಚಿಸಲಾಗುವುದು. ಮೂರನೇ ಸಂಸ್ಥೆಯ ತಪಾಸಣೆ ಕಡ್ಡಾಯಗೊಳಿಸಲಾಗುವುದು. 4ಜಿ ರಿಯಾಯಿತಿ ದುರುಪಯೋಗ ಮಾಡಿಕೊಳ್ಳುವ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಹಿಂದಿನ ಸರ್ಕಾರದ ಸಚಿವರು, ಕೆಲ ಶಾಸಕರಿಗೂ ಕುತ್ತು?

ಹಗರಣದಲ್ಲಿ ಹಲವು ಗುತ್ತಿಗೆದಾರರ ಜತೆಗೆ ಹಿಂದಿನ ಸರ್ಕಾರದ ಅವಧಿಯಲ್ಲಿನ ಕೆಲ ಸಚಿವರು ಹಾಗೂ ಕೆಲವು ಶಾಸಕರು ಭಾಗಿಯಾಗಿರುವ ಶಂಕೆ ಇದೆ. ತನಿಖೆಯ ನಂತರ ಭಾಗಿಯಾದವರು ಸಿಲುಕಿಕೊಳ್ಳಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಕಿಯೋನಿಕ್ಸ್‌ಗೆ ಸಂಬಂಧಿಸಿದಂತೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಬಿಜೆಪಿಯ ಕೆಲವರು ಒತ್ತಾಯಿಸುತ್ತಿದ್ದಾರೆ. ಸಿಎಜಿ ವರದಿಯ ತನಿಖೆಯ ನಂತರ ಅವರ ಬಂಡವಾಳವೂ ಬಯಲಾಗಲಿದೆ. ಇದರ ಹಿಂದೆ ಯಾರಿದ್ದಾರೆ ಎನ್ನುವುದು ಗೊತ್ತಿದೆ. ಸಮಯ ಬಂದಾಗ ಹೇಳುತ್ತೇನೆ' ಎಂದರು.

ಕೆಇಎ ಪರೀಕ್ಷಾ ಹಗರಣದ ಕಿಂಗ್‌ಪಿನ್ ತಪ್ಪಿಸಿಕೊಂಡ ಪ್ರಕರಣದಲ್ಲಿ ಲೋಪವಾಗಿರುವುದು ನಿಜ. ಕೆಲ ಅಧಿಕಾರಿಗಳು ಬಿಜೆಪಿಯ ಹ್ಯಾಂಗೋವರ್‌ನಿಂದ ಹೊರಬಂದಿಲ್ಲ. ಅಂಥವರಿಂದ ಹೀಗಾಗಿದೆ. ಆದರೆ, ಆರೋಪಿಯನ್ನು ಬಿಡುವ ಪ್ರಶ್ನೆಯೇ ಇಲ್ಲ. ಬಂಧನಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ಸುದ್ದಿ 2 ನಿಮಿಷ

ಆರ್‌.ಡಿ.ಪಾಟೀಲನನ್ನು ಬಿಡುವ ಪ್ರಶ್ನೆಯೇ ಇಲ್ಲ: ಗೃಹ ಸಚಿವ

ಬೆಂಗಳೂರು: 'ಕೆಇಎ ಪರೀಕ್ಷೆ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲನನ್ನು ಯಾವುದೇ ಕಾರಣಕ್ಕೂ ಬಿಡುವ ಪ್ರಶ್ನೆಯೇ ಇಲ್ಲ. ಬಿಜೆಪಿಯವರಿಗೆ ಕಾಮಾಲೆ ಕಣ್ಣು ಇರುವುದರಿಂದ, ಅವರಿಗೆ ಕಾಣುವುದೆಲ್ಲ ಹಳದಿಯೇ' ಎಂದು ಗೃಹ ಸಚಿವ ಜಿ. ಪರಮೇಶ್ವರ ಕಿಡಿಕಾರಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಆರ್‌.ಡಿ. ಪಾಟೀಲ ನಾಪತ್ತೆ ಪ್ರಕರಣದಲ್ಲಿ ಪೊಲೀಸರ ತಪ್ಪಿದ್ದರೆ, ಪೊಲೀಸರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಇಬ್ಬರು ಪೊಲೀಸರ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡಿದ್ದೇವೆ' ಎಂದರು.

'ಈ ಪ್ರಕರಣದಲ್ಲಿ ಬಿಜೆಪಿಯವರು ವಿನಾ ಕಾರಣ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಆರೋಪ ಮಾಡುತ್ತಿದ್ದಾರೆ' ಎಂದರು.

ಜಾತಿಗಣತಿ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ನೂರಾರು ಕೋಟಿ ಖರ್ಚು ಮಾಡಿ ಜಾತಿಗಣತಿ ಮಾಡಿಸಲಾಗಿದೆ. ಆ ವರದಿಯಲ್ಲಿ ಏನಿದೆ ಎಂದು ಗೊತ್ತಾಗ ಬೇಕಲ್ಲವೇ?' ಎಂದರು.

ಮನೆ ಬಾಡಿಗೆಗೆ ಕೊಟ್ಟ ಮಾಲೀಕ, ಸೂಪರ್ ವೈಸರ್ ಬಂಧನ

ಕಲಬುರಗಿ: ಆರ್‌.ಡಿ.ಪಾಟೀಲ ಬಗ್ಗೆ ಸರಿಯಾದ ಮಾಹಿತಿ ಪಡೆದುಕೊಳ್ಳದೆ ಮನೆ ಬಾಡಿಗೆಗೆ ನೀಡಿದ ಅಪಾರ್ಟ್‌ಮೆಂಟ್ ಮಾಲೀಕ ಶಂಕರಗೌಡ ರಾಮಚಂದ್ರ ಯಾಳವಾರ ಹಾಗೂ ಅಲ್ಲಿನ ಸೂಪರ್ ವೈಸರ್ ಶಹಾಬಾದ್ ಮೂಲದ ದಿಲೀಪ್ ಪವಾರ ಎಂಬುವರನ್ನು ಅಫಜಲಪುರ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಆರ್‌.ಡಿ. ಪಾಟೀಲನ ಮತ್ತೊಬ್ಬ ಸಹಚರನನ್ನು ಅಶೋಕ ನಗರ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಜೇವರ್ಗಿ ತಾಲ್ಲೂಕಿನ ನೆಲೋಗಿ ಗ್ರಾಮದ ಶಿವರಾಜ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ನಗರದ ಅಪಾರ್ಟ್‌ಮೆಂಟ್ ಒಂದರಿಂದ ತಪ್ಪಿಸಿಕೊಳ್ಳಲು ಆರ್‌.ಡಿ. ಪಾಟೀಲನಿಗೆ ನೆರವಾಗಿದ್ದ ಇಬ್ಬರು ಆಪ್ತರನ್ನು ಸೋಲಾಪುರ ಸಮೀಪ ಬುಧವಾರ ವಶಕ್ಕೆ ಪಡೆದ ಬೆನ್ನಲ್ಲೇ ಪೊಲೀಸರು ಮತ್ತೊಬ್ಬನನ್ನು ವಶಕ್ಕೆ ಪಡೆದು ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಅಕ್ಟೋಬರ್ 28ರಂದು ನಡೆದಿದ್ದ ಕೆಇಎ ಪರೀಕ್ಷೆ ಬಳಿಕ ಆರ್‌.ಡಿ. ಪಾಟೀಲ ತಲೆ ಮರೆಸಿಕೊಂಡಿದ್ದಾನೆ.

'ಗಜ ಪ್ರಸವ': ಹಿಮ್ಮೆಟ್ಟಿಸುವ ಕಾರ್ಯಾಚರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಾಡಾನೆ ಹಿಮ್ಮೆಟ್ಟಿಸುವ ಕಾರ್ಯಾಚರಣೆಗೆ ಗುರುವಾರ ಚಾಲನೆ ದೊರೆತಿದೆ. ಆದರೆ, ಕಾಡಾನೆಯ ಗುಂಪಿನಲ್ಲಿರುವ ಆನೆಯೊಂದು ಮರಿ ಹಾಕಿದ್ದು, ಕಾರ್ಯಾಚರಣೆಗೆ ತೊಡಕಾಗಿದೆ.

ಮೂಡಿಗೆರೆ, ಆಲ್ದೂರು ಭಾಗದಲ್ಲಿ ಬೀಡುಬಿಟ್ಟಿರುವ ಏಳು ಕಾಡಾನೆ ಗುಂಪಿಗೆ ಅರಣ್ಯ ಇಲಾಖೆ ಭುವನೇಶ್ವರಿ ಎಂದು ಹೆಸರಿಟ್ಟಿದೆ. ಈ ತಂಡದ ಸಲಗವೊಂದು ಬೇರ್ಪಟ್ಟಿದ್ದು, ಬುಧವಾರ ಗಾಳಿಗುಂಡಿ ಗ್ರಾಮದ ಯುವತಿಯನ್ನು ಬಲಿ ಪಡೆದುಕೊಂಡಿದೆ. ಎರಡು ತಿಂಗಳ ಹಿಂದೆಯೂ ಕಾರ್ಮಿಕರೊಬ್ಬರ ಮೇಲೆ ದಾಳಿ ಮಾಡಿ ಬಲಿ ತೆಗೆದುಕೊಂಡಿತ್ತು.

ಈ ಆನೆಯನ್ನು ಸೆರೆ ಹಿಡಿದು ಸ್ಥಳಾಂತರಿಸಲು ಮತ್ತು ಉಳಿದ ಆನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಆರಂಭಿಸಲು ಅರಣ್ಯ ಇಲಾಖೆ ಅನುಮತಿ ನೀಡಿದೆ. ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಆನೆ ಬಿಡಾರದಿಂದ ಮೂರು ಸಾಕಾನೆಗಳನ್ನು ಕರೆಸಲಾಗಿದ್ದು, ಸೋಮಣ್ಣ, ಬಹದ್ದೂರ್, ಅಲಿ ಎಂಬ ಮೂರು ಗಂಡಾನೆಗಳು ಬಂದಿಳಿದಿವೆ. ಸಕ್ರೆಬೈಲು ಸೋಮಣ್ಣ ಎಂಬ ಆನೆಯ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲು ಉದ್ದೇಶಿಸಲಾಗಿದೆ. ಮತ್ತಾವರ ಸಸ್ಯಕ್ಷೇತ್ರದ ಬಳಿ ಗುರುವಾರ ಪೂಜೆ ನೆರವೇರಿಸಿ ಕಾರ್ಯಾಚರಣೆಗೆ ಅಧಿಕಾರಿಗಳು ಚಾಲನೆ ನೀಡಿದರು.

> ಆನೆ ಮರಿ ಹಾಕಿರುವ ಬಗ್ಗೆ ವೈದ್ಯರು ದೃಢಪಡಿಸಿದ್ದಾರೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಾಚರಣೆ ನಡೆಯಲಿದೆ.
> **ಕೆ.ಎಸ್.ಮೋಹನ್,** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

ಮೊದಲಿಗೆ ಗುಂಪಿನಲ್ಲಿರುವ ಆನೆಗಳನ್ನು ಹಿಮ್ಮೆಟ್ಟಿಸಿ ಬಳಿಕ ಒಂಟಿ ಸಲಗ ಸೆರೆ ಹಿಡಿಯುವ ಆಲೋಚನೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಮಾಡಿದ್ದರು. ಗುರುವಾರ ಬೆಳಿಗ್ಗೆ ಕಾಡಿಗೆ ಹೋಗಿದ್ದ ಅಧಿಕಾರಿಗಳ ತಂಡಕ್ಕೆ ಆನೆಯೊಂದು ಮರಿ ಹಾಕಿರುವುದರ ಕುರುಹುಗಳು ಪತ್ತೆಯಾಗಿವೆ.

ಗುರುವಾರ ತಾನೆ ಜನಿಸಿರುವ ಮರಿಯಾನೆ ಇರುವ ಗುಂಪನ್ನು ಏಕಾಏಕಿ ಹಿಮ್ಮೆಟ್ಟಿಸಲು ಆಗುವುದಿಲ್ಲ. ಮರಿಯಾನೆ ಹೆಜ್ಜೆ ಹಾಕುತ್ತಿದೆಯೇ, ಅದನ್ನು ರಕ್ಷಣೆ ಮಾಡಿಕೊಂಡು ಮುಂದೆ ಸಾಗಲು ತಾಯಿ ಆನೆ ಶಕ್ತಿಯುತವಾಗಿ ಇದೆಯೇ ಎಂಬುದನ್ನು ಗಮನಿಸಬೇಕು. ಏಕಾಏಕಿ ಹಿಮ್ಮೆಟ್ಟಿಸಲು ಪ್ರಯತ್ನಿಸಿದರೆ ತಾಯಿ ಆನೆ ಘಾಸಿಗೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಪರಿಸ್ಥಿತಿ ಅರಿತು ನಂತರ ನಿಧಾನವಾಗಿ ಕಾಡಿನ ಕಡೆಗೆ ಕಳುಹಿಸಬೇಕಾಗುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಡ್ರೋನ್ ಮೂಲಕ ಸಲಗ ಹುಡುಕಾಟ

ಇನ್ನೊಂದೆಡೆ, ಬುಧವಾರ ಯುವತಿಯನ್ನು ಬಲಿ ಪಡೆದ ಸಲಗ ಗುರುವಾರ ಕಂಚಿನಕಲ್ಲು ದುರ್ಗಾದಿಂದ ಬಾಸ್ತಿ ಮೀಸಲು ಅರಣ್ಯದ ಕಡೆ ಸಂಚರಿಸುತ್ತಿದೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಕಲೆಹಾಕಿದ್ದಾರೆ.

ಹಿಂಬಾಲಿಸಿ ಡ್ರೋನ್ ಮೂಲಕ ಆನೆಯ ಹೆಜ್ಜೆ ಗುರುತು ಆಧರಿಸಿ ಹುಡುಕಾಟ ನಡೆಸಿದರು. ಹೆಜ್ಜೆ ಗುರುತು ಪತ್ತೆಯಾದ ಸುತ್ತಮುತ್ತ ಡ್ರೋನ್ ಹಾರಿಸಿ ಹುಡುಕಾಟ ನಡೆಸಿದರೂ ಆನೆ ಪತ್ತೆಯಾಗಲಿಲ್ಲ. ಶುಕ್ರವಾರ ಕೂಡ ಸಲಗಕ್ಕಾಗಿ ಹುಡುಕಾಟ ಮುಂದುವರಿಯಲಿದೆ ಎಂದು ಅರಣ್ಯ ಇಲಾಖೆ ಮೂಲಗಳು ಹೇಳಿವೆ.

ಬಿರುಸಿನ ಹಿಂಗಾರು: ಬೆಳೆಗೆ ತೊಂದರೆ

ನೆಲಕ್ಕೊರಗಿದ 3,724 ಹೆಕ್ಟೇರ್ ಭತ್ತ • ಕೂಡ್ಲಿಗಿಯಲ್ಲಿ 8 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಕೊಪ್ಪಳ/ಹುಬ್ಬಳ್ಳಿ/ಶಿವಮೊಗ್ಗ: ರಾಜ್ಯದ ಉತ್ತರ ಒಳನಾಡು ಮತ್ತು ಮಲೆನಾಡು ಭಾಗದ ವಿವಿಧೆಡೆ ಗುರುವಾರವೂ ಉತ್ತಮ ಮಳೆಯಾಗಿದೆ. ಕೊಪ್ಪಳ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ಶಿವಮೊಗ್ಗ ಜಿಲ್ಲೆಗಳಲ್ಲಿ ಬಿರುಸಿನ ಮಳೆ ಸುರಿದಿದೆ.

ಭಾರಿ ಮಳೆಗೆ ಕೊಪ್ಪಳ ಜಿಲ್ಲೆಯ 3,724 ಹೆಕ್ಟೇರ್ ಪ್ರದೇಶದ ಭತ್ತದ ಬೆಳೆ ಹಾಳಾಗಿದೆ. ಗಂಗಾವತಿ ತಾಲ್ಲೂಕಿನ ಜಂಗಮರ ಕಲ್ಗುಡಿ, ಹಣವಾಳ, ಹೊಸಕೇರಾ, ಢಣಾಪುರ, ಶ್ರೀರಾಮನಗರ ಭಾಗದಲ್ಲಿನ ಭತ್ತದ ಬೆಳೆಗಳು ನೆಲಕ್ಕೆ ಹಾಸಿಕೊಂಡು, ಕಟಾವಿಗೆ ಬಾರದಂತಾಗಿವೆ.

ಗಂಗಾವತಿ, ಕನಕಗಿರಿ ಮತ್ತು ಕಾರಟಗಿ ತಾಲ್ಲೂಕುಗಳಲ್ಲಿ ಒಟ್ಟು 70 ಸಾವಿರ ಹೆಕ್ಟೇರ್‌ನಲ್ಲಿ ಈ ಸಲ ಭತ್ತ ಬಿತ್ತನೆ ಮಾಡಲಾಗಿದೆ. ಬಹುತೇಕ ಕಡೆ ಭತ್ತ ಈಗ ಕಟಾವಿಗೆ ಬಂದಿತ್ತು. ಜೋರು ಗಾಳಿ, ಗುಡುಗಿನ ಆರ್ಭಟದೊಂದಿಗೆ ಸುರಿದ ಮಳೆಯಿಂದಾಗಿ ಬೆಳೆ ಹಾಳಾಗಿದೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಜಹಗಿರನಂದಿಹಾಳದ ನೆಲ ಮಟ್ಟದ ಚಿಕ್ಕ ಸೇತುವೆ ಮುಳುಗಡೆಯಾಗಿದ್ದು, ಗ್ರಾಮಸ್ಥರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಯಿತು. ಕಾಲುವೆಗೆ ತುಂಗಭದ್ರಾ ನೀರು ಬಿಡಲಾಗಿದೆ. ಇದೇ ಅವಧಿಯಲ್ಲಿ ಮಳೆ ಸುರಿದು ಕಾಲುವೆ ತುಂಬಿ ಹರಿಯುತ್ತಿದೆ.

ಶಿವಮೊಗ್ಗದಲ್ಲಿ ಧಾರಾಕಾರ ಮಳೆ: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ರಂಜದಕಟ್ಟೆ ವ್ಯಾಪ್ತಿಯಲ್ಲಿ 3.3 ಸೆಂ.ಮೀ ಮಳೆ ಸುರಿದಿದೆ. ಆಗುಂಬೆ, ಮೇಗರವಳ್ಳಿ, ಕಮ್ಮರಡಿ, ಬಿದರಗೋಡು, ತೀರ್ಥಮುತ್ತೂರು,

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ವ್ಯಾಪ್ತಿಯಲ್ಲಿ ಮಳೆಗೆ ನೆಲ ಕಚ್ಚಿದ ಭತ್ತ

ರಾಮಕೃಷ್ಣಪುರ, ಬಸವಾನಿ, ದೇವಂಗಿ, ಕಟ್ಟೇಹಕ್ಕಲು, ಭಾರತೀಪುರ, ಕುಡುಮಲ್ಲಿಗೆ ಮಾಳೂರು, ಆರಗ, ಕೋಣಂದೂರು, ಅರಳಸುರಳಿ, ಮಂಡಗದ್ದೆ, ಕನ್ನಂಗಿ, ಹಣಗೆರೆಕಟ್ಟೆ ವ್ಯಾಪ್ತಿಯಲ್ಲೂ ಗುಡುಗು ಸಹಿತವಾಗಿ ಧಾರಾಕಾರ ಮಳೆ ಬಿದ್ದಿದೆ.

ಜಿಲ್ಲೆಯಾದ್ಯಂತ ಮೆಕ್ಕೆಜೋಳ ಹಾಗೂ ಭತ್ತದ ಬೆಳೆಯು ಕಟಾವಿನ ಹಂತದಲ್ಲಿದೆ. ಈಗ ಸುರಿಯುತ್ತಿರುವ ಮಳೆಯಿಂದಾಗಿ ಕೃಷಿಕರು ಅಳಿದುಳಿದ ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ, ಚಿಕ್ಕಜಾಜೂರು, ಧರ್ಮಪುರ ಸುತ್ತಮುತ್ತ ಬುಧವಾರ ರಾತ್ರಿಯಿಡೀ ಹದ ಮಳೆಯಾಗಿದೆ.

ಚಿಕ್ಕಜಾಜೂರಿನಲ್ಲಿ ಬುಧವಾರ ಮಧ್ಯಾಹ್ನದಿಂದ ಆರಂಭವಾದ ಮಳೆ ರಾತ್ರಿಯೂ ಸುರಿದಿದ್ದರಿಂದ ಸಮೀಪದ ಗೌರಿಪುರ ಗ್ರಾಮದೊಳಗೆ ನೀರು ನುಗ್ಗಿತ್ತು. ಹಳ್ಳ ಕೊಳ್ಳಗಳು ಮೈದುಂಬಿ ಹರಿದು, ಕೆರೆಗಳಿಗೆ ನೀರು ಹರಿದಿದೆ. ಅಡಿಕೆ ತೋಟಗಳಲ್ಲಿ ನೀರು ನಿಂತಿದೆ.

ಎಂಟು ಮನೆಗಳಿಗೆ ಹಾನಿ: ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ ಉತ್ತಮ ಮಳೆಯಾಯಿತು. ಕೂಡ್ಲಿಗಿಯಲ್ಲಿ ಮಳೆಯಿಂದ ಸುಮಾರು ಎಂಟು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಾದ್ಯಂತ ಉತ್ತಮ ಮಳೆಯಾಯಿತು. ಮಳೆ ಕೊರತೆಯಿಂದ ಒಣಗುತ್ತಿದ್ದ ಬೆಳೆಗಳಿಗೆ ಮಳೆ ಜೀವ ಕಳೆ ತಂದಿದೆ.

ಮೈಸೂರು ಭಾಗದಲ್ಲಿ ಜೋರು ಮಳೆ

ಮೈಸೂರು: ಕೊಡಗು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ವಿವಿಧೆಡೆ ಗುರುವಾರ ನಸುಕಿನಲ್ಲಿ ಜೋರು ಮಳೆಯಾಗಿದೆ.

ಮೈಸೂರು ಹೊರವಲಯದ ಮೇಟಗಳ್ಳಿಯ ಬಿಎಂಶ್ರೀ ನಗರದಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ತೊಂದರೆ ಅನುಭವಿಸಿದರು. ನಂಜನಗೂಡು, ತಿ.ನರಸೀಪುರ, ಹುಣಸೂರು, ಪಿರಿಯಾಪಟ್ಟಣ ಹಾಗೂ ಎಚ್‌.ಡಿ.ಕೋಟೆಯಲ್ಲೂ ಜೋರು ಮಳೆಯಾಗಿದೆ.

ಕೊಡಗು ಜಿಲ್ಲೆಯ ಮಡಿಕೇರಿ ಸೇರಿದಂತೆ ವಿವಿಧೆಡೆ ಗುಡುಗು–ಸಿಡಿಲು ಸಹಿತ ಮಳೆ ಬಿದ್ದಿತು. ಚೆಂಬು ಗ್ರಾಮದ ಆಸುಪಾಸಿನಲ್ಲಿ ಬುಧವಾರ ರಾತ್ರಿಯಿಡೀ ಸುರಿದ ಮಳೆಗೆ ಸಮೀಪದ ದಬ್ಬಡ್ಕ ಸೇತುವೆಗೆ ಹಾನಿಯಾಯಿತು. ಗುರುವಾರ ಇಡೀ ದಿನ ಕಾರ್ಯಾಚರಣೆ ನಡೆಸಿದ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ ಸೇತುವೆಯನ್ನು ದುರಸ್ತಿಪಡಿಸಿದರು.

ನದಿಯಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಶಿರಸಿ: ಸೋಂದಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೀಮನಪಾದ ಬಳಿ ಶಾಲ್ಮಲಾ ನದಿಗೆ ಸ್ನಾನಕ್ಕೆ ತೆರಳಿದ್ದ ವಿದ್ಯಾರ್ಥಿ, ಯಲ್ಲಾಪುರ ತಾಲ್ಲೂಕಿನ ಚಂದಗುಳಿಯ ಗಿರೀಶ ಭಾಗವತ್ (21) ಎಂಬವರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

'ಸೋಂದಾದ ಸ್ವರ್ಣವಲ್ಲಿ ಮಠದಲ್ಲಿ ಅಂತಿಮ ವರ್ಷದ ವಿದ್ವತ್ ಓದುತ್ತಿದ್ದ ಗಿರೀಶ ಅವರು ನದಿಗಿಳಿದ ವೇಳೆ ಆಕಸ್ಮಿಕವಾಗಿ ಬಿದ್ದು, ಸಾವನ್ನಪ್ಪಿರುವ ಸಾಧ್ಯತೆಯಿದೆ' ಎಂದು ಗ್ರಾಮೀಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಗಿರೀಶ ಭಾಗವತ್

ಬರ ಅಧ್ಯಯನ: ಕೈಕೈ ಮಿಲಾಯಿಸಿದ ಪರಿಷತ್ ಸದಸ್ಯ, ಬಿಜೆಪಿ ಮುಖಂಡ

ಪ್ರಜಾವಾಣಿ ವಾರ್ತೆ

ರಾಮನಗರ: ಬರ ಪ್ರದೇಶ ಅಧ್ಯಯನಕ್ಕಾಗಿ ಬಿಜೆಪಿ ನಾಯಕ ಕೋಟ ಶ್ರೀನಿವಾಸ ಪೂಜಾರಿ ಗುರುವಾರ ತಾಲ್ಲೂಕಿನ ವಿಭೂತಿಕೆರೆ ಗ್ರಾಮಕ್ಕೆ ಭೇಟಿ ನೀಡಿದಾಗ ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ ಮತ್ತು ಚನ್ನಪಟ್ಟಣ ತಾಲ್ಲೂಕು ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಜಯರಾಮು ನಡುವೆ ಮಾತಿನ ಚಕಮಕಿ ನಡೆದು, ಇಬ್ಬರೂ ಕೈಕೈ ಮಿಲಾಯಿಸುವ ಹಂತಕ್ಕೆ ಹೋಯಿತು.

ವಿಭೂತಿಕೆರೆ ಗ್ರಾಮದ ಬಿಜೆಪಿ ಕಾರ್ಯಕರ್ತರೊಬ್ಬರ ಮನೆಗೆ ಪೂಜಾರಿ ಅವರು ಭೇಟಿ ನೀಡಿ ವಾಪಸ್ ಆಗುತ್ತಿದ್ದರು. ಆಗ ಪದವೀಧರ ಕ್ಷೇತ್ರದ ಚುನಾವಣೆಗೆ ಮತದಾರರ ನೋಂದಣಿಗೆ ಸಂಬಂಧಿಸಿದಂತೆ ದೇವೇಗೌಡ ಮತ್ತು ಜಯರಾಮು ನಡುವೆ ವಾಗ್ವಾದ ಶುರುವಾಯಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಸ್ಥಳೀಯ ಮುಖಂಡರು ಹಾಗೂ ಪೊಲೀಸರು ಮಧ್ಯ ಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸಿದರು. ಈ ಘಟನೆಯಿಂದಾಗಿ ಪೂಜಾರಿ ಮುಜುಗರ ಅನುಭವಿಸಿದರು.

ರಾಮನಗರ ತಾಲ್ಲೂಕಿನ ವಿಭೂತಿಕೆರೆಯಲ್ಲಿ ಗುರುವಾರ ವಿಧಾನ ಪರಿಷತ್ ಸದಸ್ಯ ದೇವೇಗೌಡ ಅವರನ್ನು ಸಮಾಧಾನಪಡಿಸುತ್ತಿರುವ ಪೊಲೀಸರು ಮತ್ತು ಬಿಜೆಪಿ ಮುಖಂಡರು

ಘಟನೆ ನಂತರ ಮಾಧ್ಯಮದವರ ಜೊತೆ ಮಾತನಾಡಿದ ಜಯರಾಮು, 'ಎಷ್ಟು ಪದವೀಧರರನ್ನು ನೋಂದಣಿ ಮಾಡಿಸಿದ್ದಿಯಾ ಎಂದು ಅವರು ಕೇಳಿದಾಗ, ನಾನು 25–30 ಎಂದು ಪ್ರತಿಕ್ರಿಯಿಸಿದೆ. ಆಗವರು, ನಿನ್ನಂತಹವರು ಏಕೆ ಇರಬೇಕು ಎಂದು ನನ್ನ ಕೆನ್ನೆಗೆ ಬಾರಿಸಿ, ಮತ್ತೆ ಹೊಡೆಯಲು ಕೈ ಎತ್ತಿದರು. ಆಗ ನಾನು ಕೂಡ ಕೈ ಎತ್ತಿದೆ. ಅಷ್ಟರೊಳಗೆ ಎಲ್ಲರೂ ಬಂದು ಸಮಾಧಾನಪಡಿಸಿದರು' ಎಂದರು.

ಘಟನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅ. ದೇವೇಗೌಡ, 'ಕ್ಷುಲ್ಲಕ ಕಾರಣಕ್ಕೆ ನಡೆದ ಸಣ್ಣ ಘಟನೆಯಷ್ಟೇ. ನಮ್ಮಿಬ್ಬರ ನಡುವೆ ಹೇಳಿಕೊಳ್ಳುವಂತಹ ಜಗಳವೇನೂ ನಡೆದಿಲ್ಲ' ಎಂದರು.

ಚಿಕ್ಕೋಡಿ, ಅಂಕಲಿಯಲ್ಲಿ ನಡೆದ ಸರಣಿ ಕಳವು ಪ್ರಕರಣ

ಎಟಿಎಂ ಒಡೆದು ₹40 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಚಿಕ್ಕೋಡಿ ಮತ್ತು ಅಂಕಲಿ ಪಟ್ಟಣಗಳಲ್ಲಿ ಬುಧವಾರ ತಡರಾತ್ರಿ ಎರಡು ಎಟಿಎಂ ಒಡೆದ ಕಳ್ಳರು ₹40 ಲಕ್ಷಕ್ಕೂ ಅಧಿಕ ಹಣ ಕಳವು ಮಾಡಿದ್ದಾರೆ. ಇನ್ನೊಂದು ಎಟಿಎಂ ಒಡೆಯಲು ವಿಫಲ ಯತ್ನ ನಡೆಸಿದ್ದಾರೆ.

'ತಾಲ್ಲೂಕಿನ ಅಂಕಲಿ ಪಟ್ಟಣದ ಬಸ್ ನಿಲ್ದಾಣ ಎದುರು ಇರುವ ಎಕ್ಸಿಸ್ ಬ್ಯಾಂಕ್‌ಗೆ ಕನ್ನ ಹಾಕಿದ ಕಳ್ಳರು, ಸಿಸಿಟಿವಿ ಕ್ಯಾಮೆರಾಗೆ ಕಪ್ಪು ಬಣ್ಣದ ಸ್ಪ್ರೇ ಮಾಡಿ, ಗ್ಯಾಸ್ ಕಟರ್‌ನಿಂದ ಎಟಿಎಂ ಯಂತ್ರ ಕೊರೆದು ಹಣ ಒಯ್ದಿದ್ದಾರೆ. ಈ ಎಟಿಎಂನಲ್ಲಿ ₹17 ಲಕ್ಷ ಜಮೆ ಮಾಡಲಾಗಿತ್ತು. ನಂತರ ಚಿಕ್ಕೋಡಿಗೆ ಬಂದು, ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಂದಿನ ಎಟಿಎಂ ಕೇಂದ್ರದಲ್ಲಿ ₹23 ಲಕ್ಷ ನಗದು ಕದ್ದಿದ್ದಾರೆ. ಸಮೀಪದಲ್ಲೇ ಇರುವ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಎಟಿಎಂಗೂ ನುಗ್ಗಲು ಯತ್ನಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ರಾತ್ರಿ 9ರಿಂದ ನಸುಕಿನ 3ರ ಮಧ್ಯೆ ಕೃತ್ಯ ನಡೆದಿದೆ. ಬಿಳಿ ಬಣ್ಣದ ಕಾರಿನಲ್ಲಿ ಬಂದ ನಾಲ್ವರು ದುಷ್ಕರ್ಮಿಗಳು ಸಂಚು ರೂಪಿಸಿ, ಮೂರೂ ಕಡೆ ಕನ್ನ ಹಾಕಿದ್ದಾರೆ. ಆರೋಪಿಗಳು ಮಹಾರಾಷ್ಟ್ರದ ಮಿರಜ್‌ನತ್ತ ಹೋಗಿರುವ ಬಗ್ಗೆ ಸುಳಿವು ಸಿಕ್ಕಿದ್ದು, ತನಿಖೆ ನಡೆಸಲಾಗುವುದು. ವಿಜಯಪುರ ತಾಲ್ಲೂಕಿನ ಶಿವಣಗಿಯಲ್ಲೂ ಸೋಮವಾರ ಇದೇ ಮಾದರಿಯಲ್ಲಿ ಕಳ್ಳತನವಾಗಿತ್ತು. ಅದೇ ತಂಡದಿಂದ ಕೃತ್ಯ ನಡೆದಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ವೇಣುಗೋಪಾಲ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಎಫ್‌ಎಸ್‌ಎಲ್, ಶ್ವಾನದಳದಿಂದ ಪರಿಶೀಲನೆ ನಡೆಯಿತು.

'ಸಮಾಜ ವಿಭಜಿಸುವವರ ದೂರವಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ-ಧರ್ಮದ ಹೆಸರಿನಲ್ಲಿ ಸಮಾಜ ವಿಭಜಿಸುವ ಪಟ್ಟಭದ್ರರನ್ನು ದೂರ ಇಡಬೇಕು. ಸಾಮಾಜಿಕ ನ್ಯಾಯದ ವಿರೋಧಿಗಳಾದ ಅವರು ಶೂದ್ರ ಸಮುದಾಯದ ಆರ್ಥಿಕ, ಶೈಕ್ಷಣಿಕ ಪ್ರಗತಿ ವಿರೋಧಿಸುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾರ್ಮಿಕ ಇಲಾಖೆ ಗುರುವಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಹಮ್ಮಿಕೊಂಡಿದ್ದ 2022-23ನೇ ಸಾಲಿನ ಶೈಕ್ಷಣಿಕ ಧನ ಸಹಾಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ದೊರೆಯದೇ ಶೂದ್ರರು ಹಾಗೂ ಮಹಿಳೆಯರು ಶತಮಾನಗಳಿಂದ ಹಿಂದುಳಿದಿದ್ದಾರೆ. ಅಸಮಾನತೆ ಹೋಗಲಾಡಿಸಲು, ಸಂವಿಧಾನದ ಆಶಯದಂತೆ ಪ್ರತಿಯೊಬ್ಬರಿಗೂ ಸಮಾಜದ ಸಂಪತ್ತಿನಲ್ಲಿ ಸಮಪಾಲು ಸಿಗಬೇಕು ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್, ಕಳೆದ ಐದು ವರ್ಷಗಳಲ್ಲಿ 40 ಲಕ್ಷ ಕಾರ್ಮಿಕರ ಕಾರ್ಡ್ ನೀಡಲಾಗಿದೆ. ಶೇ 60ರಷ್ಟು ನಕಲಿಯಾಗಿವೆ. ನಕಲಿ ಕಾರ್ಡ್ ತಡೆಗೆ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಹೊಸದಾಗಿ 13 ಲಕ್ಷ ಹೊಸ ಅರ್ಜಿಗಳು ಬಂದಿವೆ. ಅರ್ಹರಿಗೆ ಸೌಲಭ್ಯ ದೊರಕಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು, ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಉಪಸ್ಥಿತರಿದ್ದರು.

ಬಿ.ವಿ.ಶಿರೂರ್‌ಗೆ ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಸಂಶೋಧನಾ ಪ್ರಶಸ್ತಿ

ಬಿ.ವಿ. ಶಿರೂರ್

ಬಸವಕಲ್ಯಾಣ (ಬೀದರ್ ಜಿಲ್ಲೆ): ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿಯಿಂದ ನೀಡುವ ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಸಾಹಿತ್ಯ ಸಂಶೋಧನಾ ಪ್ರಶಸ್ತಿಗೆ ಸಂಶೋಧಕ ಬಿ.ವಿ.ಶಿರೂರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ವಿಶ್ವಸ್ಥ ಮಂಡಳಿ ಅಧ್ಯಕ್ಷ ಭಾಲ್ಕಿ ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೊಪ್ಪಳದ ಬಿ.ವಿ. ಶಿರೂರ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇವರು 30 ಮೌಲಿಕ ಗ್ರಂಥಗಳನ್ನು ಬರೆದಿದ್ದಾರೆ. ನವೆಂಬರ್ 25ರಂದು ಬಸವಕಲ್ಯಾಣದಲ್ಲಿ ಹಮ್ಮಿಕೊಂಡಿರುವ 44ನೇ ಅನುಭವ ಮಂಟಪ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಮಂಡಳಿ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ತಿಳಿಸಿದ್ದಾರೆ.

24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಅನುಷ್ಠಾನ

ಮತ್ತೆ 'ಕೃಷಿ ಭಾಗ್ಯ' ಜಾರಿ: ಸರ್ಕಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬಜೆಟ್ ಭಾಷಣದಲ್ಲಿ ಭರವಸೆ ನೀಡಿದಂತೆ 'ಕೃಷಿ ಭಾಗ್ಯ' ಯೋಜನೆಯನ್ನು ಮತ್ತೆ ಜಾರಿ ಮಾಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಇದೇ ಸಾಲಿನಲ್ಲಿ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಗಳನ್ನು ನೀಡಿದರು. ಸಿದ್ದರಾಮಯ್ಯ ಈ ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಈ ಯೋಜನೆ ಜಾರಿ ಮಾಡಿದ್ದರು. ಆ ಬಳಿಕ ಬಂದ ಸರ್ಕಾರಗಳು ಈ ಯೋಜನೆಯನ್ನು ಕೈಬಿಟ್ಟಿದ್ದವು.

ಮಳೆ ಆಧಾರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ಮಾರ್ಪಡಿಸುವುದು ಯೋಜನೆಯ ಮುಖ್ಯ ಉದ್ದೇಶ. ಮಳೆ ನೀರಿನ ಸಮರ್ಪಕ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಮೂಲಕ ಉತ್ಪಾದಕತೆ ವೃದ್ಧಿಸಲಾಗುವುದು. ಕೃಷಿ ಆದಾಯ ಹೆಚ್ಚಳ ಮತ್ತು ಮಳೆ ನೀರು ವ್ಯರ್ಥವಾಗದಂತೆ ಆಯ್ದ ಸ್ಥಳಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಯೋಜನೆಯ ಪ್ರಮುಖ ಅಂಶಗಳು ಎಂದು ಪಾಟೀಲ ಹೇಳಿದರು.

ಈ ಸಾಲಿಗೆ ಯೋಜನೆಗೆ ₹200 ಕೋಟಿ ಅನುದಾನ ನೀಡಲಾಗುವುದು. ಪೂರಕ ಅಂದಾಜಿನಲ್ಲಿ ₹100 ಕೋಟಿ ಒದಗಿಸಲಾಗಿದೆ. ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆಯಿಂದ ಉಳಿದ ₹100 ಕೋಟಿ ಪಡೆಯಲಾಗುವುದು. ಮಳೆಯಾಶ್ರಿತ ಪ್ರದೇಶದಲ್ಲಿ ಈ ಯೋಜನೆ ಜಾರಿ ಮಾಡಲಾಗುವುದು. ಇದಕ್ಕಾಗಿ 5 ಒಣಹವೆ ಹವಾಮಾನದ ಜಿಲ್ಲೆಗಳನ್ನೇ ಆಯ್ಕೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಕೃಷಿ ಸಿಂಚಯಿ ಹೆಚ್ಚುವರಿ 5 ಯೋಜನೆ: ಬಾಗಲಕೋಟೆ ಜಿಲ್ಲೆಯ ಬಾದಾಮಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ(ನಿಪ್ಪಾಣಿ), ಮಂಡ್ಯ ಜಿಲ್ಲೆಯ ಮಂಡ್ಯ, ರಾಮನಗರ ಜಿಲ್ಲೆಯ ಚನ್ನಪಟ್ಟಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕುಗಳಲ್ಲಿ ಒಟ್ಟು 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆ ಅಡಿ 5 ಹೆಚ್ಚುವರಿ ಯೋಜನೆಗಳ ಜಾರಿ ಮಾಡಲು ಒಪ್ಪಿಗೆ ನೀಡಲಾಗಿದೆ. ಇದಕ್ಕೆ ₹38.12 ಕೋಟಿ ವೆಚ್ಚವಾಗಲಿದೆ ಎಂದರು.

300 ಹೈಟೆಕ್ ಹಾರ್ವೆಸ್ಟರ್ ಹಬ್

ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲಪಡಿಸಲು ರಾಜ್ಯ ವ್ಯಾಪಿ ಒಟ್ಟು 300 ಹಾರ್ವೆಸ್ಟರ್ ಹಬ್‌ಗಳನ್ನು(ಫಸಲು ಕಟಾವು ವ್ಯವಸ್ಥೆ) ಹಂತ ಹಂತವಾಗಿ ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

2023– 24 ನೇ ಸಾಲಿನಲ್ಲಿ 100 ಹಾರ್ವೆಸ್ಟರ್ ಹಬ್‌ಗಳನ್ನು ಸ್ಥಾಪಿಸಲಾಗುವುದು. ಶೇ 70 ರಷ್ಟು ಸಹಾಯಧನದಲ್ಲಿ ಪ್ರತಿ ಘಟಕಕ್ಕೆ ₹1 ಕೋಟಿ ಮೀರದಂತೆ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ ಎಂದರು.

ವಿಮಾ ಕಂಪನಿಗಳ ನಿಗದಿ: 2023–24 ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮುಂದುವರೆಸಲು ಅತಿ ಕಡಿಮೆ ವಂತಿಗೆ ನಮೂದಿಸಿರುವ ಬೆಳೆ ವಿಮಾ ಕಂಪನಿಗಳಿಗೆ ನೀಡಿರುವ ಕಾರ್ಯಾದೇಶಗಳಿಗೆ ಸಂಪುಟ ಸಭೆ ಘಟನೋತ್ತರ ಮಂಜೂರಾತಿ ನೀಡಿದೆ.

ರಿಲಯನ್ಸ್ ಜನರಲ್ ಇನ್ಶೂರೆನ್ಸ್, ಬಜಾಜ್ ಅಲೆಯನ್ಸ್ ಇನ್ಶೂರೆನ್ಸ್, ಅಗ್ರಿಕಲ್ಚರ್ ಇನ್ಶೂರೆನ್ಸ್, ಎಸ್‌ಬಿಐ ಜನರಲ್ ಇನ್ಶೂರೆನ್ಸ್, ಯುನಿವರ್ಸಲ್ ಸೊಂಪೊ ಜನರಲ್ ಇನ್ಶೂರೆನ್ಸ್, ಫ್ಯೂಚರ್ ಜನರಲ್ ಇನ್ಶೂರೆನ್ಸ್ ಕಂಪನಿಗಳಿಗೆ 5 ಕ್ಲಸ್ಟರ್‌ಗಳಲ್ಲಿ ಹಂಚಿಕೆ ಮಾಡಲಾಗಿದೆ ಎಂದು ಪಾಟೀಲ ತಿಳಿಸಿದರು.

ಈ ಸಾಲಿಗೆ ₹900 ಕೋಟಿ ಬೇಕಾಗಬಹುದು, ವಿಮಾಕಂತಿನ ದರದಲ್ಲಿ ರೈತರ ವಂತಿಗೆ ಹೊರತುಪಡಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ಕಂತುಗಳನ್ನು ಭರಿಸುತ್ತವೆ ಎಂದರು.

ಡಿ.4 ರಿಂದ ಬೆಳಗಾವಿಯಲ್ಲಿ ಅಧಿವೇಶನ

ವಿಧಾನಮಂಡಲದ ಉಭಯ ಸದನಗಳ ಚಳಿಗಾಲದ ಅಧಿವೇಶನವನ್ನು ಡಿಸೆಂಬರ್ 4 ರಿಂದ 10 ದಿನಗಳ ಕಾಲ ಬೆಳಗಾವಿಯಲ್ಲಿ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ತಿಳಿಸಿದರು.

ಪ್ರಮುಖ ನಿರ್ಣಯಗಳು

- ಹಾಲಿ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ ಅವರು ಇದೇ ತಿಂಗಳ 30 ಕ್ಕೆ ನಿವೃತ್ತಿ ಹೊಂದುವುದರಿಂದ ಹೊಸ ಮುಖ್ಯ ಕಾರ್ಯದರ್ಶಿ ನೇಮಕದ ಅಧಿಕಾರ ಮುಖ್ಯಮಂತ್ರಿ ಅವರಿಗೆ ನೀಡಲಾಗಿದೆ.
- ರಾಮನಗರ ಜಿಲ್ಲೆ ಕನಕಪುರದಲ್ಲಿ ಇನ್ಫೋಸಿಸ್ ಸಿಎಸ್‌ಆರ್ ಯೋಜನೆಯಡಿ 100 ಹಾಸಿಗೆಗಳ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಿಸಿದ್ದು, ಆಸ್ಪತ್ರೆಗೆ ಅಗತ್ಯವಿರುವ ಜನರೇಟರ್ ಮತ್ತು ಇತರ ಕಾಮಗಾರಿಗಳಿಗೆ ₹10.34 ಕೋಟಿ ಕಾಮಗಾರಿ ಅಂದಾಜು ಪಟ್ಟಿಗೆ ಅನುಮೋದನೆ
- ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿನ 73 ಕೆಪಿಎಸ್ ಶಾಲೆಗಳು ಮತ್ತು 50 ಆದರ್ಶ ವಿದ್ಯಾಲಯಗಳಲ್ಲಿ ₹20 ಕೋಟಿ ವೆಚ್ಚದಲ್ಲಿ ಆವಿಷ್ಕಾರ್ ಇನ್ನೋವೇಟಿವ್ ಲ್ಯಾಬ್‌ಗಳನನ್ನು ಸ್ಥಾಪಿಸಲು ತೀರ್ಮಾನ
- ಸಂವಿಧಾನ ದಿನಾಚರಣೆ ಪ್ರಯುಕ್ತ ರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು 'ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ' ಹೆಸರಿನಲ್ಲಿ ನಡೆಸಲು ₹18 ಕೋಟಿ ಬಿಡುಗಡೆಗೆ ಒಪ್ಪಿಗೆ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹುಬ್ಬಳ್ಳಿ– ಧಾರವಾಡ ನಗರದ ಬಿಆರ್‌ಟಿ ಸೇವೆಗೆ ₹45 ಕೋಟಿ ವೆಚ್ಚದಲ್ಲಿ 100 ಬಸ್‌ಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ
- ಜನನ, ಮರಣ ನೋಂದಣಿ ಅಧಿಕಾರವನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅವರಿಂದ ಉಪವಿಭಾಗಾಧಿಕಾರಿ ಅವರಿಗೆ ನೀಡುವ ಸಂಬಂಧ ಕರ್ನಾಟಕ ಜನನ ಮರಣ ನೋಂದಣಿ ನಿಯಮಕ್ಕೆ ತಿದ್ದುಪಡಿಗೆ ಒಪ್ಪಿಗೆ. ನೋಂದಣಿ ಶುಲ್ಕ ₹2 ರಿಂದ ₹100 ಕ್ಕೆ ಪರಿಷ್ಕರಣೆ, ವಿಳಂಬ ಆದಲ್ಲಿ(1 ವರ್ಷದೊಳಗೆ) ಶುಲ್ಕ ₹5 ಇದ್ದದ್ದು ₹200 ಕ್ಕೂ, 1 ವರ್ಷ ಆದ ಬಳಿಕ ಶುಲ್ಕ ₹10 ಇದ್ದದ್ದು ₹500ಕ್ಕೆ ಹೆಚ್ಚಳಕ್ಕೆ ತೀರ್ಮಾನ
- ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪೋಷಣ್ ಅಭಿಯಾನ್ ಕಾರ್ಯಕ್ರಮದಡಿ ಅಂಗನವಾಡಿಗಳಿಗೆ 'ಬೆಳವಣಿಗೆ ನಿಗಾ ಸಾಧನ'ಗಳನ್ನು ಖರೀದಿಸಲು ₹28.60 ಕೋಟಿ ಬಿಡುಗಡೆಗೆ ಅನುಮೋದನೆ.

ಶುಕ್ರವಾರ, ನವೆಂಬರ್ 10, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 311 | ಪುಟ 16 + 12

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಲಂಕಾರ
ದೀಪಾವಳಿ ಹಬ್ಬದ ಅಂಗವಾಗಿ ಅಮೃತಸರದಲ್ಲಿ ಮಾರಾಟಕ್ಕಿಟ್ಟದ್ದ ಆಲಂಕಾರಿಕ ವಸ್ತುಗಳನ್ನು ವೀಕ್ಷಿಸಿದ ಜನ



ದತಿಯಾ: ಮಿಶ್ರಾ ಮುಂದಿದೆ ಕಠಿಣ ಹಾದಿ 6

ಬೆಂಗಳೂರಲ್ಲಿ ಫಿಲಿಪ್ಸ್ ನಾವೀನ್ಯ ಕೇಂದ್ರ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,832 ▼	19,395 ▼	₹61,960 (ಬೆಂಗಳೂರು) ▼	₹72,200 (ಬೆಂಗಳೂರು) ▼	83.29 ▲

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಸಚಿವ ಈಶ್ವರ ಖಂಡ್ರೆ, ಶಾಸಕ ಶಾಮನೂರು ನೇತೃತ್ವದಲ್ಲಿ ಸಭೆ

ಜಾತಿ ಮರು ಗಣತಿಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿ ಗಣತಿ) ಸರ್ಕಾರ ಕೂಡಲೇ ಸ್ವೀಕರಿಸಬೇಕು ಎಂಬ ಕೂಗೆದ್ದಿರುವ ಬೆನ್ನಲ್ಲೇ, ವೀರಶೈವ–ಲಿಂಗಾಯತರು ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ

ಗುರುವಾರ ನಡೆದ ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಶಾಸಕರೂ ಆಗಿರುವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಅರಣ್ಯ ಸಚಿವರೂ ಆಗಿರುವ ಸಭಾದ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ನೇತೃತ್ವದಲ್ಲಿ ಈ ಸಭೆ ನಡೆಯಿತು.

ವೈಜ್ಞಾನಿಕವಾಗಿ ಮತ್ತೊಮ್ಮೆ ಜಾತಿ ಗಣತಿ ನಡೆಸಬೇಕು. ಸಂಗ್ರಹಿಸಿರುವ ಮಾಹಿತಿಯನ್ನು ದೃಢಪಡಿಸಲು ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಿ ಪರಿಶೀಲಿಸಬೇಕು ಎಂದೂ ಮಹಾಸಭಾ ಆಗ್ರಹಿಸಿದೆ.

ಜಾತಿ ಗಣತಿ ವರದಿ ಬಗ್ಗೆ ಚರ್ಚಿಸಲು ಒಕ್ಕಲಿಗರ ಸಂಘ ಈಚೆಗೆ ಹಮ್ಮಿಕೊಂಡಿದ್ದ ಸಭೆಯಲ್ಲಿ, ವರದಿಯನ್ನು ವಿರೋಧಿಸುವ ತೀರ್ಮಾನ ಕೈಗೊಳ್ಳಲಾಗಿತ್ತು. ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಸಮುದಾಯ ಪ್ರತಿನಿಧಿಸುವ ಶಾಸಕರು ಭಾಗವಹಿಸಿದ್ದರು. ಒಕ್ಕಲಿಗರ ವಿರೋಧ ಬೆನ್ನಿಗೆ, ರಾಜಕೀಯವಾಗಿ ಪ್ರಬಲವಾಗಿರುವ ಮತ್ತೊಂದು ಸಮುದಾಯ ಕೂಡ ವಿರೋಧ ವ್ಯಕ್ತಪಡಿಸಿದಂತಾಗಿದೆ.

4ನೇ ಪುಟ ನೋಡಿ

ಕಾಂತರಾಜ ಸಮೀಕ್ಷೆ ಜಾತಿ ಗಣತಿಯಲ್ಲ: ತಂಗಡಗಿ

ಎಚ್.ಕಾಂತರಾಜ ವರದಿ ಜಾತಿ ಗಣತಿ ಅಲ್ಲವೇ ಅಲ್ಲ. ಇದು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಸರಿಪಡಿಸುವ ಹಿನ್ನೆಲೆಯಲ್ಲಿ ತಯಾರಾದ ವರದಿ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು ಕಾಂತರಾಜ ವರದಿಯಿಂದ ಯಾವುದೇ ಸಮುದಾಯಕ್ಕೂ ಅನ್ಯಾಯವಾಗುವುದಿಲ್ಲ. ಈ ವರದಿಯನ್ನು ಜಾತಿ ಗಣತಿ ವರದಿ ಎಂದು ಕರೆಯುವುದು ಸರಿಯಲ್ಲ ಎಂದರು.

'ಕಾಂತರಾಜ ಅವರ ವರದಿಯಿಂದ ಪ್ರತಿಯೊಂದು ಸಮಾಜದ ಜನಸಂಖ್ಯೆ, ಶಿಕ್ಷಣ, ಸಾಮಾಜಿಕ ಹಾಗೂ ಆರ್ಥಿಕವಾಗಿ ಸಮಾಜದ ಅಂಕಿ– ಅಂಶವನ್ನು ಸ್ಪಷ್ಟವಾಗಿ ತಿಳಿಯಬಹುದು. ಈ ವರದಿ ವಿರೋಧಿಸಿ ಕೆಲವು ಸಮುದಾಯದವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ವರದಿ ಇನ್ನು ಸರ್ಕಾರಕ್ಕೆ ಸಲ್ಲಿಕೆಯೇ ಆಗಿಲ್ಲ. ವರದಿ ಸ್ವೀಕಾರ ಮಾಡಿದರೆ ಅದನ್ನು ಪಡೆದು ಅಧ್ಯಯನ ಮಾಡುತ್ತೇನೆ. ವರದಿ ವಿರೋಧ ಮಾಡುತ್ತಿರುವವರೂ ವರದಿ ನೋಡಿದ್ದರೆ ನಮಗೆ ತಿಳಿಸಲಿ. ನಿರ್ಮಲಾನಂದನಾಥ ಸ್ವಾಮೀಜಿ ಅವರಲ್ಲೂ ಮನವಿ ಮಾಡುತ್ತೇನೆ' ಎಂದರು.

ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ವರದಿ ಸಿದ್ಧವಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ವರದಿ ಸ್ವೀಕಾರವಾಗಿಲ್ಲ. ಇದರಲ್ಲಿ ರಾಜಕೀಯ ಹಿತಾಸಕ್ತಿ ಅಡಗಿಲ್ಲ ಎಂದು ತಂಗಡಗಿ ಹೇಳಿದರು.

ತಿಂಗಳಾಂತ್ಯಕ್ಕೆ ಸಭೆ?

ವಿರೋಧದ ಮಧ್ಯೆಯೂ ಸರ್ಕಾರ ವರದಿಯನ್ನು ಸ್ವೀಕರಿಸಿದರೆ ಮುಂದಿನ ಹೋರಾಟದ ದಾರಿ ಏನಾಗಿರಬೇಕು ಎಂಬ ಬಗ್ಗೆ ಚರ್ಚಿಸಲು ಇದೇ ತಿಂಗಳ ಕೊನೆಯ ವಾರದಲ್ಲಿ ಸಮುದಾಯವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳ ಸಭೆ ಕರೆಯಲು ಮಹಾಸಭಾ ತೀರ್ಮಾನಿಸಿದೆ.

'ಈ ಸಭೆಗೆ ವೀರಶೈವ–ಲಿಂಗಾಯತ ಸಮುದಾಯವನ್ನು ಪ್ರತಿನಿಧಿಸುವ ಸಂಸದರು, ಶಾಸಕರನ್ನು ಆಮಂತ್ರಿಸಲಾಗುವುದು. ಅಪೂರ್ಣ ವರದಿಯನ್ನು ಅನುಷ್ಠಾನ ಮಾಡಲು ಮುಂದಾದರೆ ಸದನದ ಒಳಗೆ–ಹೊರಗೆ ಹೋರಾಟ ಮಾಡಬೇಕಾದ ಅನಿವಾರ್ಯ ಒದಗಬಹುದು. ಈ ವಿಷಯದಲ್ಲಿ ರಾಜಕೀಯ ಹೊರತಾದ ಒಗ್ಗಟ್ಟಿನ ತೀರ್ಮಾನ ಕೈಗೊಳ್ಳಬೇಕಾಗಿದ್ದು, ಇದಕ್ಕಾಗಿ ಪ್ರತ್ಯೇಕ ಸಭೆ ಕರೆದು ಸಮಾಲೋಚನೆ ನಡೆಸಲು ನಿರ್ಧರಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಚೆಕ್‌ನಲ್ಲಿ ₹ 4 ಲಕ್ಷ ಲಂಚ: ಕಂದಾಯ ನಿರೀಕ್ಷಕ ಬಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನಿನ ಪೋಡಿ ಮತ್ತು ಖಾತೆ ಮಾಡಿಕೊಡಲು ₹ 4 ಲಕ್ಷ ಚೆಕ್ ಹಾಗೂ ₹ 7.5 ಲಕ್ಷ ನಗದು ಪಡೆದಿದ್ದ ಆರೋಪದಡಿ ಬೆಂಗಳೂರು ನಗರ ಜಿಲ್ಲೆಯ ದಾಸನಪುರ ಹೋಬಳಿ ಮಾದಾವರ ವೃತ್ತದ ಕಂದಾಯ ನಿರೀಕ್ಷಕ ಎಂ. ವಸಂತ್‌ಕುಮಾರ್ ಹಾಗೂ ಅವರ ಕಾರು ಚಾಲಕ ಬಿ. ತ್ಯಾಗರಾಜ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಸಂತ್ ಕುಮಾರ್

'ಸುಂಕದಕಟ್ಟೆ ನಿವಾಸಿಯೊಬ್ಬರು ತಮ್ಮ ಕೃಷಿ ಜಮೀನಿನ ಪೋಡಿ, ಖಾತೆ ಮಾಡಿಸಲು ಕಂದಾಯ ನಿರೀಕ್ಷಕರಿಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಲೇವಾರಿ ಮಾಡಬೇಕಾದರೆ ₹ 28 ಲಕ್ಷ ಲಂಚ ನೀಡಬೇಕೆಂದು ವಸಂತಕುಮಾರ್ ಬೇಡಿಕೆ ಇರಿಸಿದ್ದರು' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಮಹುವಾ ಉಚ್ಚಾಟನೆಗೆ ಶಿಫಾರಸು

ನವದೆಹಲಿ (ಪಿಟಿಐ): ಪ್ರಶ್ನೆ ಕೇಳಲು ಹಣ ಪಡೆದ ಆರೋಪದ ಅಡಿಯಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ಲೋಕಸಭೆಯ ನೀತಿ ಸಮಿತಿಯು ಗುರುವಾರ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆಯ ನೀತಿ ಸಮಿತಿಯು ಸಂಸದರೊಬ್ಬರನ್ನು ಸದನದಿಂದ ಹೊರಹಾಕುವಂತೆ ಶಿಫಾರಸು ಮಾಡಿರುವುದು ಇದೇ ಮೊದಲಿರಬೇಕು ಎಂದು ಲೋಕಸಭಾ ಸಚಿವಾಲಯದ ನಿವೃತ್ತ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ಹೇಳಿದ್ದಾರೆ.

ಬಿಜೆಪಿಯ ಸಂಸದ ವಿನೋದ್ ಕುಮಾರ್ ಸೋನಕರ್ ನೇತೃತ್ವದ ನೀತಿ ಸಮಿತಿಯು ಗುರುವಾರ ಇಲ್ಲಿ ಸಭೆ ಸೇರಿ, ಮಹುವಾ ಅವರನ್ನು ಹೊರಹಾಕುವಂತೆ ಶಿಫಾರಸು ಮಾಡಿರುವ ವರದಿಯನ್ನು ಅಂಗೀಕರಿಸಿತು.

6ನೇ ಪುಟ ನೋಡಿ

ಜಿ.ಪಂ ಕ್ಷೇತ್ರ ಪುನರ್ ವಿಂಗಡಣೆ: ಅಂತಿಮ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆ ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅಂತಿಮವಾಗಿ ನಾಲ್ಕು ವಾರಗಳ ಗಡುವು ನೀಡಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, 'ಜಿ.ಪಂ-ತಾ.ಪಂ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಮೀಸಲಾತಿ ನಿಗದಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಇದನ್ನು ಪೂರ್ಣಗೊಳಿಸಲು ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

4ನೇ ಪುಟ ನೋಡಿ

27 ರಕ್ತದ ಮಾದರಿ ವರದಿ ಝೀಕಾ ವೈರಸ್ ಇಲ್ಲ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ತಲಕಾಯಲಬೆಟ್ಟ ಗ್ರಾಮದ ಸೊಳ್ಳೆಗಳಲ್ಲಿ ಝೀಕಾ ವೈರಾಣು ಪತ್ತೆಯಾದ ಕಾರಣ ಸುತ್ತಮುತ್ತಲಿನ ಐದು ಗ್ರಾಮಗಳಲ್ಲಿ ನಡೆಸಿದ ರಕ್ತ ತಪಾಸಣೆ ಪೈಕಿ 27 ಮಂದಿಯ ವರದಿ ಗುರುವಾರ ಬಂದಿದ್ದು ಝೀಕಾ ವೈರಾಣು ಪತ್ತೆಯಾಗಿಲ್ಲ.

'27 ಮಂದಿಯ ರಕ್ತ ಮಾದರಿ ಫಲಿತಾಂಶ ಬಂದಿದ್ದು, ಅದರಲ್ಲಿ ಝೀಕಾ ವೈರಾಣು ಕಂಡುಬಂದಿಲ್ಲ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶಮೂರ್ತಿ ಮಾಹಿತಿ ನೀಡಿದ್ದಾರೆ.

ತಲಕಾಯಲಬೆಟ್ಟ ಗ್ರಾಮದ ಐದು ಕಿ.ಮೀ ವ್ಯಾಪ್ತಿಯ ಐದು ಗ್ರಾಮಗಳ 37 ಗರ್ಭಿಣಿಯರು ಹಾಗೂ 11 ಜ್ವರಪೀಡಿತರು ಸೇರಿದಂತೆ ಒಟ್ಟು 48 ಮಂದಿಯ ರಕ್ತ ಮಾದರಿ ಸಂಗ್ರಹಿಸಿ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ (ಎನ್‌ಐವಿ) ಕಳುಹಿಸಲಾಗಿತ್ತು. ಈಗ ಕೈ ಸೇರಿರುವ 27 ಮಂದಿಯ ರಕ್ತ ಮಾದರಿ ವರದಿಯಲ್ಲಿ 23 ಗರ್ಭಿಣಿಯರು ಹಾಗೂ ನಾಲ್ವರ ಜ್ವರಪೀಡಿತರ ವರದಿಗಳಿವೆ.

ಇನ್ನೂ 21 ಮಂದಿಯ ಫಲಿತಾಂಶ ಸದ್ಯದಲ್ಲಿಯೇ ಬರಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಆರೋಗ್ಯ ಇಲಾಖೆಯಿಂದ ಗರ್ಭಿಣಿಯರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಉತ್ತಮ ಪೋಷಕಾಂಶಯುಕ್ತ ಆಹಾರ ಸೇವನೆಗೆ ಸೂಚನೆ ನೀಡಲಾಗಿದೆ. ಎಲ್ಲರೂ ಸೊಳ್ಳೆ ಪರದೆ ಬಳಸುವಂತೆ ತಿಳಿಸಲಾಗಿದೆ ಎಂದರು.

ಅಪಘಾತ: ಮಗು ಸೇರಿ ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ಹಲಕರ್ಟಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 150ರಲ್ಲಿ ಗುರುವಾರ ಸಂಜೆ ಆಟೊ ಹಾಗೂ ಬೂದಿ ಹೊತ್ತ ಟ್ಯಾಂಕರ್ ಮಧ್ಯೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂರು ತಿಂಗಳ ಮಗು ಸೇರಿ ಒಂದೇ ಕುಟುಂಬದ ಆರು ಜನ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತರು ಚಿತ್ತಾಪುರ ತಾಲ್ಲೂಕಿನ ನಾಲವಾರ ಗ್ರಾಮದ ನಿವಾಸಿಗಳಾಗಿದ್ದು, ಆಧಾರ್ ತಿದ್ದುಪಡಿಗಾಗಿ ಚಿತ್ತಾಪುರಕ್ಕೆ ಹೋಗಿ ನಾಲವಾರ ಗ್ರಾಮಕ್ಕೆ ಮರಳುತ್ತಿದ್ದಾಗ ಅಪಘಾತ ಸಂಭವಿಸಿದೆ.

ಡಿಕ್ಕಿ ಹೊಡೆದ ನಂತರ ಸುಮಾರು 100 ಅಡಿಗೂ ಅಧಿಕ ದೂರದವರೆಗೆ ಲಾರಿಯು ಆಟೊವನ್ನು ಎಳೆದುಕೊಂಡು ಹೋಗಿದ್ದು, ದೇಹಗಳು ಛಿದ್ರಗೊಂಡು ಹೆದ್ದಾರಿ ತುಂಬಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಾಜ್ಮೀನ್ ಬೇಗಂ ಮಂಜುರ್ (28), ಆಕೆಯ ಮಕ್ಕಳಾದ ಫಾತಿಮಾ ಮಂಜುರ್ (12), ಅಬೂಬಕ್ಕರ್ ಮಂಜುರ್ (4), ಬೀಬಿ ಮರಿಯಮ್ ಮಂಜುರ್ (3 ತಿಂಗಳು); ನಾಜ್ಮೀನ್ ಮೈದುನ ಮಹ್ಮದ್ ಪಾಷಾ ಮುಸ್ತಾಕ್ (20) ಹಾಗೂ ಆಟೊ ಚಾಲಕ ಬಾಬಾ (35) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

10 ವರ್ಷದ ಬಾಲಕ ಮಹ್ಮದ್ ಹುಸೇನ್ ಮಂಜುರ್ ಗಾಯಗೊಂಡಿದ್ದಾನೆ. ಮೃತರು ನಾಲವಾರ ಗ್ರಾಮದ ವಾರ್ಡ್ ನಂ.1ರ ಅಕಾನಿ ಮಸೀದಿ ಹತ್ತಿರದ ನಿವಾಸಿಗಳಾಗಿದ್ದಾರೆ.

ಕತಾರ್: ಮೇಲ್ಮನವಿ ಸಲ್ಲಿಸಿದ ಭಾರತ

ನವದೆಹಲಿ: ಭಾರತೀಯ ನೌಕಾಪಡೆಯ 8 ಮಾಜಿ ಸಿಬ್ಬಂದಿ ಕತಾರ್ ನ್ಯಾಯಾಲಯವೊಂದರಿಂದ ಮರಣ ದಂಡನೆಗೆ ಗುರಿಯಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ. 6

ಒಳ ಪುಟ

ಬಿಜೆಪಿ ಕಿತ್ತೊಗೆದು ದೇಶ ಕಾಪಾಡಿ: ಸಿದ್ದರಾಮಯ್ಯ 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶುಕ್ರವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ: ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ.

ಹವಾಮಾನ: ಶನಿವಾರ 28° 20° | ಭಾನುವಾರ 29° 20° | ಸೋಮವಾರ 29° 20°

ಸೂರ್ಯೋದಯ: 6:16 ಸೂರ್ಯಾಸ್ತ: 5:53 ಚಂದ್ರೋದಯ: ರಾ. 2:50 ಚಂದ್ರಾಸ್ತ: ಮ. 3:15

ಗುರುವಾರದ ಹವಾಮಾನ : ಗರಿಷ್ಠ 28° ಕನಿಷ್ಠ 20°

ಜ.10ರಿಂದ ಗುಜರಾತ್ ಜಾಗತಿಕ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನಲ್ಲಿ ಜ.10ರಿಂದ 12ರವರೆಗೆ ಹಮ್ಮಿಕೊಂಡಿರುವ ಜಾಗತಿಕ ಸಮ್ಮೇಳನ–2024 (ವೈಬ್ರಂಟ್ ಗುಜರಾತ್) ಪೂರ್ವಭಾವಿಯಾಗಿ ಗುರುವಾರ ಬೆಂಗಳೂರಿನಲ್ಲಿ ರೋಡ್ ಶೋ ಹಮ್ಮಿಕೊಳ್ಳಲಾಗಿತ್ತು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಗುಜರಾತ್ ಸರ್ಕಾರದ ಕೈಗಾರಿಕಾ ಸಚಿವ ಬಲವಂತ್‌ಸಿನ್ಹಾ ರಜಪೂತ್, ಎರಡು ದಶಕಗಳ ಹಿಂದೆ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು ಭಿತ್ತಿದ ಅಭಿವೃದ್ಧಿಯ ಮಾದರಿ ಇಂದು ಫಲ ನೀಡಿದೆ. ದೇಶದ ಪ್ರಮುಖ ಕೈಗಾರಿಕಾ ತಾಣವಾಗಿ ರಾಜ್ಯ ಬೆಳೆದಿದೆ. ಕೈಗಾರಿಕಾ ಸ್ನೇಹಿ ವಾತಾವರಣ ನಿರ್ಮಾಣವಾಗಿದೆ ಎಂದರು.

ಭಾರತದ ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ಶೇ 13.2ರಷ್ಟು ಪಾಲನ್ನು ಗುಜರಾತ್ ಹೊಂದಿದೆ. ಭಾರತದ ಒಟ್ಟು ಉತ್ಪಾದನೆಯ ಶೇ 18ರಷ್ಟು ಇದೆ. ಸರಕು ಸಾಗಣೆ ಕ್ಷೇತ್ರದಲ್ಲಿ ಶೇ 33ರಷ್ಟು ಪಾಲು ಪಡೆದಿದೆ. ₹35 ಲಕ್ಷದವರೆಗಿನ ಸಾಲಕ್ಕೆ ಶೇ 25ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಕೈಗಾರಿಕೆಗಳಿಗೆ ತಡೆ ರಹಿತವಾಗಿ ಬೇಡಿಕೆಯ ಶೇ 100ರಷ್ಟು ವಿದ್ಯುತ್ ಪೂರೈಸಲಾಗುತ್ತಿದೆ. ನಿರುದ್ಯೋಗ ಸಮಸ್ಯೆ ಶೇ 2ಕ್ಕಿಂತ ಕಡಿಮೆ ಇದೆ. ಎಲ್ಲರಲ್ಲೂ ಒಂದು ಕುಟುಂಬದ ಪರಿಕಲ್ಪನೆ ಬೆಳೆಸಲಾಗಿದೆ. ಇದು ಗುಜರಾತ್ ಅಭಿವೃದ್ಧಿಯ ಗುಟ್ಟು ಎಂದು ಹೇಳಿದರು.

ದೆಹಲಿಯಿಂದ ಆರಂಭವಾದ ಜಾಗತಿಕ ಸಮಾವೇಶದ ಪ್ರಚಾರ ದೇಶದ ಪ್ರಮುಖ ನಗರಗಳಲ್ಲಿ ರೋಡ್ ಶೋ ಮೂಲಕ ಮುಂದುವರಿದಿದೆ. ಜಪಾನ್, ಜರ್ಮನಿ, ಇಟಲಿ, ಡೆನ್ಮಾರ್ಕ್, ಸಿಂಗಪುರ, ಆಸ್ಟ್ರೇಲಿಯಾ, ಫ್ರಾನ್ಸ್, ಯುಎಇ, ವಿಯೆಟ್ನಾಂ, ದಕ್ಷಿಣ ಕೊರಿಯಾ, ಯುಎಸ್‌ಎಗಳಲ್ಲೂ ಪ್ರದರ್ಶನ ನೀಡಲಾಗಿದೆ. ಬೆಂಗಳೂರಿನಲ್ಲೂ 19 ಉದ್ಯಮಗಳ ಪ್ರಮುಖರೊಂದಿಗೆ ಮಾತುಕತೆ ನಡೆಸಲಾಗಿದೆ ಎಂದರು.

ಜ್ಯೋತಿ ಲ್ಯಾಬೊರೇಟರೀಸ್ ವ್ಯವಸ್ಥಾಪಕ ನಿರ್ದೇಶಕ ಕೆ.ಉಲ್ಲಾಸ್ ಕಾರಂತ್, ಐಬಿಎಂ ಕ್ಲೌಡ್ ಮತ್ತು ಕಾಗ್ನಿಟಿವ್ ಸಾಫ್ಟ್‌ವೇರ್ ಉಪಾಧ್ಯಕ್ಷ ಗೌರವ್ ಶರ್ಮಾ, ಕ್ರಾಫ್ಟ್-ಹೀಂಜ್ ಕಂಪನಿ ನಿರ್ದೇಶಕ ವಿರಾಜ್ ಮೆಹ್ತಾ, ವಿದೇಹ್ ಖರೆ, ಇನ್-ಸ್ಪೇಸ್ ನಿರ್ದೇಶಕ ವಿನೋದ್ ಕುಮಾರ್ ಉಪಸ್ಥಿತರಿದ್ದರು.

ತೆಲಂಗಾಣ ಚುನಾವಣೆ ಹಿನ್ನೆಲೆಯಲ್ಲಿ 'ಮೈನಾರಿಟಿ ಡಿಕ್ಲರೇಷನ್' ಅನ್ನು ರಾಜ್ಯದ ವಸತಿ ಸಚಿವ ಜಮೀರ್ ಅಹಮದ್ ಅವರು ಹೈದರಾಬಾದ್‌ನಲ್ಲಿ ಬಿಡುಗಡೆ ಮಾಡಿದರು. ಕಾಂಗ್ರೆಸ್ ನಾಯಕ ಅಜರುದ್ದೀನ್, ತೆಲಂಗಾಣ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ, ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಶಿದ್ ಇದ್ದರು

ಮಣಿಪುರ: ಎರಡು ಶವ ಪತ್ತೆ

ಗುವಾಹಟಿ: ಮಣಿಪುರದಲ್ಲಿ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಮಹಿಳೆ ಸೇರಿದಂತೆ ಇಬ್ಬರ ಮೃತದೇಹಗಳು ಪತ್ತೆಯಾಗಿವೆ. ಮಹಿಳೆಯ ತಲೆಯಲ್ಲಿ ಗುಂಡು ತಗುಲಿ ಆಗಿರುವ ಗಾಯ ಇದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಯಲ್ಲಿ ಈ ಮೃತದೇಹಗಳು ಸಿಕ್ಕಿವೆ. ಕುಕಿ ಸಮುದಾಯಕ್ಕೆ ಸೇರಿದ ನಾಲ್ವರನ್ನು ಇತ್ತೀಚೆಗೆ ಮೈತೇಯಿ ಗುಂಪೊಂದು ಅಪಹರಿಸಿತ್ತು. ಮೃತ ಇಬ್ಬರು ಅಪಹೃತ ಕುಕಿ ಸಮುದಾಯಕ್ಕೆ ಸೇರಿದ್ದವರಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

IN IMAX AT

PVR-INOX CINEMAS {Nexus Mall, Koramangala, 10:00, 12:30, 3:00, 5:30, 8:00, 10:30 p.m. | Vega City, 9:00, 11:30 a.m., 2:00, 4:30, 7:00, 9:30 p.m. | VR Mall, 9:15, 11:45 a.m., 2:15, 4:45, 7:15, 9:45 p.m. | Mantri Square Mall | Galleria Mall, Yelahanka, 9:30, 12:00, 2:30, 5:00, 7:30, 10:00 p.m.} | CINEPOLIS CINEMAS {Nexus Shanthiniketan, 10:25 a.m., 12:50, 3:15, 5:40, 8:05, 10:30 p.m.}.

IN 4DX AT

PVR-INOX CINEMAS {Phoenix Marketcity Mall, 9:00, 11:30, 2:00, 4:30, 7:00, 9:30 p.m. | Nexus Mall, Koramangala, 9:00, 11:30 a.m., 2:00, 4:30, 7:00, 9:30 p.m. | Vega City, 10:00 a.m., 12:30, 3:00, 5:30, 8:00, 10:30 p.m. | Orion Mall, 9:30 a.m., 12:00, 2:30, 5:00, 7:30, 10:00 p.m. | Bhartiya Mall Of Bangalore, 9:00, 11:30 a.m., 2:00, 4:30, 7:00, 9:30 p.m. | Forum Mall, Kanakapura Road, 11:30 a.m., 2:00, 4:30, 7:00, 9:30 p.m. | Global Mall, Mysore Road, 12:00, 2:30, 5:00, 7:30, 10:00 p.m.} | CINEPOLIS CINEMAS {Nexus Shanthiniketan, 9:45 a.m., 12:10, 2:35, 5:00, 7:25, 9:50 p.m.}.

PVR-INOX CINEMAS | CINEPOLIS CINEMAS | MIRAJ | GOPALAN | INNOVATIVE | ROCKLINE | KINO CINEMAS | CINEPHILE | SHANKARNAG M. G. ROAD | LAKSHMI TAVAREKERE | BALAJI CHIKKALASANDRA | VICTORY KAMAKSHIPALYA | DRC MYSORE | BHARATH CINEMAS | MOVIE TIME {DAVANAGERE | BELLARY} | TRINETRA {DAVANAGERE} & OTHER CINEMAS.

FARNAZ

ರಸ್ತೆ ವಿಭಜಕ ದಾಟುವುದಕ್ಕೂ ಕಷ್ಟಪಡುತ್ತಿರುವ ಪಾದಚಾರಿಗಳು

ನಗರದ ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದ ಎದುರು ಸ್ಕೈ ವಾಕ್ ಬದಲು ವಾಹನಗಳ ನಡುವೆಯೇ ರಸ್ತೆ ದಾಟುತ್ತಿರುವ ಪ್ರಯಾಣಿಕರು
–ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

ರಸ್ತೆ ದಾಟಲು ನಿತ್ಯವೂ ಹರಸಾಹಸ • ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಕೆಂಗೇರಿ ಬಸ್ ಟರ್ಮಿನಲ್ ರಸ್ತೆ

ಸ್ಕೈವಾಕ್ ಇದ್ದರೂ ತಪ್ಪದ ಪ್ರಯಾಸ

• ಬಾಲಕೃಷ್ಣ ಪಿ.ಎಚ್.

ರಾಜಧಾನಿ ಜನರ ಧ್ವನಿ

ಬೆಂಗಳೂರು: ಒಂದು ಕಡೆ ಬಳಸಲು ಕಷ್ಟವಾಗುವ ಸ್ಕೈವಾಕ್, ಇನ್ನೊಂದೆಡೆ ಬಳಕೆಗೆ ತೆರೆದುಕೊಳ್ಳದ ಸ್ಕೈವಾಕ್, ಮತ್ತೊಂದೆಡೆ ವಿಪರೀತ ವಾಹನ ದಟ್ಟಣೆಯ ನಡುವೆ ನುಸುಳಿಕೊಂಡು ರಸ್ತೆ ದಾಟುವ ಪಾದಚಾರಿಗಳು...

ಇದು ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ನಿತ್ಯ ಕಾಣುವ ಅಪಾಯಕಾರಿ ದೃಶ್ಯಗಳು...!

ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿಯೇ 'ನಮ್ಮ ಮೆಟ್ರೊ' ರೈಲು ನಿಲ್ದಾಣವಿದೆ. ಆ ನಿಲ್ದಾಣದಿಂದ ಬಸ್ ನಿಲ್ದಾಣಕ್ಕೆ ಹೋಗಲು ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ನಿರ್ಮಿಸಲಾಗಿದೆ. ಆದರೆ, ಜನ ಸಂಚಾರಕ್ಕೆ ಅವಕಾಶ ನೀಡಿಲ್ಲ. ಹೀಗಾಗಿ ಮೆಟ್ರೊ ಪ್ರಯಾಣಿಕರು ಕೆಳಗಿಳಿದು ಒಳಬರುವ ರಸ್ತೆಯನ್ನು ದಾಟಿಕೊಂಡೇ ಬಸ್‌ನಿಲ್ದಾಣಕ್ಕೆ ತಲುಪಬೇಕು.

ಇದಕ್ಕಿಂತಲೂ ಅಪಾಯಕಾರಿ ಯಾದುದು ಮುಖ್ಯರಸ್ತೆ ದಾಟುವ ಸಾಹಸ. ಮೈಸೂರು, ಮಂಡ್ಯ, ಮದ್ದೂರು ಕಡೆಗಳಿಂದ ಬರುವ ಬಸ್‌ಗಳು ಕೆಂಗೇರಿ ಬಸ್‌ನಿಲ್ದಾಣ ಪ್ರವೇಶಿಸದೇ ರಸ್ತೆ ಬದಿಯಲ್ಲೇ ಪ್ರಯಾಣಿಕರನ್ನು ಇಳಿಸಿ ಮೆಜೆಸ್ಟಿಕ್ ಕಡೆಗೆ ಸಾಗುತ್ತವೆ. ಅಲ್ಲಿ ಇಳಿದ ಪ್ರಯಾಣಿಕರು ಚಲಿಸುತ್ತಿರುವ ವಾಹನಗಳ ನಡುವೆಯೇ ದಾರಿ ಮಾಡಿಕೊಂಡು ರಸ್ತೆ ದಾಟುತ್ತಾರೆ. ಇದೇ ರಸ್ತೆಯ ಮತ್ತೊಂದು ಭಾಗದಲ್ಲಿ ಮೈಸೂರು, ಮಂಡ್ಯ, ಮದ್ದೂರು ಕಡೆಗೆ ಸಾಗುವ ಕೆಎಸ್‌ಆರ್‌ಟಿಸಿ ಬಸ್‌ಗಳು ರಸ್ತೆಯಲ್ಲೇ ನಿಲ್ಲಿಸಿ ಪ್ರಯಾಣಿಕರನ್ನು ಕರೆಯುತ್ತಿರುತ್ತಾರೆ. ಮೊದಲೇ ವಾಹನದಟ್ಟಣೆ ಹೆಚ್ಚಿರುವ ಈ ರಸ್ತೆಯಲ್ಲಿ ಬಸ್‌ಗಳು ಹೀಗೆ ನಿಲ್ಲುತ್ತಿರುವುದರಿಂದ ಸರಾಗ ಪ್ರಯಾಣಕ್ಕೆ ಅಡ್ಡಿಯಾಗಿ ಕಿಲೋಮೀಟರ್ ದೂರ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

ಸ್ಕೈವಾಕ್ ಸಮಸ್ಯೆ: ಈ ರಸ್ತೆಯಲ್ಲಿ ಸಂಚಾರ ದಟ್ಟಣೆಯ ಕಾರಣ, ಜನರು ರಸ್ತೆ ದಾಟಲು ಸ್ಕೈವಾಕ್ ನಿರ್ಮಿಸಲಾಗಿದೆ. ಆದರೆ, ವಯಸ್ಸಾದವರು ಮೆಟ್ಟಿಲು ಹತ್ತಲು ಪ್ರಯಾಸ ಪಡುತ್ತಾರೆ. ಲಿಫ್ಟ್ ಅಳಡವಿಕೆಗಾಗಿ ಎರಡೂ ಬದಿಯಲ್ಲಿ ಜಾಗ ಬಿಟ್ಟಿದ್ದಾರೆ. ಆ ಕಾರ್ಯ ಅರ್ಧಕ್ಕೆ ನಿಂತಿದೆ. ಹಾಗಾಗಿ ವಯಸ್ಸಾದವರು ಸ್ಕೈವಾಕ್ ಬಳಸದೇ ವಾಹನ ದಟ್ಟಣೆಯ ನಡುವೆಯೇ ರಸ್ತೆ ದಾಟುತ್ತಾರೆ. ವಯಸ್ಸಾದವರಷ್ಟೇ ಅಲ್ಲ, ಯುವಜನರು ಕೂಡ ಸ್ಕೈವಾಕ್ ಬಳಸುತ್ತಿಲ್ಲ. ಏಕೆಂದರೆ ಸ್ಕೈವಾಕ್ ಹತ್ತಿ ಬಸ್‌ನಿಲ್ದಾಣದ ಕಡೆಗೆ ಬಂದು ಇಳಿಯುವ ಜಾಗದಲ್ಲಿ ಹೊಂಡ ಬಿದ್ದಿದೆ. ಅದರಲ್ಲಿ ಕೆಸರು ತುಂಬಿಕೊಂಡಿದೆ. ಪಕ್ಕದಲ್ಲೇ 'ನೋ ಪಾರ್ಕಿಂಗ್' ಎಂದು ಬೋರ್ಡ್ ಹಾಕಿದ್ದರೂ ನೂರಾರು ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗಿದೆ. ಗುಂಡಿ ತಪ್ಪಿಸಿದರೂ, ದ್ವಿಚಕ್ರ ವಾಹನಗಳ ಸಂದಿಯಲ್ಲಿ ಸಾಗಬೇಕು. ಈ ಕಷ್ಟಗಳೇ ಬೇಡ ಎಂದು ಅವರು ಸ್ಕೈವಾಕ್ ಕಡೆ ಮುಖ ಮಾಡುತ್ತಿಲ್ಲ.

ನಗರದ ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದ ಕಡೆಯಿಂದ ಸ್ಕೈ ವಾಕ್ ಹತ್ತುವ ಸ್ಥಳದಲ್ಲಿ ಮಳೆ ನೀರು ನಿಂತಿರುವುದು

ತಡೆಯದ ಬ್ಯಾರಿಕೇಡ್: ಪಾದಚಾರಿಗಳು ಸ್ಕೈವಾಕ್ ಮೂಲಕವೇ ಸಂಚರಿಸಬೇಕು ಎಂದು ಪೊಲೀಸರು ಬ್ಯಾರಿಕೇಡ್ ಹಾಕಿ (ಡಿವೈಡರ್ ನಡುವೆ ಸಾಗುತ್ತಿದ್ದ ಜಾಗಕ್ಕೆ) ರಸ್ತೆಯನ್ನು ಮುಚ್ಚಿದ್ದಾರೆ. ಆದರೆ, ಪೊಲೀಸರು ಅತ್ತ ಹೋದ ಕೂಡಲೇ ಜನರು ಬ್ಯಾರಿಕೇಡ್ ಬದಿಗೆ ಸರಿಸಿ ರಸ್ತೆ ದಾಟುತ್ತಿದ್ದಾರೆ.

ಸ್ಕೈವಾಕ್‌ಗೆ ಲಿಫ್ಟ್ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದೆ.

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ 9606038256

ಜಾಗೃತಿ ಮೂಡಿಸಿ: ವಯಸ್ಸಾದವರು, ಮಂಡಿನೋವು ಇರುವವರಿಗೆ ಸ್ಕೈವಾಕ್ ಹತ್ತುವುದು ಕಷ್ಟ. ಆದರೆ, ಕೈಕಾಲು ಗಟ್ಟಿಯಿರುವವರು ಕೂಡ ಸುಲಭ ಮತ್ತು ಹತ್ತಿರ ದಾರಿ ಎಂದು ರಸ್ತೆಯಲ್ಲೇ ಹೋಗುತ್ತಿದ್ದಾರೆ. ಅವರಿಗೆ ಜಾಗೃತಿ ಮೂಡಿಸಬೇಕು. ಪೊಲೀಸರು ಬ್ಯಾರಿಕೇಡ್ ಅಳವಡಿಸುವ ಬದಲು, ಅದೇ ಜಾಗದಲ್ಲಿ ನಿಂತು ಎಲ್ಲರನ್ನೂ ಸ್ಕೈವಾಕ್ ಕಡೆ ಕಳುಹಿಸಬೇಕು. ಶೀಘ್ರವೇ ಲಿಫ್ಟ್ ಅಳವಡಿಕೆ ಪೂರ್ಣಗೊಳ್ಳಬೇಕು. ಮೆಟ್ರೊ ನಿಲ್ದಾಣ- ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ನಿರ್ಮಿಸಲಾಗಿರುವ ಸ್ಕೈವಾಕ್ ಅನ್ನು ಸಾರ್ವಜನಿಕರಿಗೆ ಪ್ರವೇಶಕ್ಕೆ ಮುಕ್ತಗೊಳಿಸಬೇಕು' ಎಂದು ಕೆಂಗೇರಿ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿನಿಯರಾದ ಲಕ್ಷ್ಮೀ, ತ್ರಿವೇಣಿ 'ಪ್ರಜಾವಾಣಿ'ಗೆ ತಿಳಿಸಿದರು.

ಜನರು ಏನಂತಾರೆ?

ಹಿರಿಯರಿಗೆ ಸ್ಕೈವಾಕ್ ಮೆಟ್ಟಿಲು ಹತ್ತುವುದು ಕಷ್ಟವಿದೆ. ಆದರೆ, ಯುವ ಜನರು ಆರಾಮವಾಗಿ ಬಳಸಬಹುದು. ಸೋಮಾರಿತನದಿಂದಾಗಿ ಅವರು ಸ್ಕೈವಾಕ್ ಕಡೆ ಬರುತ್ತಿಲ್ಲ. ಶೀಘ್ರವೇ ಲಿಫ್ಟ್ ಅಥವಾ ಎಸ್ಕಲೇಟರ್ ನಿರ್ಮಿಸಿ, ಎಲ್ಲರೂ ಸ್ಕೈವಾಕ್ ಮೂಲಕವೇ ಸಾಗುವಂತೆ ಮಾಡಬೇಕು.
ಪ್ರತೀಕ್ಷಾ, ಐಟಿ ಉದ್ಯೋಗಿ

ಜನದಟ್ಟಣೆ ಹೆಚ್ಚಿರುವಾಗ ಪೊಲೀಸರು ಬರುತ್ತಾರೆ. ಜನ ಸ್ಕೈವಾಕ್ ಅನ್ನೇ ಬಳಸಲಿ ಎಂದು ಬ್ಯಾರಿಕೇಡ್ ಹಾಕಿ ರಸ್ತೆ ವಿಭಜಕವನ್ನು ಮುಚ್ಚುತ್ತಾರೆ. ಅವರ ಜೊತೆಗೆ ನಾವೂ ಕೈಜೋಡಿಸಿ ಬ್ಯಾರಿಕೇಡ್ ಅಳವಡಿಕೆ ಸಹಾಯ ಮಾಡುತ್ತೇವೆ. ಆದರೆ, ಪೊಲೀಸರು ಆ ಕಡೆ ಹೋಗುತ್ತಿದ್ದಂತೆ ಪಾದಚಾರಿಗಳು ಬ್ಯಾರಿಕೇಡ್ ಬದಿಗೆ ಸರಿಸಿ ಅಲ್ಲಿಂದಲೇ ಓಡಾಡುತ್ತಾರೆ.
ದಿನೇಶ್ ಮದ್ದೂರು, ಹಣ್ಣಿನ ವ್ಯಾಪಾರಿ, ಕೆಂಗೇರಿ

ರಸ್ತೆ ದಾಟುವಾಗ ವಾಹನಗಳು ಎಲ್ಲಿ ಮೈಮೇಲೆ ಬಂದು ಬಿಡುತ್ತಾವೊ ಅಂತ ಭಯ ಆಗುತ್ತೆ. ಅದಕ್ಕೆ ನಾನು ಮೆಟ್ಟಿಲು ಹತ್ತಿಕೊಂಡು ಸ್ಕೈವಾಕ್ ಮೂಲಕ ರಸ್ತೆ ದಾಟುತ್ತೇನೆ. ಮಂಡಿನೋವಿದೆ, ಮೆಟ್ಟಿಲು ಹತ್ತುವುದೂ ಕಷ್ಟ. ನಮ್ಮಂಥವರು ಸುಲಭವಾಗಿ ಹತ್ತಲು ಅನುಕೂಲವಾಗುವಂತೆ ಏನಾದರೂ ವ್ಯವಸ್ಥೆ ಮಾಡ್ರಪ್ಪ.
ಸಾವಿತ್ರಮ್ಮ, ಗಾರ್ಮೆಂಟ್ ಉದ್ಯೋಗಿ

ಬಿಬಿಎಂಪಿ ಅವರಿಗೂ ಸೆನ್ಸ್ ಇಲ್ಲ, ಜನರಿಗೂ ಸೆನ್ಸ್ ಇಲ್ಲ. ಈ ಸ್ಕೈವಾಕ್ ಹತ್ತಿ ಬರುವುದು ಹಿರಿಯರಿಗೆ ಕಷ್ಟ. ಆದರೆ, ರಸ್ತೆ ದಾಟುತ್ತಿರುವವರಲ್ಲಿ ಶೇ 90ರಷ್ಟು ಮಂದಿ ಯುವಜನರೇ ಇದ್ದಾರೆ. ಸ್ಕೈವಾಕ್ ಬಳಸುವಂತೆ ಅವರಿಗೆ ಅರಿವು ಮೂಡಿಸಬೇಕು.
ಸಂತೋಷ್, ಕಾಲೇಜು ವಿದ್ಯಾರ್ಥಿ

ಸ್ಕೈವಾಕ್ ಮಾಡಿದ ಮೇಲೆ ಲಿಫ್ಟ್ ನಿರ್ಮಾಣ ಮಾಡುತ್ತಿದ್ದಾರೆ. ಕಾಮಗಾರಿ ಬಹಳ ನಿಧಾನವಾಗಿದೆ. ವೇಗವಾಗಿ ಕೆಲಸ ಮುಗಿಸಿದರೆ, ಜನರಿಗೆ ಉಪಯೋಗವಾಗುತ್ತದೆ.
ರೂಪಾ, ಗೂಡಂಗಡಿ ವ್ಯಾಪಾರಿ

ಕುಮಾರಸ್ವಾಮಿ ಭೇಟಿಯಾದ ಇಸ್ರೇಲ್ ಕಾನ್ಸುಲೇಟ್ ಜನರಲ್

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): 'ಸಮಾನ ಅಭಿವೃದ್ಧಿಯ ದೃಷ್ಟಿಕೋನದಿಂದ ಬೆಳೆಯುತ್ತಿರುವ ಕರ್ನಾಟಕ ಮತ್ತು ಇಸ್ರೇಲ್ ನಡುವಣ ಹಿತಾಸಕ್ತಿಗೆ ಹೆಚ್ಚಿನ ಒತ್ತು ನೀಡುವ ಜೊತೆಗೆ, ಆ ನಿಟ್ಟಿನಲ್ಲಿ ಇಬ್ಬರೂ ದೀರ್ಘಕಾಲೀನ ದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು' ಎಂದು ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲೇಟ್ ಜನರಲ್ ಟಾಮಿ ಬೆನ್ ಹೈಮ್ ಹೇಳಿದರು.

ಜಿಲ್ಲೆಯ ಬಿಡದಿಯ ಕೇತಗಾನ ಹಳ್ಳಿಯಲ್ಲಿರುವ ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ತೋಟದ ಮನೆಗೆ ಗುರುವಾರ ಭೇಟಿ ನೀಡಿ ಮಾತನಾಡಿದರು.

ರಾಜ್ಯ ಮತ್ತು ಇಸ್ರೇಲ್ ನಡುವಣ ಬಾಂಧವ್ಯ, ಹಮಾಸ್ ಮೇಲಿನ ಇಸ್ರೇಲ್ ಯುದ್ಧ ಸೇರಿದಂತೆ ವಿವಿಧ ವಿಷಯಗಳ ಕುರಿತು ಉಭಯ ನಾಯಕರು ಚರ್ಚಿಸಿದರು.

ರಾಮನಗರ ಜಿಲ್ಲೆ ಬಿಡದಿಯ ಕೇತಗಾನಹಳ್ಳಿಯಲ್ಲಿರುವ ತಮ್ಮ ತೋಟದ ಮನೆಗೆ ಗುರುವಾರ ಭೇಟಿ ನೀಡಿದ ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲೇಟ್ ಜನರಲ್ ಟಾಮಿ ಬೆನ್ ಹೈಮ್ ಅವರಿಗೆ ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ತೋಟದಲ್ಲಿ ಬೆಳೆದಿರುವ ಬಾಳೆಗೊನೆ ನೀಡಿದರು

ಹಮಾಸ್ ಮೇಲಿನ ದಾಳಿ ಬಗ್ಗೆಯೂ ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿದ ಟಾಮಿ, 'ಯುದ್ಧ ಮುಗಿದು ಪರಿಸ್ಥಿತಿ ಸಹಜವಾದ ಬಳಿಕ ಕೃಷಿ, ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ, ತಂತ್ರಜ್ಞಾನ ವಿನಿಮಯ, ಸಾಂಸ್ಕೃತಿಕ ಸಂಬಂಧಗಳು ಸೇರಿದಂತೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಕರ್ನಾಟಕದ ಜತೆ ಕೆಲಸ ಮಾಡಲು ಇಸ್ರೇಲ್ ಉತ್ಸುಕವಾಗಿದೆ. ರಾಜ್ಯದ ಜೊತೆಗಿನ ಸಂಬಂಧವನ್ನು ಬಲಪಡಿಸಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಉದ್ದೇಶವಿದೆ. ಇದಕ್ಕೆ ತಮ್ಮ ಸಹಕಾರ ಅಗತ್ಯ' ಎಂದು ಹೇಳಿದರು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿಗಳು: ಹೊ.ನ.ನೀಲಕಂಠೇಗೌಡ, ಫ್ಲೇವಿ ಕ್ಯಾಸ್ಟೆಲಿನೊ, ಷಿ.ಜಿ. ವರ್ಗಿಸ್, ಆಯೋಜನೆ ಹಾಗೂ ಸ್ಥಳ: ಮರಿಯಂ ನಿಲಯ ಶಾಲೆ, ಬಾಣಸವಾಡಿ, ಬೆಳಿಗ್ಗೆ 9

ಕರ್ನಾಟಕ ರಾಜ್ಯೋತ್ಸವ, ದಸರಾ ಮತ್ತು ದೀಪಾವಳಿ ಉತ್ಸವ: ಅಧ್ಯಕ್ಷತೆ: ಎಚ್. ಎನ್. ಸುಬ್ರಹ್ಮಣ್ಯ, ಮುಖ್ಯ ಅತಿಥಿ: ದತ್ತಾತ್ರೇಯ ಅರಳಿಕಟ್ಟೆ, ಆಯೋಜನೆ ಹಾಗೂ ಸ್ಥಳ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಬಸವನಗುಡಿ, ಬೆಳಿಗ್ಗೆ 10ರಿಂದ

ಸ್ವಚ್ಛತೆ ಮತ್ತು ನವೀಕರಣದಲ್ಲಿ ಅತ್ಯುತ್ತಮ ಪ್ರಗತಿ ತೋರಿದ ಘಟಕಗಳಿಗೆ ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಸತ್ಯವತಿ ಜಿ., ಆಯೋಜನೆ ಹಾಗೂ ಸ್ಥಳ: ಘಟಕ 11, ಯಲಹಂಕ ಬಿಎಂಟಿಸಿ ಬಸ್ ನಿಲ್ದಾಣ, ಬೆಳಿಗ್ಗೆ 10.45

ತ್ರಿವೇಣಿ ಅಧ್ಯಯನ ಕೇಂದ್ರ ಉದ್ಘಾಟನೆ ಸಮಾರಂಭ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಮುಖ್ಯ ಅತಿಥಿ: ಪ್ರತಿಭಾ ನಂದಕುಮಾರ್, ಆಯೋಜನೆ ಹಾಗೂ ಸ್ಥಳ: ಬಿ.ಎಸ್. ನಾರಾಯಣ್ ಸ್ಮಾರಕ ಸಭಾಂಗಣ, ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ, ಬಸವನಗುಡಿ, ಬೆಳಿಗ್ಗೆ 11

'ಮಾಯಾ' ಉತ್ಸವ: ಮುಖ್ಯ ಅತಿಥಿಗಳು: ದಯಾಳ್ ಪದ್ಮನಾಭನ್, ವಿಕಾಸ ಜೈಸ್ವಾಲ್, ಯುವರಾಜ್ ಗೋವಿಂದರಾಜು, ಗೌರವ ಅತಿಥಿಗಳು: ಎಂ.ಆರ್. ದೊರೆಸ್ವಾಮಿ, ಡಿ. ಜವಾಹರ್, ಜೆ. ಸೂರ್ಯಪ್ರಸಾದ್, ನಾಗಾರ್ಜುನ ಸಾದಿನೇನಿ, ಆಯೋಜನೆ ಹಾಗೂ ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಎಲೆಕ್ಟ್ರಾನಿಕ್ ಸಿಟಿ, ಮಧ್ಯಾಹ್ನ 2.30

ಜ್ಞಾನಪ್ರಕಾಶ ಸ್ವಾಮೀಜಿ

ಡಿ. ಪರಮೇಶ್ ನಾಯಕ್ ಅವರ 'ಡಾ.ಬಿ.ಆರ್. ಅಂಬೇಡ್ಕರ್ ಭರವಸೆಯ ಚಿಹ್ನೆ' ಪುಸ್ತಕ ಬಿಡುಗಡೆ: ಎಚ್. ಸಿ. ಮಹದೇವಪ್ಪ, ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ: ನ್ಯಾ.ಎಚ್.ಎನ್. ನಾಗಮೋಹನದಾಸ್, ಸ್ಥಳ: ಪ್ರೆಸ್‌ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ನುಡಿ ಸಂಭ್ರಮ–ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿ: ಮೂಡ್ನಾಕೂಡು ಚಿನ್ನಸ್ವಾಮಿ, ಅತಿಥಿ: ಅಪ್ಪಗೆರೆ ತಿಮ್ಮರಾಜು, ಆಯೋಜನೆ, ಸ್ಥಳ: ಬಿಎಂಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಿ.ವಿ. ಪುರ, ಬೆಳಿಗ್ಗೆ 11.30

ಮೂಡ್ನಾಕೂಡು ಚಿನ್ನಸ್ವಾಮಿ

ಶ್ರೀ ವಾಸವಿ ಕಲಾ ಸೇವಾ ಟ್ರಸ್ಟ್ ಉದ್ಘಾಟನೆ: ಮುಖ್ಯ ಅತಿಥಿಗಳು: ಮಹೇಂದ್ರ ಮುನ್ನೋತ್, ಎಸ್. ಉಮೇಶ್, ಕಮಲ್ ಕಣ್ಣನ್, ಸುಲೋಚನಾ ಎಸ್., ರಾಣಿ ಸುಂದರ್, ಉಮೇಶ್ ಎಸ್.ಎಲ್. ಹವಾಲ್ದಾರ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಮಧ್ಯಾಹ್ನ 3.30

ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಗೋವತ್ಸ ದ್ವಾದಶೀ ಪ್ರಯುಕ್ತ ಗೋಪೂಜಾ ಕಾರ್ಯಕ್ರಮ: ಸಾನ್ನಿಧ್ಯ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಶೈಲೇಶ ಹೊಳ್ಳ, ಮಹೇಂದ್ರ ಮುನ್ನೋತ್, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

FARNAZ

Advt.

ವಿಶ್ವನಗರ ಯೋಜನ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾರತೀಯ ನಗರ ಯೋಜನಾ ಸಂಸ್ಥೆಯ ಮೆಂಬರ್ ಅಫ್ ಕೌನ್ಸಿಲ್ ಸದಸ್ಯರಾದ ಹೊನ್ನೂರು, ಕರ್ನಾಟಕ ಪ್ರಾಂತಿಯ ಯೋಜನಾ ಸಂಸ್ಥೆಯ ಅಧ್ಯಕ್ಷರಾದ ಡಾ.ಎಲ್.ಶಶಿಕುಮಾರ್, ಮುಖ್ಯ ಅತಿಥಿಯಾಗಿ ಡಾ.ಅಂಜಲಿ, ಕಾರ್ಯದರ್ಶಿ ಶಂಕರ್ ಹಾಗೂ ಖಜಾಂಚಿ ಭಾಸ್ಕರ್ ಉಪಸ್ಥಿತರಿದ್ದರು. ಅಪರ ನಿರ್ದೇಶಕರಾದ ಕೆ.ನಾರಾಯಣಗೌಡ, ಮಲ್ಲಿಕಾರ್ಜುನಸ್ವಾಮಿ, ಧನಂಜಯರೆಡ್ಡಿ ಹಾಗೂ ಇತರೆ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮಗುವಿನ ಮೇಲೆ ದೌರ್ಜನ್ಯ ಚಿಕ್ಕಪ್ಪನಿಗೆ ಜೈಲು ಶಿಕ್ಷೆ

ಬೆಂಗಳೂರು: ಮೂರು ವರ್ಷದ ಹೆಣ್ಣು ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ಚಿಕ್ಕಪ್ಪನಿಗೆ 5 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ಒಂದನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ 2022ರಲ್ಲಿ ನಡೆದಿದ್ದ ಘಟನೆ ಬಗ್ಗೆ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಕೃಷ್ಣವೇಣಿ ವಾದಿಸಿದ್ದರು.

'ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ ಚಿಕ್ಕಪ್ಪ, ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಬಗ್ಗೆ ಮಗುವಿನ ತಾಯಿ ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ನ್ಯಾಯಾಲಯವು ಅಪರಾಧಿಗೆ ₹75 ಸಾವಿರ ದಂಡ ವಿಧಿಸಿದೆ. ಜೊತೆಗೆ, ಮಗುವಿಗೆ ₹ 50,000 ಪರಿಹಾರ ನೀಡುವಂತೆ ಆದೇಶದಲ್ಲಿ ಉಲ್ಲೇಖಿಸಿದೆ' ಎಂದು ತಿಳಿಸಿದರು.

5% CASHBACK# SBI card

#Min. Trxn.: ₹25,000; Max. Cashback: ₹2,500 per card account.
Validity: 28 Oct - 11 Nov 2023. T&C Apply.

ನಮ್ಮ ಮನಮೋಹಕ ಸಂಗ್ರಹಣೆಯನ್ನು ನೋಡಲು ಸ್ಕ್ಯಾನ್ ಮಾಡಿರಿ
ಈಗ www.reliancejewels.comನಲ್ಲಿ ಕೂಡ ಲಭ್ಯ.
ನಮ್ಮನ್ನು ಇಲ್ಲಿ ಫಾಲೋ ಮಾಡಿರಿ:

ಬೆಂಗಳೂರು : ಬನಶಂಕರಿ, ಫೋನ್ : 080-26793505/08 | ಜಯನಗರ, ಫೋನ್ : 080-41681801/08
ಕೋರಮಂಗಲ, ಫೋನ್ : 080-41244550/51 | ಮಂತ್ರಿ ಸ್ಕ್ವೇರ್ ಮಾಲ್, ಫೋನ್ : 9008690158 / 8105446631 | ಮಾರತಹಳ್ಳಿ, ಫೋನ್ : 6364802330 | ಗ್ಯಾಲರಿಯ ಮಾಲ್, ಫೋನ್ : 8867361634/ 8867492453 | ಫೋರಮ್ ದಕ್ಷಿಣ ಮಾಲ್: ಫೋನ್: 08068365400

ಈ ಹಬ್ಬಕ್ಕೆ, ಹೊಸ ವೇಗ

ಹೀರೊವನ್ನು ಮನೆಗೆ ತನ್ನಿ

ಈಗಲೇ ಖರೀದಿಸಿ 2024ರಲ್ಲಿ ಪಾವತಿಸಿ^	ಕಡಿಮೆ ಬಡ್ಡಿ ದರ@ 6.99%^	ಕಡಿಮೆ ಡೌನ್ ಪೇಮೆಂಟ್ ₹4999^

Hero GIFT
Grand Indian Festival of Trust

HF 100

ಎಕ್ಸ್-ಶೋರೂಮ್ ಬೆಲೆ ₹49999`

NEW Pleasure+ XTEC CONNECT

ಎಕ್ಸ್-ಶೋರೂಮ್ ಆರಂಭಿಕ ಬೆಲೆ	~~₹71788~~`
ಕ್ಯಾಶ್ ಡಿಸ್ಕೌಂಟ್	₹2100*
ಎಕ್ಸ್‌ಚೇಂಜ್ ಬೋನಸ್	₹3000*
ಫೆಸ್ಟಿವ್ ಎಕ್ಸ್-ಶೋರೂಮ್ ಆರಂಭಿಕ ಬೆಲೆ	₹66688`

Hero 112 MILLION** MADE OF TRUST | WORLD'S NO.1 22 YEARS IN A ROW≠ MOTORCYCLE & SCOOTER COMPANY | INDIA'S FIRST 5 YEAR WARRANTY* *Conditions apply

SCAN TO AVAIL GIFT OFFERS | ಆಧಾರ್‌ನ ಆಧಾರದ^ ಮೇಲೆ ಲೋನ್ & ಕ್ಯಾಶ್ EMI | ಅಡಮಾನ ಇಲ್ಲ^ | CALL TOLL-FREE 1800 266 0018

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet. `Starting Ex-Showroom price of HF 100 and Pleasure Series in Bengaluru. Festive ex-showroom prices are inclusive of applicable offers on respective models.

AUTHORISED DEALERS: BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. KAMAKSHIPALYA: POORNA MOTORS – PH: 9606922534. BANASHANKARI: SAI HERO - PH: 9289922476. JP NAGAR: SAI HERO, PH: 99002 36280. BANASWADI: BHAGATH HERO - PH: 9289922738. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. HOSUR ROAD: RT KRISHNA HERO - PH: 9289923177. JIGANI: RT KRISHNA HERO – PH: 8762860999. BYATARAYANAPURA: BIMAL HERO - PH: 9289922863. RT Nagar: BIMAL Hero 9535327710. DODDABALLAPURA: BIMAL Hero 9742202125. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. TUMKUR: SAI HERO - PH: 9289922986. B.H.ROAD – SAI HERO, PH. 7022752841 .TIPTUR: SAI HERO PH. 9164840456. KUNIGAL: SAI HERO - PH: 7022752858. Associate Dealer: MADIWALA - 9731660639. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064 Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. ATTIBELE: 8050609104. NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. VIDYARANYAPURA: 9606934533.

WT.5655.2023KAN

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಆಗ್ರಹ

‘ಸಂಪುಟದಿಂದ ಮುನಿಯಪ್ಪ ವಜಾಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ರಚಿಸಿರುವ ನಿವೃತ್ತ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಸಂಬಂಧಿಸಿದಂತೆ ಸಚಿವ ಕೆ.ಎಚ್. ಮುನಿಯಪ್ಪ ನೀಡಿರುವ ಹೇಳಿಕೆ ಖಂಡನೀಯ. ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು’ ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕಿರಣ್ ಕೊತ್ತಗೆರೆ, ‘ವರದಿ ಜಾರಿಗೆ ಸಚಿವರು

ಕೆ.ಎಚ್. ಮುನಿಯಪ್ಪ

ಹಾಗೂ ಶಾಸಕರ ಮನೆ ಮುಂದೆ ಧರಣಿ ಸತ್ಯಾಗ್ರಹ ಹಾಗೂ ಹೋರಾಟ ನಡೆಸುವಂತೆ ಮುನಿಯಪ್ಪ ಅವರು ಸ್ವಜಾತಿಯವರಿಗೆ ಕರೆ ನೀಡಿದ್ದಾರೆ. ಈ ವರದಿ ಪರಿಶಿಷ್ಟ ಸಮುದಾಯದ ಒಗ್ಗಟ್ಟನ್ನು ಛಿದ್ರಗೊಳಿಸಲಿದೆ’ ಎಂದು ದೂರಿದರು.

‘ಮುನಿಯಪ್ಪ ಅವರು ಸ್ವಪಕ್ಷೀಯ ಸಚಿವರು ಹಾಗೂ ಶಾಸಕರ ವಿರುದ್ಧ ಜನಾಂಗವನ್ನು ಎತ್ತಿ ಕಟ್ಟುವ ಪಿತೂರಿ ನಡೆಸುತ್ತಿರುವುದು ರಾಜಕೀಯ ದ್ರೋಹ. ಆದ್ದರಿಂದ ಅವರನ್ನು ವಜಾ ಮಾಡಬೇಕು’ ಎಂದು ಒತ್ತಾಯಿಸಿದರು.

ದೀಪಾವಳಿ: ಕಣ್ಣಿನ ಬಗ್ಗೆ ಎಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡದಿಂದ ಕಣ್ಣಿಗೆ ಹಾನಿಯಾಗಿ, ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಹಬ್ಬ ಆಚರಿಸಿ’ ಎಂದು ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಮನವಿ ಮಾಡಿಕೊಂಡಿದೆ.

‘ಪಟಾಕಿ ಸಿಡಿತದಿಂದ ಪ್ರತಿವರ್ಷ ಸಾವಿರಾರು ಮಂದಿ ಕಣ್ಣಿಗೆ ಗಾಯ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಹೆಚ್ಚಿನ ಗಾಯದಿಂದ ಶಾಶ್ವತವಾಗಿ ದೃಷ್ಟಿ ನಷ್ಟವಾಗಲಿದೆ. ಮುನ್ನೆಚ್ಚರಿಕೆ ಕ್ರಮಗಳಿಂದ ಕಣ್ಣಿಗೆ ಹಾನಿಯಾಗುವುದನ್ನು ತಡೆಯಲು ಸಾಧ್ಯ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ಟ್ರಸ್ಟಿ ಲಯನ್ ಪಿ.ಎಸ್. ಪ್ರೇಮನಾಥ್ ತಿಳಿಸಿದ್ದಾರೆ.

‘ಪಟಾಕಿ ಹೊಡೆಯಲೇ ಬೇಕು ಎಂದಾದಲ್ಲಿ ದೂರದಲ್ಲಿ ನಿಂತು ಪಟಾಕಿ ಹಚ್ಚಬೇಕು. ರಾಕೆಟ್‌ಗಳು ಹೆಚ್ಚು ಅಪಾಯಕಾರಿಯಾಗಿವೆ. ಪಟಾಕಿಗಳನ್ನು ಕೈಯಲ್ಲಿ ಹಿಡಿದು ಹಚ್ಚಲು ಮಕ್ಕಳಿಗೆ ಅವಕಾಶ ನೀಡಬಾರದು. ಕನ್ನಡಕ ಧರಿಸುವಿಕೆ ಸೇರಿ ವಿವಿಧ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು’ ಎಂದು ಹೇಳಿದ್ದಾರೆ.

‘ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಕಣ್ಣನ್ನು ಉಜ್ಜಬಾರದು. ಸ್ವಯಂ ಚಿಕಿತ್ಸೆಗೂ ಒಳಗಾಗಬಾರದು. ಕಣ್ಣಿನ ತುರ್ತು ಚಿಕಿತ್ಸೆಗೆ ಸಹಾಯವಾಣಿ 8618292449ಕ್ಕೆ ಸಂಪರ್ಕಿಸಿ’ ಎಂದು ಮನವಿ ಮಾಡಿಕೊಂಡಿದ್ದಾರೆ.

ಹಸಿರು ಪಟಾಕಿ ಬಳಸಲು ಜನತೆಗೆ ಬಿಬಿಎಂಪಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಶಬ್ದಮಾಲಿನ್ಯ, ವಾಯುಮಾಲಿನ್ಯ ಉಂಟು ಮಾಡುವ ಪಟಾಕಿಗಳನ್ನು ಸಿಡಿಸಬಾರದು. ಹಸಿರು ಪಟಾಕಿಯನ್ನೇ ಬಳಸಬೇಕು. ರಾತ್ರಿ 8ರಿಂದ 10ರವರೆಗೆ ಮಾತ್ರ ಪಟಾಕಿ ಹಚ್ಚಲು ಅವಕಾಶ ಎಂದು ಬಿಬಿಎಂಪಿ ತಿಳಿಸಿದೆ.

ಮಾಲಿನ್ಯಗಳಿಂದಾಗಿ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಪ್ರಾಣಿ-ಪಕ್ಷಿಗಳಿಗೂ ತೊಂದರೆ ಆಗುತ್ತದೆ. ಆದ್ದರಿಂದ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಸರಳ ರೀತಿಯಲ್ಲಿ ಪ್ಲಾಸ್ಟಿಕ್ ಮುಕ್ತ ಹಾಗೂ ಮಾಲಿನ್ಯರಹಿತ-ವಾಗಿ ಆಚರಿಸಬೇಕು ಎಂದು ‘ಸ್ವಚ್ಛ ದೀಪಾವಳಿ- ಶುಭ ದೀಪಾವಳಿ’ ಅಭಿಯಾನ ಆರಂಭಿಸಿದೆ.

ಸುಪ್ರೀಂ ಕೋರ್ಟ್ ಆದೇಶ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದಂತೆ, ಹಸಿರು ಪಟಾಕಿಗಳನ್ನು ಮಾತ್ರವೇ ಬಳಸಬೇಕು. ಪಟಾಕಿಗಳ ಪ್ಯಾಕೆಟ್‌ಗಳ ಮೇಲೆ ಹಸಿರು ಚಿನ್ಹೆಯನ್ನು ಖಚಿತಪಡಿ-ಕೊಳ್ಳ ಬೇಕು. ಕ್ಯೂಆರ್ ಕೋಡ್ ಮೂಲಕ ಪಟಾಕಿ ಬಗ್ಗೆ ತಿಳಿದುಕೊಳ್ಳಬೇಕು ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ ತಿಳಿಸಿದ್ದಾರೆ.

‘ಕೇಂದ್ರ ಸರ್ಕಾರ ‘ಸ್ವಚ್ಛ ಭಾರತ’ ಯೋಜನೆ 2.0 ಅಡಿಯಲ್ಲಿ ‘ಸ್ವಚ್ಛ ದೀಪಾವಳಿ- ಶುಭ ದೀಪಾವಳಿ’ ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಾರ್ವಜನಿಕರು ‘My Gov Portal’ ನಲ್ಲಿ ಅಥವಾ ವೆಬ್ ಲಿಂಕ್ (https://pledge.mygov.in/swachh-diwali-shubh-diwali/) ನೋಂದಾಯಿಸಿಕೊಂಡು ಅಭಿಯಾನಕ್ಕೆ ಕೈ ಜೋಡಿಸಬೇಕು. ‘ಪರಿಸರ ಸ್ನೇಹಿ ಸ್ಥಳೀಯ ಉತ್ಪನ್ನಗಳನ್ನು ಬಳಸಲು ನಾನು ಬದ್ಧನಾಗಿದ್ದೇನೆ. ಏಕಬಳಕೆಯ ಪ್ಲಾಸ್ಟಿಕ್ ಬೇಡ. ಹಸಿರು ದೀಪಾವಳಿಯನ್ನು ಆಚರಿಸುತ್ತೇನೆ’ ಎಂದು ಪ್ರಮಾಣ ಮಾಡಬೇಕು’ ಎಂದು ಹೇಳಿದ್ದಾರೆ.

ಜಾಗೃತಿ: ಬಿಬಿಎಂಪಿ ವ್ಯಾಪ್ತಿಯಲ್ಲಿ ಹಸಿರು ಪಟಾಕಿಯನ್ನು ಮಾತ್ರ ಬಳಸಬೇಕು. ಈ ಬಗ್ಗೆ ಘನತ್ಯಾಜ್ಯ ವಿಭಾಗದ ಆಟೊ ಟಿಪ್ಪರ್‌ಗಳಲ್ಲಿ ಧ್ವನಿವರ್ಧಕಗಳ ಮೂಲಕ ಸಂದೇಶ ಪ್ರಚಾರ ಮಾಡಿ ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಸಬ್ಸಿಡಿ ಸ್ಥಗಿತಕ್ಕೆ ಆಕ್ರೋಶ

ಬೆಂಗಳೂರು: ‘ಹೊಸ ವಿದ್ಯುತ್ ಸಂಪರ್ಕಕ್ಕೆ ರೈತರಿಗೆ ನೀಡುತ್ತಿದ್ದ ಸಬ್ಸಿಡಿ ಸ್ಥಗಿತಗೊಳಿಸಿರುವ ರಾಜ್ಯ ಸರ್ಕಾರ ರೈತದ್ರೋಹಿ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ದೀಪಾವಳಿ ಸಮಯದಲ್ಲಿ ಕಾಂಗ್ರೆಸ್ ರೈತರ ಮೇಲೂ ವಕ್ರದೃಷ್ಟಿ ಬೀರಿದೆ. ಬರ, ವಿದ್ಯುತ್ ಕ್ಷಾಮದಿಂದ ಕಂಗೆಟ್ಟ ರೈತರಿಗೆ ಮತ್ತೊಂದು ಬರೆ ಎಳೆದಿದೆ. ವಿದ್ಯುತ್ ಪರಿವರ್ತಕ, ವಿದ್ಯುತ್ ಕಂಬ, ತಂತಿ ಎಳೆಯಲು ಸರ್ಕಾರ ಸಬ್ಸಿಡಿ ಕೊಡುತ್ತಿತ್ತು. ತಮ್ಮ ಪಾಲಿನ ₹24 ಸಾವಿರ ಭರಿಸಲು ರೈತರು ಪರದಾಡುತ್ತಿದ್ದರು. ಈಗ ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದಿದ್ದಾರೆ.

ಸರ್ಕಾರ ಆದೇಶವನ್ನು ವಾಪಸ್ ಪಡೆಯಬೇಕು. ಮೊದಲಿನಂತೆ ರೈತರಿಗೆ ಸಬ್ಸಿಡಿ ಕೊಡಬೇಕು. ಇಲ್ಲದಿದ್ದರೆ ಜೆಡಿಎಸ್ ಪಕ್ಷ ಸದನದ ಒಳಗೆ, ಹೊರಗೆ ಹೋರಾಟಕ್ಕೆ ಇಳಿಯುತ್ತದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ತೈಲಾಭ್ಯಂಜನ ಸಪ್ತಾಹ ನಾಳೆಯಿಂದ ಆರಂಭ

ಬೆಂಗಳೂರು: ದೀಪಾವಳಿಯ ಅಂಗವಾಗಿ ರಾಜಾಜಿನಗರದ ಕ್ಷೇಮ ಆರೋಗ್ಯಧಾಮದ ವತಿಯಿಂದ ನ. 11ರಿಂದ 14ರವರೆಗೆ ವಿಶೇಷ ತೈಲಾಭ್ಯಂಜನ ಆಯೋಜಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ 7ರಿಂದ ಸಂಜೆ 7ರ ವರೆಗೆ ಅಭ್ಯಂಜನ ನಡೆಯಲಿದೆ. ಮಾಹಿತಿಗೆ ಮೊಬೈಲ್ ಸಂಖ್ಯೆ 9845572955 ಸಂಪರ್ಕಿಸಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

ನೋಂದಣಿ ಸಂಖ್ಯೆ ಹರಾಜು: ₹45.15 ಲಕ್ಷ ಸಂಗ್ರಹ

ಬೆಂಗಳೂರು: ವಾಹನಗಳ ಆಕರ್ಷಕ ನೋಂದಣಿ ಸಂಖ್ಯೆ ಪಡೆಯಲು ಜನರು ಅತಿ ಉತ್ಸಾಹ ತೋರಿದ್ದರಿಂದ ಬುಧವಾರ ನಡೆದ ಸಂಖ್ಯೆಗಳ ಹರಾಜಿನಲ್ಲಿ ₹45.15 ಲಕ್ಷ ರಾಜಸ್ವ ಸಂಗ್ರಹವಾಗಿದೆ.

ಸಾರಿಗೆ ಇಲಾಖೆಯಿಂದ ಬೆಂಗಳೂರಿನ ಯಶವಂತಪುರ ಪ್ರಾದೇಶಿಕ ಕಚೇರಿಯಲ್ಲಿ ಹರಾಜು ಪ್ರಕ್ರಿಯೆ ನಡೆಯಿತು. ಕೆಎ05 ಎಂಕೆ 9999 ಸಂಖ್ಯೆಯು ಅತ್ಯಧಿಕ ಮೊತ್ತ ₹8 ಲಕ್ಷಕ್ಕೆ ಹರಾಜು ಆಯಿತು. ಕೆಎ05 ಎಂಕೆ 0006 ಮತ್ತು ಕೆಎ05 ಎಂಕೆ 0009 ಸಂಖ್ಯೆಗಳು ತಲಾ ₹4 ಲಕ್ಷಕ್ಕೆ ಹರಾಜಾದವು. ಕೆಎ05 ಎಂಕೆ 1111 ಸಂಖ್ಯೆ ₹2.85 ಲಕ್ಷ, ಕೆಎ05 ಎಂಕೆ 6666 ಸಂಖ್ಯೆ ₹2.80 ಲಕ್ಷ, ಕೆಎ 05 ಎಂಕೆ 0001 ₹ 1.75 ಲಕ್ಷಕ್ಕೆ ಹರಾಜಾದವು. ಇತರ 20 ಸಂಖ್ಯೆಗಳಲ್ಲಿ ತಲಾ ₹ 75 ಸಾವಿರದಂತೆ ರಾಜಸ್ವ ಸಂಗ್ರಹ ವಾಗಿದೆ ಎಂದು ಸಾರಿಗೆ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಬಂಧನ ವಾರಂಟ್: ಸುರ್ಜೇವಾಲಾಗೆ ತಾತ್ಕಾಲಿಕ ರಕ್ಷಣೆ

ನವದೆಹಲಿ (ಪಿಟಿಐ): 23 ವರ್ಷ ಹಳೆಯ ಕ್ರಿಮಿನಲ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಸಂಸದ, ಶಾಸಕರ ಕೋರ್ಟ್ ಜಾಮೀನುರಹಿತ ವಾರಂಟ್ ಜಾರಿಗೊಳಿಸುವುದಿಂದ ಸುಪ್ರೀಂ ಕೋರ್ಟ್ ‘ರಕ್ಷಣೆ’ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು, ವಾರಂಟ್ ಜಾರಿ ರದ್ದತಿ ವಿರುದ್ಧ ಐದು ವಾರಗಳಲ್ಲಿ ವಾರಾಣಸಿಯ ಸಂಸದ, ಶಾಸಕರ ಕೋರ್ಟ್‌ನ ವಿಶೇಷ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಲು ಸೂಚಿಸಿತು.

ಅಲ್ಲಿಯವರೆಗೆ ವಾರಂಟ್ ಜಾರಿಗೊಳಿಸಬಾರದು ಎಂದು ಪೀಠ ಸೂಚಿಸಿತು. ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರು ಪೀಠದ ಇತರ ಸದಸ್ಯರಾಗಿದ್ದಾರೆ.

ತಿದ್ದುಪಡಿ

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಶ್ರೀಶ್ರೀ ನೈಸರ್ಗಿಕ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಂಟಿ ಆಶ್ರಯದಲ್ಲಿ ಡಿಸೆಂಬರ್ 9ರಿಂದ 11ರವರೆಗೆ ಸಿರಿಧಾನ್ಯಗಳು ಮತ್ತು ಸಾವಯವ ಕೃಷಿ ಮೇಳ ಆಯೋಜಿಸಲಾಗಿದೆ. ಗುರುವಾರದ (ನ.9) ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–65/1682/2023–24 ದಿನಾಂಕ: 09.11.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಡಿ.ಎಸ್.ಮೋಹನ	ಆನೇಕಲ್	ಸರ್ಜಾಪುರ	ಚಿಕ್ಕ ವಡೇರಪುರ	7/3	1–02	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಗಳು ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ & ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ವಾಣಿಜ್ಯ ಮಳಿಗೆಗಳು ಹಾಗೂ ದಿನ ಉಪಯೋಗಿ ಸಾಮಗ್ರಿಗಳು ಲಭ್ಯವಾಗುತ್ತವೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಾಣಿಜ್ಯ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/43/2023-24 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

के आई ओ सी एल लिमिटेड
KIOCL LIMITED

KUDREMUKH

(ಭಾರತ ಸರ್ಕಾರದ ಒಂದು ಉದ್ಯಮ)

CIN - L13100KA1976GOI002974

ದೂ & ಫ್ಯಾಕ್ಸ್ ನಂ 080 - 25531525, ಇಮೇಲ್ : cs@kioclltd.in, ವೆಬ್‌ಸೈಟ್ : www.kioclltd.in

ಸೆಪ್ಟೆಂಬರ್ 30, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಲೆಕ್ಕಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳು.

(EPS ಹೊರತುಪಡಿಸಿ ಲಕ್ಷಗಳಲ್ಲಿ ₹)

	ವಿವರಗಳು	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯವಾದ ಅರ್ಧವಾರ್ಷಿಕ	
		30.09.2023 (ಆಡಿಟ್ ಮಾಡದ)	30.06.2023 (ಆಡಿಟ್ ಮಾಡದ)	30.09.2022 (ಆಡಿಟ್ ಮಾಡದ)	30.09.2023 (ಆಡಿಟ್ ಮಾಡದ)	30.09.2022 (ಆಡಿಟ್ ಮಾಡದ)
ಕ್ರ.ಸಂ.	1	2	3	4	5	6
1	ಕಾರ್ಯಾಚರಣೆಯಿಂದ ಒಟ್ಟು ಆದಾಯ	43,124	50,144	15,447	93,268	52,079
2	ಅವಧಿಗಾಗಿ ನಿವ್ವಳ ಲಾಭ /(ನಷ್ಟ) (ತೆರಿಗೆಗಿಂತ ಮುಂಚೆ, ಅಸಾಧಾರಣ ಮತ್ತು /ಅಥವಾ ಅಸಾಧಾರಣ ವಸ್ತುಗಳು)	(1792)	(6168)	(10271)	(7960)	(14649)
3	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ಮೊದಲು, ಅಸಾಧಾರಣ ಮತ್ತು /ಅಥವಾ ಅಸಾಧಾರಣ ವಸ್ತುಗಳ ನಂತರ)	(1792)	(6168)	(10271)	(7960)	(14649)
4	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ನಂತರ, ಅಸಾಧಾರಣ ಮತ್ತು/ ಅಥವಾ ಅಸಾಧಾರಣ ವಸ್ತುಗಳ ನಂತರ)	(2139)	(5804)	(10222)	(7943)	(14600)
5	ಅವಧಿಗೆ ಒಟ್ಟುಸಮಗ್ರ ಆದಾಯ {(ಅವಧಿಗೆ ಸರಿಹೊಂದುವ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆಯ ನಂತರ)}	(2139)	(5804)	(10222)	(7943)	(14600)
6	ಈಕ್ವಿಟಿ ಷೇರ್ ಕ್ಯಾಪಿಟಲ್	60,775	60,775	60,775	60,775	60,775
7	ಹಿಂದಿನ ವರ್ಷದ ಆಡಿಟ್ ಮಾಡಲಾದ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ ಮೀಸಲುಗಳು (ಮರುಮೌಲ್ಯಮಾಪನ ಮೀಸಲು ಹೊರತುಪಡಿಸಿ)	-	-	-	-	-
8	ಪ್ರತಿ ಷೇರ್‌ಗೆ ಗಳಿಕೆಗಳು (ಪ್ರತಿಯೊಂದಕ್ಕೆ 10 /) (ಮುಂದುವರಿದ ಮತ್ತು ಮುಂದುವರಿಸಲಾಗದ ಕಾರ್ಯಾಚರಣೆಗಳು) ಬೇಸಿಕ್ ಮತ್ತು ಡೈಲ್ಯೂಟ್ ಮಾಡಲಾದ	(0.35)	(0.96)	(1.68)	(1.31)	(2.40)

ಗಮನಿಸಿ :

1 ಮೇಲಿನವು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015 ರ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ವಿವರವಾದ ಲೆಕ್ಕ ಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳ ಸಾರವಾಗಿದೆ. ಸೆಪ್ಟೆಂಬರ್ 30, 2023 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪ ಸ್ಟಾಕ್ ಎಕ್ಸ್‌ಚೇಂಜ್(ಗಳು) ವೆಬ್‌ಸೈಟ್ www.nseindia.com, www.bseindia.com, www.msei.in ಮತ್ತು ಕಂಪನಿ ವೆಬ್‌ಸೈಟ್ www.Kioclltd.in ನಲ್ಲಿ ಲಭ್ಯವಿದೆ.

2 ಕಂಪನಿಯ ಮೇಲಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು 08.11.2023 ರಂದು ನಡೆದ ಅವರ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ಮಂಡಳಿಯಿಂದ ಆದೇಶ
KIOCL ಲಿಮಿಟೆಡ್
ಸಹಿ/-
ಮನೋಜ್ ಕುಮಾರ್ ಝೂವರ್
ನಿರ್ದೇಶಕರು (ಹಣಕಾಸು)
(DIN 07306454)

ಸ್ಥಳ : ಬೆಂಗಳೂರು
ದಿನಾಂಕ : 08.11.2023

SANSERA ideas@work

SANSERA ENGINEERING LIMITED

CIN: L34103KA1981PLC004542

Registered Address: Plant-7, No.143/A, Jigani Link Road, Bommasandra Industrial Area, Bengaluru - 560105, **Phone:** 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

CONSOLIDATED UNAUDITED FINANCIAL RESULTS FOR THE QUARTER AND HALF YEAR ENDED 30TH SEPTEMBER, 2023

(Rs. in Million except EPS)

Sl. No.	Particulars	Quarter ended		Half year ended	
		30-09-2023 (Unaudited)	30-09-2022 (Unaudited)	30-09-2023 (Unaudited)	30-09-2022 (Unaudited)
1	Total Income from Operations	6928.83	6355.97	13529.49	11678.09
2	Net Profit/(Loss) for the period (before Tax, Exceptional and/or Extraordinary items)	636.94	627.46	1246.77	1105.51
3	Net Profit/(Loss) for the period before Tax (after Exceptional and/or Extraordinary items)	636.94	627.46	1,246.77	1,105.51
4	Net Profit/(Loss) for the period after Tax (after Exceptional and/or Extraordinary items)	475.41	468.74	927.11	816.57
5	Total Comprehensive Income For the period [comprising Profit/(Loss) for the priod (after tax) and Other Comprehensive Income (after tax)]	473.41	449.00	928.55	775.91
6	Equity Share Capital	106.65	105.80	106.65	105.80
7	Reserves (excluding Revaluation Reserve) as shown in the Audited balance Sheet of the previous year	-	-	-	-
8	Earnings per share (of Rs. 2/- each) 1. Basic: 2. Diluted:	8.81 8.70	8.72 8.53	17.24 17.00	15.24 14.88

Notes:

a. The above is an extract of the detailed format of unaudited quarterly and half yearly financial results filed with the stock exchanges under Regulation 33 of the SEBI (Listing Obligations & Disclosure Requirements) Regulations, 2015. The full format of the unaudited quarterly and half yearly financial results are available on the websites of the stock exchange(s) i.e., www.bseindia.com/ www.nseindia.com and the Company i.e., www.sansera.in.

b. Standalone Unaudited financial information of the Company pursuant to regulation 47(1)(b) of SEBI (LODR) Regulations, 2015

(Rs. in Million)

Particulars	Quarter ended		Half year ended	
	30-09-2023 (Unaudited)	30-09-2022 (Unaudited)	30-09-2023 (Unaudited)	30-09-2022 (Unaudited)
Turnover	6,304.78	5,788.47	12,186.32	10,550.72
Profit before Tax	611.05	600.39	1,203.01	1,078.28
Profit after Tax	456.63	448.75	896.22	804.78

For & on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 08 November 2023
Place: Bangalore

Adfactors 417

AstraZeneca

ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್

CIN: L24231KA1979PLC003563

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560045

ದೂ.: +91 80 6774 8000. ವೆಬ್: www.astrazeneca.com/india

30ನೇ ಸೆಪ್ಟೆಂಬರ್ 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಆರು ತಿಂಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	30/09/2023ಕ್ಕೆ ಕೊನೆಗೊಂಡ 3 ತಿಂಗಳಿಗೆ	30/09/2022ಕ್ಕೆ ಕೊನೆಯಾದ 3 ತಿಂಗಳಿಗೆ ಹಿಂದಿನ ವರ್ಷದಂತೆ	31/03/2023ಕ್ಕೆ ಕೊನೆಯಾದ ವರ್ಷ
		ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	31,944.45	24,292.11	1,02,907.26
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	7,338.44	4,406.94	13,410.46
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	5,236.98	3,256.43	9,929.25
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	5,265.71	3,237.83	9,667.82
5	ಈಕ್ವಿಟಿ ಷೇರು ಬಂಡವಾಳ	500.00	500.00	500.00
6	ಇತರ ಈಕ್ವಿಟಿ	–	–	58,368.83
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	20.95	13.03	39.72

ಟಿಪ್ಪಣಿ:

1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಸಂಜೀವ್ ಕುಮಾರ್ ಪಾಂಚಾಲ್
ಮ್ಯಾನೇಜಿಂಗ್ ಡೈರೆಕ್ಟರ್

ಸ್ಥಳ: ಬೆಂಗಳೂರು
ದಿನಾಂಕ: ನವಂಬರ್ 9, 2023

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೋಲಾರ

ದೂರವಾಣಿ ಸಂಖ್ಯೆ:08152–297070/297071

ಸಂಖ್ಯೆ : ಕೃಉಮಾಸ/ಕೋ/459/2022–23 ದಿನಾಂಕ: 16.10.2023

ಇ–ಟೆಂಡರ್ ಪ್ರಕಟಣೆ

ಕೃಉಮಾಸ ಕೋಲಾರ – 2023–24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಛೇರಿ ಮುಂಭಾಗ ಶಿಥಿಲಗೊಂಡಿರುವ ಕಡೆ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ ನೊಂದಾಯಿತ STD KW-2 ರಂತೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ **ಮೊತ್ತ ರೂ. 25,39,540/–, ಕಾಲಾವಧಿ 03 ತಿಂಗಳು, ಇ.ಎಂ.ಡಿ. ರೂ. 50,800/–.** ಇ–ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 22.11.2023 ಸಂಜೆ 5–00 ಗಂಟೆಯವರೆಗೆ ಮಾತ್ರ.** ಟೆಂಡರ್ ಅರ್ಹತಾ ಷರತ್ತು–ವಾ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು. **(APMC/2023-24/OW/WORK-INDENT 74)** ಅಥವಾ **ಮೊಬೈಲ್ ಸಂಖ್ಯೆ–9663404695** ರಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/– (ಎನ್.ವಿಜಯಲಕ್ಷ್ಮಿ) ಕಾರ್ಯದರ್ಶಿ

ಸಹಿ/– (ಅಕ್ರಂ ಪಾಷ) ಆಡಳಿತಾಧಿಕಾರಿಗಳು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:198/ಕೆಎಸ್‌ಎಂಸಿಎ/2023–24

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ, ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಆವತಿ ಪೋಸ್ಟ್, ಆವತಿ ಗ್ರಾಮದಲ್ಲಿ ವಾಸವಾಗಿರುವ, ಶ್ರೀ ಲೇಟ್ ಚಿಕ್ಕ ಕಲ್ಲಪ್ಪ @ ಕಲ್ಲಪ ರವರ ಧರ್ಮಪತ್ನಿ ಶ್ರೀಮತಿ **ಕೆಂಪಮ್ಮ** ಸುಮಾರು 83 ವರ್ಷ, **ಶ್ರೀ ಚಿಕ್ಕಕಲ್ಲಪ್ಪ** @ ಕಲ್ಲಪ್ಪ ನವರ ಮಗ **ಶ್ರೀ ಕೆ. ಮುನಿರಾಜು** ಅವರ ಕುಟಂಬದವರು ಶ್ರೀ ಚಿಕ್ಕಕಲ್ಲಪ್ಪ @ ಕಲ್ಲಪ್ಪ ನವರ ಮಗ **ಶ್ರೀ ಕೆ. ವೆಂಕಟೇಗೌಡ @ ವೆಂಕಟೇಶ್‌ಗೌಡ** ಹಾಗೂ ಅವರ ಕುಟುಂಬದವರು ರವರಿಗೂ, ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಮಾರಾಟ ಮಾಡುವ ಸಂಬಂಧ ಒಡಂಬಡಿಕೆಯಾಗಿದ್ದು, ಸದರಿ ಜಮೀನಿನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈಗಾಗಲೇ ಆ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲಿ, ನನಗಾಗಲಿ ಲಿಖಿತವಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ನನ್ನ ಕಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ದಾಖಲಾತಿಗಳನ್ನು, ಸಲ್ಲಿಸತಕ್ಕದ್ದು, ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರೆದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಕ್ರಯ ಪತ್ರವನ್ನು ಪಡೆದುಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಆವತಿ ಗ್ರಾಮದಲ್ಲಿರುವ ಸರ್ವೆ ನಂ181/1 ರಲ್ಲಿ 3 ಎಕರೆ 12 ಗುಂಟೆ ಪೈಕಿ 1.26 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್‌ಬಂದಿ: **ಪೂರ್ವಕ್ಕೆ:** ಸರ್ವೆ ನಂ 180/4 ರ ನಿತಿನ್ ಶಿವಕುಮಾರ್ ರವರ ಜಮೀನು, **ಪಶ್ಚಿಮಕ್ಕೆ:** ಸ.ನಂ. 182/2 ರ ಮುನಿಯಮ್ಮ ರವರ ಜಮೀನು, **ಉತ್ತರಕ್ಕೆ:** ಸ.ನಂ. 180/2, 3, 5 ರ ನಿತೀನ್ ಶಿವಕುಮಾರ್ ರವರ ಜಮೀನು, **ದಕ್ಷಿಣಕ್ಕೆ:** ಸ.ನಂ 181/1 ರ ಉಳಿಕೆ ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು, ನಂ. 145, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು
ಮೊಬೈಲ್ ನಂ. 94480 75718

ದಿನಾಂಕ 09–11–2023

ನೈಋತ್ಯ ರೈಲ್ವೆ

G20 भारत 2023 INDIA

ದೀಪಾವಳಿ & ಛಠ್ ಪೂಜೆಗಳ ವಿಶೇಷ ರೈಲು ಸೇವೆಗಳು

ದೀಪಾವಳಿ ಮತ್ತು ಛಠ್ ಹಬ್ಬಗಳ ದೃಷ್ಟಿಯಿಂದ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ಭಾರತೀಯ ರೈಲ್ವೆ ಸೂಚನೆ ನೀಡಿದೆ. ಹೆಚ್ಚಿನ ಮಾಹಿತಿಗಾಗಿ, ಪ್ರಯಾಣಿಕರು **https://enquiry.indianrail.gov.in** ನ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಲು ಅಥವಾ **139** ಅನ್ನು ಡಯಲ್ ಮಾಡಲು ಸೂಚಿಸಲಾಗಿದೆ.

ಕ್ರಮ. ಸಂ.	ರೈಲು ಸಂಖ್ಯೆ	ಇಂದ – ವರೆಗೆ	ಸೇವೆಗಳ ದಿನಗಳು	ಪ್ರಯಾಣದ ದಿನಾಂಕಗಳು
1.	07335	ಬೆಳಗಾವಿ – ಕಾಝಿಪೇಟೆ	ಪ್ರತಿದಿನ	01.11.2023 ರಿಂದ 30.11.2023
2.	07336	ಕಾಝಿಪೇಟೆ – ಬೆಳಗಾವಿ	ಪ್ರತಿದಿನ	02.11.2023 ರಿಂದ 01.12.2023
3.	07339	ಎಸ್‌ಎಸ್‌ಎಸ್ ಹುಬ್ಬಳ್ಳಿ – ಕೆಎಸ್‌ಆರ್ ಬೆಂಗಳೂರು	ಪ್ರತಿದಿನ	01.11.2023 ರಿಂದ 31.12.2023
4.	07340	ಕೆಎಸ್‌ಆರ್ ಬೆಂಗಳೂರು – ಎಸ್‌ಎಸ್‌ಎಸ್ ಹುಬ್ಬಳ್ಳಿ	ಪ್ರತಿದಿನ	02.11.2023 ರಿಂದ 01.01.2024
5.	06287	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭುವನೇಶ್ವರ ನ್ಯೂ	ಶುಕ್ರವಾರ	10.11.2023
6.	06288	ಭುವನೇಶ್ವರ ನ್ಯೂ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶನಿವಾರ	11.11.2023
7.	06231	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ವಿಜಯಪುರ	ಶುಕ್ರವಾರ	10.11.2023
8.	06232	ವಿಜಯಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023
9.	06585	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಬೆಳಗಾವಿ	ಶುಕ್ರವಾರ	10.11.2023
10.	06586	ಬೆಳಗಾವಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023
11.	06217	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಠಿ	ಗುರುವಾರ	09.11.2023, 16.11.2023 & 23.11.2023
12.	06218	ಭಗತ್ ಕಿ ಕೋಠಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ	12.11.2023, 19.11.2023 & 26.11.2023
13.	06219	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಠಿ	ಶನಿವಾರ	11.11.2023, 18.11.2023 & 25.11.2023
14.	06220	ಭಗತ್ ಕಿ ಕೋಠಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023, 21.11.2023 & 28.11.2023
15.	07303	ಮೈಸೂರು – ಮಂಗಳೂರು ಜಂ.	ಶುಕ್ರವಾರ	10.11.2023
16.	07304	ಮಂಗಳೂರು ಜಂ. – ಮೈಸೂರು	ಮಂಗಳವಾರ	14.11.2023
17.	06505	ಎಸ್‌ಎಸ್‌ಎಸ್ ಹುಬ್ಬಳ್ಳಿ – ಬೀದರ್	ಶುಕ್ರವಾರ	10.11.2023
18.	06506	ಬೀದರ್ – ಯಶವಂತಪುರ	ಮಂಗಳವಾರ	14.11.2023
19.	07353	ಕೆಎಸ್‌ಆರ್ ಬೆಂಗಳೂರು – ಎಸ್‌ಎಸ್‌ಎಸ್ ಹುಬ್ಬಳ್ಳಿ	ಶನಿವಾರ & ಬುಧವಾರ	11.11.2023 & 15.11.2023
20.	07354	ಎಸ್‌ಎಸ್‌ಎಸ್ ಹುಬ್ಬಳ್ಳಿ – ಕೆಎಸ್‌ಆರ್ ಬೆಂಗಳೂರು	ಶನಿವಾರ & ಬುಧವಾರ	11.11.2023 & 15.11.2023
21.	05215	ಬರವುನಿ – ಯಶವಂತಪುರ	ಶನಿವಾರ	07.11.2023 ರಿಂದ 09.12.2023
22.	05216	ಯಶವಂತಪುರ – ಬರವುನಿ	ಮಂಗಳವಾರ	10.11.2023 ರಿಂದ 12.12.2023
23.	08543	ವಿಶಾಖಪಟ್ಟಣಂ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ	05.11.2023 ರಿಂದ 26.11.2023
24.	08544	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ವಿಶಾಖಪಟ್ಟಣಂ	ಸೋಮವಾರ	06.11.2023 ರಿಂದ 27.11.2023
25.	05271	ಮುಜಫರ್‌ಪುರ – ಯಶವಂತಪುರ	ಶುಕ್ರವಾರ	06.11.2023 ರಿಂದ 08.12.2023
26.	05272	ಯಶವಂತಪುರ – ಮುಜಫರ್‌ಪುರ	ಸೋಮವಾರ	09.11.2023 ರಿಂದ 11.12.2023
27.	06083	ನಾಗರ್‌ಕೋಯಿಲ್ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 21.11.2023
28.	06084	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ನಾಗರ್‌ಕೋಯಿಲ್	ಬುಧವಾರ	08.11.2023 ರಿಂದ 22.11.2023
29.	04813	ಭಗತ್ ಕಿ ಕೋಟಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶನಿವಾರ & ಸೋಮವಾರ	11.11.2023 ರಿಂದ 04.12.2023
30.	04814	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಟಿ	ಸೋಮವಾರ & ಬುಧವಾರ	13.11.2023 ರಿಂದ 06.12.2023
31.	03245	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಬುಧವಾರ	08.11.2023 ರಿಂದ 06.12.2023
32.	03246	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಶುಕ್ರವಾರ	10.11.2023 ರಿಂದ 08.12.2023
33.	03251	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ & ಸೋಮವಾರ	07.11.2023 ರಿಂದ 10.12.2023
34.	03252	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಮಂಗಳವಾರ & ಬುಧವಾರ	07.11.2023 ರಿಂದ 12.12.2023
35.	03259	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 05.12.2023
36.	03260	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಗುರುವಾರ	09.11.2023 ರಿಂದ 07.12.2023
37.	03247	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಗುರುವಾರ	09.11.2023 ರಿಂದ 07.12.2023
38.	03248	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಶನಿವಾರ	11.11.2023 ರಿಂದ 09.12.2023
39.	03241	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶುಕ್ರವಾರ	10.11.2023 ರಿಂದ 08.12.2023
40.	03242	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಭಾನುವಾರ	05.11.2023 ರಿಂದ 10.12.2023
41.	07265	ನರಸಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 24.11.2023
42.	07266	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ನರಸಾಪುರ	ಗುರುವಾರ	09.11.2023 ರಿಂದ 25.11.2023

PUB/487/AAD/PRB/SWR/2023-24

www.swr.indianrailways.gov.in | South Western Railway - SWR | SWRRLY | SWRRLY | southwesternrailway_swr | southwesternrailway

LG

ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...

FESTIVE EXCLUSIVE OFFERS

To participate in these offers, send an SMS <"First Name" "Last Name" GTM Code> to 7835073507

HOME ENTERTAINMENT OFFERS

Up to 26%* CASHBACK Max ₹26000* ON SELECT CREDIT / DEBIT CARDS

OLED CIRCLE An exclusive alliance Get benefits up to ₹50000*

3 YEAR* WARRANTY (With Select LG TVs) / FREE* LG SMART CAM Worth ₹9990 (Free with: LG 55 & Above UHD*/ UHD-N*, All QNEDs and All OLEDs

1* EMI Free (On Select Models) / 0* Down Payment (Rest in EMIs) (On Select Models)

UP TO 30% OFF ON LG SOUNDBAR* (With Select LG TVs)

FIXED EMI Starting from ₹999*

Care & Delight LG Service | LG 24 x 7 CUSTOMER CARE 08069379999 1800 315 9999 (Toll Free) www.lg.com/in/support | LG WhatsApp No. 9711709999 LG Service India Mobile App Available at Google Play | www.facebook.com/lgindiapage/ www.twitter.com/LGIndia | To know more about LG, visit www.lg.com/in For Corporate/Institutional enquiries, please write to corpenquiries@lge.com

Regd. Office: LG Electronics India Pvt. Ltd., A-24/6, Mohan Cooperative Industrial Estate, Mathura Road, New Delhi-110044 CIN No. U32107DL1997PTC220109
*T&C apply. For more information kindly visit www.lg.com/in

OLED evo C3 | 210cm (83) / 195cm (77) / 164cm (65) / 139cm (55) / 121cm (48) / 106cm (42)

Dolby VISION • ATMOS

1 EMI FREE*

EMI: ₹999*

- OLED evo 4K with Brightness Booster Max
- Self-LIT Pixels / α9 AI Processor 4K Gen6 / 120H
- Dolby Vision & Dolby Atmos
- 2.2 Ch / 40W Sound* with Virtual Surround 9.1.2
- NVIDIA G-Sync / AMD FreeSync / VRR

*2.0 Ch / 20W in 106cm (42)

UHD TV AI ThinQ UR9050 | 190cm (75) / 164cm (65) / 139cm (55) / 127cm (50) / 108cm (43)



1 EMI FREE*

EMI: ₹999*

- 4K Display / α5 AI Processor 4K Gen6
- AI Brightness Control / HLG / HDR10 / 4K Upscaler
- AI Sound Pro with Virtual 5.1.2 Up-mix
- Built-in Alexa / Apple Airplay & HomeKit / Works with Hey Google
- webOS 23 / User Profiles / Quick Cards

UHD TV AI ThinQ UR8040 | 190cm (75) / 177cm (70) / 164cm (65) / 139cm (55) / 127cm (50) / 108cm (43)

- 4K Display / α5 AI Processor 4K Gen6
- AI Brightness Control / HLG / HDR10 / 4K Upscaler
- AI Sound Pro with Virtual 5.1.2 Up-mix
- Built-in Alexa / Apple Airplay & HomeKit / Works with Hey Google
- webOS 23 / User Profiles / Quick Cards

1 EMI FREE*

EMI: ₹999*

UHD TV AI ThinQ UR7790 | 108cm (43)



ULTRA BRIGHT PANEL

35W Woofer Sound

- 4K Display with Ultra Bright Panel
- α5 AI Processor 4K Gen6
- 2.1 Ch / 35W Powerful Sound / Built-in Woofer
- AI Brightness Control / HLG / HDR10 / 4K Upscaler
- Built-in Alexa / Apple Airplay & HomeKit / Works with Hey Google

1 EMI FREE*

EMI: ₹999*

iPhone 15

MRP	₹79,900
Device Exchange Value	₹25,000
Exchange Bonus Upto*	₹6,000
HDFC Bank Cash Back*	₹5,000
Effective Price*	**₹43,900**
EMI per month* 24 months	**₹3,329**

BUY APPLE IPHONE 15 SERIES, GET BACKCASE & TEMPER GLASS WORTH ₹2,000 FREE

MATHIKERE: Old Raghu Med. **Ph: 91484 50662. K R PURAM :** Nr. TC Palya signal, **Ph: 76195 55537. BANASHANKARI:** Opp. Big Bazaar, **Ph: 99000 46931. MARATHAHALLI:** Opp. Innovative, **Ph: 91484 50665/64. BOMMANAHALLI:** Next to Shell Petrol , **Ph: 99000 46913. YELAHANKA NEW TOWN:** Opp Yelahanka Central Mall, **Ph: 99000 46918. SAHAKAR NAGAR:** Next to Swati Garden, **Ph: 99000 46937. HEBBAGODI:** Opp SKF, Next to KFC, **Ph: 76195 55541. BASVESHWARA NAGAR:** Modi Hospital Road,**Ph: 99000 46934. R.T NAGAR:** Next to Police Station, **Ph:99000 29308. SANJAY NAGAR:** Next to HDFC Bank, **Ph: 99000 46928. DEVANAHALLI:** Opp. Indian Oil, **Ph: 91481 40111. HOSAKOTE:** Next to Chemmanur, **Ph: 91081 78999. AKSHAY NAGAR:** DLF City, Opp. Hiranandani, **Ph: 99000 46943. HONGASANDRA:** Opp SBI, Begur Road, **Ph: 95915 26018. COX TOWN:** Next to Gymkhana, **Ph: 99000 46930. FRAZER TOWN:** Opp. Canara Bank , **Ph: 99000 12851. GANGA NAGAR:** Opp Vishal Medicals, **Ph: 99000 46949. HANUMANTH NAGAR:** Opp. Canara Bank, **Ph: 99000 46940. HEGGANAHALLI:** Opp Bus Stop, **Ph: 76195 55506. HESARAGHATTA MN RD:** Opp. Karnataka Bank, **Ph: 76195 55543. HRBR LAYOUT:** Near Banaswadi Club, **Ph: 99000 46946. HSR LAYOUT:** Opp NIFT, 27 Main, **Ph: 99000 18126. KOTHANUR:** Next to Empire Hotel, **Ph: 99002 37116. NAGARBHAVI:** Ambedkar Col. Signal, **Ph: 99725 97017. SUNKADAKATTE:** Magadi Road, **Ph: 76195 55509. RR NAGAR:** Opp. BBMP Office, **Ph: 99000 18217. PEENYA T DASARAHALLI :** Next to Honda Showroom, **Ph: 91485 70490 . VIJAYANAGAR:** Opp. Water Tank, **Ph: 99000 12420. KENGERI:** Opp. DS Max, **Ph: 99000 12609. RAMANAGARA:** Near Izoor P Stn., **Ph: 99000 98795. NELAMANGALA:** Opp. Shell Petrol Station, **Ph: 99001 15781. KOLAR:** Opp Honda, **Ph: 99001 09852. TUMKUR:** Opp. SIT, Batwadi, **Ph: 91086 71999. DODDABALLAPUR:** Talulk Office Road, **Ph: 9900046923.**

LG BEST SHOPS: BANGALORE: RAMA MURTHY NAGAR, Ph:99000 46915. BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559. MYSORE: Kuvempunagar, **91489 99894**

*Terms and conditions apply. On select brands and products. Limited period offers. Images are for representation only, not actual products. Free gift not applicable for samsung. Finance at the sole discretion of the financier. #20% cash back as per the offers by banks and finance companies.

50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | www.uniletstores.com

‘ಹಸಿರು ರಕ್ಷಕ’ರಾದ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು: ಆ್ಯಪ್ ಮೂಲಕ ಮೇಲುಸ್ತುವಾರಿ

ಮರ–ಗಿಡ ಬೆಳವಣಿಗೆ: ಡಿಜಿಟಲ್ ನಿಗಾ

• ಆರ್. ಮಂಜುನಾಥ್

ಬೆಂಗಳೂರು: ನಗರದ ರಸ್ತೆ ಬದಿಯಲ್ಲಿ ಗಿಡಗಳನ್ನು ಮೂರು ವರ್ಷ ಪೋಷಿಸಲು 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ತಮ್ಮ ಹೆಸರಿನ ಗಿಡಗಳ ಬೆಳವಣಿಗೆ ಬಗ್ಗೆ ಪೋಷಕರ ಮೊಬೈಲ್‌ನಲ್ಲಿಯೇ ಮಾಹಿತಿಯನ್ನೂ ದಾಖಲಿಸಬಹುದು.

‘ಹಸಿರು ಬೆಂಗಳೂರು’ ಯೋಜನೆಯಡಿ ಈ ವರ್ಷ ಒಂದು ಲಕ್ಷ ಸಸಿಗಳನ್ನು ನೆಡುವ ಗುರಿಯನ್ನು ಬಿಬಿಎಂಪಿ ಅರಣ್ಯ ವಿಭಾಗ ಹೊಂದಿದೆ. ಇದರಲ್ಲಿ ಶೇ 90ರಷ್ಟು ಸಸಿಗಳನ್ನು ನೆಡಲಾಗಿದ್ದು, ಅರ್ಧಕ್ಕೂ ಹೆಚ್ಚಿನ ಸಸಿಗಳ ಜವಾಬ್ದಾರಿಯನ್ನು ‘ಹಸಿರು ರಕ್ಷಕ’ ಯೋಜನೆಯಂತೆ ವಿದ್ಯಾರ್ಥಿಗಳು ವಹಿಸಿಕೊಂಡಿದ್ದಾರೆ.

ವಿದ್ಯಾರ್ಥಿಗಳ ಹೆಸರನ್ನು ಗಿಡಗಳ ರಕ್ಷಣಾ ಕವಚದ ಮೇಲೆ ಹಾಕಲಾಗಿದೆ. ಮಕ್ಕಳು ಅದರ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ಬಿಬಿಎಂಪಿ, ಸರ್ಕಾರಿ ಶಾಲೆಗಳು ಸೇರಿದಂತೆ ಖಾಸಗಿ ಶಾಲೆಗಳ ಮಕ್ಕಳೂ ಗಿಡಗಳನ್ನು ಪೋಷಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅವರಿಗೆ ಅದರ ಮಾಹಿತಿ ದಾಖಲಿಸಲು ಅನುವಾಗುವಂತೆ ‘ಹಸಿರು ರಕ್ಷಕ’ ಆ್ಯಪ್ ಅನ್ನೂ ಬಿಬಿಎಂಪಿ ಸಿದ್ಧಪಡಿಸಿದೆ.

‘ವಿದ್ಯಾರ್ಥಿಗಳು ತಮ್ಮ ಪೋಷಕರ ಮೊಬೈಲ್‌ನಲ್ಲಿ ‘ಹಸಿರು ರಕ್ಷಕ’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ಅವರಿಗೆ ಟ್ಯಾಗ್ ಮಾಡಲಾಗಿರುವ ಗಿಡದ ಮಾಹಿತಿ, ಚಿತ್ರ ಹಾಗೂ ಅದರ ನಿರ್ವಹಣೆ ಸಮಸ್ಯೆಗಳಿಗೆ ದೂರುಗಳನ್ನೂ ದಾಖಲಿಸಬಹುದು. ಇದರೊಂದಿಗೆ ಮಕ್ಕಳೊಂದಿಗೆ ಕುಟುಂಬಸ್ಥರೂ ಸಸಿ ಪೋಷಣೆಯಲ್ಲಿ ಭಾಗವಹಿಸಿದಂತಾಗುತ್ತದೆ’ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು.

‘ಮಹದೇವಪುರ ವಲಯದಲ್ಲಿ ಅತಿಹೆಚ್ಚು ಮಕ್ಕಳು ‘ಹಸಿರು ರಕ್ಷಕ’ ಯೋಜನೆಯಲ್ಲಿದ್ದಾರೆ. ಬೊಮ್ಮನಹಳ್ಳಿ ವಲಯದಲ್ಲಿ ಅತಿ ಹೆಚ್ಚು ಶಾಲೆಗಳು ಈ ಯೋಜನೆಯಲ್ಲಿ ಭಾಗಿಯಾಗಿದ್ದಾರೆ. ಪರಿಸರ ದಿನದಂದು ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಲಹೆಯಂತೆ ಈ ಯೋಜನೆ ಆರಂಭವಾಗಿದೆ. ಮುಂದಿನ ವರ್ಷದಲ್ಲಿ ಇನ್ನೂ ಹೆಚ್ಚಿನ ಮಕ್ಕಳನ್ನು ‘ಹಸಿರು ರಕ್ಷಕ’ರನ್ನಾಗಿ ನೋಂದಾಯಿಸಿಕೊಳ್ಳುವ ಗುರಿ ಇದೆ’ ಎಂದರು.

ಯಾವ ವಲಯದಲ್ಲಿ ಎಷ್ಟು ಸಸಿ?

ವಲಯ	ಸಸಿ (ಹಸಿರು ಬೆಂಗಳೂರು)	ವಿದ್ಯಾರ್ಥಿಗಳು (ಹಸಿರು ರಕ್ಷಕ)
ಪಶ್ಚಿಮ	4,000	3,054
ಪೂರ್ವ	3,000	3,000
ದಕ್ಷಿಣ	4,000	1,598
ಆರ್.ಆರ್. ನಗರ	12,700	5,550
ಬೊಮ್ಮನಹಳ್ಳಿ	16,900	9,300
ದಾಸರಹಳ್ಳಿ	14,000	8,047
ಯಲಹಂಕ	18,600	10,168
ಮಹದೇವಪುರ	16,800	11,002

ಕುಟುಂಬಕ್ಕೂ ಜವಾಬ್ದಾರಿ: ಸ್ವಾಮಿ

‘ಗಿಡ–ಮರಗಳ ಪೋಷಣೆ, ರಕ್ಷಣೆ ಬಗ್ಗೆ ನಗರದ ನಾಗರಿಕರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ಉದ್ದೇಶದ ಪ್ರಥಮ ಹಂತವಾಗಿ ವಿದ್ಯಾರ್ಥಿಗಳಿಗೆ ಅವರ ಹೆಸರಿನ ಗಿಡಗಳ ಮಾಹಿತಿಯನ್ನು ‘ಹಸಿರು ರಕ್ಷಕ’ ಆ್ಯಪ್‌ನಲ್ಲಿ ದಾಖಲಿಸಲು ಅವಕಾಶ ನೀಡಲಾಗಿದೆ. ಪೋಷಕರ ಮೊಬೈಲ್‌ನಲ್ಲಿ ಈ ಪ್ರಕ್ರಿಯೆ ನಡೆಸಬಹುದಾಗಿದ್ದು, ಇದರಿಂದ ಕುಟುಂಬಸ್ಥರಿಗೂ ಗಿಡದ ಬೆಳವಣಿಗೆ ನೋಡಬಹುದಾಗಿದೆ’ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು.

‘ಆ್ಯಪ್ ಜೊತೆಗೆ ವೆಬ್‌ಸೈಟ್‌ನಲ್ಲೂ ಈ ವಿವರ ಅಪ್‌ಲೋಡ್ ಆಗಲಿದೆ’ ಎಂದು ತಿಳಿಸಿದರು.

ಅಂಕಿ-ಅಂಶಗಳು

1 ಲಕ್ಷ ಸಸಿಗಳನ್ನು ನೆಡುವ ಗುರಿ

90 ಸಾವಿರ ಈವರೆಗೆ ನೆಟ್ಟಿರುವ ಸಸಿಗಳು

51,719 ವಿದ್ಯಾರ್ಥಿಗಳಿಂದ ಸಸಿಗಳ ನಿರ್ವಹಣೆ

41,600 ಸಸಿಗಳಿಗೆ ಟ್ಯಾಗಿಂಗ್ ಪೂರ್ಣ

237 ಶಾಲೆಗಳೊಂದಿಗೆ ಒಪ್ಪಂದ

ಕಸ್ತೂರಬಾ ರಸ್ತೆಯಲ್ಲಿ ‘ಹಸಿರು ರಕ್ಷಕ’ ಯೋಜನೆಯಡಿ ನೆಡಲಾಗಿರುವ ಸಸಿಯನ್ನು ವಿದ್ಯಾರ್ಥಿಯ ಹೆಸರಿನೊಂದಿಗೆ ಟ್ಯಾಗ್ ಮಾಡಲಾಗಿದೆ

ಮರಗಣತಿಗೆ ಮತ್ತೆ ಟೆಂಡರ್

‘ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಗಿಡ–ಮರಗಳ ಗಣತಿ ಮಾಡಲು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಅದಕ್ಕೆ ಅಗತ್ಯವಾದ ಆರ್ಥಿಕ ವಹಿವಾಟಿನ ಮೊತ್ತ ಅಧಿಕವಾಗಿದ್ದು, ಅಧ್ಯಯನ ನಡೆಸುವ ಸಂಸ್ಥೆಗಳ ವ್ಯಾವಹಾರಿಕ ಮೌಲ್ಯ ಅಷ್ಟು ದೊಡ್ಡದಾಗಿಲ್ಲ. ಹಲವು ಸಂಶೋಧನೆ ಸಂಸ್ಥೆಗಳನ್ನು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಹೀಗಾಗಿ, ಟೆಂಡರ್ ಷರತ್ತುಗಳನ್ನು ಸಡಿಲಗೊಳಿಸಿ ಮರು ಟೆಂಡರ್ ಕರೆಯಲಾಗಿದೆ’ ಎಂದು ಡಿಸಿಎಫ್ ಸ್ವಾಮಿ ಮಾಹಿತಿ ನೀಡಿದರು.

ಮರಣೋತ್ತರ ಪರೀಕ್ಷೆ ವರದಿ ನೀಡಿದ ಸುಳಿವು

ಬಾಣಂತಿ ಕೊಂದು ಠಾಣೆ ಬಳಿಗೆ ಆಂಬುಲೆನ್ಸ್‌ನಲ್ಲಿ ಶವ ತಂದ ಪತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದ ಅಲೀಮಾ ಉರುಫ್ ಬಿ. ಅನುರಾಧಾ (33) ಸಾವಿನ ರಹಸ್ಯ ಭೇದಿಸಿರುವ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು, ಕೊಲೆ ಆರೋಪದಡಿ ಪತಿ ರಾಜಶೇಖರ್‌ನನ್ನು (28) ಬಂಧಿಸಿದ್ದಾರೆ.

‘ಅನಂತಪುರದ ಆರೋಪಿ ರಾಜಶೇಖರ್, ಪತ್ನಿ ಅಲೀಮಾ ಅವರನ್ನು ಅ. 29ರಂದು ಕೊಲೆ ಮಾಡಿ ಆತ್ಮಹತ್ಯೆಯೆಂದು ಬಿಂಬಿಸಿ ನಾಟಕವಾಡಿದ್ದ. ಅಲೀಮಾ ಅವರದ್ದು ಕೊಲೆ ಎಂಬುದು ಮರಣೋತ್ತರ ಪರೀಕ್ಷೆ ವರದಿಯಿಂದ ಗೊತ್ತಾಗುತ್ತಿದ್ದಂತೆ, ರಾಜಶೇಖರ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ ‘ಪ್ರಜಾವಾಣಿ’ಗೆ ತಿಳಿಸಿದರು.

ವರ್ಷದ ಸ್ನೇಹ: ‘ಆರೋಪಿ ರಾಜಶೇಖರ್, ಕೂಲಿ ಕೆಲಸಕ್ಕಾಗಿ ನಗರಕ್ಕೆ ಬಂದಿದ್ದ. ವಿವಾಹಿತೆ ಅಲೀಮಾ, ಮೊದಲ ಪತಿ ಹಾಗೂ ಇಬ್ಬರು ಮಕ್ಕಳನ್ನು ತೊರೆದು ಬೆಂಗಳೂರಿಗೆ ಬಂದಿದ್ದರು. ಸ್ನೇಹಿತೆ ಜೊತೆ ವಾಸವಿದ್ದುಕೊಂಡು ಕೂಲಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಲೀಮಾ ಅವರ ಸ್ನೇಹಿತೆಯ ಜೊತೆ ರಾಜಶೇಖರ್ ಒಡನಾಟ ಹೊಂದಿದ್ದ. ಆದರೆ, ಸ್ನೇಹಿತೆ ಆತನನ್ನು ದೂರ ಮಾಡಿದ್ದಳು. ಇದಾದ ನಂತರ ಅಲೀಮಾ ಜೊತೆ ವರ್ಷದ ಹಿಂದೆಯಷ್ಟೇ ಸ್ನೇಹ ಬೆಳೆಸಿದ್ದ ರಾಜಶೇಖರ್, ಸಲುಗೆ ಇಟ್ಟುಕೊಂಡಿದ್ದ. ಮದುವೆ ಸಹ ಆಗಿದ್ದನೆಂದು ಹೇಳಲಾಗುತ್ತಿದೆ.’

‘ಕೂಡ್ಲು ಬಳಿಯ ನಂಜರೆಡ್ಡಿ ಬಡಾವಣೆಯ ಮನೆಯಲ್ಲಿ ಇಬ್ಬರೂ ಒಟ್ಟಿಗೆ ವಾಸವಿದ್ದರು. ಅಲೀಮಾ ಎರಡು ತಿಂಗಳ ಹಿಂದೆಯಷ್ಟೇ ಮಗುವಿಗೆ ಜನ್ಮ ನೀಡಿದ್ದಳು’ ಎಂದು ಮೂಲಗಳು ತಿಳಿಸಿವೆ.

ಕುತ್ತಿಗೆಗೆ ವೇಲ್‌ನಿಂದ ಬಿಗಿದು ಕೊಲೆ: ‘ರಾಜಶೇಖರ್, ಬೇರೊಂದು ಯುವತಿ ಜೊತೆ ಸುತ್ತಾಡುತ್ತಿದ್ದ. ಇದನ್ನು ಅಲೀಮಾ ಪ್ರಶ್ನಿಸಿದ್ದರು. ಇದೇ ಕಾರಣಕ್ಕೆ ಮನೆಯಲ್ಲಿ ಜಗಳ ಶುರುವಾಗಿತ್ತು. ಪತ್ನಿ ಮೇಲೆ ರಾಜಶೇಖರ್ ಹಲವು ಬಾರಿ ಹಲ್ಲೆ ಮಾಡಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅ. 29ರಂದು ರಾತ್ರಿ ಇಬ್ಬರ ನಡುವೆ ಪುನಃ ಜಗಳ ಶುರುವಾಗಿತ್ತು. ‘ನಾನು ಬದುಕುವುದಿಲ್ಲ. ಸಾಯುತ್ತೇನೆ’ ಎಂಬುದಾಗಿ ಅಲೀಮಾ ಕೂಗಾಡುತ್ತಿದ್ದರು. ‘ನೀನು ಸಾಯಲೇ ಬೇಕು. ಸಾಯದಿದ್ದರೆ ನಾನೇ ಸಾಯಿಸುತ್ತೇನೆ’ ಎನ್ನುತ್ತಲೇ ಆರೋಪಿ, ಕುತ್ತಿಗೆಗೆ ವೇಲ್‌ನಿಂದ ಬಿಗಿದು ಉಸಿರುಗಟ್ಟಿಸಿ ಕೊಂದಿದ್ದ’ ಎಂದು ಮೂಲಗಳು ತಿಳಿಸಿವೆ.

ಠಾಣೆ ಬಳಿ ಮೃತದೇಹ: ‘ಪತ್ನಿಯ ಮೃತದೇಹವನ್ನು ನೇಣಿಗೆ ಹಾಕಿದ್ದ ಆರೋಪಿ, ‘ನನ್ನ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಜನರನ್ನು ಸೇರಿಸಿದ್ದ. ನಂತರ, ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ಠಾಣೆ ಬಳಿ ತಂದಿದ್ದ’ ಎಂದು ಮೂಲಗಳು ತಿಳಿಸಿವೆ.

‘ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸ್ವಲ್ಪ ಸ್ವಲ್ಪ ಉಸಿರಾಡುತ್ತಿದ್ದಾಳೆ. ನನಗೆ ದಿಕ್ಕು ತೋಚದಂತಾಗಿದೆ’ ಎಂದು ರಾಜಶೇಖರ್ ಗೋಳಾಡಿದ್ದ. ಆತ ಹೇಳುತ್ತಿರುವುದು ನಿಜವೆಂದು ತಿಳಿದಿದ್ದ ಸ್ಥಳೀಯರು ಹಾಗೂ ಸಿಬ್ಬಂದಿ, ಆಂಬುಲೆನ್ಸ್ ಅನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ಕಳುಹಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಲೀಮಾ ಮೃತಪಟ್ಟಿರುವುದಾಗಿ ಆಸ್ಪತ್ರೆಯವರು ಹೇಳಿದ್ದರು. ಅಲ್ಲಿಯ ಸಿಬ್ಬಂದಿ ಬಳಿಯೂ ಆರೋಪಿ, ಆತ್ಮಹತ್ಯೆ ಕಥೆ ಹೇಳಿದ್ದ. ಕತ್ತಿನಲ್ಲಿದ್ದ ಗಾಯದ ಗುರುತಿನಿಂದ ಸಾವಿನ ಬಗ್ಗೆ ಅನುಮಾನ ವ್ಯಕ್ತವಾಗಿತ್ತು. ಸಂಬಂಧಿಕರು ಹಾಗೂ ಸ್ಥಳೀಯರು ಸಹ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು, ಮರಣೋತ್ತರ ಪರೀಕ್ಷೆ ವರದಿಗಾಗಿ ಕಾಯುತ್ತಿದ್ದೆವು. ಇತ್ತೀಚೆಗೆ ವರದಿ ಬಂದಿದ್ದು, ಕೊಲೆ ಎಂಬುದು ಖಾತ್ರಿಯಾಯಿತು’ ಎಂದು ಮೂಲಗಳು ಹೇಳಿವೆ.

ಪಕ್ಕದ ಮನೆಯಲ್ಲಿ ಮಗು

‘ಆರೋಪಿ ರಾಜಶೇಖರ್ ನಿತ್ಯವೂ ಜಗಳ ಮಾಡಿ ಹಲ್ಲೆ ಮಾಡುತ್ತಿದ್ದ. ಇದೇ ಕಾರಣಕ್ಕೆ ಅಲೀಮಾ, ತಮ್ಮ ಎರಡು ತಿಂಗಳ ಮಗುವನ್ನು ಪಕ್ಕದ ಮನೆಯವರ ಬಳಿ ಬಿಟ್ಟಿದ್ದರು. ಬಾಣಂತಿ ಅಲೀಮಾ ಸಾವಿನ ದಿನವೂ ಮಗು ಪಕ್ಕದ ಮನೆಯಲ್ಲಿತ್ತು. ಇದೀಗ, ಸಂಬಂಧಿಕರ ಸುಪರ್ದಿಯಲ್ಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭದ್ರತಾ ಕೊಠಡಿಗೆ ಆಯೋಗ ಭೇಟಿ

ಪಿಎಸ್‌ಐ ನೇಮಕಾತಿ ಅಕ್ರಮ: ಪರಿಶೀಲನೆ ನಡೆಸಿದ ನಿವೃತ್ತ ನ್ಯಾ. ವೀರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸುತ್ತಿರುವ ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ಏಕಸದಸ್ಯ ಆಯೋಗ, ಪೊಲೀಸ್ ನೇಮಕಾತಿ ವಿಭಾಗದ ಭದ್ರತಾ ಕೊಠಡಿಗೆ (ಸ್ಟ್ರಾಂಗ್ ರೂಮ್) ಗುರುವಾರ ಭೇಟಿ ನೀಡಿ ಪರಿಶೀಲಿಸಿತು.

ಸಿಐಡಿ ಕಚೇರಿ ಆವರಣದಲ್ಲಿರುವ ಭದ್ರತಾ ಕೊಠಡಿ ಪರಿಶೀಲಿಸಿದ ವೀರಪ್ಪ ಅವರು, ಉತ್ತರ ಪ್ರತಿಗಳ ಸಂಗ್ರಹ ಹಾಗೂ ಅವುಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಡಿಜಿಪಿಗಳಾದ ಕಮಲ್ ಪಂತ್ ಹಾಗೂ ಎಂ.ಎ. ಸಲೀಂ ಅವರಿಂದ ಮಾಹಿತಿ ಪಡೆದುಕೊಂಡರು. ಉತ್ತರ ಪತ್ರಿಕೆ ಸಂಗ್ರಹ ಸಂದರ್ಭದಲ್ಲಿ ಕೈಗೊಂಡಿದ್ದ ಭದ್ರತಾ ಕ್ರಮಗಳ ಬಗ್ಗೆಯೂ ತಿಳಿದುಕೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವೀರಪ್ಪ, ‘ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆ ಅಂತಿಮ ಹಂತದಲ್ಲಿದೆ. ಇದೇ ತಿಂಗಳು ಕೊನೆ ವಾರದಲ್ಲಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದರು.

‘ದೇಶ ಕಾಯಲು ಸೈನಿಕರು ಎಷ್ಟು ಮುಖ್ಯವೋ, ದೇಶದೊಳಗೆ ಪೊಲೀಸರು ಅಷ್ಟೇ ಮುಖ್ಯ. ನೇಮಕಾತಿಯಲ್ಲಿಯೇ ಈ ರೀತಿ ಅಕ್ರಮವಾದರೆ, ಸಮಾಜಕ್ಕೆ ಕೆಟ್ಟ ಸಂದೇಶ ಹೋಗುತ್ತದೆ. ಇಂಥ ಅಕ್ರಮವನ್ನು ಹೋಗಲಾಡಿಸಲು ಸರಿಯಾದ ಮಾರ್ಗ ಕಂಡುಹಿಡಿಯಲು ವಿಚಾರಣೆ ನಡೆಯುತ್ತಿದೆ’ ಎಂದರು.

‘ಸಾಕ್ಷಿದಾರರು ವಿಚಾರಣೆಗೆ ಹಾಜರಾಗಿದ್ದಾರೆ. ಜೊತೆಗೆ, ಹುದ್ದೆಗೆ ಆಯ್ಕೆಯಾಗಿದ್ದ 300 ಅಭ್ಯರ್ಥಿಗಳು ಪತ್ರ ನೀಡಿದ್ದಾರೆ. ಎಲ್ಲವನ್ನೂ ಪರಿಶೀಲಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ರೀತಿ ಅಕ್ರಮವಾಗದಂತೆ ತಡೆಯುವ ನಿಟ್ಟಿನಲ್ಲಿ ವರದಿಯಲ್ಲಿ ಶಿಫಾರಸುಗಳನ್ನು ಉಲ್ಲೇಖಿಸಲಾಗುವುದು’ ಎಂದು ಹೇಳಿದರು.

545 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದ್ದ ಅಕ್ರಮದ ಬಗ್ಗೆ ಸಿಐಡಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಮಾರಕಾಸ್ತ್ರದಿಂದ ಹೊಡೆದು ರೌಡಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರೌಡಿ ಸಹದೇವನನ್ನು (32) ಮಾರಕಾಸ್ತ್ರಗಳಿಂದ ಹೊಡೆದು ಬುಧವಾರ ರಾತ್ರಿ ಕೊಲೆ ಮಾಡಲಾಗಿದ್ದು, ವೈಷಮ್ಯದಿಂದಾಗಿ ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವ್ಯಕ್ತವಾಗಿದೆ.

‘ಸ್ಥಳೀಯ ನಿವಾಸಿ ಸಹದೇವ್, ಚುಂಚನಘಟ್ಟ ಮುಖ್ಯರಸ್ತೆಯಲ್ಲಿ ಚಹಾ ಕುಡಿಯಲು ಅಂಗಡಿಯೊಂದಕ್ಕೆ ಬಂದಿದ್ದ. ಇದೇ ಸಂದರ್ಭದಲ್ಲಿ ಮೂರು ಬೈಕ್‌ಗಳಲ್ಲಿ ಬಂದಿದ್ದ ದುಷ್ಕರ್ಮಿಗಳು, ಕೊಲೆ ಮಾಡಿ ಪರಾರಿಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯಲ್ಲಿ 2016ರಲ್ಲಿ ದಾಖಲಾಗಿದ್ದ ಕೊಲೆ ಪ್ರಕರಣದಲ್ಲಿ ಸಹದೇವ್ ಆರೋಪಿಯಾಗಿದ್ದ. ಕೋಣನಕುಂಟೆ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು’ ಎಂದು ತಿಳಿಸಿವೆ. ‘ಸ್ಥಳೀಯ ಪರಿಚಯಸ್ಥರ ಜೊತೆ ಸಹದೇವ್ ಜಗಳ ಮಾಡಿದ್ದನೆಂಬ ಮಾಹಿತಿಯಿದೆ. ಇದೇ ಕಾರಣಕ್ಕೆ ಕೊಲೆ ನಡೆದಿರುವ ಶಂಕೆ ಇದೆ’ ಎಂದು ಹೇಳಿವೆ.

ಬಾಲಕಿಗೆ ಬೆದರಿಕೆ: 3 ವರ್ಷ ಜೈಲು

ಬೆಂಗಳೂರು: ಆ್ಯಸಿಡ್ ಎರಚುವುದಾಗಿ ಬಾಲಕಿಯನ್ನು ಬೆದರಿಸಿ ಮಾನಸಿಕ ಹಾಗೂ ಲೈಂಗಿಕವಾಗಿ ದೌರ್ಜನ್ಯ ಎಸಗಿದ್ದ ಅಪರಾಧಿ ಶಿವು (26) ಎಂಬಾತನಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಹುಳಿಮಾವು ಠಾಣೆಯಲ್ಲಿ 2018ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

‘ಕೃಷ್ಣ ಬಡಾವಣೆಯ ನಿವಾಸಿ ಶಿವು, ಶಾಲೆಗೆ ಹೋಗುತ್ತಿದ್ದ 16 ವರ್ಷದ ಬಾಲಕಿಯನ್ನು ಹಿಂಬಾಲಿಸುತ್ತಿದ್ದ. ತನ್ನನ್ನು ಪ್ರೀತಿಸುವಂತೆ ಪೀಡಿಸುತ್ತಿದ್ದ. ಪ್ರೀತಿಸದಿದ್ದರೆ, ಆ್ಯಸಿಡ್ ಎರಚುವುದಾಗಿ ಬೆದರಿಸುತ್ತಿದ್ದ. ಈತನ ಕಿರುಕುಳ ಹೆಚ್ಚಾಗುತ್ತಿದ್ದಂತೆ ಬಾಲಕಿ, ಪೋಷಕರಿಗೆ ವಿಷಯ ತಿಳಿಸಿದ್ದಳು’ ಎಂದು ಪೊಲೀಸರು ಹೇಳಿದರು.

‘ಶಿವು ವಿರುದ್ಧ ಬಾಲಕಿಯ ಪೋಷಕರು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಚಂದ್ರಪ್ಪ, ಶಿವುನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು’ ಎಂದು ತಿಳಿಸಿದರು.

ಯುವತಿ ಸ್ನಾನದ ವಿಡಿಯೊ ಚಿತ್ರೀಕರಿಸಿದ್ದ ಜಿಮ್ ತರಬೇತುದಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಯಾಮದ ನಂತರ ಸ್ನಾನ ಮಾಡುತ್ತಿದ್ದ ಯುವತಿಯ ವಿಡಿಯೊ ಚಿತ್ರೀಕರಿಸಿದ್ದ ಆರೋಪದಡಿ ಜಿಮ್ ತರಬೇತುದಾರರೊಬ್ಬರನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಯುವತಿ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡು ತರಬೇತುದಾರನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಠಾಣೆ ವ್ಯಾಪ್ತಿಯ ಜಿಮ್ ಕೇಂದ್ರವೊಂದರಲ್ಲಿ ಯುವತಿ ನಿತ್ಯವೂ ವ್ಯಾಯಾಮ ಮಾಡುತ್ತಿದ್ದರು. ವ್ಯಾಯಾಮ ಮಾಡಿದವರಿಗೆ ಅನುಕೂಲವಾಗಲೆಂದು ಸ್ನಾನದ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಯುವತಿ ಸಹ ವ್ಯಾಯಾಮದ ನಂತರ ಸ್ನಾನ ಮಾಡಿ ಮನೆಗೆ ಹೋಗುತ್ತಿದ್ದರು.’

‘ಇತ್ತೀಚೆಗೆ ಯುವತಿ ಸ್ನಾನ ಮಾಡುತ್ತಿದ್ದ ಸಂದರ್ಭದಲ್ಲಿ, ಆರೋಪಿ ಕಿಟಕಿ ಬಳಿ ನಿಂತಿದ್ದ. ತನ್ನ ಮೊಬೈಲ್‌ನಲ್ಲಿ ಯುವತಿಯ ವಿಡಿಯೊವನ್ನು ಚಿತ್ರೀಕರಿಸುತ್ತಿದ್ದ. ಅನುಮಾನಗೊಂಡ ಯುವತಿ ಕಿಟಕಿ ಬಳಿ ಹೋಗಿ ನೋಡುವಷ್ಟರಲ್ಲಿ ಆರೋಪಿ, ಪರಾರಿಯಾಗಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಜಿಮ್ ಕೇಂದ್ರದಲ್ಲಿದ್ದ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಯುವತಿ ವೀಕ್ಷಿಸಿದ್ದರು. ತರಬೇತುದಾರ ಕಿಟಕಿ ಬಳಿ ಅಡಗಿ ಕುಳಿತು ಚಿತ್ರೀಕರಣ ಮಾಡುತ್ತಿದ್ದ ದೃಶ್ಯ ಕ್ಯಾಮೆರಾದಲ್ಲಿತ್ತು. ಅದೇ ದೃಶ್ಯ ಆಧರಿಸಿ ಯುವತಿ ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ಶಬ್ದ ಮಾಲಿನ್ಯ ನಿಯಂತ್ರಣದ ಜಾಗೃತಿಗಾಗಿ ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಘಟನೆ ಮತ್ತು ಮೌಂಟ್ ಕಾರ್ಮೆಲ್ ಕಾಲೇಜು ವಿದ್ಯಾರ್ಥಿಗಳು ಗುರುವಾರ ಅಭಿಯಾನ ನಡೆಸಿದರು. ಮೌಂಟ್ ಕಾರ್ಮೆಲ್ ಕಾಲೇಜಿನ ನಿರ್ದೇಶಕರಾದ ಅಲ್ಬಿನಾ, ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಸ್ಥಾಪಕ ರಾಜ್‌ಕುಮಾರ್ ದುಗರ್, ಸಂಚಾರ ಮತ್ತು ಸಾರ್ವಜನಿಕ ಸಾರಿಗೆ ಉಪ ಸಮಿತಿಯ ಮುಖ್ಯಸ್ಥ ಅಜಯ್ ಟಂಡನ್, ಅರವಿಂದ್, ವಿದ್ಯಾರ್ಥಿಗಳು ಇದ್ದರು

ಪ್ರತ್ಯೇಕ ಅಪಘಾತ ಇಬ್ಬರ ಸಾವು

ಬೆಂಗಳೂರು: ನಗರದ ಎರಡು ಕಡೆ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ಮಾದನಾಯಕನಹಳ್ಳಿ ನಿವಾಸಿ ಯಶೋದಮ್ಮ (70) ಹಾಗೂ ಜೆ.ಪಿ. ನಗರ ನಿವಾಸಿ ಅಜಿತ್‌ಕುಮಾರ್ (23) ಮೃತರು. ಎರಡೂ ಅಪಘಾತ ಸಂಬಂಧ ಪೀಣ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ.

‘ವೃದ್ಧೆ ಯಶೋದಮ್ಮ, ಗುರುವಾರ ನಸುಕಿನಲ್ಲಿ ಹಾಸನಕ್ಕೆ ಹೊರಟಿದ್ದರು. ಹಾಸನ ಬಸ್‌ಗಾಗಿ ಬೆಳಿಗ್ಗೆ 6.15ರ ಸುಮಾರಿಗೆ 8ನೇ ಮೈಲಿ ಬಳಿ ಬಂದಿದ್ದರು. ಇದೇ ಸಂದರ್ಭದಲ್ಲಿ ರಸ್ತೆ ದಾಟುತ್ತಿದ್ದಾಗ, ಕ್ಯಾಂಟರ್ ಡಿಕ್ಕಿ ಹೊಡೆದಿತ್ತು’ ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು.

ಬೈಕ್‌ಗೆ ಕಾರು ಡಿಕ್ಕಿ: ‘ಕಂಪನಿಯೊಂದರಲ್ಲಿ ಮೇಲ್ವಿಚಾರಕರಾಗಿರುವ ಅಜಿತ್ ಕುಮಾರ್, ನೈಸ್ ರಸ್ತೆಯ ಬೇಗೂರು ಕೊಪ್ಪ ಮೇಲ್ಸೇತುವೆ ಬಳಿ ಬೈಕ್‌ನಲ್ಲಿ ಬುಧವಾರ ಮಧ್ಯಾಹ್ನ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ’ ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು ತಿಳಿಸಿದರು.

ಮೊಬೈಲ್ ಕಿತ್ತೊಯ್ದ ಕಳ್ಳರು

ಬೆಂಗಳೂರು: ಹೈದರಾಬಾದ್‌ನಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಬಂದಿಳಿದಿದ್ದ ಬ್ಯಾಂಕ್ ನೌಕರರೊಬ್ಬರ ಮೊಬೈಲ್ ಅನ್ನು ಕಳ್ಳರು ಕಿತ್ತೊಯ್ದಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಚುಚ್ಚಘಟ್ಟ ಮುಖ್ಯರಸ್ತೆಯ ನಿವಾಸಿ ಗೋಪಾಲಕೃಷ್ಣ ಅವರು ಬುಧವಾರ (ನ.8) ಬೆಳಿಗ್ಗೆ ನಡೆದಿರುವ ಕಳ್ಳತನ ಸಂಬಂಧ ದೂರು ನೀಡಿದ್ದಾರೆ.

ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೈದರಾಬಾದ್‌ನಿಂದ ಮಂಗಳವಾರ ಹೊರಟಿದ್ದ ದೂರುದಾರ, ಬುಧವಾರ ಬೆಳಿಗ್ಗೆ 5.30 ಗಂಟೆ ಸುಮಾರಿಗೆ ಆನಂದರಾವ್ ವೃತ್ತ ಸಮೀಪದಲ್ಲಿ ನಿಂತಿದ್ದರು. ಮನೆಗೆ ಹೋಗಲು ಕ್ಯಾಬ್ ಕಾಯ್ದಿರಿಸುತ್ತಿದ್ದರು. ಇದೇ ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ದೂರುದಾರರ ₹33 ಸಾವಿರ ಮೌಲ್ಯದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಕಣ್ಣೂರು ಗ್ರಾಮ ಪಂಚಾಯಿತಿ ಗ್ರಾಮ ಸಭೆ

ಬಡವರಿಗೆ ಸೂರು ಕಲ್ಪಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹಕ್ಕುಪತ್ರಗಳ ವಿಲೇವಾರಿ ನಿಟ್ಟಿನಲ್ಲಿ ಅಧಿಕಾರಿಗಳು ತ್ವರಿತಗತಿಯಲ್ಲಿ ಕಾರ್ಯ ನಿರ್ವಹಿಸಿ ಫಲಾನುಭವಿಗಳಿಗೆ ನೀಡಬೇಕು ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಸೂಚನೆ ನೀಡಿದರು.

ಮಹದೇವಪುರ ಕ್ಷೇತ್ರದ ಕಣ್ಣೂರಿನ ರಂಗಮಂದಿರ ಆವರಣದಲ್ಲಿ ಕಣ್ಣೂರು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಬಡವರಿಗೆ ಸೂರು ಕಲ್ಪಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಮಸ್ಯೆ, ಕುಂದುಕೊರತೆಗಳ ಬಗ್ಗೆ ಅಧಿಕಾರಿಗಳು ಚರ್ಚಿಸಿ, ನಿವಾರಣೆಗೆ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು.

ಕಣ್ಣೂರು ಪಂಚಾಯಿತಿ ಅಧ್ಯಕ್ಷ ಕಣ್ಣೂರು ಅಶೋಕ್ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು. 16 ಜನ ಸ್ವಯಂಪ್ರೇರಿತರಾಗಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಂಡರು. ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ ವಸಂತ್ ಕುಮಾರ್, ತಾಲ್ಲೂಕು ಶಿಕ್ಷಣಾಧಿಕಾರಿ ಡಾ.ಕೋಮಲ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಲಲಿತಾ ದೇವರಾಜ್, ಸದಸ್ಯರಾದ ದೊಡ್ಡಣ್ಣ, ಸುಂದರ್ ಇದ್ದರು.

ಶಾಸಕಿ ಮಂಜುಳಾ ಲಿಂಬಾವಳಿ ಅವರು ಗ್ರಾಮ ಸಭೆ ಉದ್ಘಾಟಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

REAL ESTATE SELLING

Commerical

Marathahalli

SALE: 5700 Sqft, Commercial Site FOR SALE, Near Varthur, WEST Facing, ‘B’ Khatha in BBMP limit. Contact- 9353532040

House

Mysore

HOUSE FOR SALE 40X70, 4BHK Near JP Nagar, Ring Road Srirampura, Mysore.Rs:140 lakhs Contact:93422 88281

Villas/Bunglows

Outskirts

VILLA FOR SALE: 4.5 BHK Villa in Eagleton The Golf Resort, BIDADI, Plot 9600 Sft, Super Built-up Area 4400 Sft, South Facing, Fully Furnished, Expected Price-4.50 Crores. Contact:7022803368, 9611977368

Flat

J P Nagar

SALE OF building on 50x80 BDA site with 6 flats & 1 pent house in JP Nagar, Dollars layout, B,lore. 7676858184

PUBLIC NOTICE

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ಉಲ್ಲೇಖಿಸಲಾಗಿರುವ ಸ್ವತ್ತುಗಳನ್ನು ಅದರ ಮಾಲೀಕರಿಂದ ಉತ್ತಮ ಬೆಲೆಗೆ ಖರೀದಿಸಲು ಉದ್ದೇಶಿಸಿರುತ್ತಾರೆ. ಕೆಳಕಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದಾದರೂ ವ್ಯಕ್ತಿಗಳು ಯಾವುದೇ ರೀತಿಯ ಕ್ಲೇಮ್, ಹಕ್ಕು, ಅಧಿಕಾರ, ಹಿತಾಸಕ್ತಿ ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ ಪೂರಕ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವುದು, ಇದಕ್ಕೆ ತಪ್ಪಿದಲ್ಲಿ ಮಾರಾಟಗಾರರ ಹೊರತಾಗಿ ಇನ್ನಾವುದೇ ವ್ಯಕ್ತಿಗಳಿಗೆ ಸದರಿ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಕ್ಲೇಮ್, ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಹಾಗೂ ನನ್ನ ಕಕ್ಷಿದಾರರು ಖರೀದಿ ವ್ಯವಹಾರ ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ ಮತ್ತು ಸದರಿ ಸ್ವತ್ತುಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಸಂಪೂರ್ಣ ಕ್ರಯಪತ್ರ ಮುಖೇನ ನೋಂದಣಿ ಮಾಡಿಕೊಳ್ಳುತ್ತಾರೆ.

	ಸರ್ವೆ ನಂ.	ಕ್ಷೇತ್ರಫಲ	ಪ್ರಸಕ್ತ ಮಾಲೀಕರು
1	195/10 (ಹಳೆಯ ನಂ. 195/6)	20 ಗುಂಟಾ	ಪುಟ್ಟಮ್ಮ ಕೋಂ. ವೆಂಕಟಚಲಪತಿ
2	195/9 (ಹಳೆಯ ನಂ. 195/6)	1 ಎಕರೆ	
3	195/4ಬಿ	1 ಎಕರೆ 11 ಗುಂಟಾ	
4	219 (ಹಳೆಯ ನಂ. 187)	39 ಗುಂಟಾ	
5	195/8 (ಹಳೆಯ ನಂ. 195/4ಬಿ)	1 ಎಕರೆ 11 ಗುಂಟಾ	ಧರ್ಮಗಿರಿ ಬಕ್ಕಪ್ರಭು ಮತ್ತು ಸುಪ್ರಿಯಾ ರಾಣಿ

ಮೇಲ್ಕಂಡ ಸ್ವತ್ತುಗಳು ತಿರುಮಗೊಂಡನಹಳ್ಳಿ ಗ್ರಾಮ, ಗ್ರಾಮ ಪಂಚಾಯತ: ಹಾದೊನಹಳ್ಳಿ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುತ್ತವೆ.

ಶ್ರೀ. ರಮೇಶ್ ಬಾಬು ಆರ್, ವಕೀಲರು
ನಂ. 2, ಮೌರ್ಯ ಮ್ಯಾನ್ಷನ್, ಮೊದಲನೇ ಮಹಡಿ, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು – 560009

EDUCATIONAL

Diploma Courses

JNANA JYOTHI YOGA STUDY CENTRE Mahalakshmi Layout (Affiliated to Karnataka Sanskrit University) Admission Open-Courses- Certificate/ Diploma/ PG Diploma in Yoga. Last Date 15-11-2023, with fine 20.11.2023. 9663663637/ 9008557979/ 7019356168

JOB OPPORTUNITIES

General

AN EX-AUDITOR and Tax Practitioner's office requires a Lady Personal Assistant, having computer knowledge. Contact with Bio-Data:- 9448175385.

Manager

WANTED MARKETING Manager for Educational Services. Contact: 9886021470

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PERSONAL

Change of Name

I M. Jayalakshmi W/O, V S Murthy R/o No 7 1st Cross Balakrishna Road R S Palya Ms Nagar Bangalore 560033 have changed my name to K. Jaya.

CHANGE OF NAME
I, HEMALATHA, Spouse of No.14620688M, Rank Ex-Naik, Raj Dorai V, residing at # 547, New BEL Road, Devasandra, RMV 2nd Stage, Bangalore-94 have changed my name to HEMALATHA D and DOB is 22-02-1978. vide affidavit dt.07-11-2023, before Notary Ambika S, Bangalore.

CHANGE OF NAME
I, RUPA GOKANVI W/o, Iranna Gokanvi, R/@ 3504/B, 14th Main, 6th Cross, Near Suvarna Medical, Gayathrinagar, 2nd Stage Rajajinagar, Bangalore-21 do here by declare that both names RUPA GOKANVI and RUPA KANAGOND are the same and belongs to me only. Hereafter I shall be known/ called as RUPA GOKANVI, Only. vide affidavit dated 09/11/2023 before notary V.NAGARAJAN, Bangalore.

I, MANJULA D/o.Nirupadhi R/a#1st Block, Jayanagar East Bangalore- 560011 have changed my name from MANJULA to ZOHRA and have changed my`Religion from Hindu to`Muslim. Henceforth, I will be known as ZOHRA only Vide`affidavit dated:30.5.2023 sworn`before Notary N.Nagappa Banglalore

Announcements

ANNOUNCEMENT
I, NATARAJU G S S/o Shivanna, Previous residing at No. 19, Gundigere Village, Hulikal Post, Kuduru PS, Magadi Taluk, Ramanagara District-561001, have changed my address to DEVAHANI, No 35, Nanjundadevara Badavane, Kodigehalli, Magadi Main Road, Bengaluru, vide affidavit dt. 09-11-2023, before Notary C.V.Earappa, Bengaluru

Lost

DOCUMENT LOST
I, MOHAMMED HYDER AMAN, Sri Manjunatha Nagar 4th Cross, Kalkere Extension, Bangalore-16, have lost my original Absolute Sale Deed Document No./ Identification: Registered No. KRI-1-29680-2006-07,CD No.: KRID276, Dt.07-12-2006, Document No./ Identification: Registered No.: KRI-1-07421-2011-12, CD No:KRID406, Dt.08-02-2012, Document No./ Identification: Registered No.: KRI-1-12139-2012-13,CD No:KRID471, Dt.18-03-2013 while shifting house. Finders please Contact: 8884549859 / 7795151889

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ನಗರದ ಹಲವೆಡೆ ಕಾರ್ಯಾಚರಣೆ • ವ್ಯಾಪಾರಸ್ಥರು, ಬಿಬಿಎಂಪಿ ಸಿಬ್ಬಂದಿ ನಡುವೆ ವಾಗ್ವಾದ

ಪಾದಚಾರಿ ಮಾರ್ಗದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದೆ.

ಮಹದೇವಪುರ, ಬೊಮ್ಮನಹಳ್ಳಿ, ಪಶ್ಚಿಮ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ ಹಾಗೂ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಸಿಬ್ಬಂದಿ ಗುರುವಾರ ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿದ್ದ ಅಂಗಡಿಗಳನ್ನು ತೆರವು ಮಾಡಿದರು.

ಕಾರ್ಯಾಚರಣೆ ವೇಳೆ ಅಂಗಡಿಗಳನ್ನು ತೆರವು ಮಾಡದಂತೆ ವ್ಯಾಪಾರಿಗಳು ಬಿಬಿಎಂಪಿ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿದರು. ಮೊದಲೇ ನೋಟಿಸ್ ನೀಡಿ ಎಚ್ಚರಿಕೆ ನೀಡಲಾಗಿದೆ. ಸಾಕಷ್ಟು ಸಮಯ ನೀಡಿಯೇ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಬಿಬಿಎಂಪಿ ಸಿಬ್ಬಂದಿ ಹೇಳಿದರು.

ಮಹದೇವಪುರ ಟ್ರೇಡರ್ಸ್ ಅಸೋಸಿಯೇಷನ್ ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಮನವಿ ಹಾಗೂ ಹೈಕೋರ್ಟ್ ಆದೇಶದಂತೆ, ಇಬ್ಬಲೂರಿನಿಂದ ಕಾಡುಬೀಸನಹಳ್ಳಿ, ಕಾರ್ತಿಕ್‌ನಗರ ಮಾರ್ಗವಾಗಿ ಲೌರಿ ಜಂಕ್ಷನ್‌ವರೆಗೆ ಸುಮಾರು 4 ಕಿ.ಮೀ ಪಾದಚಾರಿ ಮಾರ್ಗ ತೆರವು ಮಾಡಲಾಗಿದೆ.

ಲೌರಿ ಜಂಕ್ಷನ್‌ನಿಂದ ಗರುಡಾ ಚಾರ್‌ಪಾಳ್ಯ ಮೆಟ್ರೊ ನಿಲ್ದಾಣ, ಶಾಂತಿನಿಕೇತನ, ಬಿಪಿಎಲ್ ಮೆಟ್ರೊ ನಿಲ್ದಾಣದವರೆಗೆ ಸುಮಾರು 3 ಕಿ.ಮೀ, ಎಚ್‌ಎಎಲ್ ಅಂಡರ್‌ಪಾಸ್, ಸುರಂಜನ್‌ದಾಸ್ ಜಂಕ್ಷನ್‌ನಿಂದ ಯಮಲೂರು ಜಂಕ್ಷನ್, ಯಶೋಮತಿ ಆಸ್ಪತ್ರೆ, ಸಿದ್ದಾಪುರ ಜಂಕ್ಷನ್, ವರ್ತೂರು ಕೋಡಿ, ಸ್ವಸ್ಥಾ ಆಸ್ಪತ್ರೆ, ಹೋಪ್‌ಫಾರಂ ಮಾರ್ಗವಾಗಿ ಸಾಯಿಬಾಬಾ ಜಂಕ್ಷನ್‌ವರೆಗೆ ಸುಮಾರು 3 ಕಿ.ಮೀ ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು ಮಾಡಲಾಗಿದೆ. ಅಂಗಡಿ, ಅನುಪಯುಕ್ತ ತಳ್ಳುವ ಗಾಡಿಗಳು, ಹಣ್ಣಿನ ಬಾಕ್ಸ್‌ಗಳನ್ನು ತೆರವುಗೊಳಿಸಲಾಗಿದೆ.

ರಾಜರಾಜೇಶ್ವರಿ ನಗರ ವಲಯ: ಕೆಂಗೇರಿ ವಿಭಾಗದಲ್ಲಿ ವಾರ್ಡ್ ಸಂಖ್ಯೆ 130 ಮತ್ತು 159ರಲ್ಲಿನ ಕೆಂಗೇರಿ ಹೊರವರ್ತುಲ ರಸ್ತೆಯ ಪಾದಚಾರಿ ಮಾರ್ಗದಲ್ಲಿದ್ದ ವ್ಯಾಪಾರಿಗಳನ್ನು ತೆರವುಗೊಳಿಸಲಾಯಿತು. ಈ ರಸ್ತೆಯನ್ನು 'ಮಾದರಿ ರಸ್ತೆ'ಯನ್ನಾಗಿ ಮಾಡಲು ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದ್ದ, ಕಬ್ಬಿಣದ ಪೆಟ್ಟಿಗೆ(ಮಳಿಗೆ)ಗಳನ್ನು ತೆರವುಗೊಳಿಸಲಾಯಿತು. ಕಾರ್ಯಾಚರಣೆಯಲ್ಲಿ ಶಾಶ್ವತವಾಗಿ ನಿರ್ಮಾಣ ಮಾಡಿದ್ದ 10 ಕಬ್ಬಿಣದ ಪೆಟ್ಟಿಗೆಗಳು ಹಾಗೂ 46 ತಾತ್ಕಾಲಿಕ ಶೆಡ್‌ಗಳು, ತಳ್ಳುವಗಾಡಿಗಳನ್ನು ತೆರವುಗೊಳಿಸಲಾಯಿತು.

ಬೊಮ್ಮನಹಳ್ಳಿ ವಲಯ: ಬೆಂಗಳೂರು ದಕ್ಷಿಣ ವಿಭಾಗ, ಅಂಜನಾಪುರ ಉಪ ವಿಭಾಗದ ವಾರ್ಡ್ ನಂ.196 ಅಂಜನಾಪುರದ ಅಮೃತನಗರ ಮುಖ್ಯರಸ್ತೆ, ಕೋಣನಕುಂಟೆ ಸರ್ಕಾರಿ ಆಸ್ಪತ್ರೆ ಎದುರು ರಸ್ತೆಯಲ್ಲಿನ ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು ಕಾರ್ಯಚರಣೆ ನಡೆಸಲಾಯಿತು.

ಪಶ್ಚಿಮ ವಲಯ: ರಾಜಾಜಿನಗರದ ಶ್ರೀರಾಮ ಮಂದಿರ ವಾರ್ಡ್‌ನ 10ನೇ ಮುಖ್ಯರಸ್ತೆ, ಭಾಷ್ಯಂ ವೃತ್ತದಿಂದ ಇ.ಎಸ್.ಐ ಆಸ್ಪತ್ರೆ, 12ನೇ ಮುಖ್ಯರಸ್ತೆಯವರೆಗೆ, 4 ತಳ್ಳುವ ಗಾಡಿಗಳು ಹಾಗೂ ಅಂಗಡಿಗಳ ಮೆಟ್ಟಿಲುಗಳನ್ನು ತೆರವುಗೊಳಿಸಲಾಗಿದೆ.

ಮಲ್ಲೇಶ್ವರದ ಕಾಡುಮಲ್ಲೇಶ್ವರ ವಾರ್ಡ್‌ನ 6, 7 ಮತ್ತು 8ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆಯಿಂದ ಸಂಪಿಗೆ ರಸ್ತೆಯವರೆಗೆ ಸುಮಾರು 2.1 ಕಿ.ಮೀ ಉದ್ದದ ರಸ್ತೆಯಲ್ಲಿ 50 ತಳ್ಳುವ ಗಾಡಿಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಪಾದಚಾರಿ ಮಾರ್ಗದಲ್ಲಿನ ಮಳಿಗೆಗಳನ್ನು ಬಿಬಿಎಂಪಿ ಸಿಬ್ಬಂದಿ ಗುರುವಾರ ತೆರವುಗೊಳಿಸಿದರು

ಒಎಫ್‌ಸಿ ಕೇಬಲ್ ತೆರವು

ದಕ್ಷಿಣ ವಲಯದ ವಿಜಯನಗರ ವ್ಯಾಪ್ತಿಯ ಹೊರ ಪಶ್ಚಿಮ ಕಾರ್ಡ್ ರಸ್ತೆಯ ಸರ್ವಿಸ್ ರಸ್ತೆ ಅನಧಿಕೃತವಾಗಿ ಅಳವಡಿಸಿರುವ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಗಿದೆ.

ಟೋಲ್ ಗೇಟ್ ಜಂಕ್ಷನ್‌ನಿಂದ ವಿಜಯನಗರ ಮೆಟ್ರೊ ನಿಲ್ದಾಣದವರೆಗೂ 1.3 ಕಿ.ಮೀ ರಸ್ತೆಯಲ್ಲಿ ಅಳವಡಿಸಿದ್ದ ಅನಧಿಕೃತ ಒಎಫ್‌ಸಿ ಕೇಬಲ್‌ಗಳನ್ನು ಕತ್ತರಿಸಿ 4 ಟ್ರ್ಯಾಕ್ಟರ್ ಲೋಡ್‌ಗಳಲ್ಲಿ ಸಂಗ್ರಹಿಸಿ ಸಾಗಿಸಲಾಗಿದೆ.

ಮುಂದಿನ ದಿನಗಳಲ್ಲಿ ಅನಧಿಕೃತ ಕೇಬಲ್‌ಗಳನ್ನು ಅಳವಡಿಸಿದಲ್ಲಿ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ ಸಂಬಂಧಪಟ್ಟ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ವಲಯ ಜಂಟಿ ಆಯುಕ್ತ ಡಾ. ಜಗದೀಶ್. ಕೆ.ನಾಯ್ಕ ತಿಳಿಸಿದ್ದಾರೆ.

ಪೂರ್ವ ವಲಯ ವ್ಯಾಪ್ತಿಯಲ್ಲಿ ಟೆಂಡರ್ ಶ್ಯೂರ್ ಹಾಗೂ ಸ್ಮಾರ್ಟ್ ಸಿಟಿ ವತಿಯಿಂದ ಅಭಿವೃದ್ಧಿಗೊಳಿಸಿರುವ ರಸ್ತೆಗಳಲ್ಲಿ ಡಕ್ಟ್‌ಗಳಿದ್ದು, ಅಲ್ಲಿಂದಲೇ ಕೇಬಲ್ ಅಳವಡಿಸಬೇಕು. ಅನಧಿಕೃತವಾಗಿ ಮೇಲ್ಭಾಗದಲ್ಲಿ ಅಳವಡಿಸಿರುವ ಕೇಬಲ್‌ಗಳನ್ನು ಟೆಲಿಕಾಂ ಸಂಸ್ಥೆಗಳು ತೆರವುಗೊಳಿಸಬೇಕು ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಸೂಚಿಸಿದ್ದಾರೆ.

ಮುಖ್ಯಾಂಶಗಳು

- ಅನಧಿಕೃತ ಕೇಬಲ್ ಅಳವಡಿಸಿದರೆ ಕಠಿಣ ಕ್ರಮದ ಎಚ್ಚರಿಕೆ
- ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುಕೂಲ
- ನೋಟಿಸ್ ನೀಡಿದ ಬಳಿಕ ಕಾರ್ಯಾಚರಣೆ ಆರಂಭಿಸಿದ ಬಿಬಿಎಂಪಿ

ಬೈಲಾ ತಿದ್ದುಪಡಿಗೆ ಒಪ್ಪಿಗೆ

ಕಸಾಪ: ವಿದೇಶಿ ಕನ್ನಡ ಸಂಘಗಳಿಗೆ ರಾಯಭಾರಿ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈಲಾ ತಿದ್ದುಪಡಿಗೆ ಸರ್ಕಾರದ ಒಪ್ಪಿಗೆ ದೊರೆತಿದೆ. ಇದರಿಂದ ವಿದೇಶಗಳಲ್ಲಿರುವ ಕನ್ನಡ ಸಂಘಗಳನ್ನು ಅಂಗ ಸಂಸ್ಥೆಗಳನ್ನಾಗಿ ಮಾಡಿಕೊಳ್ಳಲು ಪರಿಷತ್ತಿಗೆ ಅವಕಾಶ ದೊರೆತಿದೆ.

ಪರಿಷತ್ತಿನ ಬೈಲಾದಲ್ಲಿ ಕೆಲವು ನಿಯಮಗಳಿಗೆ ತಿದ್ದುಪಡಿ ತರಲು ತುಮಕೂರಿನಲ್ಲಿ ಕಳೆದ ಜೂನ್ 22ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿತ್ತು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಅವರ ಅಧ್ಯಕ್ಷತೆಯಲ್ಲಿ ತಿದ್ದುಪಡಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ ತಿದ್ದುಪಡಿಗಳನ್ನು ಸಿದ್ಧಪಡಿಸಿಕೊಟ್ಟಿತ್ತು. ಅದರಂತೆ ಪರಿಷತ್ತಿನ ಬೈಲಾ ಸಂಖ್ಯೆ 4ರಿಂದ 10, 17, 18, 20, 22, 24, 27, 32 ಮತ್ತು 33 ಅನ್ನು ತಿದ್ದುಪಡಿ ಮಾಡಲಾಗಿದೆ.

'ಈ ತಿದ್ದುಪಡಿಯಿಂದ ವಿದೇಶಿ ಕನ್ನಡ ಸಂಘ–ಸಂಸ್ಥೆಗಳನ್ನು ಪರಿಷತ್ತಿನ ಅಂಗಸಂಸ್ಥೆಗಳನ್ನಾಗಿ ಮಾಡಿಕೊಳ್ಳಬಹುದು. ಕಸಾಪ ವಿದೇಶಿ ಘಟಕಗಳನ್ನು ಸ್ಥಾಪಿಸುವುದಕ್ಕಿಂತ ಇದು ಪರಿಣಾಮಕಾರಿಯಾಗಿದ್ದು, ಅಲ್ಲಿನ ಸಂಘ–ಸಂಸ್ಥೆಗಳು ಪರಿಷತ್ತಿನ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸಲಿವೆ. ಪರಿಷತ್ತಿನ ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಈ ತಿದ್ದುಪಡಿ ನೆರವಾಗಲಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಪಟ್ಟ 33 ವಿಧಿಯನ್ನು ತಿದ್ದುಪಡಿ ಮಾಡಲಾಗಿದೆ. ಸಮ್ಮೇಳನ ಜರುಗಲಿರುವ ಜಿಲ್ಲೆಯ ಚುನಾಯಿತ ಅಧ್ಯಕ್ಷರ ಸ್ಥಾನ ಯಾವುದೇ ಕಾರಣದಿಂದ ತೆರವಾಗಿದ್ದಲ್ಲಿ ಅಥವಾ ಜಿಲ್ಲಾಧ್ಯಕ್ಷರು ಆರೋಗ್ಯದ ಸಮಸ್ಯೆ ಸೇರಿ ಯಾವುದೇ ಕಾರಣದಿಂದ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದಲ್ಲಿ ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷರು ಸಮಿತಿಯನ್ನು ರಚಿಸಿ, ಕ್ರಿಯಾಶೀಲರಾಗಲು ಅವಕಾಶ ದೊರೆಯಲಿದೆ. ಚುನಾಯಿತ ಜಿಲ್ಲಾಧ್ಯಕ್ಷರು, ಗಡಿನಾಡು ಘಟಕದ ಅಧ್ಯಕ್ಷರು ಅಧಿಕಾರಾವಧಿಯಲ್ಲಿ ನಿಧನ ಹೊಂದಿದಲ್ಲಿ ಆ ಘಟಕದ ಕಾರ್ಯ-ಚಟುವಟಿಕೆಗಳು ಕುಂಠಿತಗೊಳ್ಳದಂತೆ ಕೇಂದ್ರ ಘಟಕದ ಅಧ್ಯಕ್ಷರು ನಿರ್ಣಯ ಕೈಗೊಳ್ಳಬಹುದಾಗಿದೆ' ಎಂದಿದ್ದಾರೆ.



ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳಿಗೆ ನೆರವಾಗಲು 'ಪ್ರಜಾವಾಣಿ' ಹೊರತಂದಿರುವ 'ಸ್ಪರ್ಧಾವಾಣಿ'ಯನ್ನು ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಬಿಡುಗಡೆ ಮಾಡಿದರು

ಅನುದಾನಕ್ಕಾಗಿ ಭೇಟಿ ಮಾಡಿದ್ದೆ: ಡಿ.ಕೆ. ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಸಂಸದ ಡಿ.ಕೆ. ಸುರೇಶ್ ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಬಳಿಕ ಪ್ರತಿಕ್ರಿಯಿಸಿದ ಸುರೇಶ್, 'ಮಳೆಯಿಂದಾಗಿ ರಸ್ತೆ ಗುಂಡಿಗಳು ಬಿದ್ದು ಸಮಸ್ಯೆ ಆಗಿದೆ. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಲು ಭೇಟಿ ಮಾಡಿದ್ದೆ. ಸರ್ಕಾರ ಅನುಮೋದನೆ ನೀಡಿದ ತಕ್ಷಣ ನನ್ನ ಕ್ಷೇತ್ರಕ್ಕೂ ಹೆಚ್ಚಿನ ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ' ಎಂದರು.

ಮುಖ್ಯಮಂತ್ರಿ ಸ್ಥಾನ ಕುರಿತ ಚರ್ಚೆ ಬಗ್ಗೆ ಕೇಳಿದಾಗ, 'ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಇದ್ದಾರೆ. ಮುಂದಿನ ದಿನಗಳಲ್ಲಿ ನಾನೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಸತೀಶ ಹೇಳಿರುವುದರಲ್ಲಿ ತಪ್ಪೇನೂ ಇಲ್ಲ. ಶಾಸಕರಾದವರಿಗೆ ಮಂತ್ರಿ ಆಗಬೇಕೆಂಬ ಆಸೆ, ಸಚಿವರಾದವರಿಗೆ ಮುಖ್ಯಮಂತ್ರಿ ಆಗಬೇಕೆಂಬ ಆಸೆ. ಏನೂ ಇಲ್ಲದವರಿಗೆ ಶಾಸಕರಾಗಬೇಕೆಂಬ ಆಸೆ. ಇದೊಂದು ಸೈಕಲ್. ಯಾರೂ ತಪ್ಪಿಸಲು ಸಾಧ್ಯವಿಲ್ಲ' ಎಂದರು.

ಬಿಜೆಪಿಯಿಂದ ಆಪರೇಷನ್ ಕಮಲ ಪ್ರಯತ್ನದ ವಿಚಾರವಾಗಿ ಪ್ರತಿಕ್ರಿಯಿಸಿದ ಸುರೇಶ್, 'ಬಿಜೆಪಿಯವರಿಗೆ ಆಪರೇಷನ್ ಬಿಟ್ಟರೆ ಬೇರೆ ಇನ್ನೇನು ಗೊತ್ತಿದೆ? ಜನರಿಗೆ ಏನು ಬೇಕೋ ಅದನ್ನು ಮಾಡುವುದು ಅವರಿಗೆ ಗೊತ್ತಿಲ್ಲ. ನಮ್ಮ ಗ್ಯಾರಂಟಿಗಳಿಂದ ವರಿಗೆ ಆಘಾತ ಆಗಿದೆ. ಅದರಿಂದ ತಪ್ಪಿಸಿಕೊಳ್ಳಲು 'ಆಪರೇಷನ್ ಕಮಲ'ದ ಹೆಸರು ಹೇಳುತ್ತಿದ್ದಾರೆ' ಎಂದು ತಿಳಿಸಿದರು.

ಚಿತ್ರಾವಳಿ

ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದಿಂದ ನಗರದ ಐಟಿಪಿಎಲ್ ಟೆಕ್ ಪಾರ್ಕ್‌ನ ಫುಡ್ ಕೋರ್ಟ್‌ನಲ್ಲಿ ಎರಡು ನಂದಿನಿ ಮಿಲ್ಕ್ ಪಾರ್ಲರ್‌ಗಳನ್ನು ಮಹಾಮಂಡಳದ ಅಧ್ಯಕ್ಷ ಭೀಮಾ ನಾಯ್ಕ್, ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಎಂ.ಕೆ. ಗುರುವಾರ ಉದ್ಘಾಟಿಸಿದರು

ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಗುರುವಾರ ಬೆಂಗಳೂರು ಉಪನಗರ ರೈಲು ಯೋಜನೆಯ ಮೊದಲ ದ್ವೈಮಾಸಿಕ ಸುದ್ದಿ ಪತ್ರ 'ಸಂಪರ್ಕ'ವನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತ, ಹಿರಿಯ ಅಧಿಕಾರಿಗಳು ಇದ್ದರು

ದೆಹಲಿ ಕರ್ನಾಟಕ ಸಂಘದಿಂದ ಇನ್ಫೋಸಿಸ್ ಫೌಂಡೇಷನ್‌ನ ಸಂಸ್ಥಾಪಕರಾದ ಸುಧಾಮೂರ್ತಿ ಅವರನ್ನು ಗುರುವಾರ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್, ಸಂಘದ ಪದಾಧಿಕಾರಿಗಳಾದ ಮಾಲಿನಿ ಪ್ರಹ್ಲಾದ್, ಜೆ.ಸಂತೋಷ್, ಅಶ್ವಿನಿ ಬಿ.ಎಸ್. ಇದ್ದಾರೆ. ಸುಧಾಮೂರ್ತಿ ಅವರು ಪದ್ಮಭೂಷಣಕ್ಕೆ ಭಾಜನರಾದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು

ಕೆನರಾ ಬ್ಯಾಂಕ್ केनरा बैंक Canara Bank
Syndicate

Premises & Estate Section, G A Wing, Head Office, No. 112, J C Road, Bangalore - 560002

NOTICE FOR OPERATION AND MAINTENANCE OF ELECTRICAL INSTALLATIONS

Fresh tenders are invited for the Operation and Maintenance of Electrical Installations in Canara Bank, Head office, 112, J C Road, Bangalore.

For further details and other terms and conditions, please visit Bank's website **https://canarabank.com/tenders.aspx**. For any clarifications contact 080-22238819/22297695 extn 219/214. Last date for submission of tender form is **01.12.2023, 3:00 PM**.

Further, all addendum/corrigendum including modification if any, will be hosted at the Bank's website only.

Place : Bengaluru, Date : 09.11.2023 | Sd/- Asst. General Manager



ವನ್ಯಜೀವಿ ಉಪಟಳ: ಎಸಿಪಿಸಿಎಫ್ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವನ್ಯಜೀವಿಗಳ ಉಪಟಳವಿರುವ ಅರಣ್ಯ ವಲಯಕ್ಕೆ ಹೆಚ್ಚುವರಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ವಾರದಲ್ಲಿ ಕನಿಷ್ಠ ಎರಡು ದಿನವಾದರೂ ಭೇಟಿ ನೀಡಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದರು.

ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಗುರುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಅರಣ್ಯದಂಚಿನ ವಸತಿ ಪ್ರದೇಶಗಳಲ್ಲಿ ವನ್ಯಜೀವಿ ಹಾವಳಿ ತಡೆಯಲು ತಜ್ಞರ ಸಭೆ ನಡೆಸಬೇಕು. ಸಮಗ್ರ ಕಾರ್ಯಯೋಜನೆ ರೂಪಿಸಲು ಹಾಗೂ ಹೊಸ ತಂತ್ರಜ್ಞಾನ ಅಳವಡಿಕೆ ಕುರಿತು ವರದಿ ಸಲ್ಲಿಸಬೇಕು. ಜನವಸತಿ ಪ್ರದೇಶಕ್ಕೆ ಬಂದ ವನ್ಯಮೃಗಗಳು ಕಾಡಿಗೆ ಮರಳುವವರೆಗೆ ನೇಮಿಸಿರುವ ನೋಡಲ್ ಅಧಿಕಾರಿಗಳೇ ಹೊಣೆ ಹೊರಬೇಕು ಎಂದು ಹೇಳಿದರು.

ರಾಜ್ಯದಲ್ಲಿ 6,395 ಆನೆಗಳಿದ್ದು, ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಆದರೆ, ಆನೆಗಳ ಸಂಖ್ಯೆ ಹೆಚ್ಚಳವಾದರೂ, ಅರಣ್ಯ ಪ್ರದೇಶ ಕಿರಿದಾಗುತ್ತಿದೆ. ಕಾಡು ಇಲ್ಲದ ಭಾಗಗಳಲ್ಲೂ ಆನೆಗಳು ಕಾಣಿಸಿಕೊಳ್ಳುತ್ತಿವೆ. ಚಿರತೆ, ಹುಲಿ ದಾಳಿಯಿಂದಲೂ ಜೀವಹಾನಿಯಾಗುತ್ತಿದೆ. ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾದರೆ ಭವಿಷ್ಯದ ಪರಿಸ್ಥಿತಿ ಎದುರಿಸುವ ಕುರಿತೂ ಕಾರ್ಯಯೋಜನೆ ಸಿದ್ಧಪಡಿಸುವ ಅಗತ್ಯವಿದೆ ಎಂದರು.

ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಅಧಿಕಾರಿಗಳಾದ ಬ್ರಿಜೇಶ್ ಕುಮಾರ್ ದೀಕ್ಷಿತ್, ಸುಭಾಷ್ ಮಾಲ್ಕಡೆ, ಕುಮಾರ್ ಪುಷ್ಕರ್ ಇದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವಾರ್ಷಿಕ ಚಿರಸ್ಮರಣೆ

ಶ್ರೀಮತಿ ಸೂದಾ ಚಿನ್ನಮ್ಮನವರು, ಆನೇಕಲ್
(ದಿ|| ಪದ್ಮಶಾಲಿ ಶ್ರೀ ಸೂದಾ ಕೃಷ್ಣಪ್ಪನವರ ಧರ್ಮಪತ್ನಿ)
ಜನನ: 21.07.1928 – ಮರಣ: 23.10.2022
ನೀವು ನಮ್ಮನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ನೆನಪೇ ನಮಗೆ ದಿವ್ಯ ಚೇತನ.
ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಸದಾ ಪ್ರಾರ್ಥಿಸುವ ಹಾಗೂ ನಿಮ್ಮ ನೆನಪಿನಲ್ಲಿರುವ,
ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು

ಅಂಗವಿಕಲರ ಪ್ರಯಾಣಕ್ಕೆ ಅನುಕೂಲ ಕಲ್ಪಿಸಿ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಧರು ಮತ್ತು ಅಂಗವಿಕಲರಿಗೆ ನೆರವಾಗುವ ನಿಟ್ಟಿನಲ್ಲಿ ಬಸ್‌ಗಳಲ್ಲಿ ಆಡಿಯೊ ರೂಪದಲ್ಲಿನ ಪ್ರಕಟಣಾ ವ್ಯವಸ್ಥೆ ಅಳವಡಿಸುವಂತೆ ಖಾಸಗಿ ಬಸ್ ಆಪರೇಟರ್‌ಗಳಿಗೆ ನಿರ್ದೇಶನ ನೀಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ನಗರದ ಎನ್. ಶ್ರೇಯಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ಬಿಎಂಟಿಸಿ ಮತ್ತು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆಡಿಯೊ ವ್ಯವಸ್ಥೆ ಅಳವಡಿಸಲು ನಿರ್ದೇಶನ ನೀಡುವಂತೆ ಕೋರಿದ್ದಾರೆ. ಆದರೆ, ಕೆಲವು ಮಾರ್ಗಗಳಲ್ಲಿ ಖಾಸಗಿ ಬಸ್‌ಗಳೂ ಸಂಚರಿಸುತ್ತಿವೆ. ಈ ಬಸ್‌ಗಳಲ್ಲಿ ಅಂಗವಿಕಲರ ಪ್ರಯಾಣಕ್ಕೆ ಅಗತ್ಯ ನೆರವು ಕಲ್ಪಿಸಿ ಕೊಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಈ ವಿಷಯದಲ್ಲಿ ಸರ್ಕಾರ ಖಾಸಗಿ ಬಸ್ ಆಪರೇಟರ್‌ಗಳಿಗೆ ಅಗತ್ಯ ನಿರ್ದೇಶನ ನೀಡಿ ಸುತ್ತೋಲೆ ಹೊರಡಿಸಬೇಕು. ಈ ನಿರ್ದೇಶನ ಈಗಾಗಲೇ ಕೆಲವು ಮಾರ್ಗಗಳಲ್ಲಿ ಸಂಚರಿಸುತ್ತಿರುವ ಬಸ್‌ಗಳಿಗೆ ಮಾತ್ರವಲ್ಲದೆ, ಹೊಸದಾಗಿ ಪರವಾನಗಿ ನೀಡುವ ಬಸ್ ಗಳಿಗೂ ಅನ್ವಯವಾಗುವಂತೆ ಇರಬೇಕು' ಎಂದು ತಾಕೀತು ಮಾಡಿದೆ.

ಬಿಎಂಟಿಸಿ ಮತ್ತು ರಾಜ್ಯ ಸರ್ಕಾರ ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸುವಂತೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕಾಂಗ್ರೆಸ್ ಸೇವಾದಳದ ಶತಮಾನೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

'ಬಿಜೆಪಿ ಕಿತ್ತೊಗೆದು ದೇಶ ಕಾಪಾಡಿ'

ಪ್ರಜಾವಾಣಿ ವಾರ್ತೆ



ಸೇವಾ ದಳದ ಶತಮಾನೋತ್ಸವ ಮತ್ತು ರಾಜ್ಯಮಟ್ಟದ ಸಮಾವೇಶದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಸೇವಾದಳದ ರಾಜ್ಯ ಘಟಕದ ಅಧ್ಯಕ್ಷ ರಾಮಚಂದ್ರಪ್ಪ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಷ್ಟ್ರೀಯ ಅಧ್ಯಕ್ಷ ಲಾಲ್‌ಜಿ ದೇಸಾಯಿ, ಕೆಪಿಸಿಸಿಯ ಮತ್ತೊಬ್ಬ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಇದ್ದರು

ಬೆಂಗಳೂರು: 'ಸೇವಾದಳ ಕಾರ್ಯಕರ್ತರ ಪ್ರಾಮಾಣಿಕ ಹೋರಾಟದಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಯನ್ನು ಬುಡಸಮೇತ ಕಿತ್ತೊಗೆದು ದೇಶವನ್ನು ಕಾಪಾಡಬೇಕೆಂಬ ರಾಹುಲ್ ಗಾಂಧಿ ಅವರ ಗುರಿಯನ್ನು ಸಾಧಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಸೇವಾದಳದ ಶತಮಾನೋತ್ಸವ ಮತ್ತು ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ಸಿನ ಅಡಿಪಾಯ ಸೇವಾದಳ. ಸಾಮಾಜಿಕ ನ್ಯಾಯ, ಹೋರಾಟ, ದೇಶದ ಸಮಗ್ರತೆ ಬಗ್ಗೆ ನಂಬಿಕೆ ಇಟ್ಟುಕೊಂಡು ದೇಶವನ್ನು, ಸಮಾಜವನ್ನು ಬೆಸೆಯುವ ಕೆಲಸವನ್ನು ಕಾಂಗ್ರೆಸ್ ಮತ್ತು ಸೇವಾದಳ ಮಾಡುತ್ತಿದೆ' ಎಂದರು.

'ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ಚರಿತ್ರೆಯಾಗಲಿ, ಇತಿಹಾಸವಾಗಲಿ ಇಲ್ಲ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, 'ಈ ದೇಶದ ಇತಿಹಾಸ ಗೊತ್ತಿಲ್ಲದವರು ಈಗ 'ಭಾರತ' ಎಂದು ಹೆಸರು ಬದಲಿಸಲು ಹೊರಟಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚಿತವಾಗಿಯೇ, ಪಕ್ಷದ ಸಂಸ್ಥೆಗೆ 'ಭಾರತ' ಸೇವಾದಳ ಎಂದು ಹೆಸರಿಟ್ಟವರು ನಾವು (ಕಾಂಗ್ರೆಸ್)' ಎಂದರು.

'ಸೇವಾದಳದ ಸದಸ್ಯರು ಸರ್ಕಾರದ ಕಾರ್ಯವೈಖರಿ ಹೇಗೆ ನಡೆಯಬೇಕು, ಯೋಜನೆಗಳನ್ನು ಜನರಿಗೆ ತಲುಪಿಸಲು ಪರಿಣಾಮಕಾರಿಯಾಗಿ ಹೇಗೆ ಕೆಲಸ ಮಾಡಬೇಕೆಂಬ ಬಗ್ಗೆ ಸಲಹೆ ನೀಡಬಹುದು. ಸೇವಾ ದಳದ ಸದಸ್ಯರಿಗೆ ಸಲ್ಲಬೇಕಾದ ಗೌರವವನ್ನು ನೀಡಬೇಕೆಂದು ಪಕ್ಷದ ಬ್ಲಾಕ್, ತಾಲ್ಲೂಕು ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರು, ಶಾಸಕರು ಮತ್ತು ಸಚಿವರಿಗೆ ಸೂಚನೆ ನೀಡಿದ್ದೇನೆ' ಎಂದರು.

ನಿತ್ಯವೂ ಶಾಸಕರ, ಕಾರ್ಯಕರ್ತರ ಭೇಟಿ: ಡಿ.ಕೆ ಶಿವಕುಮಾರ್

ಬೆಂಗಳೂರು: 'ಹೊರಗಡೆ ಹೋಗುವ ದಿನಗಳ ಹೊರತಾಗಿ ಇತರ ಎಲ್ಲ ದಿನಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ 10.30ರವರೆಗೆ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರ ಭೇಟಿಗೆ ಸಮಯಾವಕಾಶ ನೀಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ತಮ್ಮ ಕ್ಷೇತ್ರದಲ್ಲಿನ ಕೆಲಸ ಹಾಗೂ ಸಮಸ್ಯೆಗಳನ್ನು ಹೇಳಿಕೊಳ್ಳಲು ಈ ಅವಧಿಯಲ್ಲಿ ಅವಕಾಶ ನೀಡಲಾಗುವುದು' ಎಂದರು.

'ಪಕ್ಷದಲ್ಲಿ ಮೂರು ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಪದಾಧಿಕಾರಿಗಳಾಗಿ ಇರುವವರನ್ನು ಬದಲಿಸಿ ಬೇರೆಯವರಿಗೆ ಅವಕಾಶ ನೀಡುವ ಚಿಂತನೆಯಿದೆ. 'ಲೋಕಸಭೆ ಚುನಾವಣೆಗೆ ಪಕ್ಷದಿಂದ ಸಂಭವನೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ಶೇ 75ರಷ್ಟು ಸಚಿವರು ತಮ್ಮ ಜಿಲ್ಲೆಗಳಿಗೆ ತೆರಳಿ ಸಭೆ ಮಾಡಿದ್ದಾರೆ. ಉಳಿದವರೂ ಆದಷ್ಟು ಸಭೆ ಮಾಡಿ ವರದಿ ನೀಡಲಿದ್ದಾರೆ' ಎಂದರು.

ಹಿರಿಯರು ದೂರವಾದರೆ ಪಕ್ಷದ ಮೇಲೆ ಪರಿಣಾಮ: ಡಿವಿಎಸ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಹಿರಿಯ ನಾಯಕರು ಚುನಾವಣಾ ರಾಜಕಾರಣದಿಂದ ದೂರವಾದರೆ ಪಕ್ಷದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಪಕ್ಷದ ರಾಷ್ಟ್ರೀಯ ಮುಖಂಡರು ಆಲೋಚನೆ ಮಾಡಬೇಕು' ಎಂದು ಸಂಸದ ಡಿ.ವಿ.ಸದಾನಂದ ಗೌಡ ಗುರುವಾರ ಹೇಳಿದರು.



ಸದಾನಂದಗೌಡ

ಬರ ಪರಿಸ್ಥಿತಿ ಅಧ್ಯಯನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಹಿರಿಯ ನಾಯಕರಿಗೆ ಹೆಚ್ಚು ಅನುಭವವಿರುತ್ತದೆ. ಅವರಿಗೆ ಹಿಂಬಾಲಕರ ಪಡೆಯೇ ಇರುತ್ತದೆ. ಅವರನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ವರಿಷ್ಠರು ಚಿಂತನೆ ಮಾಡಬೇಕು. ನನ್ನನ್ನು ಉಪಯೋಗಿಸಿಕೊಂಡರೆ ಪಕ್ಷಕ್ಕಾಗಿ ದುಡಿಯುತ್ತೇನೆ. ಇಲ್ಲದಿದ್ದರೆ ಸುಖ ಜೀವನದಲ್ಲಿ ಇರುತ್ತೇನೆ' ಎಂದರು.

'ಸತ್ತಾಗ ನನ್ನ ಶವದ ಮೇಲೆ ಬಿಜೆಪಿ ಬಟ್ಟೆ ಹಾಕಬೇಕು ಎನ್ನುವ ರಾಜನೀತಿ ನನ್ನದಲ್ಲ. ಚುನಾವಣೆಗೆ 6 ತಿಂಗಳ ಮೊದಲೇ ನಿರ್ಧಾರ ತಿಳಿಸಿದ್ದೇನೆ. ಇದರಿಂದ ಹೊಸ ಅಭ್ಯರ್ಥಿಯನ್ನು ಹುಡುಕಲು ಸಾಧ್ಯವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಸುಮಲತಾ ಅವರು ಸ್ಪರ್ಧಿಸುವ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಪಕ್ಷ ನನಗೆ ಚಿರತೆ ಓಡಿಸಿಕೊಂಡಿರು ಎಂದರೂ ಮಾಡುತ್ತೇನೆ' ಎಂದರು.

'ಚುನಾವಣಾ ರಾಜಕೀಯದಿಂದ ದೂರ ಉಳಿಯುವ ಮಾತನಾಡಿದ ನಂತರ ನನಗೆ ಸಾವಿರ ಫೋನ್ ಕರೆಗಳು ಬಂದಿವೆ. ಕೆಲವರು ತಾವು ಕೂಡ ಮೌನವಾಗಿರುವುದಾಗಿ ತಿಳಿಸಿದ್ದಾರೆ. ಹಾಗೆ ಮಾಡದಂತೆ, ರಾಜಕಾರಣದಲ್ಲಿ ಮುಂದುವರಿಯುವಂತೆ ತಿಳಿಸಿದ್ದೇನೆ. 25 ವರ್ಷದ ಚಟುವಟಿಕೆ ನಂತರ ಚುನಾವಣಾ ರಾಜಕಾರಣದಿಂದ ದೂರ ಉಳಿಯಬೇಕು ಎಂದು ತೀರ್ಮಾನಿಸಿದ್ದೆ. ಅದರಂತೆ ನಿರ್ಧಾರ ಪ್ರಕಟಿಸಿದ್ದೇನೆ. ಆ ತೀರ್ಮಾನದ ಹಿಂದೆ ಯಾರ ಒತ್ತಡವೂ ಇಲ್ಲ' ಎಂದರು.

'ಬಿಜೆಪಿಗೆ ಹಿನ್ನಡೆಯಾದಾಗ ಆತ್ಮ ಸ್ಥೈರ್ಯ ತುಂಬುವ ಕೆಲಸ ಮಾಡಿದ್ದೇನೆ. ನಾನು ಯಾರ ಹಿಂದೆಯೂ ಚೀಲ ಹಿಡಿದುಕೊಂಡು ಹೋಗಿಲ್ಲ. ಕಳೆದ ಚುನಾವಣೆ ಅವಧಿಯಲ್ಲೇ ನಿವೃತ್ತಿಯ ತೀರ್ಮಾನ ಮಾಡಿದ್ದೆ. ಪಕ್ಷದ ಒತ್ತಡದಿಂದ ಸ್ಪರ್ಧೆ ಮಾಡಿದ್ದೆ' ಎಂದರು.

ವರಿಷ್ಠರ ಸೂಚನೆ ಮೇರೆಗೆ ಡಿವಿಎಸ್ ನಿವೃತ್ತಿ: ಬಿಎಸ್‌ವೈ

ಬೆಂಗಳೂರು: 'ವರಿಷ್ಠರ ಸೂಚನೆ ಮೇರೆಗೆ ಡಿ.ವಿ. ಸದಾನಂದಗೌಡ ತಮ್ಮ ಮುಂದಿನ ರಾಜಕೀಯ ನಿರ್ಧಾರ ಪ್ರಕಟಿಸಿದ್ದಾರೆ. ಇನ್ನು ಮುಂದೆ ಅವರು ಚುನಾವಣಾ ರಾಜಕೀಯ ತೊರೆದು ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ' ಎಂದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

'2024ರ ಲೋಕಸಭೆ ಚುನಾವಣೆಯಲ್ಲಿ ಟಿಕೆಟ್ ಸಿಗುವುದಿಲ್ಲ ಎಂಬ ಕಾರಣಕ್ಕೆ ಸದಾನಂದಗೌಡ ಚುನಾವಣಾ ರಾಜಕೀಯದಿಂದ ದೂರ ಸರಿಯುವ ನಿರ್ಧಾರ ತೆಗೆದುಕೊಂಡರೇ?' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯಡಿಯೂರಪ್ಪ, 'ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡವೆಂದು ವರಿಷ್ಠರು ಅವರಿಗೆ ನೇರವಾಗಿ ಹೇಳಿದ್ದಾರೆ' ಎಂದರು.

ಹಾಸನದಲ್ಲಿ ಬುಧವಾರ ಮಾತನಾಡಿದ್ದ ಬೆಂಗಳೂರು ಉತ್ತರ ಕ್ಷೇತ್ರದ ಸಂಸದರೂ ಆಗಿರುವ ಡಿ.ವಿ. ಸದಾನಂದಗೌಡ, 'ಚುನಾವಣಾ ರಾಜಕೀಯದಲ್ಲಿ ಮುಂದುವರಿಯದಿರಲು ನಿರ್ಧರಿಸಿದ್ದೇನೆ' ಎಂದಿದ್ದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಆಹ್ವಾನದ ಮೇರೆಗೆ ಅ. 25ರಂದು ದೆಹಲಿಗೆ ತೆರಳಿದ್ದ ಸದಾನಂದಗೌಡ ಅವರಿಗೆ, ಮೂರು ದಿನ ಕಾದರೂ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಸಾಧ್ಯವಾಗದೆ ವಾಪಸಾಗಿದ್ದರು. ಅಲ್ಲದೆ, ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕನ ಆಯ್ಕೆ ವಿಳಂಬ ಆಗಿರುವುದಕ್ಕೆ ಬಹಿರಂಗವಾಗಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಕ್ಷೇತ್ರ ಪುನರ್ ವಿಂಗಡಣೆ: ಅಂತಿಮ ಗಡುವು

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, '2023ರ ಜೂನ್ 28ರಂದು 10 ವಾರಗಳ ಸಮಯ ನೀಡಿದ್ದೆವಲ್ಲಾ? ಇದೀಗ ಮತ್ತೆ ನಾಲ್ಕು ವಾರಗಳ ಕಾಲಾ ವಕಾಶ ಕೇಳುತ್ತಿದ್ದೀರಲ್ಲಾ' ಎಂದು ಪ್ರಶ್ನಿಸಿತು.

'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು ಸಾಂವಿಧಾನಿಕ ಸಂಸ್ಥೆಗಳಾಗಿವೆ. ಚುನಾವಣೆ ನಡೆಸದೇ ಅವುಗಳನ್ನು ಖಾಲಿ ಬಿಡುವುದು ಎಷ್ಟು ಸರಿ? ನಿಮ್ಮ ವಿಳಂಬ ಧೋರಣೆಗೆ ಸುಪ್ರೀಂ ಕೋರ್ಟ್ ಕೂಡಾ ಎರಡು ಬಾರಿ ಎಚ್ಚರಿಕೆ ನೀಡಿದೆಯಲ್ಲಾ? ಹೀಗಿದ್ದರೂ ತಡ ಮಾಡುತ್ತಿರುವ ನಿಮ್ಮ ನಡೆ ಸರಿಯಲ್ಲ. ಕ್ಷೇತ್ರಗಳ ಮರು ವಿಂಗಡಣೆ ಮತ್ತು ಮೀಸಲಾತಿ ನಿಗದಿಯ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿ' ಎಂದು ಸರ್ಕಾರಕ್ಕೆ ಮೌಖಿಕ ಸಲಹೆ ನೀಡಿತು.

ಇದಕ್ಕೆ ಉತ್ತರಿಸಿದ ಶಶಿಕಿರಣ ಶೆಟ್ಟಿ, 'ಸರ್ಕಾರ ತಕ್ಷಣ ಚುನಾವಣೆ ನಡೆಸಲು ಪ್ರಯತ್ನಿಸುತ್ತದೆ' ಎಂದು ಭರವಸೆ ನೀಡಿದರು. ಆದರೆ, ಇದನ್ನು ಒಪ್ಪದ ನ್ಯಾಯಪೀಠ, 'ಪ್ರಯತ್ನಿಸುತ್ತೇವೆ ಎನ್ನಲಾಗದು, ಚುನಾವಣೆ ನಡೆಸಬೇಕು. ಇದೇ ಕೊನೆಯ ಬಾರಿಯ ಕಾಲಾವಕಾಶ' ಎಂದು ಸೂಚಿಸಿ ಡಿಸೆಂಬರ್ 19ಕ್ಕೆ ವಿಚಾರಣೆ ಮುಂದೂಡಿತು. ಚುನಾವಣಾ ಆಯೋಗದ ಪರ ವಕೀಲ ಕೆ.ಎನ್. ಫಣೀಂದ್ರ, 'ಈ ಅರ್ಜಿ ವಿಚಾರಣೆ 2021ರ ಮಾರ್ಚ್‌ನಿಂದಲೂ ನಡೆಯುತ್ತಿದೆ. ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಈಗಾಗಲೇ ಹಲವು ಬಾರಿ ಸಮಯ ತೆಗೆದುಕೊಂಡಿದೆ' ಎಂದು ಮತ್ತೊಮ್ಮೆ ನ್ಯಾಯಪೀಠಕ್ಕೆ ಅರುಹಿದರು.

ಏನಿದು ಅರ್ಜಿ?: ಅವಧಿ ಮುಗಿದ ಜಿ.ಪಂ. ತಾ.ಪಂ.ಗಳಿಗೆ ನಿಗದಿತ ಸಮಯದಲ್ಲಿ ಚುನಾವಣೆ ನಡೆಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಮತ್ತು ತಾ.ಪಂ. ಹಾಗೂ ಜಿ.ಪಂ. ಕ್ಷೇತ್ರ ಮರು ವಿಂಗಡಣೆಗೆ ಸೀಮಾ ನಿರ್ಣಯ ಆಯೋಗ ರಚಿಸಿರುವುದನ್ನು ಪ್ರಶ್ನಿಸಿ ಈ ಪಿಐಎಲ್ ಸಲ್ಲಿಸಲಾಗಿದೆ.

ಕಂದಾಯ ನಿರೀಕ್ಷಕ ಬಲೆಗೆ

ಒಂದನೇ ಪುಟದಿಂದ

'ಜೊತೆಗೆ, ಮುಂಗಡವಾಗಿ ಮೊದಲ ಕಂತಿನಲ್ಲಿ ₹ 7.50 ಲಕ್ಷ ಪಡೆದಿದ್ದರು' ಎಂದಿವೆ. 'ಕಂದಾಯ ನಿರೀಕ್ಷಕನ ಲಂಚದಿಂದ ಬೇಸತ್ತ ನಿವಾಸಿ ಇತ್ತೀಚೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು, ಕಾರ್ಯಾಚರಣೆ ಆರಂಭಿಸಲಾಗಿತ್ತು. ರಾಜಾಜಿನಗರದ ಹೋಟೆಲೊಂದರಲ್ಲಿ ಬುಧವಾರ ಎರಡನೇ ಕಂತಿನಲ್ಲಿ ₹ 4 ಲಕ್ಷ ಮೊತ್ತದ ಚೆಕ್ ಪಡೆಯುವಾಗಲೇ ವಸಂತ್ ಕುಮಾರ್ ಹಾಗೂ ಅವರ ಚಾಲಕನನ್ನು ಸೆರೆ ಹಿಡಿಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

'₹ 28 ಲಕ್ಷ ಲಂಚದ ಪೈಕಿ ₹ 4 ಲಕ್ಷವನ್ನು ಕಂದಾಯ ನಿರೀಕ್ಷಕ ವಸಂತ್‌ಕುಮಾರ್ ಚೆಕ್ ರೂಪದಲ್ಲಿ ಪಡೆಯಲು ಮುಂದಾಗಿದ್ದರು. ಇತ್ತೀಚಿನ ದಿನಗಳಲ್ಲಿ ಚೆಕ್ ರೂಪದಲ್ಲಿ ಲಂಚ ಪಡೆಯುತ್ತಿದ್ದ ಮೊದಲ ಪ್ರಕರಣ ಇದಾಗಿದೆ' ಎಂದು ಹೇಳಿವೆ.

ಚಾಲಕನ ಮನೆಯಲ್ಲಿ ₹ 9 ಲಕ್ಷ ಜಪ್ತಿ: 'ಚಾಲಕ ತ್ಯಾಗರಾಜ್ ಮನೆಯಲ್ಲಿ ಶೋಧ ನಡೆಸಲಾಗಿದೆ. ಈ ವೇಳೆ ₹ 9 ಲಕ್ಷ ನಗದು ಹಾಗೂ ವಿಲೇವಾರಿಯಾಗದ ಕಡತಗಳು ಸಿಕ್ಕಿವೆ' ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಬ್ಯಾಂಕ್ ಅಧಿಕಾರಿ ಅನುಮಾನಾಸ್ಪದ ಸಾವು

ಮಂಗಳೂರು: ಕರ್ನಾಟಕ ಬ್ಯಾಂಕಿನ ಅಧಿಕಾರಿಯೊಬ್ಬರು ಅನುಮಾನಾಸ್ಪದವಾಗಿ ಸಾವೀಗೀಡಾಗಿದ್ದು, ಈ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾದಿರಾಜ

'ಕರ್ನಾಟಕ ಬ್ಯಾಂಕಿನ ಚೀಫ್ ಕಂಪ್ಲೆಯನ್ಸ್ ಅಧಿಕಾರಿ ವಾದಿರಾಜ ಕೆ.ಎ. (51) ಮೃತರು. ಬೋಂದೆಲ್‌ನ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಅವರು ವಾಸವಿದ್ದು, ಆ ಫ್ಲ್ಯಾಟ್‌ನ ಕೊಠಡಿಯಲ್ಲಿ ಕತ್ತು ಮತ್ತು ಹೊಟ್ಟೆಗೆ ಇರಿದ ಸ್ಥಿತಿಯಲ್ಲಿ ಅವರ ಮೃತದೇಹ ಗುರುವಾರ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾರ್ಕಳದವರಾದ ವಾದಿರಾಜ ಬೋಂದೆಲ್‌ನ ವಸತಿ ಸಮುಚ್ಚಯದಲ್ಲಿ ವಾಸವಿದ್ದರು. ವಾದಿರಾಜ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಅವರ ಮಕ್ಕಳು ಕಲಿಯುತ್ತಿದ್ದ ಶಾಲೆಯಲ್ಲಿ ಗುರುವಾರ ಪೋಷಕರ ಸಭೆ ಇತ್ತು. ಅವರ ಪತ್ನಿ ಈ ಸಭೆಗೆ ಹೋಗಿದ್ದರು. ಈ ವೇಳೆ ಮನೆಯಲ್ಲಿ ಅವರೊಬ್ಬರೇ ಇದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅವರನ್ನು ಕಚೇರಿಗೆ ಕರೆದೊಯ್ಯಲು ಎಂದಿನಂತೆ ಕಾರು ಅವರ ಮನೆಯ ಬಳಿಗೆ ಬಂದಿತ್ತು. ಅವರು ಬಹಳ ಹೊತ್ತಾದರೂ ಕಾರಿನ ಬಳಿಗೆ ತೆರಳಿರಲಿಲ್ಲ. ಚಾಲಕ ಕರೆ ಮಾಡಿದರೂ ಪ್ರತಿಕ್ರಿಯಿಸಿರಲಿಲ್ಲ. ಹಾಗಾಗಿ ಚಾಲಕ ಮನೆಗೆ ಹೋಗಿ ನೋಡಿದಾಗ ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಜಾತಿ ಮರು ಗಣತಿಗೆ ಪಟ್ಟು

ಒಂದನೇ ಪುಟದಿಂದ

ವರದಿಗೆ ವಿರೋಧ: ಶಾಮನೂರು: ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಾಮನೂರು ಶಿವಶಂಕರಪ್ಪ ಅವರು, ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಮೀಕ್ಷೆ ಸಮರ್ಪಕವಾಗಿ ನಡೆದಿಲ್ಲ. ಹಲವರ ಮನೆಗಳಿಗೆ ಭೇಟಿ ನೀಡದೇ ವರದಿ ಸಿದ್ಧಪಡಿಸಲಾಗಿದೆ ಎಂಬ ದೂರುಗಳಿವೆ. ಈ ಸಮೀಕ್ಷೆಯಲ್ಲಿ ವೀರಶೈವ-ಲಿಂಗಾಯತ ಸಮುದಾಯದ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ ಎಂಬ ಮಾಹಿತಿ ಇದೆ. ಅಪೂರ್ಣ ಮಾಹಿತಿಯನ್ನು ಒಳಗೊಂಡ ಸಮೀಕ್ಷೆಯನ್ನು ಸ್ವೀಕರಿಸಿದರೆ, ಸಮಾಜಕ್ಕೆ ದೊಡ್ಡ ಮಟ್ಟದ ನಷ್ಟವಾಗಲಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು ಎಂದರು.

'ಈಗ ಸಿದ್ಧಪಡಿಸಿರುವ ಸಮೀಕ್ಷೆಯ ಅಂಕಿ ಅಂಶಗಳಲ್ಲಿ ಸಾಕಷ್ಟು ಲೋಪದೋಷಗಳಿವೆ. ತಯಾರಾಗಿರುವ ವರದಿಯು ಎಂಟು ವರ್ಷಗಳಷ್ಟು ಹಳೆಯದಾಗಿದ್ದು, ನ್ಯೂನತೆಗಳಿಂದ ಕೂಡಿದೆ. ಹೀಗಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಬೇಕು. ಸರ್ಕಾರ ಮತ್ತೊಮ್ಮೆ ಈ ಬಗ್ಗೆ ವಿವೇಚನಾಯುತವಾಗಿದೆ ಪರಾಮರ್ಶಿಸಿ ಮುಂದಿನ ಕ್ರಮಕೈಗೊಳ್ಳಬೇಕು ಎಂದು ಶಾಮನೂರು ಒತ್ತಾಯಿಸಿದರು.

'ವೀರಶೈವ-ಲಿಂಗಾಯತ ಸಮುದಾಯವು ಸಕಲ ಜಾತಿ-ಜನಾಂಗಗಳಿಗೆ ಲೇಸನ್ನೇ ಬಯಸುವ ಸಮುದಾಯವಾಗಿದೆ. ನಾವು ಜಾತಿ ಗಣತಿಯ ವಿರೋಧಿಗಳಲ್ಲ' ಎಂದು ಅವರು ಹೇಳಿದರು.

ಆರ್ಥಿಕ ಮಾಹಿತಿ ಆತಂಕ: 'ಸರ್ಕಾರಿ ನೌಕರರನ್ನು ಬಿಟ್ಟರೆ, ಉಳಿದವರು ತಮ್ಮ ಆರ್ಥಿಕ ಸ್ಥಿತಿ-ಗತಿಯ ಮಾಹಿತಿಯನ್ನು ಹಂಚಿಕೊಂಡಿರುವುದಿಲ್ಲ. ವೀರಶೈವ-ಲಿಂಗಾಯತರು ಆರ್ಥಿಕವಾಗಿ ಪ್ರಬಲರಾಗಿದ್ದಾರೆ ಎಂಬ ಮಾಹಿತಿ ವರದಿಯಲ್ಲಿ ನಮೂದಾಗಿದ್ದರೆ, ಹಿಂದುಳಿದ ವರ್ಗಗಳ ಮೀಸಲಾತಿಯ ಪಟ್ಟಿಯಿಂದ, ಮೀಸಲಾತಿಯ ಕೆಲವು ಸೌಲಭ್ಯಗಳಿಂದ ಸಮುದಾಯ ವಂಚಿತವಾಗಲಿದೆ. ಇದಕ್ಕಾಗಿ, ಮತ್ತೊಮ್ಮೆ ಗಣತಿ ಮಾಡಬೇಕು. ಮಾಹಿತಿಯನ್ನು ಸತ್ಯಾಸತ್ಯತೆ ದೃಢಪಡಿಸಲು ಕಂದಾಯ, ಸಾರಿಗೆ ಇಲಾಖೆಗಳ ನೆರವನ್ನು ಪಡೆಯಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಡಲು ಮಹಾಸಭಾ ನಿರ್ಣಯಿಸಿದೆ' ಎಂದು ಮೂಲಗಳು ಹೇಳಿವೆ.

ಪಿಯು ವಿದ್ಯಾರ್ಥಿ ಹತ್ಯೆ ಪ್ರಕರಣ ಭೇದಿಸಿದ ಪೊಲೀಸರು: ಏಳು ಮಂದಿ ಬಂಧನ

ಇಬ್ಬರು ಆರೋಪಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಕೋಲಾರ: ನಗರದಲ್ಲಿ ಈಚೆಗೆ ನಡೆದಿದ್ದ 17 ವರ್ಷದ ಕಾರ್ತಿಕ್ ಸಿಂಗ್ ಎಂಬ ಪಿಯು ಮೊದಲ ವರ್ಷದ ವಿದ್ಯಾರ್ಥಿಯನ್ನು ಬರ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಗುರುವಾರ ನಸುಕಿನಲ್ಲಿ ಇಬ್ಬರು ಆರೋಪಿಗಳ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ.

ಮುಳಬಾಗಿಲು ತಾಲ್ಲೂಕಿನ ದೇವರಾಯಸಮುದ್ರ ಗ್ರಾಮದ ಬಳಿ ನಡೆದ ಕಾರ್ಯಾಚರಣೆ ವೇಳೆ ತಮ್ಮ ಮೇಲೆ ಹಲ್ಲೆ ನಡೆಸಿದ ಇಬ್ಬರು ಬಾಲಕರ ಕಾಲುಗಳಿಗೆ ಪೊಲೀಸರು ಆತ್ಮರಕ್ಷಣೆಗಾಗಿ ಗುಂಡು ಹೊಡೆದಿದ್ದಾರೆ. ಜಿಲ್ಲೆಯಲ್ಲಿ ಕಳೆದ 15 ದಿನಗಳಲ್ಲಿ ವಿವಿಧ ಆರೋಪಿಗಳ ಮೇಲೆ ನಡೆದಿರುವ ನಾಲ್ಕನೇ ಫೈರಿಂಗ್ ಇದಾಗಿದೆ.

ಈ ಪ್ರಕರಣದಲ್ಲಿ ಈವರೆಗೆ ಒಟ್ಟು ಏಳು ಆರೋಪಿಗಳನ್ನು ಬಂಧಿಸಿದ್ದು, ಒಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ. ಇವರಲ್ಲಿ ನಾಲ್ವರು 18 ವರ್ಷದ ಒಳಗಿನವರು.

ನಗರದ ಪೇಟೆಚಾಮನಹಳ್ಳಿ ಬಡಾವಣೆಯ ಬಾಪೂಜಿ ಶಾಲೆ ಆವರಣದಲ್ಲಿ ಶುಕ್ರವಾರ (ನ.3) ರಾತ್ರಿ ಕಾರ್ತಿಕ್ ಸಿಂಗ್ ಎಂಬಾತನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

'ಪ್ರಕರಣಎ ಆರೋಪಿಗಳು ಹೊರರಾಜ್ಯಗಳಲ್ಲಿ ತಲೆಮರೆಸಿಕೊಂಡಿದ್ದರು. ಗುಂಡೇಟಿನಿಂದ ಗಾಯಗೊಂಡಿರುವ ಇಬ್ಬರು ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಅಪಾಯದಿಂದ ಪಾರಾಗಿದ್ದಾರೆ. ಅಂದು ಆರೋಪಿಗಳು ಮದ್ಯಪಾನ ಮಾಡಿ ಬಾಲಕನನ್ನು ಕೊಲೆ ಮಾಡಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ವಲಯ ಐಜಿಪಿ ಬಿ.ಆರ್‌.ರವಿಕಾಂತೇಗೌಡ ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ಇದ್ದಾರೆ

ವೈಯಕ್ತಿಕ ದ್ವೇಷ, ವೈಮನಸ್ಯವೇ ಈ ಕೊಲೆಗೆ ಕಾರಣ. ಹಣದ ವಿಚಾರ, ಹುಡುಗಿಗೆ ಸಂದೇಶ ಕಳುಹಿಸಿದ ವಿಚಾರಕ್ಕೆ ಸಂಬಂಧಿಸಿದ ಮಾಹಿತಿಯೂ ಇದ್ದು, ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಕೇಂದ್ರ ವಲಯ ಐಜಿಪಿ ಬಿ.ಆರ್.ರವಿಕಾಂತೇಗೌಡ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಆರೋಪಿಗಳಲ್ಲಿ ಒಬ್ಬಾತ ಹೆಡ್ ಕಾನ್‌ಸ್ಟೆಬಲ್ ಪುತ್ರ ಇದ್ದಾನೆ. ಈತ ವಿವಿಧ ವಿಚಾರಗಳಿಂದ ಪ್ರಭಾವಿತನಾಗಿ ಡಾನ್ ಆಗಬೇಕು ಅಂದುಕೊಂಡಿದ್ದ. ಫೆಬ್ರುವರಿಯಲ್ಲಿ ಹಲ್ಲೆ ಕೂಡ ನಡೆಸಿದ್ದ. ಆಗ ಐಪಿಸಿ 307 ಪ್ರಕರಣ ದಾಖಲಿಸಿ ಬಾಲ ನ್ಯಾಯಾಲಯಕ್ಕೆ ಒಪ್ಪಿಸಲಾಗಿತ್ತು. ಅಲ್ಲದೇ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟಿದ್ದ. ಈ ಹಂತದಲ್ಲಿ ನಿಗಾ ಇಡಲು ವಿಫಲವಾಗಿದ್ದಕ್ಕೆ ಕೋಲಾರ ನಗರ ಠಾಣೆ ಇನ್‌ಸ್ಪೆಕ್ಟರ್ ಅಮಾನತು ಮಾಡಲಾಗಿದೆ. ಹಲ್ಲೆ, ರೀಲ್ಸ್, ಕೊಲೆ ಪ್ರಕರಣ ಸೇರಿ ಒಟ್ಟು ಮೂರು ಪ್ರಕರಣಗಳಲ್ಲಿ 13 ಜನರನ್ನು ಬಂದಿಸಲಾಗಿದೆ. ಇವರಲ್ಲಿ 8 ಮಂದಿ 18 ವರ್ಷದೊಳಗಿನವರಾಗಿದ್ದಾರೆ' ಎಂದು ತಿಳಿಸಿದರು. 'ಶಾಲಾ ಕಾಲೇಜುಗಳಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ. ಮಕ್ಕಳ ಬ್ಯಾಗ್ ತಪಾಸಣೆ ನಡೆಸಿದಾಗ ಮೊಬೈಲ್, ಸಿಗರೇಟು, ತಂಬಾಕು ಕೂಡ ಸಿಕ್ಕಿವೆ' ಎಂದು ಹೇಳಿದರು.

ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಪೊಲೀಸರಿಗೆ ಈ ವೇಳೆ ನಗದು ಬಹುಮಾನ ಘೋಷಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿ.ಬಿ. ಭಾಸ್ಕರ್, ಡಿವೈಎಸ್‌ಪಿ ಮಲ್ಲೇಶ್ ಇದ್ದರು.

ಈ ಪ್ರಕರಣ ಸಂಬಂಧ ಕರ್ತವ್ಯ ಲೋಪದ ಮೇಲೆ ಎಂ.ನಾರಾಯಣ ನಗರ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಈಗಾಗಲೇ ಅಮಾನತು ಮಾಡಿದ್ದಾರೆ.

ಮುಖ್ಯಾಂಶಗಳು

- ಬಂಧಿತರಲ್ಲಿ ನಾಲ್ವರು ಕಾನೂನು ಸಂಘರ್ಷಕ್ಕೆ ಒಳಗಾಗದ ಬಾಲಕರು
- ಕೇಂದ್ರ ವಲಯ ಐಜಿಪಿ ರವಿಕಾಂತೇಗೌಡ ಮಾಹಿತಿ
- ವೈಯಕ್ತಿಕ ದ್ವೇಷ; ಮದ್ಯಪಾನ ಮಾಡಿ ಕಾರ್ತಿಕ್ ಸಿಂಗ್ ಕೊಲೆ

ಬಂಧಿತ ಇಬ್ಬರು ಆರೋಪಿಗಳು ಉಳಿದ ಆರೋಪಿಗಳನ್ನು ತೋರಿಸುವುದಾಗಿ ಪೊಲೀಸರ ಕಣ್ಣಿಗೆ ಮಣ್ಣು ಎರಚಿ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆಗ ಕಾಲಿಗೆ ಗುಂಡು ಹೊಡೆದು ಬಂಧಿಸಲಾಗಿದೆ

ಬಿ.ಆರ್.ರವಿಕಾಂತೇಗೌಡ,
ಐಜಿಪಿ, ಕೇಂದ್ರ ವಲಯ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre

ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Situation Required

ಕರ್ನಾಟಕದಲ್ಲಿ ತುರ್ತು ಅಗತ್ಯವಿರುವ ಟೆಲಿಕಾಲರ್ (ಪುರುಷ ಮತ್ತು ಮಹಿಳೆ) ಸಂಬಳ-16200/- CTC. ಕೌಶಲ್ಯಗಳು: ಕನ್ನಡ ಓದಲು ಬರೆಯಿರಿ ಮತ್ತು ಮಾತನಾಡಿ - ಆಸಕ್ತ ಅಭ್ಯರ್ಥಿ ಈ ಸಂಖ್ಯೆಗೆ ಮಿಸ್ ಕಾಲ್ ಮಾಡಿ: 7669250202

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000- 17,000. 8951315839, 9141634619

ಬೇಕಾಗಿದ್ದಾರೆ: ಮಾಜಿ ಆಡಿಟರ್ ಹಾಗೂ ತೆರಿಗೆ ಅಭ್ಯಾಸಕರ ಕಚೇರಿಗೆ ಕಂಪ್ಯೂಟರ್ ತಿಳಿದಿರುವ ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ತಮ್ಮ ಅರ್ಜಿಯೊಂದಿಗೆ ಸಂಪರ್ಕಿಸಿ: 9448175385

ಭವಿಷ್ಯ

Astrology

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Travel

ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: 17.11.2023 23.11.2023 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ,ಓಂಕಾರೇಶ್ವರ. 20.11.2023 14.02.2024 ಕಾಶಿ,ಬುದ್ಧಗಯಾ ನೈಮಿಶಾರಣ್ಯ,ಜಾರ್ಖಂಡ ಬೈದ್ಯನಾಥ್. 29.11.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ ದಕ್ಷಿಣ/ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 8431888138 9686708171

ಅಂಡಮಾನ್ ಹವಳದ್ವೀಪ ಪ್ರತಿ ಗುರುವರ 5/8ದಿನಗಳು ಹಡಗು/ವಿಮಾನದಲ್ಲಿ Royal Package 27.11.2023 ಮಾತು11.12.2023 ರಿಯಾಯಿತಿ ದರದಲ್ಲಿ 6ದಿನಗಳು ಕಾಶಿ ಗಯಾ ಅಲಹಾಬದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219

ಸುಸಜ್ಜಿತ ಪ್ರವಾಸಗಳು: 25.12.2023 18.01.2024 ರಿಂದ 7 ದಿನಗಳ ಶ್ರೀಶೈಲ,ಮಂತ್ರಾಲಯ ಹೈದರಾಬಾದ್,ಅಹೋಬಿಲಂ. 24.12.2023 18.01.2024 ರಿಂದ 7 ದಿನಗಳ ನವಗ್ರಹ ಸಹಿತ ದಕ್ಷಿಣಭಾರತ. 21.01.2024 05.02.2024 ರಿಂದ 10 ದಿನಗಳ ಮಧ್ಯಪ್ರದೇಶ. 17.01.2024 03.02.2024 ರಿಂದ 11/17 ದಿನಗಳ ರಾಜಸ್ಥಾನ್,ಗುಜರಾತ್. 17.01.2024 01.02.2024 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ. 25.01.2024 11.02.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 24.01.2024 ರಿಂದ 9 ದಿನಗಳ ಕಾಂಬೋಡಿಯ. ವಿಯೆಟ್ನಾಂ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 23385837 8088887677

24.11.2023 ದಾಂಡೇಲಿ, ಗೋವಾ 4 ದಿನಗಳ ಪ್ರವಾಸ. 8-12-2023, 3 ದಿನಗಳ ಪ್ರವಾಸ ನವತಿರುಪತಿ, ತಿರುಪೂರಕುಂಡ್ರಂ, ತಿರುಚೆಂಧೂರ್, ಮದುರೈ, ಅಳಗರ್ ಕೋವಿಲ್, ಪಾಲಮುದಿರೈಸೋಲೇ, ನಾಮಕಲ್ 7829996723

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/12 ಗುಜರಾತ್ ಮಧ್ಯಪ್ರದೇಶ 4 ಜ್ಯೋತಿರ್ಲಿಂಗ. 18/12 ರಾಯಲ್ ರಾಜಸ್ಥಾನ.16/11: ಹೈದರಬಾದ್ ಪ್ಯಾಕೇಜ್. 9964527782/95910177 82

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

14 ಗಂಟೆಗಳ ತಡೆರಹಿತ ಶಾಪಿಂಗ್
(ಮಳಿಗೆಗಳು ಬೆಳಿಗ್ಗೆ 9 ರಿಂದ ರಾತ್ರಿ 11 ಗಂಟೆ ವರೆಗೆ ತೆರೆದಿರುತ್ತದೆ)
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
FINANCE BONANZA
Upto ₹12,500 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
DHANTERAS Sale
ಸ್ಕ್ರಾಚ್ ಮಾಡಿ ಗೆಲ್ಲಿರಿ* ಖರವಸೆಯ
ಚಿನ್ನ ಮತ್ತು ಬೆಳ್ಳಿ ನಾಣ್ಯಗಳು
ಇಂದು ಮಾತ್ರ
EXCHANGE DHAMAKA
Upto ₹25,000
OFF ON EXCHANGE OF OLD TELEVISION, HOME APPLIANCES, LAPTOP & MOBILES*
ಉಚಿತ* FIRE-BOLTT
SMART CALLING WATCH WORTH ₹20000
FINANCE POWERED BY Groww
0% EMI 2,000 Cash Back
MIN PRODUCT VALUE ₹10,000
1 EMI FREE*
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
AU SMALL FINANCE BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
YES BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹20,000 MAX CASH BACK UPTO ₹2500
one card 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
DBS BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹3000
5% INSTANT CASHBACK ON FULL SWIPE* MIN SWIPE ₹15000 MAX CASH BACK UPTO ₹1500
MobiKwik 5% CASH BACK* on UPI
MINIMUM TRANSACTION ₹5000 MAXIMUM CASHBACK UPTO ₹1000
LG 77 4K SMART OLED OLED77B3PSA
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH + LG SMART CAMER WORTH ₹9990
SAMSUNG 77 OLED 4K SMART TV 77S90C
ಇ.ಎಮ್.ಐ ₹6,990
ಉಚಿತ: ₹63,900 ಮೌಲ್ಯದ SAMSUNG SOUNDBAR
NEVER BEFORE PRICES
40 SMART LED ₹13,300* AFTER CASH BACK EMI: ₹1,108
43 4K SMART LED ₹17,650* AFTER CASH BACK EMI: ₹1,471
55 4K SMART LED ₹25,900* AFTER CASH BACK EMI: ₹2,158
SONY 65 4K ULTRA HD SMART OLED 65A80L
ಇ.ಎಮ್.ಐ ₹6,500
Panasonic 55 OLED 4K SMART TV
ಇ.ಎಮ್.ಐ ₹4,095
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
vivo Y56 (4 + 128) OFFER PRICE ₹15,199* (PRICE AFTER CASH BACK*) EMI ₹1,512
Redmi 12 5G 6/128 OFFER PRICE ₹11,500* (PRICE AFTER CASH BACK*) ಇ.ಎಮ್.ಐ ₹1,917
ONEPLUS NORD CE 3 -8/128 OFFER PRICE ₹23,499* (PRICE AFTER CASH BACK*) ಇ.ಎಮ್.ಐ ₹3,916
oppo A79 (8 + 128) OFFER PRICE ₹17,099* (PRICE AFTER CASH BACK*) EMI ₹1,499
iPhone 15\15 PRO\ PRO MAX STARTS FROM ₹74,990* (PRICE AFTER CASH BACK*) ಇ.ಎಮ್.ಐ ₹3,125
70% OFF ON DAMAGE PROTECTION
SAMSUNG Galaxy S23FE/S23/S23 Ultr STARTS FROM ₹47,499* (PRICE AFTER CASH BACK*) EMI ₹1,979
hp 15s HOT DEAL N4500 8GB,512GB SSD, 15.6" HD WIN 11 MSO 2021 OFFER PRICE ₹24,500* ಇ.ಎಮ್.ಐ ₹2,042 (PRICE AFTER CASH BACK)
PAY RS. 2499 AND GET GOODIES WORTH ₹10999
HOT DEAL i5-1035G1 8GB, 1TB HDD+ 256 GB SSD, 14" FHD, FINGER PRINT READER, WIN 10 HOME OFFER PRICE ₹34,290* (PRICE AFTER CASH BACK)
ಉಚಿತ: METAL BT SMART WATCH WORTH ₹7999
Lenovo SLIM 3i RYZEN 7 5700U 16GB, 512GB SSD 15.6 FHD INT AMD RADEON GFX WIN 11 MSO 21 ಇ.ಎಮ್.ಐ ₹3,624 OFFER PRICE ₹43,490* (PRICE AFTER CASH BACK)
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
Lenovo Gaming 3 RYZEN 5 6600 8GB, 512GB SSD NVIDIA RTX 3050 4GB GFX 15.6 FHD WIN 11 MSO 21 OFFER PRICE ₹53,500* ಇ.ಎಮ್.ಐ ₹4,458 (PRICE AFTER CASH BACK)
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
DELL Inspiron 15 3520 12th Gen i5-1235U, 16GB DDR4 /512GB SSD, 15.6" FHD/Win 11 + MSO 21, WIN 11 MSO 21 OFFER PRICE ₹54,190* ಇ.ಎಮ್.ಐ ₹4,516 (PRICE AFTER CASH BACK)
ಉಚಿತ: METAL BT SMART WATCH WORTH ₹7999+UPTO ₹5000 CASHBACK + PAY ₹2499 AND GET GOODIES WORTH ₹12199
LG 635 ಲೀ ಸೈಡ್ ಬೈ ಸೈಡ್ L257CPZX ಇ.ಎಮ್.ಐ ₹4,999
ಉಚಿತ: FIRE-BOLTT SMART CALLING WATCH WORTH ₹20000
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL ಇ.ಎಮ್.ಐ ₹3,990
ಉಚಿತ: SAMSUNG 10 KG TOP LOADING WASHING MACHINE WORTH ₹32500
Godrej 564 ಲೀ ಸೈಡ್ ಬೈ ಸೈಡ್ ಇ.ಎಮ್.ಐ ₹2,525*
ಉಚಿತ: FIRE-BOLTT SMART CALLING WATCH WORTH ₹20000
BOSCH 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,574
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,141
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR OK55 ಇ.ಎಮ್.ಐ ₹1,772 OFFER PRICE ₹21,265 (PRICE AFTER CASH BACK)
LG SOUND BAR SC9S 3.1.3 Ch, 400W, DOLBY ATMOS & IMAX ENHANCED. OFFER PRICE ₹27,150 ಇ.ಎಮ್.ಐ ₹2,263 (PRICE AFTER CASH BACK)
LG 14 PLACE DISHWASHER WITH INVERTER DIRECT DRIVE DFB532FP ಇ.ಎಮ್.ಐ ₹2,999
LG 28ಲೀ ಕನ್‌ವೆಕ್ಷನ್ ಮೈಕ್ರೋವೇವ್ MC-2846BR EMI ₹1,333
WATER PURIFIERS UPTO 45% OFF
CHIMNEY UPTO 55% OFF
MIXER GRINDER UPTO 50% OFF
WATER HEATER UPTO 43% OFF
GIRIAS THE CONSUMER DURABLE PEOPLE Since 1971
STORE LOCATOR
148 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
facebook
WE SUPPORT ROUND TABLE INDIA LADIES CIRCLE INDIA

ದತಿಯಾ: ಮಿಶ್ರಾ ಮುಂದಿದೆ ಕಠಿಣ ಹಾದಿ

ಚುನಾವಣಾ ಪಯಣ – ಮಧ್ಯಪ್ರದೇಶ

ಮಂಜುನಾಥ ಹೆಬ್ಬಾರ್

ನರೋತ್ತಮ ಮಿಶ್ರಾ

ದತಿಯಾ: ದತಿಯಾ ಕ್ಷೇತ್ರದ ಹಳ್ಳಿಯೊಂದರಲ್ಲಿ 'ಜೈ ಶ್ರೀರಾಮ್', 'ದೇಶಕ್ಕಾಗಿ ಬಿಜೆಪಿಗೆ ಮತ ನೀಡಿ' ಎಂದು ಘೋಷಣೆ ಕೂಗುತ್ತಾ ದೊಡ್ಡ ಗುಂಪೊಂದು ಸಾಗುತ್ತಿತ್ತು. ಕಮಲ ಪಕ್ಷದ ಅಭ್ಯರ್ಥಿ ಹಸನ್ಮುಖರಾಗಿ ಜನರೊಂದಿಗೆ ಆತ್ಮೀಯರಾಗಿ ಬೆರೆಯುತ್ತಾ ಮುಂದೆ ಸಾಗುತ್ತಿದ್ದರು. ಸಮೀಪದಲ್ಲಿ ಟೀ ಮಾರುತ್ತಿದ್ದ 40 ವರ್ಷದ ರಾಹುಲ್ ಯಾದವ್ ಬಳಿ 'ಅಭ್ಯರ್ಥಿ ಯಾರು' ಎಂದು ಪ್ರಶ್ನಿಸಿದೆ. ನನ್ನತ್ತ ವಿಚಿತ್ರವಾಗಿ ನೋಡಿದ ಅವರು, 'ನೀವು ಬೇರೆ ರಾಜ್ಯದವರಾ? ಅವರು ನಮ್ಮ ಗೃಹ ಸಚಿವರು. ನರೋತ್ತಮ ಮಿಶ್ರಾ. ಅವರ ಬಗ್ಗೆಯೂ ನಿಮಗೆ ಗೊತ್ತಿಲ್ಲವೇ' ಎಂದು ಮರು ಪ್ರಶ್ನೆ ಹಾಕಿದರು. ನಾನು ಸುಮ್ಮನೆ ನಕ್ಕೆ. 'ಹಾಗಾದರೆ ಅವರು ಸುಲಭದಲ್ಲಿ ಗೆಲ್ಲಬಹುದಲ್ಲ' ಎಂದು ಟೀ ಅಂಗಡಿ ಮಾಲೀಕನನ್ನು ಕೆಣಕಿದೆ. ಆಗ ದುರುಗುಟ್ಟಿ ನೋಡಿದ ಯಾದವ್, 'ಮಿಶ್ರಾ ಅವರು ಮೂಲತಃ ದಬ್ರಾ ಕ್ಷೇತ್ರದವರು. 2008ರಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಇಲ್ಲಿಗೆ ಓಡಿ ಬಂದರು. ನಂತರ ಗೆಲ್ಲುತ್ತಲೇ ಬಂದರು. ಕಳೆದ ಚುನಾವಣೆಯಲ್ಲಿ ಗೆದ್ದಿದ್ದು 2 ಸಾವಿರ ಮತಗಳ ಅಂತರದಿಂದ. ಇವರನ್ನೇ ಎಷ್ಟು ಸಲ ಗೆಲ್ಲಿಸುವುದು. ನಮಗೂ ಬದಲಾವಣೆ ಬೇಕಲ್ಲ' ಎಂದು ಮಾರ್ಮಿಕವಾಗಿ ನುಡಿದರು. 'ಹಾಗಿದ್ದರೆ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲವೇ' ಎಂದು ಕೇಳಿದೆ. 'ಕ್ಷೇತ್ರದಲ್ಲಿ ಭಾರಿ ಅಭಿವೃದ್ಧಿ ಕಾರ್ಯಗಳು ಆಗಿವೆ. ಹತ್ತಾರು ದೇವಸ್ಥಾನಗಳು ಪುನರುಜ್ಜೀವನಗೊಂಡಿವೆ. ಹಾಗೆಯೇ, ಕೆಲಸ ಮಾಡಿಸದೆಯೇ ಬಿಲ್ ಮಾಡಿರುವ ಉದಾಹರಣೆಗಳು ಉಂಟು' ಎಂದು ಸೇರಿಸಿದರು.

ಗ್ವಾಲಿಯರ್‌ನಿಂದ ಸರಿಸುಮಾರು 76 ಕಿ.ಮೀ. ದೂರದಲ್ಲಿರುವ ದತಿಯಾ ಕ್ಷೇತ್ರದಲ್ಲಿ ಚುನಾವಣೆ ರಂಗೇರಿದೆ. ಈ ಕಣವು ದೇಶದ ಗಮನ ಸೆಳೆದಿದೆ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೂ ಆಗಿರುವ ಗೃಹ ಸಚಿವ ನರೋತ್ತಮ ಮಿಶ್ರಾ ಅವರು ಬಿಜೆಪಿ ಹುರಿಯಾಳು. ಕ್ಷೇತ್ರದಲ್ಲಿ ಹ್ಯಾಟ್ರಿಕ್ ಜಯ ಗಳಿಸಿರುವ ಮಿಶ್ರಾ ಅವರಿಗೆ ಈ ಸಲ ಗೆಲುವು ಸುಲಭವಲ್ಲ. ಮಿಶ್ರಾ ವಿರುದ್ಧ 'ಹ್ಯಾಟ್ರಿಕ್' ಸೋಲು ಕಂಡಿರುವ ಹಿರೀಕ ರಾಜೇಂದ್ರ 'ಕೈ' ಅಭ್ಯರ್ಥಿ. ಅವರು ಎರಡು ಬಾರಿ ಶಾಸಕರಾಗಿದ್ದರು. ಅವರ ಬೆನ್ನಿಗೆ ಅವಧೇಶ್ ನಾಯಕ್ ನಿಂತಿದ್ದಾರೆ. ಕಾಂಗ್ರೆಸ್ ಪಕ್ಷವು ಆರಂಭದಲ್ಲಿ ಅವಧೇಶ್ ನಾಯಕ್ ಅವರಿಗೆ ಟಿಕೆಟ್ ಕೊಟ್ಟಿತ್ತು. ಕಳೆದ ಸಲ ಕಡಿಮೆ ಅಂತರದಲ್ಲಿ ಸೋತ ಅಭ್ಯರ್ಥಿಯನ್ನು ಕೈಬಿಟ್ಟು ಕೆಲವೇ ತಿಂಗಳ ಹಿಂದೆ ಪಕ್ಷಕ್ಕೆ ಸೇರ್ಪಡೆಯಾದ ನಾಯಕ್ ಅವರಿಗೆ ಮಣೆ ಹಾಕಿದ್ದಕ್ಕೆ ಪಕ್ಷದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಪಕ್ಷದ ಮುಖಂಡರು ಪ್ರತಿಭಟನೆ ನಡೆಸಿದ್ದರು. ಬಳಿಕ ಕಾಂಗ್ರೆಸ್ ಪಕ್ಷವು ಅಭ್ಯರ್ಥಿಯನ್ನು ಬದಲಿಸಿತ್ತು. ಈಗ ನಾಯಕ್ ಹಾಗೂ ಭಾರ್ತಿ ಒಗ್ಗಟ್ಟಿನಿಂದ ಪ್ರಚಾರ ನಡೆಸುತ್ತಿದ್ದಾರೆ.

ನಾಯಕ್ ಅವರು ಮೂಲತಃ ರಾಷ್ಟ್ರೀಯ ಸ್ವಯಂಸೇವಕ ಸಂಘದವರು. ಮಾಜಿ ಮುಖ್ಯಮಂತ್ರಿ ಉಮಾಭಾರತಿ ಅವರ ನೆಚ್ಚಿನ ಶಿಷ್ಯ. ಕಳೆದ ಎರಡು ಚುನಾವಣೆಗಳಲ್ಲಿ ಮಿಶ್ರಾ ಹಿಂದೆ ನಿಂತು ಗೆಲುವಿಗೆ ಕಾರ್ಯತಂತ್ರ ರೂಪಿಸಿದ್ದರು. 2018ರ ಚುನಾವಣೆಯಲ್ಲಿ ಗೆದ್ದ ನಂತರ ಮಿಶ್ರಾ ಅವಮಾನ ಮಾಡಿದ್ದಾರೆ ಎಂಬುದು ನಾಯಕ್ ಕೋಪಕ್ಕೆ ಕಾರಣ. ನಂತರ ಮಿಶ್ರಾ ಅವರಿಂದ ದೂರವಾದರು.

ಕ್ಷೇತ್ರದಲ್ಲಿ ಬ್ರಾಹ್ಮಣ ಹಾಗೂ ಕುಶ್ವಾಹ ಸಮುದಾಯದವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಬ್ರಾಹ್ಮಣ ಮತದಾರರ ಸಂಖ್ಯೆ 30 ಸಾವಿರದಷ್ಟು ಇದೆ. ಕೈ ಹಾಗೂ ಕಮಲ ಪಾಳಯದ ಅಭ್ಯರ್ಥಿಗಳಿಬ್ಬರೂ ಬ್ರಾಹ್ಮಣ ಸಮುದಾಯದವರು. ಚುನಾವಣೆ ಘೋಷಣೆಯಾದ ಬಳಿಕ ಕೈ ಪಾಳಯದ ಹಲವು ನಾಯಕರನ್ನು ಬಿಜೆಪಿ ಸೆಳೆದುಕೊಂಡಿದೆ. 1993ರ ಬಳಿಕ ಕಾಂಗ್ರೆಸ್ ಇಲ್ಲಿ ಗೆದ್ದೇ ಇಲ್ಲ. ಹಿಂದೂ ಮತಗಳ ಮೇಲೆ ಕಣ್ಣಿಟ್ಟು ಮಿಶ್ರಾ ಅವರು ರಾಮ್ ಲಾಲಾ ಲೋಕ್ ಹಾಗೂ ದತಿಯಾದ ಪಿತಾಂಬರ ಮಂದಿರದ ಅಭಿವೃದ್ಧಿಗೆ ಅನುದಾನ ಕೊಡಿಸಿದ್ದಾರೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಮತದಾರರು ಹೇಳುತ್ತಾರೆ. ಕೆಲವೊಂದು ಮತದಾರರು 'ಈ ಸಲ ಬದಲಾವಣೆಗಾಗಿ ಮತ ಚಲಾಯಿಸುತ್ತೇವೆ' ಎಂದೂ ತಿಳಿಸುತ್ತಾರೆ.

ಮಾತಿಗೆ ಸಿಕ್ಕ ಅಂಗನವಾಡಿ ಕಾರ್ಯಕರ್ತೆ ಪ್ರಿಯಾಂಕಾ ಚೌರಾಸಿಯಾ, 'ನಮಗೆ ಇಲ್ಲಿ ಅಭ್ಯರ್ಥಿ ಮುಖ್ಯವಲ್ಲ. ಪಕ್ಷ ಮುಖ್ಯ. ಮಹಿಳೆಯರ ಶ್ರೇಯೋಭಿವೃದ್ಧಿಗೆ ಬಿಜೆಪಿ ಹಲವು ಯೋಜನೆ ಜಾರಿಗೊಳಿಸಿದೆ. ಲಾಡ್ಲಿ ಬೆಹ್ನಾ ಯೋಜನೆಯಡಿ ಮಹಿಳೆಯರಿಗೆ ₹1,250 ಕೊಡುತ್ತಿರುವುದು ಉತ್ತಮ ಉಪಕ್ರಮ. ನಮಗೆ ಅದು ದೊಡ್ಡ ಮೊತ್ತ. ಅದನ್ನು ನೆನಪಿನಲ್ಲಿಟ್ಟುಕೊಂಡು ಮತ ಚಲಾಯಿಸುತ್ತೇವೆ' ಎಂದು ಹೇಳುತ್ತಾರೆ.

ಅವರ ಜತೆಗಿದ್ದ ಸುನಿತಾ ಕಾತ್ರೆ ಅವರು 'ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ' ಎಂದು ಹೇಳಿಕೊಂಡರು. 'ಶಾಸಕರ ಬೆಂಬಲಿಗರ ದೌರ್ಜನ್ಯ ಮಿತಿಮೀರಿದೆ. ವರ್ಷದ ಹಿಂದೆ ಪ್ರಬಲ ಸಮುದಾಯದ ವ್ಯಕ್ತಿಯೊಬ್ಬರು ತಳ ಸಮುದಾಯದ ವ್ಯಕ್ತಿಯನ್ನು ಕೊಲೆ ಮಾಡಿದರು. ಆದರೆ, ಅವರು ಜೈಲಿನಿಂದ ಒಂದೇ ದಿನದಲ್ಲಿ ಬಿಡುಗಡೆಯಾದರು. ಗೃಹ ಸಚಿವರ ಬೆಂಬಲವಿಲ್ಲದೆ ಅವರು ಬಿಡುಗಡೆಯಾಗಲು ಸಾಧ್ಯವೇ' ಎಂದು ಪ್ರಶ್ನಿಸುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದ್ದ ಉಮೇಶ್ ಕುಶ್ವಾಹ, 'ಮಿಶ್ರಾ ಅಭಿವೃದ್ಧಿ ಕಾರ್ಯ ಮಾಡಿರುವುದು ನಿಜ. ಅವರದ್ದು ಹರಕು ಬಾಯಿ. ಅದೇ ಕಾರಣಕ್ಕೆ ಅವರನ್ನು ಸೋಲಿಸಲು ಎಲ್ಲರೂ ಒಗ್ಗಟ್ಟಾಗಿ ಹಠಾರ ಹಿಡಿದುಕೊಂಡು ನಿಂತಿದ್ದಾರೆ. ಯಾರೇ ಗೆದ್ದರೂ ಒಂದೆರಡು ಸಾವಿರ ಮತಗಳ ಅಂತರದಿಂದ ಅಷ್ಟೇ' ಎನ್ನುತ್ತಾರೆ.

ಚುನಾವಣಾ ಕಣದಲ್ಲಿ

- **ನಾಮಪತ್ರ ಸಲ್ಲಿಸಿದ ಕೆಸಿಆರ್:** ತೆಲಂಗಾಣ ಮುಖ್ಯಮಂತ್ರಿ, ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರು ಸಿದ್ದಿಪೇಟ್ ಜಿಲ್ಲೆಯ ಗಜ್ವೆಲ್ ವಿಧಾನಸಭೆ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು. ಹೆಲಿಕಾಪ್ಟರ್ ಮೂಲಕ ಗಜ್ವೆಲ್‌ಗೆ ಆಗಮಿಸಿ ನಾಮಪತ್ರ ಸಲ್ಲಿಸಿದ ಬಳಿಕ, ತೆರೆದ ವಾಹನದಲ್ಲಿ ಕ್ಷೇತ್ರ ಸಂಚಾರ ನಡೆಸಿದರು. ಬಿಜೆಪಿಯು ಪಕ್ಷದ ಶಾಸಕ ಈಟೆಲ ರಾಜೇಂದ್ರ ಅವರನ್ನು ಈ ಕ್ಷೇತ್ರದಲ್ಲಿ ಕಣಕ್ಕಿಳಿಸಿದ್ದರೆ, ಕಾಂಗ್ರೆಸ್ ಪಕ್ಷವು ತೂಂಕುಂಟ ನರ್ಸಾ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ. ಕೆಸಿಆರ್ ಅವರು ಕಾಮಾರೆಡ್ಡಿ ಕ್ಷೇತ್ರದಿಂದಲೂ ಸ್ಪರ್ಧಿಸುತ್ತಿದ್ದು, ಅಲ್ಲಿಯೂ ನಾಮಪತ್ರ ಸಲ್ಲಿಸಿದರು.
- **ನಾಮಪತ್ರ ಹಿಂಪಡೆದ ಬಿಜೆಪಿ ಬಂಡಾಯ ಅಭ್ಯರ್ಥಿ:** ಜೈಪುರದ ಝೋಟ್ವಾಡ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮಾಜಿ ಸಚಿವ ರಾಜ್‌ಪಾಲ್ ಸಿಂಗ್ ಶೆಖಾವತ್ ಅವರು ಗುರುವಾರ ನಾಮಪತ್ರವನ್ನು ಹಿಂಪಡೆದಿದ್ದಾರೆ. ಕಾಂಗ್ರೆಸ್‌ಅನ್ನು ಸೋಲಿಸಿ, ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ಬಹಳ ಮುಖ್ಯ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೊತೆ ದೂರವಾಣಿ ಮೂಲಕ ಮಾತನಾಡಿದ ಬಳಿಕ ಈ ನಿರ್ಧಾರ ತೆಗೆದುಕೊಂಡೆ ಎಂದು ರಾಜ್‌ಪಾಲ್ ಅವರು ಹೇಳಿದ್ದಾರೆ.
- **ಪ್ರಿಯಾಂಕಾ ರ್‍ಯಾಲಿ:** 'ಚಿತ್ರಕೂಟವು ಶ್ರೀರಾಮ ಪ್ರಾಯಶ್ಚಿತ್ತ ಮಾಡಿಕೊಂಡ ಸ್ಥಳ. ಸತ್ಯ ಗೆಲ್ಲುತ್ತದೆ, ಸುಳ್ಳು ಸೋಲುತ್ತದೆ ಎಂಬ ನಂಬಿಕೆಯು ರಾಮನ ಕಾಲದಿಂದಲೂ ಈ ದೇಶದಲ್ಲಿ ಇದೆ. ಬಿಜೆಪಿಯನ್ನು ಸೋಲಿಸುವ ಮೂಲಕ ಸುಳ್ಳನ್ನು ಸೋಲಿಸಿ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಧ್ಯಪ್ರದೇಶದ ಚಿತ್ರಕೂಟದಲ್ಲಿ ಹೇಳಿದರು. 'ಮಧ್ಯಪ್ರದೇಶದಲ್ಲಿ ಭಾರಿ ಅಭಿವೃದ್ಧಿ ಮಾಡಿರುವುದಾಗಿ ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಹೇಳುತ್ತಾರೆ. ಆದರೆ ಆ ಅಭಿವೃದ್ಧಿಯು ನಿಮಗೆ ಅನುಭವಕ್ಕೆ ಬಂದಿದೆಯೇ' ಎಂದು ಪ್ರಶ್ನಿಸಿದರು.
- **'ಮತ್ತೆ ಅಧಿಕಾರಕ್ಕೆ':** ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಬಾರಾನ್‌ನ ಅಂತಾ ವಿಧಾನಸಭಾ ಕ್ಷೇತ್ರದ ಪಕ್ಷದ ಅಭ್ಯರ್ಥಿ ಪ್ರಮೋದ್ ಜೈನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಪಕ್ಷವು ರಾಜ್ಯದಲ್ಲಿ ಉತ್ತಮ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಬಾರಾನ್‌ನಲ್ಲಿ ಪ್ರಚಾರ ಕಾರ್ಯದ ವೇಳೆ ಹೇಳಿದ್ದಾರೆ.

ನುಡಿ–ಕಿಡಿ



ನಿಮ್ಮ ಒಂದು ಮತವು ಮಧ್ಯಪ್ರದೇಶದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲು ನೆರವಾಗುತ್ತದೆ. ನಿಮ್ಮ ಮತವು ದೆಹಲಿಯಲ್ಲಿ ಮೋದಿಗೆ ಬಲ ನೀಡುತ್ತದೆ ಮತ್ತು ಮಧ್ಯಪ್ರದೇಶದಲ್ಲಿ ಭ್ರಷ್ಟ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ನೂರು ಮೈಲಿ ದೂರವಿಡುತ್ತದೆ. ಅಂದರೆ ಒಂದು ಮತ, ಮೂರು ಅಚ್ಚರಿಗಳು. ಇದು ತ್ರಿಶಕ್ತಿಯ ರೀತಿ.
ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರವು ಭಯೋತ್ಪಾದಕರ ಬಗ್ಗೆ ಅನುಕಂಪ ಹೊಂದಿದೆ. ಇದರಿಂದಾಗಿಯೇ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಹತ್ಯೆಯಂತಹ ಕೃತ್ಯ ನಡೆಯಿತು. ಇದು ರಾಜ್ಯ ಸರ್ಕಾರದ ಮೇಲಿನ ದೊಡ್ಡ ಕಲೆ

ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಜಾತಿಗಣತಿ ಎಕ್ಸ್ ರೇ ಇದ್ದಂತೆ. ವ್ಯಕ್ತಿ ಗಾಯಗೊಂಡಾಗ ಆತನ ಮೂಳೆಮುರಿದಿದೆಯೇ ಇಲ್ಲವೇ ಎಂಬುದನ್ನು ಅರಿಯಲು ಎಕ್ಸ್ ರೇ ಮಾಡಲಾಗುವುದು. ಅದೇ ರೀತಿ ಜಾತಿ ಗಣತಿಯು ಒಟ್ಟು ಜನಸಂಖ್ಯೆಯಲ್ಲಿರುವ ಒಬಿಸಿಗಳು, ದಲಿತರು ಮತ್ತು ಬುಡಕಟ್ಟು ಜನರ ಪ್ರಮಾಣವನ್ನು ತಿಳಿಸುತ್ತದೆ. ಮೋದಿ ಅವರು ತಮ್ಮನ್ನು ಇತರ ಹಿಂದುಳಿದ ವರ್ಗಕ್ಕೆ ಸೇರಿದವ ಎಂದು ಹೇಳಿಕೊಳ್ಳುತ್ತಾರೆ. ಆದರೆ ಜಾತಿ ಗಣತಿ ವಿಷಯ ಬಂದಾಗ ಅವರು ದೇಶದಲ್ಲಿ ಇರುವುದು ಒಂದೇ ಜಾತಿ. ಅದು ಬಡವರದ್ದು ಎನ್ನುತ್ತಾರೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಮೋದಿ ಅವರು ತಮ್ಮ ಪ್ರತಿ ಭಾಷಣದಲ್ಲಿ ಕನಿಷ್ಠ 50 ಸಲ ಕಾಂಗ್ರೆಸ್ ಹೆಸರು ಹೇಳುತ್ತಾರೆ. ಕಾಂಗ್ರೆಸ್ ಕಂಡರೆ ಅವರಿಗೆ ಭಯ ಇದೆ. ಅವರು ತಮ್ಮ ಪಕ್ಷ ಹಿಂದೂಗಳ ಪಕ್ಷ ಎಂದು ಉದ್ದೇಶಪೂರ್ವಕವಾಗಿ ಹೇಳುತ್ತಾರೆ. ನಾವು ಹಿಂದೂಗಳು ಅಲ್ಲವೇ? ನನ್ನ ಹೆಸರು ಮಲ್ಲಿಕಾರ್ಜುನ ಖರ್ಗೆ. ಶಿವನ ಮತ್ತೊಂದು ಹೆಸರು ಮಲ್ಲಿಕಾರ್ಜುನ.
ಯಾರನ್ನು ನೀವು ವಂಚಿಸುತ್ತಿದ್ದೀರಿ? ಯಾಕೆ ನೀವು ಸುಳ್ಳು ಹೇಳುತ್ತೀರಿ? ನೀವು ಇದನ್ನು ಪದೇ ಪದೇ ಹೇಳಿದರೆ, ದೇಶದ ಮಕ್ಕಳಲ್ಲಿ ದ್ವೇಷ ಭಾವನೆ ಮೂಡುತ್ತದೆ.

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಸಭೆ... ಮಧ್ಯಪ್ರದೇಶದ ಜಬಲ್ಪುರದಲ್ಲಿ ಗುರುವಾರ ನಡೆದ ಕಾಂಗ್ರೆಸ್‌ನ ಸಾರ್ವಜನಿಕ ಸಭೆಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾತನಾಡಿದರು –ಪಿಟಿಐ ಚಿತ್ರ

ಪ್ರಚಾರ ವಾಹನದಿಂದ ಬಿದ್ದ ಕೆಟಿಆರ್

ಹೈದರಾಬಾದ್ (ಪಿಟಿಐ): ಆಡಳಿತಾರೂಢ ಬಿಆರ್‌ಎಸ್‌ನ ಕಾರ್ಯಾಧ್ಯಕ್ಷ ಮತ್ತು ಸಚಿವ ಕೆ.ಟಿ ರಾಮರಾವ್ (ಕೆಟಿಆರ್) ಅವರು ನಿಜಾಮಬಾದ್ ಜಿಲ್ಲೆಯ ಆರ್ಮೂರು ಪಟ್ಟಣದಲ್ಲಿ ರೋಡ್ ಶೋ ನಡೆಸುತ್ತಿದ್ದ ಸಂದರ್ಭದಲ್ಲಿ ತೆರೆದ ವಾಹನದಿಂದ ಕೆಳಗೆ ಬಿದ್ದಿದ್ದಾರೆ.

ಚಾಲಕ ಬ್ರೇಕ್ ಹಾಕಿದಾಗ ಈ ಘಟನೆ ನಡೆದಿದೆ. ರಾಮರಾವ್ ಸುರಕ್ಷಿತವಾಗಿದ್ದಾರೆ.

ಶಾಸಕ ಜೀವನ್‌ರೆಡ್ಡಿ ಅವರು ನಾಮಪತ್ರ ಸಲ್ಲಿಸಲು ತೆರಳುತ್ತಿದ್ದಾಗ ರಾಮರಾವ್ ಮತ್ತು ಬಿಆರ್‌ಎಸ್ ಸಂಸದ ಕೆ.ಆರ್. ಸುರೇಶ್ ರೆಡ್ಡಿ ಅವರು ಪ್ರಚಾರ ವಾಹನದಲ್ಲಿ ಅವರ ಜತೆಗಿದ್ದರು.

ಚಾಲಕನು ಬ್ರೇಕ್ ಹಾಕಿದಾಗ ವಾಹನದ ಮೇಲಿನ ಕಟಕಟೆ ಮುರಿದಿರುವುದು ವಿಡಿಯೊದಲ್ಲಿದೆ. ಮಧ್ಯದಲ್ಲಿ ನಿಂತಿದ್ದ ರಾಮರಾವ್ ಅವರು ಮುಂದಕ್ಕೆ ಬಾಗಿ ವಾಹನಕ್ಕೆ ಕಟ್ಟಿದ್ದ ಸ್ಪೀಕರ್ ಮೇಲೆ ಬಿದ್ದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಶಾಸಕ ಜೀವನ್‌ರೆಡ್ಡಿ ಮತ್ತು ಸಂಸದ ಸುರೇಶ್ ರೆಡ್ಡಿ ಕೂಡ ವಾಹನದಿಂದ ಬಿದ್ದಿದ್ದಾರೆ. ಪ್ರಚಾರ ವಾಹನದ ಜತೆಗೇ ತೆರಳುತ್ತಿದ್ದ ಪೊಲೀಸ್ ಸಿಬ್ಬಂದಿ ಇವರು ಕೆಳಗೆ ರಸ್ತೆ ಮೇಲೆ ಬೀಳುವುದನ್ನು ತಡೆದಿದ್ದಾರೆ. ತಕ್ಷಣವೇ ಅವರು ಕಾರಿನಲ್ಲಿ ಮುಂದೆ ಸಾಗಿದ್ದಾರೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಐಟಿ ದಾಳಿ; ರಾಜಕೀಯ ಕೆಸರೆರಚಾಟ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವಾಗ ರಾಜ್ಯದ ವಿವಿಧ ಪಕ್ಷಗಳ ನಾಯಕರಿಗೆ ಸೇರಿದ ಸ್ವತ್ತುಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದೆ. ಇದು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ.

ಮಾಜಿ ಸಂಸದ, ಪಲ್ಲೈರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪೊಂಗುಲೇಟಿ ಶ್ರೀನಿವಾಸ್ ರೆಡ್ಡಿ ಅವರ ಮನೆ ಮೇಲೆ ನಡೆದಿರುವ ಐಟಿ ದಾಳಿಯು ಈ ದಾಳಿಗಳ ಸರಣಿಯಲ್ಲಿ ಈಚಿನದ್ದು.

ಖಮ್ಮಂ ಮತ್ತು ನಾರಾಯಣಪುರಂ ಮತ್ತು ಹೈದರಾಬಾದ್‌ನಲ್ಲಿ ರೆಡ್ಡಿ ಮತ್ತು ಅವರ ಮಗನಿಗೆ ಸೇರಿದ ಸುಮಾರು 30 ಸ್ವತ್ತುಗಳಲ್ಲಿ ಐಟಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ರೆಡ್ಡಿ ಅವರು ಇದಕ್ಕೂ ಮೊದಲು ಬಿಆರ್‌ಎಸ್ ಕಾಂಗ್ರೆಸ್ ಪಕ್ಷದಲ್ಲಿದ್ದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ಅವರಿಗೆ ಪಕ್ಷವು ಟಿಕೆಟ್ ನಿರಾಕರಿಸಿದ ಬಳಿಕ ಕಾಂಗ್ರೆಸ್ ಸೇರ್ಪಡೆ ಆಗಿದ್ದರು.

ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದೆ ಎಂದು ರೆಡ್ಡಿ ಆರೋಪಿಸಿದ್ದಾರೆ.

ಕಳೆದ ಒಂದು ತಿಂಗಳಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್‌ನ ಹಲವಾರು ನಾಯಕರಿಗೆ ಸೇರಿದ ಸ್ವತ್ತುಗಳ ಮೇಲೆ ಐಟಿ ದಾಳಿ ನಡೆದಿವೆ.

ಕತಾರ್: ಮೇಲ್ಮನವಿ ಸಲ್ಲಿಸಿದ ಭಾರತ

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಯ 8 ಮಾಜಿ ಸಿಬ್ಬಂದಿ ಕತಾರ್ ನ್ಯಾಯಾಲಯವೊಂದರಿಂದ ಮರಣ ದಂಡನೆಗೆ ಗುರಿಯಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ.

ಮರಣ ದಂಡನೆಗೆ ಗುರಿಯಾಗಿರುವ ನೌಕಾಪಡೆಯ ಮಾಜಿ ಸಿಬ್ಬಂದಿಗೆ ಭಾರತವು ಎಲ್ಲ ರೀತಿಯ ಕಾನೂನು ಹಾಗೂ ಕಾನ್ಸುಲರ್ ನೆರವು ನೀಡಲಿದೆ ಎಂದು ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

ಕತಾರ್‌ನ ದೋಹಾದಲ್ಲಿರುವ ಭಾರತದ ರಾಯಭಾರ ಕಚೇರಿಯು ಬಂಧಿತ ಎಲ್ಲ ಭಾರತೀಯರನ್ನು ಮಂಗಳವಾರ ಸಂಪರ್ಕಿಸಿ, ಮಾತುಕತೆ ನಡೆಸಿದೆ ಎಂದೂ ಅವರು ತಿಳಿಸಿದ್ದಾರೆ.

'ನ್ಯಾಯಾಲಯದ ತೀರ್ಪು ಗೌಪ್ಯ ದಾಖಲೆಯಾಗಿರುವ ಕಾರಣ, ಅದನ್ನು ಕಾನೂನು ಹೋರಾಟ ನಡೆಸುವ ತಂಡದೊಂದಿಗೆ ಮಾತ್ರ ಹಂಚಿಕೊಳ್ಳಲಾಗಿದೆ. ಈ ತಂಡವು ಕತಾರ್‌ನ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದು, ಮೇಲ್ಮನವಿ ಸಲ್ಲಿಕೆ ಸೇರಿದಂತೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದೂ ಅವರು ಹೇಳಿದರು.

'ಈ ಪ್ರಕರಣ ಬಹಳ ಸೂಕ್ಷ್ಮವಾಗಿರುವ ಕಾರಣ, ಊಹಾಪೋಹಗಳಲ್ಲಿ ತೊಡಗದಂತೆ ಎಲ್ಲರನ್ನು ಒತ್ತಾಯಿಸುತ್ತೇನೆ' ಎಂದು ಬಾಗ್ಚಿ ಹೇಳಿದರು.

ಕತಾರ್‌ನ ಅಲ್ ದಹ್ರಾ ಎಂಬ ಖಾಸಗಿ ಕಂಪನಿಯಲ್ಲಿ, ನೌಕಾಪಡೆಯ ಈ 8 ಜನ ಮಾಜಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಬೇಹುಗಾರಿಕೆ ಆರೋಪದಡಿ ಇವರನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ಬಂಧಿಸಲಾಗಿತ್ತು.

ಕಾರ್ಮಿಕರ ಕರೆತರಲು ಮನವಿ

ಜೆರುಸಲೇಂ (ಪಿಟಿಐ): ಇಸ್ರೇಲ್‌ನಲ್ಲಿ ನಿರ್ಮಾಣ ಚಟುವಟಿಕೆಗಳು ಬಹುತೇಕ ಸ್ಥಗಿತವಾಗಿದ್ದು, ಕಾರ್ಮಿಕ ಕೊರತೆ ಎದುರಾಗಿದೆ. ಭಾರತ ಸೇರಿದಂತೆ ವಿದೇಶಗಳಿಂದ ಕಾರ್ಮಿಕರನ್ನು ಕರೆತರಬೇಕು ಎಂದು ಗುತ್ತಿಗೆದಾರರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

'ಹೇಗಾದರೂ ಸರಿ ನಮಗೆ ಈಗ ತುರ್ತಾಗಿ ಕಾರ್ಮಿಕರು ಬೇಕಾಗಿದ್ದಾರೆ. ಈ ಅಗತ್ಯವನ್ನು ಈಡೇರಿಸಲು ಸರ್ಕಾರ ಭಾರತವು ಸೇರಿದಂತೆ ವಿವಿಧೆಡೆಯಿಂದ ಕಾರ್ಮಿಕರನ್ನು ಕರೆತರಬೇಕು' ಎಂದು ಇಸ್ರೇಲಿ ಗುತ್ತಿಗೆದಾರರ ಸಂಘವು ತಿಳಿಸಿದೆ.

ನಿರ್ಮಾಣ ಚಟುವಟಿಕೆಗಳಿಗಾಗಿ ಈಗ ಕೊರತೆ ಇರುವ ಕಾರ್ಮಿಕರು ಯಾವ ಸ್ಥಳದಿಂದ ಬರಬೇಕು ಎಂಬುದನ್ನು ಸರ್ಕಾರ ನಿರ್ಧರಿಸಬೇಕು. ಭಾರತದಿಂದ ಹೆಚ್ಚಿನ ಕಾರ್ಮಿಕರನ್ನು ಕರೆತಂದು ಈ ಕೊರತೆ ನೀಗಿಸಬಹುದು ಎಂದೂ ಹೇಳಿದೆ.

ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಇಸ್ರೇಲ್‌ನ ಆರ್ಥಿಕತೆಯ ಸಚಿವ ನಿರ್ ಬರ್ಕತ್, ಅವರು ನಿರ್ಮಾಣವಲಯ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಭಾರತದಿಂದ ಕಾರ್ಮಿಕರನ್ನು ನೇಮಿಸಿಕೊಳ್ಳುವ ಕುರಿತು ಚರ್ಚಿಸಿದ್ದರು.

ಮೂಲಗಳ ಪ್ರಕಾರ, ಸುಮಾರು 1.6 ಲಕ್ಷ ಕಾರ್ಮಿಕರನ್ನು ಕರೆತರುವ ಕುರಿತು ಆಗ ಚರ್ಚೆಯಾಗಿತ್ತು. ಇಸ್ರೇಲ್ ಕಾರ್ಮಿಕರ ಕೊರತೆ ಇರುವ ಕ್ಷೇತ್ರಗಳಿಗೆ ನಿರ್ಮಾಣ ಉದ್ಯಮವು ವಿದೇಶಿ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಿದೆ.

ಈ ವಲಯದ ದೊಡ್ಡ ಸಂಖ್ಯೆಯ ಅಂದರೆ ಸುಮಾರು 80 ಸಾವಿರದಷ್ಟು ಕಾರ್ಮಿಕರು ಪ್ಯಾಲೆಸ್ಟೀನ್ ಕಡೆಯಿಂದ ಬರುತ್ತಾರೆ. ಉಳಿದಂತೆ ಚೀನಾದಿಂದ ಸುಮಾರು 7 ಸಾವಿರ, ಪೂರ್ವ ಯುರೋಪ್‌ನಿಂದ ಸುಮಾರು 6 ಸಾವಿರ ಜನ ಬರುತ್ತಾರೆ.

ಕಾರ್ಮಿಕರ ಕೊರತೆಗೆ ಗಾಜಾದಲ್ಲಿ ಹಮಾಸ್ ಉಗ್ರವಾದಿಗಳ ಜೊತೆಗೆ ನಡೆಯುತ್ತಿರುವ ಯುದ್ಧ ಸ್ಥಿತಿಯೂ ಕಾರಣವಾಗಿದೆ.

ಇಸ್ರೇಲ್‌ನಲ್ಲಿ ಸುಮಾರು 20 ಸಾವಿರ ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಆರೈಕೆ, ಸಹಾಯಕರಾಗಿದ್ದಾರೆ. ಯುದ್ಧ ಆರಂಭವಾದ ಬಳಿಕವೂ ಹೆಚ್ಚಿನವರು ಇಸ್ರೇಲ್‌ನಲ್ಲಿಯೇ ಉಳಿಯಲು ನಿರ್ಧರಿಸಿದ್ದರು. 'ಭದ್ರತೆ' ಇದೆ ಹಾಗೂ 'ಆಕರ್ಷಕ ವೇತನ' ಇದೆ ಎಂಬುದು ಹೀಗೆ ಉಳಿಯಲು ಕಾರಣವಾಗಿದೆ.

ಕಾಮಾರೆಡ್ಡಿ ಕ್ಷೇತ್ರದಲ್ಲಿ ಮುಖ್ಯಮಂತ್ರಿ ವಿರುದ್ಧ ರೇವಂತ್ ರೆಡ್ಡಿ ಕಣಕ್ಕಿಳಿಸಿದ ಕಾಂಗ್ರೆಸ್

ಕೆಸಿಆರ್ ಸೋಲಿಸಲು 'ಕೈ' ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರನ್ನು ಸೋಲಿಸಲು ಕಾರ್ಯತಂತ್ರ ರೂಪಿಸಿರುವ ಕಾಂಗ್ರೆಸ್, ಪಕ್ಷದ ರಾಜ್ಯ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರನ್ನು ಬಿಆರ್‌ಎಸ್ ಪಕ್ಷದ ಅಧ್ಯಕ್ಷರ ವಿರುದ್ಧ ಕಣಕ್ಕಿಳಿಸಿದೆ.

ಬಿಆರ್‌ಎಸ್ ಪಕ್ಷದ ಅಧ್ಯಕ್ಷರೂ ಆಗಿರುವ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಈ ಬಾರಿ ಕಾಮಾರೆಡ್ಡಿ ಹಾಗೂ ಗಜ್ವೆಲ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಪರಿಸ್ಥಿತಿ ಪೂರಕವಾಗಿಲ್ಲದ ಕಾರಣ ಎರಡೂ ಸ್ಥಾನಗಳನ್ನು ಅವರು ಕಳೆದುಕೊಳ್ಳಬಹುದು ಎಂಬುದು ಕಾಂಗ್ರೆಸ್ ಕಾರ್ಯತಂತ್ರ ನಿಪುಣರ ಲೆಕ್ಕಾಚಾರವಾಗಿದೆ.

2014 ಹಾಗೂ 2018ರಲ್ಲಿ ಗಜ್ವೆಲ್‌ನಲ್ಲಿ ಗೆಲುವು ಕಂಡ ಕೆಸಿಆರ್, ಈ ಬಾರಿ ಕಠಿಣ ಸವಾಲು ಎದುರಿಸುತ್ತಿದ್ದಾರೆ. ಕೆಸಿಆರ್ ಅವರ ಒಂದುಕಾಲದ ಬಂಟ, ಈಗ ಬಿಜೆಪಿಯಲ್ಲಿರುವ ಈಟೆಲ ರಾಜೇಂದ್ರ ಅವರು ಗಜ್ವೆಲ್‌ನಲ್ಲಿ ಕಣಕ್ಕಿಳಿದಿರುವುದು, ಚುನಾವಣಾ ಲೆಕ್ಕಾಚಾರಗಳನ್ನು ಬದಲಾಯಿಸಿದೆ.

ಕಾಮಾರೆಡ್ಡಿ ಹಾಗೂ ಕೊಡಂಗಲ್ ಎರಡು ಕ್ಷೇತ್ರದಿಂದಲೂ ಸ್ಪರ್ಧಿಸುವ ಮೂಲಕ, ರೆಡ್ಡಿ ರಾಜ್ಯ ರಾಜಕೀಯದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ತೆಲಂಗಾಣದಲ್ಲಿ ಕಾಂಗ್ರೆಸ್ ಮೊದಲ ಬಾರಿಗೆ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಹುದ್ದೆಯ ಮೇಲೆ ಹಕ್ಕು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ.

ಬಿಜೆಪಿ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ.ವಿವೇಕ್ ವೆಂಕಟಸ್ವಾಮಿ ಅವರು ಕಾಂಗ್ರೆಸ್‌ಗೆ ಮರಳಿದ್ದಾರೆ. ಮುನುಗೋಡ್ ಕ್ಷೇತ್ರದ ಮಾಜಿ ಶಾಸಕ ಪಕ್ಷಕ್ಕೆ ಮರಳಿರುವುದು ತೆಲಂಗಾಣದಲ್ಲಿ ಸಾಕಷ್ಟು ಬದಲಾವಣೆ ತೋರಿಸುತ್ತದೆ ಎಂದು ಕಾಂಗ್ರೆಸ್ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ. ಇದರ ನಡುವೆ ವೈಎಸ್‌ಆರ್‌ಟಿಪಿ ಮುಖ್ಯಸ್ಥೆ ವೈ.ಎಸ್.ಶರ್ಮಿಳಾ ಸಹ ಕಾಂಗ್ರೆಸ್‌ಗೆ ಬೆಂಬಲ ನೀಡಿರುವುದು ಪಕ್ಷಕ್ಕೆ ಮತ್ತಷ್ಟು ಬಲ ಬಂದಂತಾಗಿದೆ.

'ಇಬ್ಬರು ಮಾಜಿ ಸಂಸದರು, 22 ಮಾಜಿ ಶಾಸಕರು, 8 ಮಾಜಿ ವಿಧಾನ ಪರಿಷತ್ ಸದಸ್ಯರು, 58 ಕಾರ್ಪೊರೇಟರ್‌ಗಳು, 82 ಜಿಲ್ಲಾ ಪಂಚಾಯಿತಿ ಸದಸ್ಯರ ಪೈಕಿ ಹಲವರು ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಸೇರಿದ್ದಾರೆ. ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂಬುದು ಬಹಳ ಸ್ಪಷ್ಟವಾಗಿದೆ. ರಾಹುಲ್ ಗಾಂಧಿ ಪ್ರಕಾರ ಕಾಂಗ್ರೆಸ್ 75ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ' ಎಂದು ಹಿರಿಯ ಕಾಂಗ್ರೆಸ್ ಕಾರ್ಯಕರ್ತ ಶ್ರೀವತ್ಸ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್‌ನಿಂದ 'ಅಲ್ಪಸಂಖ್ಯಾತರಿಗಾಗಿ ಘೋಷಣೆ'ಗಳು

ಹೈದರಾಬಾದ್: ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ಆ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಕೆಲವು ಘೋಷಣೆಗಳನ್ನು ಗುರುವಾರ ಮಾಡಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇಮಾಮರು, ಮುಅಝ್ಜಿನರು, ಗ್ರಂಥಿಗಳು (ಗುರು ಗ್ರಂಥ ಸಾಹಿಬ್‌ನ ಮುಖ್ಯಸ್ಥರು) ಮತ್ತು ಚರ್ಚ್‌ಗಳ ಮುಖ್ಯಸ್ಥರಿಗೆ ₹10,000ದಿಂದ ₹12,000 ವರೆಗೆ ಮಾಸಿಕ ಗೌರವಧನ ನೀಡಲಾಗುವುದು. ಅಲ್ಪಸಂಖ್ಯಾತರ ಕಲ್ಯಾಣದ ಅನುದಾನವನ್ನು ₹ 4,000 ಕೋಟಿಗೆ ಏರಿಸಲಾಗುವುದು ಎಂಬ ಭರವಸೆಗಳು ಈ ಘೋಷಣೆಯಲ್ಲಿವೆ.

ಮಾಜಿ ಕೇಂದ್ರ ಸಚಿವ ಸಲ್ಮಾನ್ ಖುರ್ಷಿದ್ ಮತ್ತು ತೆಲಂಗಾಣ ಕಾಂಗ್ರೆಸ್ ಮುಖ್ಯಸ್ಥ ಎ. ರೇವಂತ್ ರೆಡ್ಡಿ 'ಅಲ್ಪಸಂಖ್ಯಾತರಿಗಾಗಿ ಘೋಷಣೆ' ಬಿಡುಗಡೆ ಮಾಡಿದರು.

ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಹೊಸ ದಂಪತಿಗೆ ₹ 1.60 ಲಕ್ಷ ನೆರವು ನೀಡಲಾಗುವುದು. ಎಂ.ಫಿಲ್ ಮತ್ತು ಪಿಎಚ್‌ಡಿ ವ್ಯಾಸಂಗ ಸಂಪೂರ್ಣಗೊಳಿಸಿರುವ ಯುವಜನರಿಗೆ ₹5 ಲಕ್ಷ ಆರ್ಥಿಕ ನೆರವನ್ನು ಅಬ್ದುಲ್ ಕಲಾಂ ತೌಫಾ–ಇ–ತಲೀಂ ಯೋಜನೆ ಅಡಿ ನೀಡಲಾಗುವುದು. ಜೊತೆಗೆ, ಸ್ನಾತಕೋತ್ತರ ಪದವಿ ಪಡೆದವರಿಗೆ ₹ 1 ಲಕ್ಷ, ಪದವಿ ಪಡೆದವರಿಗೆ ₹ 25,000, ಇಂಟರ್‌ಮೀಡಿಯೆಟ್ ವ್ಯಾಸಂಗ ಮಾಡಿದವರಿಗೆ ₹ 15,000 ಮತ್ತು 10ನೇ ತರಗತಿ ವ್ಯಾಸಂಗ ಮಾಡಿದವರಿಗೆ 10,000 ನೀಡುವುದಾಗಿ ಹೇಳಿದೆ.

ಒಟ್ಟು ಜನಸಂಖ್ಯೆಯಲ್ಲಿ ಶೇ 12.7ರಷ್ಟು ಮುಸ್ಲಿಮರಿದ್ದಾರೆ. ಒಟ್ಟು 119 ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ 40 ಕ್ಷೇತ್ರಗಳಲ್ಲಿ ಮುಸ್ಲಿಮರ ಮತಗಳು ನಿರ್ಣಾಯಕ ವಾಗಲಿವೆ.

ಪ್ರತಿಪಕ್ಷಗಳ ವಿರೋಧ

ನವದೆಹಲಿ: ನೀತಿ ಸಮಿತಿಯಲ್ಲಿ ಇದ್ದ ಐದು ಮಂದಿ ವಿರೋಧ ಪಕ್ಷದ ಸದಸ್ಯರು ಸಮಿತಿಯ ಶಿಫಾರಸಿಗೆ ವಿರೋಧ ದಾಖಲಿಸಿದ್ದಾರೆ. 'ಇಲ್ಲಿ ನೈತಿಕತೆಗೆ ಸಂಬಂಧಿಸಿದ್ದು ಏನೂ ಇಲ್ಲ. ಇಲ್ಲಿ ಇರುವುದೆಲ್ಲ ರಾಜಕೀಯ ದ್ವೇಷ ಸಾಧನೆ' ಎಂದು ಅವರು ಹೇಳಿದ್ದಾರೆ.

ವಿಚಾರಣಾ ಪ್ರಕ್ರಿಯೆಯು ಒಂದು ಪ್ರಹಸನದಂತೆ ಇತ್ತು. ದೂರನ್ನು ಸಂಸದೆಯೊಬ್ಬರ ಮಾನಹಾನಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಸಮಿತಿಯ ವರದಿಯು ರಾಷ್ಟ್ರದ ಭದ್ರತೆಯ ವಿಷಯವನ್ನು ಪ್ರಸ್ತಾಪಿಸಿರುವುದು ವಿಚಿತ್ರವಾಗಿದೆ. ಪೋರ್ಟಲ್ ಬಹಳ ಗೋಪ್ಯ ಎಂದಾದರೆ ಅದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಿರಬೇಕಿತ್ತು. ಆ ಪೋರ್ಟಲ್‌ಅನ್ನು ವಿದೇಶಿ ಐ.ಪಿ. ವಿಳಾಸಗಳಿಂದ ಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸಿರಬೇಕಿತ್ತು ಎಂದು ಕೂಡ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

ತೆಲಂಗಾಣ ಮುಖ್ಯಮಂತ್ರಿ, ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ ಅವರು ಗಜ್ವೆಲ್ ವಿಧಾನಸಭೆ ಕ್ಷೇತ್ರದಲ್ಲಿ ಗುರುವಾರ ಚುನಾವಣಾ ರ್‍ಯಾಲಿ ನಡೆಸಿದರು –ಪಿಟಿಐ ಚಿತ್ರ

ಮೀಸಲಾತಿ ಮಸೂದೆ: ಬಿಹಾರ ವಿಧಾನಸಭೆ ಅನುಮೋದನೆ

ಪಟ್ನಾ (ಪಿಟಿಐ): ಸಮಾಜದ ದುರ್ಬಲ ವರ್ಗಗಳಿಗೆ ಸರ್ಕಾರಿ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಮಸೂದೆಗೆ ಬಿಹಾರ ವಿಧಾನಸಭೆಯು ಗುರುವಾರ ಒಪ್ಪಿಗೆ ನೀಡಿದೆ.

ಸದನವನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ನಿತೀಶ್ ಕುಮಾರ್, 'ಈಗ ಮೀಸಲಾತಿಯು ಒಟ್ಟು ಶೇಕಡ 75ರಷ್ಟು ಆಗುತ್ತದೆ. ಇದರಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ನೀಡುವ ಶೇ 10ರಷ್ಟು ಮೀಸಲಾತಿಯೂ ಸೇರಿದೆ' ಎಂದು ವಿವರಿಸಿದರು.

ವೊಡಾಫೋನ್ ಐಡಿಯಾಗೆ ₹ 1,128 ಕೋಟಿ ಕೊಡಿ: ಹೈಕೋರ್ಟ್

ಮುಂಬೈ (ಪಿಟಿಐ): 2016–17ನೇ ಅಂದಾಜು ವರ್ಷಕ್ಕೆ ಸಂಬಂಧಿಸಿ ಪಾವತಿ ಮಾಡಲಾದ ₹ 1,128 ಕೋಟಿ ತೆರಿಗೆ ಮೊತ್ತವನ್ನು ವೊಡಾಫೋನ್ ಐಡಿಯಾ ಕಂಪನಿಗೆ ಮರುಪಾವತಿಸುವಂತೆ ಆದಾಯ ತೆರಿಗೆ ಇಲಾಖೆಗೆ ಬಾಂಬೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ತೆರಿಗೆ ಪಾವತಿ ಕುರಿತಂತೆ ಇಲಾಖೆಯು ಕಳೆದ ಆಗಸ್ಟ್‌ನಲ್ಲಿ ಆದೇಶ ಹೊರಡಿಸಿದೆ. ಇದು ಅವಧಿ ಮೀರಿದ ಆದೇಶವಾಗಿದ್ದು, ಸಮರ್ಥನೀಯವೂ ಅಲ್ಲ' ಎಂದು ಹೈಕೋರ್ಟ್ ಬುಧವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ನ್ಯಾಯಮೂರ್ತಿಗಳಾದ ಕೆ.ಆರ್. ಶ್ರೀರಾಮ್ ಹಾಗೂ ನೀಲಾ ಗೋಖಲೆ ಅವರಿದ್ದ ವಿಭಾಗೀಯ ಪೀಠವು ಅರ್ಜಿ ವಿಚಾರಣೆ ನಡೆಸಿದೆ.

'ಈ ವಿಚಾರದಲ್ಲಿ ಸಂಬಂಧಿಸಿದ ಅಧಿಕಾರಿಯು ಅಸಡ್ಡೆಯಿಂದ ವರ್ತಿಸಿದ್ದಾರೆ. ತೆರಿಗೆ ನಿರ್ಧರಣೆಗೆ ಸಂಬಂಧಿಸಿದ ಆದೇಶವನ್ನು ನಿಗದಿತ 30 ದಿನಗಳ ಒಳಗಾಗಿ ನೀಡಿಲ್ಲ. ಇದರಿಂದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗಲು ಕಾರಣರಾಗಿದ್ದಾರೆ' ಎಂದು ಹೇಳಿದೆ.

ಮಹುವಾ ಉಚ್ಚಾಟನೆಗೆ ಶಿಫಾರಸು

ಒಂದನೇ ಪುಟದಿಂದ

ವರದಿಯ ಅಂಗೀಕಾರಕ್ಕೆ ನೀತಿ ಸಮಿತಿಯ ಆರು ಜನ ಸದಸ್ಯರು ಬೆಂಬಲ ಸೂಚಿಸಿದರು, ನಾಲ್ಕು ಮಂದಿ ವಿರೋಧಿಸಿದರು ಎಂದು ಸೋನಕರ್ ಅವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಸಮಿತಿಯ ಶಿಫಾರಸು 'ಪೂರ್ವಗ್ರಹ ಪೀಡಿತವಾಗಿದೆ' ಮತ್ತು 'ತಪ್ಪಾಗಿದೆ' ಎಂದು ವಿರೋಧ ಪಕ್ಷಗಳ ಸದಸ್ಯರು ಆರೋಪಿಸಿದ್ದಾರೆ. ಕಾಂಗ್ರೆಸ್ ಸದಸ್ಯೆ ಪ್ರಣೀತ್ ಕೌರ್ ಅವರು ವರದಿಯ ಪರವಾಗಿ ಮತ ಚಲಾಯಿಸಿದರು ಎಂದು ಮೂಲಗಳು ಹೇಳಿವೆ.

ನೀತಿ ಸಮಿತಿಯು ಈ ಮೊದಲು ಮಹುವಾ ಅವರಿಂದ ಪ್ರತಿಕ್ರಿಯೆ ಪಡೆದಿತ್ತು. ಮಹುವಾ ಅವರ ವಿರುದ್ಧ ದೂರು ಸಲ್ಲಿಸಿದ್ದ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮತ್ತು ವಕೀಲ ಅನಂತ್ ದೇಹದ್ರಾಯ್ ಅವರೂ ಸಮಿತಿಯ ಮುಂದೆ ಹಾಜರಾಗಿದ್ದರು.

ದೇಹದ್ರಾಯ್ ಅವರು ನೀಡಿದ ಮಾಹಿತಿ ಆಧರಿಸಿ, ನಿಶಿಕಾಂತ್ ದುಬೆ ಅವರು ಮಹುವಾ ವಿರುದ್ಧ ಆರೋಪ ಹೊರಿಸಿದ್ದರು. ಮಹುವಾ ಅವರು ದರ್ಶನ್ ಹೀರಾನಂದಾನಿ ಎಂಬ ವಾಣಿಜ್ಯೋದ್ಯಮಿಯ ನಿರ್ದೇಶನಕ್ಕೆ ಅನುಸಾರವಾಗಿ, ಅವರಿಂದ ಉಡುಗೊರೆಗಳನ್ನು ಪಡೆದು ಅದಾನಿ ಸಮೂಹ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ದುಬೆ ಆರೋಪಿಸಿದ್ದರು.

ಹಣ ಪಡೆದ ಆರೋಪಗಳನ್ನು ಮಹುವಾ ಅವರು ಅಲ್ಲಗಳೆದಿದ್ದಾರೆ.

ವರದಿಯಲ್ಲಿ ಏನಿದೆ?: ಮಹುವಾ ಅವರು ತಮ್ಮ ಲೋಕಸಭಾ ಪೋರ್ಟಲ್‌ನ ಲಾಗಿನ್ ವಿವರಗಳನ್ನು ಹೀರಾನಂದಾನಿ ಜೊತೆ ಹಂಚಿಕೊಂಡಿದ್ದರು. ಹೀರಾನಂದಾನಿ ಅವರು ಯುಎಇಯಲ್ಲಿ ಇರುತ್ತಾರೆ. ಮಹುವಾ ಅವರ ಪೋರ್ಟಲ್‌ಅನ್ನು 2019ರಿಂದ 2023ರ ನಡುವಿನ ಅವಧಿಯಲ್ಲಿ ಯುಎಇಯಲ್ಲಿ 47 ಬಾರಿ ಬಳಕೆ ಮಾಡಲಾಗಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಗೊತ್ತಾಗಿದೆ.

ಲಾಗಿನ್ ವಿವರಗಳನ್ನು ಬೇರೆಯವರಿಗೆ ಕೊಡುವುದು ವ್ಯವಸ್ಥೆಯು ಗಂಭೀರವಾದ ಸೈಬರ್ ದಾಳಿಗೆ ತುತ್ತಾಗುವ ಸಾಧ್ಯತೆಯನ್ನು ಸೃಷ್ಟಿಸುತ್ತದೆ. ಇದು ಇಡೀ ಪೋರ್ಟಲ್ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿ, ದೇಶದ ಸಂಸತ್ತಿನ ಚಟುವಟಿಕೆಗಳಿಗೆ ಗಂಭೀರ ಸ್ವರೂಪದ ಅಡ್ಡಿ ಉಂಟುಮಾಡಬಹುದು ಎಂದು ನೀತಿ ಸಮಿತಿಯ ವರದಿಯಲ್ಲಿ ಹೇಳಲಾಗಿದೆ ಎಂದು ತಿಳಿದುಬಂದಿದೆ.

ಸೈಬರ್ ದಾಳಿಯನ್ನು ನಡೆಸುವವರು, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಂಕಥನಗಳನ್ನು ಸೃಷ್ಟಿಸಿ ಸಂಸತ್ತಿನ ಪೋರ್ಟಲ್‌ನಲ್ಲಿ ಅವುಗಳನ್ನು ತೂರಿಸಿ, ದೇಶದ ಭದ್ರತೆಯ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲರು ಎಂದು ಹೇಳಲಾಗಿದೆ.

ಜಮ್ಮು ಮತ್ತು ಕಾಶ್ಮೀರ ಮರುವಿಂಗಡಣೆ ಮಸೂದೆ 2019ಅನ್ನು ಪೋರ್ಟಲ್‌ನಲ್ಲಿ ಲಭ್ಯವಾಗಿಸಲಾಗಿತ್ತು. ಆದರೆ ಇದು ಸಾರ್ವಜನಿಕರಿಗೆ ಲಭ್ಯವಿರಲಿಲ್ಲ. ಇಂತಹ ಸೂಕ್ಷ್ಮ ಮಸೂದೆಗಳ ವಿವರಗಳು ಸೋರಿಕೆಯಾದಲ್ಲಿ ದೇಶದ ಭದ್ರತೆಗೆ ಅಪಾಯ ಒಡ್ಡಬಲ್ಲ ಶಕ್ತಿಗಳು ಅದನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ವಿವರಿಸಿವೆ.

ಮುಂದಿನ ಪ್ರಕ್ರಿಯೆ ಹೀಗಿರುತ್ತದೆ...

2005ರಲ್ಲಿ 11 ಮಂದಿ ಸಂಸದರನ್ನು ಸಂಸತ್ತಿನಿಂದ ಉಚ್ಚಾಟಿಸಲಾಗಿತ್ತು. ಅದು ಕೂಡ ಪ್ರಶ್ನೆ ಕೇಳಲು ಹಣ ಪಡೆದ ಆರೋಪಕ್ಕೇ ಸಂಬಂಧಿಸಿದ್ದಾಗಿತ್ತು. ಆದರೆ ಆಗ ರಾಜ್ಯಸಭೆಯ ನೀತಿ ಸಮಿತಿ ಹಾಗೂ ಲೋಕಸಭೆಯ ವಿಚಾರಣಾ ಸಮಿತಿಯ ಶಿಫಾರಸು ಆಧರಿಸಿ ಈ ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಲೋಕಸಭೆ ನೀತಿ ಸಮಿತಿಯ ವರದಿಯನ್ನು ಸ್ಪೀಕರ್ ಓಂ ಬಿರ್ಲಾ ಅವರಿಗೆ ಕಳುಹಿಸಲಾಗುತ್ತದೆ. ವರದಿಯನ್ನು ಪ್ರಕಟಿಸುವಂತೆ ಸ್ಪೀಕರ್ ಆದೇಶಿಸಬಹುದು ಎಂದು ಪಿ.ಡಿ.ಟಿ. ಆಚಾರಿ ವಿವರಿಸಿದರು.

ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಸಮಿತಿಯ ಅಧ್ಯಕ್ಷ ವರದಿಯನ್ನು ಮಂಡಿಸಲಿದ್ದಾರೆ. ಅದಾದ ನಂತರದಲ್ಲಿ, ವರದಿಯ ಬಗ್ಗೆ ಚರ್ಚೆ ನಡೆಯಲಿದೆ. ನಂತರ, ಸದಸ್ಯರನ್ನು ಉಚ್ಚಾಟಿಸುವಂತೆ ಸರ್ಕಾರ ಮಂಡಿಸುವ ನಿಲುವಳಿ ಸೂಚನೆಯ ಮೇಲೆ ಮತದಾನ ನಡೆಯುತ್ತದೆ ಎಂದು ತಿಳಿಸಿದರು.

ಮಹುವಾ ಅವರನ್ನು ಸದನದಿಂದ ಉಚ್ಚಾಟಿಸುವ ತೀರ್ಮಾನ ಅನುಷ್ಠಾನಕ್ಕೆ ಬರಬೇಕು ಎಂದಾದರೆ ಸದನವು ಸಮಿತಿಯ ವರದಿಯನ್ನು ಅಂಗೀಕರಿಸಬೇಕಾಗುತ್ತದೆ ಎಂದು ಆಚಾರಿ ಹೇಳಿದರು.

'ಕಾಂಗರೂ ನ್ಯಾಯಾಲಯದ ತೀರ್ಮಾನ'

ಕೋಲ್ಕತ್ತ (ಪಿಟಿಐ): ನೀತಿ ಸಮಿತಿಯ ಶಿಫಾರಸಿನ ಬಗ್ಗೆ ಕೆಂಡ ಕಾರಿರುವ ಮಹುವಾ ಮೊಯಿತ್ರಾ, 'ಇದು ಕಾಂಗರೂ ನ್ಯಾಯಾಲಯದಲ್ಲಿ ಮೊದಲೇ ತೀರ್ಮಾನವಾಗಿದ್ದ ಸಂಗತಿ' ಎಂದು ಹೇಳಿದ್ದಾರೆ. ಈ ಶಿಫಾರಸು ದೇಶದಲ್ಲಿ 'ಸಂಸದೀಯ ಪ್ರಜಾತಂತ್ರದ ಅವಸಾನವನ್ನು' ಹೇಳುತ್ತಿದೆ ಎಂದಿದ್ದಾರೆ.

'ಅವರು ಹಾಲಿ ಲೋಕಸಭೆಯಿಂದ ನನ್ನನ್ನು ಉಚ್ಚಾಟಿಸಿದರೂ, ನಾನು ಮುಂದಿನ ಲೋಕಸಭೆಗೆ ಇನ್ನಷ್ಟು ಹೆಚ್ಚಿನ ಮತಗಳ ಅಂತರದಿಂದ ಗೆದ್ದು ಬರುತ್ತೇನೆ' ಎಂದು ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಶಿಫಾರಸುಗಳು ಇನ್ನೂ ಅಂತಿಮಗೊಳ್ಳಬೇಕಿದೆ ಎಂದು ಮಹುವಾ ಹೇಳಿದ್ದಾರೆ. 'ಇದು ಶಿಫಾರಸು ಮಾತ್ರ. ಇನ್ನೂ ಏನೂ ಆಗಿಲ್ಲ. ಅವರು ಇದನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಲಿ. ಇದರಿಂದ ನನಗೆ ಏನೂ ಆಗುವುದಿಲ್ಲ. ಇದರಿಂದ ನನ್ನ ಬಾಯಿ ಮುಚ್ಚಿಸಲು ಆಗದು' ಎಂದು ಮಹುವಾ ಹೇಳಿದ್ದಾರೆ.

ತಮ್ಮ ಮುಂದಿನ ನಡೆ ಏನಿರುತ್ತದೆ ಎಂಬ ಪ್ರಶ್ನೆಗೆ ಅವರು, 'ಮೊದಲು ಅವರು ನನ್ನನ್ನು ಉಚ್ಚಾಟಿಸಲಿ' ಎಂದು ಉತ್ತರಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,443
ಇಂದಿನ ಅಂತ್ಯ	19,395
	48
ದಿನದ ಕನಿಷ್ಠ	19,378

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹920 (915)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹820 (825)

ವಿನಿಮಯ ದರ

$ ಡಾಲರ್	83.27
£ ಪೌಂಡ್	102.30
€ ಯುರೊ	89.18
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹9500-11500
ತಿಪಟೂರು	₹7500-9500
ತುರುವೇಕೆರೆ	₹8100-8100

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ.ಜಿ)	₹222-441
ದ್ವಿತಳಿ (ಪ್ರ.ಕೆ.ಜಿ)	₹233-603

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹133

ಯಲಹಂಕ ಬಳಿ 6.5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಕ್ಯಾಂಪಸ್

ಬೆಂಗಳೂರಲ್ಲಿ ಫಿಲಿಪ್ಸ್ ನಾವೀನ್ಯ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಕ್ಷೇತ್ರಕ್ಕೆ ಅಗತ್ಯವಾದ ತಂತ್ರಜ್ಞಾನ ನೀಡುವಲ್ಲಿ ಮುಂಚೂಣಿಯಲ್ಲಿರುವ ಫಿಲಿಪ್ಸ್ ಕಂಪನಿಯು, ಬೆಂಗಳೂರಿನ ಯಲಹಂಕ ಬಳಿ ತನ್ನ ಹೊಸ ನಾವೀನ್ಯ ಕೇಂದ್ರ (ಇನೊವೇಷನ್ ಕ್ಯಾಂಪಸ್) ಆರಂಭಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಈ ಕೇಂದ್ರವನ್ನು ಉದ್ಘಾಟಿಸಿದರು.

ಎಂಬಸಿ ಬಿಸಿನೆಸ್ ಹಬ್‌ನಲ್ಲಿ 6.5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಈ ಕ್ಯಾಂಪಸ್ ನಿರ್ಮಾಣ ಮಾಡಲಾಗಿದೆ. ಏಕಕಾಲಕ್ಕೆ 5 ಸಾವಿರ ವೃತ್ತಿಪರರು ಕೆಲಸ ಮಾಡಬಹುದಾದ ಸಾಮರ್ಥ್ಯವನ್ನು ಇದು ಹೊಂದಿದೆ. ರೋಗಿಗಳ ಆರೈಕೆ, ಉತ್ತಮ ಆರೋಗ್ಯ ಮತ್ತು ಆರೈಕೆಯ ವೆಚ್ಚ ಕಡಿಮೆ ಮಾಡುವಂತಹ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಇದು ನೆರವಾಗಲಿದೆ ಎಂದು ಕಂಪನಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ಸಿಇಒ ರಾಯ್ ಜಾಕೋಬ್ಸ್, 'ಭಾರತದಲ್ಲಿ ನಮ್ಮ ಸಾಮರ್ಥ್ಯಗಳನ್ನು ಮತ್ತಷ್ಟು ವಿಸ್ತರಿಸಲು ಇದು ಅನುಕೂಲ ಮಾಡಿಕೊಡಲಿದೆ. ಆರೋಗ್ಯ ರಕ್ಷಣೆಯ ಪರಿಹಾರಗಳನ್ನು ನೀಡುವುದರಲ್ಲಿ ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗುವುದು' ಎಂದು ಹೇಳಿದರು.

'ಕಂಪನಿಯ ಜಾಗತಿಕ ಬೆಳವಣಿಗೆಯ ಹಾದಿಯಲ್ಲಿ ಬೆಂಗಳೂರಿನ ಈ ಕೇಂದ್ರವು ಹೆಗ್ಗುರುತು ಆಗುವ ಜೊತೆಗೆ ಭಾರತದಲ್ಲಿ ಆರೋಗ್ಯಸೇವೆಯ ವಲಯದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವಲ್ಲಿಯೂ ಪ್ರಮುಖ ಪಾತ್ರ ವಹಿಸಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

> **ಈ ಕ್ಯಾಂಪಸ್, ಆರೋಗ್ಯ ಕ್ಷೇತ್ರದಲ್ಲಿ ಡಿಜಿಟಲ್ ಶಕ್ತಿಕೇಂದ್ರವಾಗಿದೆ. ಆರೋಗ್ಯ ಸೇವಾ ಪರಿಹಾರಗಳನ್ನು ಒದಗಿಸುವ ಮೂಲಕ ಜಾಗತಿಕವಾಗಿ ಜನರ ಬದುಕನ್ನು ಉತ್ತಮಪಡಿಸುವ ಗುರಿ ಹೊಂದಿದೆ**
> **ಸಿದ್ದರಾಮಯ್ಯ, ಮುಖ್ಯಮಂತ್ರಿ**

ಮಳವಳ್ಳಿಯಲ್ಲಿ ತಯಾರಿಕಾ ಘಟಕ ಸ್ಥಾಪನೆಗೆ ₹25 ಕೋಟಿ : ಇಂದಿರಾ ಫುಡ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಗಿ ಉತ್ಪನ್ನಗಳಿಂದ ಜನಪ್ರಿಯತೆ ಗಳಿಸಿಕೊಂಡಿರುವ ದೇಶಿ ಕಂಪನಿ ಇಂದಿರಾ ಫುಡ್ಸ್, ರಾಜ್ಯದಲ್ಲಿ ತನ್ನ ವಹಿವಾಟು ವಿಸ್ತರಣೆಗೆ ಮುಂದಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ 1.2 ಲಕ್ಷ ಚದರ ಅಡಿಯಲ್ಲಿ ತಯಾರಿಕಾ ಘಟಕ ಸ್ಥಾಪನೆಗೆ ₹ 25 ಕೋಟಿ ಹೂಡಿಕೆ ಮಾಡುವುದಾಗಿ ಗುರುವಾರ ತಿಳಿಸಿದೆ.

ಬೆಂಗಳೂರಿನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ಅಧ್ಯಕ್ಷೆ ಇಂದಿರಾ ಅವರು, 'ಆರೋಗ್ಯಕರ ಮತ್ತು ರುಚಿಕರವಾದ ಖಾದ್ಯಗಳೊಂದಿಗೆ, ಹೊಸ ಪೀಳಿಗೆಗೆ ಹೊಂದಿಕೊಳ್ಳುವ ಉತ್ಪನ್ನಗಳನ್ನು ನೀಡುವ ಖಾತರಿ ನೀಡುತ್ತೇವೆ' ಎಂದು ಹೇಳಿದರು.

ಇಂದಿರಾ ಫುಡ್ಸ್‌ನಿಂದ ರಸಂ ಪೇಸ್ಟ್ ಬಿಡುಗಡೆ ಮಾಡಿದ್ದೇವೆ. ಸದ ಮಾರುಕಟ್ಟೆಯಲ್ಲಿ ರಸಂ ಪುಡಿ ಮಾತ್ರ ಲಭ್ಯವಿದೆ. ಈ ಹೊಸ ಉತ್ಪನ್ನವು ನಮ್ಮ ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಲಿದೆ ಎಂದು ಅವರು ಹೇಳಿದರು.

'ಕಳೆದ ಹಣಕಾಸು ವರ್ಷದಲ್ಲಿ ₹45 ಕೋಟಿ ಮೊತ್ತದ ಮಾರಾಟ ನಡೆಸಲಾಗಿದೆ. ಇಂದಿರಾ ಫುಡ್ಸ್ 250 ಜನರಿಗೆ ಉದ್ಯೋಗ ನೀಡಿದೆ. ಮುಂದಿನ 1 ವರ್ಷದಲ್ಲಿ ಇನ್ನೂ 100 ಜನರಿಗೆ ಉದ್ಯೋಗ ನಿಡುವ ಗುರಿಯನ್ನು ಹೊಂದಿದೆ ಎಂದು ಕಂಪನಿಯ ನಿರ್ದೇಶಕ ವಿಜಯ್ ಸಿ. ಮಾಹಿತಿ ನೀಡಿದರು.

ನಟ ನೀನಾಸಂ ಸತೀಶ್ ಅವರು ಕಂಪನಿಯ ಬ್ರ್ಯಾಂಡ್‌ಗೆ ರಾಯಭಾರಿ ಆಗಿ ನೇಮಕ ಆಗಿದ್ದಾರೆ. ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘದ (ಫಿಕ್ಕಿ) ಕರ್ನಾಟಕ ಮಂಡಳಿ ಅಧ್ಯಕ್ಷ ಕೆ. ಉಲ್ಲಾಸ್ ಕಾಮತ್ ಅವರು ಕಂಪನಿಯ ಸಲಹೆಗಾರರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿನ್ನ ₹400, ಬೆಳ್ಳಿ ₹300 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹400 ಇಳಿಕೆಯಾಗಿ ₹60,950ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹300 ಕಡಿಮೆಯಾಗಿ ₹73,300 ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆ ಆಗಿದ್ದರಿಂದ ದೇಶಿಯ ಮಾರುಕಟ್ಟೆಯಲ್ಲೂ ಬೆಲೆ ಇಳಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಧನಲಕ್ಷ್ಮಿ ಬ್ಯಾಂಕ್‌ಗೆ ₹51 ಕೋಟಿ ಲಾಭ

ಬೆಂಗಳೂರು: ಧನಲಕ್ಷ್ಮಿ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ₹51.46 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹10.54 ಕೋಟಿಯಷ್ಟು ನಷ್ಟ ಆಗಿತ್ತು. ವರಮಾನವು ಶೇ 28.11ರಷ್ಟು ಹೆಚ್ಚಾಗಿ ₹668.83 ಕೋಟಿಯಷ್ಟು ಆಗಿದೆ ಎಂದು ಹೇಳಿದೆ.

2026ಕ್ಕೆ ಭಾರತದಲ್ಲಿ ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ: ಇಂಟರ್‌ಗ್ಲೋಬ್

ನವದೆಹಲಿ (ಪಿಟಿಐ): ಭಾರತದಲ್ಲಿ 2026ರ ವೇಳೆಗೆ ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಸೇವೆ ಆರಂಭಿಸುವ ಯೋಜನೆ ಹೊಂದಿರುವುದಾಗಿ ಇಂಟರ್‌ಗ್ಲೋಬ್ ಎಂಟರ್‌ಪ್ರೈಸಸ್ ಗುರುವಾರ ಹೇಳಿದೆ.

ವರ್ಟಿಕಲ್ ಟೇಕಾಫ್ ಆ್ಯಂಡ್ ಲ್ಯಾಂಡಿಂಗ್ (ವಿಟಿಒಎಲ್) ಏರ್‌ಕ್ರಾಫ್ಟ್‌ಗಳನ್ನು ತಯಾರಿಸುವ ಅಮೆರಿಕದ ಆರ್ಚರ್ ಕಂಪನಿಯ ಜೊತೆಗೂಡಿ ಈ ಸೇವೆ ಆರಂಭಿಸಲು ಉದ್ದೇಶಿಸಲಾಗಿದೆ. ಸೇವೆ ಆರಂಭ ಆದ ಬಳಿಕ, ದೆಹಲಿಯ ಕನೌಟ್ ಸ್ಥಳದಿಂದ ಹರಿಯಾಣದ ಗುರುಗ್ರಾಮಕ್ಕೆ 7 ನಿಮಿಷದಲ್ಲಿ ಪ್ರಯಾಣಿಕರನ್ನು ತಲುಪಿಸಲಾಗುವುದು. 27 ಕಿಲೋ ಮೀಟರಿನ ರಸ್ತೆ ಮಾರ್ಗದಲ್ಲಿ ಅಲ್ಲಿಗೆ ತಲುಪಲು 60 ರಿಂದ 90 ನಿಮಿಷಗಳು ಬೇಕಾಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಇಂಟರ್‌ಗ್ಲೋಬ್ ಭಾರತದಲ್ಲಿ ವಿಮಾನಯಾನ, ಆತಿಥ್ಯ ಮತ್ತು ಪ್ರಯಾಣಕ್ಕೆ ಸಂಬಂಧಿಸಿದ ಸೇವೆಗಳನ್ನು ನೀಡುತ್ತಿರುವ ಪ್ರಮುಖ ಕಂಪನಿ ಆಗಿದೆ. ಇಂಡಿಗೊ ವಿಮಾನಯಾನ ಕಂಪನಿಯು ಇದರ ಭಾಗವಾಗಿದೆ

ಇಂಟರ್‌ಗ್ಲೋಬ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಭಾಟಿಯಾ ಮತ್ತು ಆರ್ಚರ್ ಸಿಇಒ ನಿಖಿಲ್ ಗೋಯಲ್ ಅವರು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ. ಆದರೆ, ಇದಕ್ಕೆ ಭಾರತದಲ್ಲಿ ನಿಯಂತ್ರಣ ಸಂಸ್ಥೆಗಳ ಒಪ್ಪಿಗೆಯ ಅಗತ್ಯ ಇದೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹4400-5000
ಮಧ್ಯಮ	₹3500-4500
ಸಣ್ಣ	₹2000-3500

ಧನ್‌ತೇರಸ್: ಚಿನ್ನಾಭರಣ ಮಾರಾಟ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಈ ಬಾರಿಯ ಧನ್‌ತೇರಸ್‌ನಲ್ಲಿ (ಶುಕ್ರವಾರ) ಚಿನ್ನಕ್ಕೆ ಉತ್ತಮ ಬೇಡಿಕೆ ಬರಲಿದ್ದು, ಮಾರಾಟವು ಶೇ 10ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹರಳು ಮತ್ತು ಚಿನ್ನಾಭರಣ ಸಮಿತಿ ಅಧ್ಯಕ್ಷ ಸಯ್ಯಮ್ ಮೆಹ್ತಾ ಹೇಳಿದ್ದಾರೆ.

ಚಿನ್ನಾಭರಣ ಸೇರಿದಂತೆ ಮೌಲ್ಯಯುತವಾದ ವಸ್ತುಗಳ ಖರೀದಿಗೆ ಧನ್‌ತೇರಸ್ ಶುಭ ಎಂದು ಪರಿಗಣಿಸಲಾಗುತ್ತದೆ. ಕಳೆದ ವರ್ಷದ ಧನ್‌ತೇರಸ್‌ಗೆ ಹೋಲಿಸಿದರೆ ಈ ಬಾರಿ ಚಿನ್ನದ ದರವು ಶೇ 22ರಷ್ಟು ಏರಿಕೆ ಕಂಡಿದ್ದು, ದೆಹಲಿಯಲ್ಲಿ 10 ಗ್ರಾಂಗೆ ₹61 ಸಾವಿರಕ್ಕೆ ತಲುಪಿದೆ. 2022ರಲ್ಲಿ 10 ಗ್ರಾಂಗೆ ₹50,139 ಮತ್ತು 2021ರಲ್ಲಿ ₹47,644ರಷ್ಟು ಇತ್ತು.

ಕೆಲವು ಚಿನ್ನಾಭರಣ ಕಂಪನಿಗಳು ಮೇಕಿಂಗ್ ಶುಲ್ಕದಲ್ಲಿ ರಿಯಾಯಿತಿ ನೀಡಿವೆ. ಹೀಗಾಗಿ ಜನರು ಧನ್‌ತೇರಸ್ ದಿನ ಚಿನ್ನಾಭರಣ ಮನೆಗೆ ಬರುವಂತೆ ಮುಂಚಿತವಾಗಿಯೇ ಬುಕ್ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಬಾರಿ ಚಿನ್ನಾಭರಣ ಮಾರಾಟವು ಶೇ 25ರಷ್ಟು ಹೆಚ್ಚಾಗುವ ನಿರೀಕ್ಷೆಯನ್ನು ಜೋಯಾಲುಕ್ಕಾಸ್ ಹೊಂದಿದೆ. ಈ ಬಾರಿ 650 ಕೆ.ಜಿಯಷ್ಟು ಚಿನ್ನಾಭರಣ ಮಾರಾಟ ಆಗುವ ಅಂದಾಜು ಮಾಡಲಾಗಿದೆ. ಬೆಲೆ ತುಸು ಇಳಿಕೆ ಕಂಡರೆ ಮಾರಾಟ ಇನ್ನಷ್ಟು ಹೆಚ್ಚಾಗಲಿದೆ ಎಂದು ಜೋಯಾಲುಕ್ಕಾಸ್ ಅಧ್ಯಕ್ಷ ಜೋಯ್ ಅಲುಕ್ಕಾಸ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚಿಪ್ಪು	17699-35919	ರಾಶಿ	37799-47369
ಕೋಕ	15000-27500	ಕೋಕ	15099-33669	ಸರಕು	45159-75410
ಹೊಸತು	27500-36500	ಹಳೆಚಾಲಿ	36299-40619	**ಸಿದ್ದಾಪುರ**	
ಹಳತು	43500-48500	**ಪುತ್ತೂರು**		ಬಿಳಿಗೋಟು	30499-33699
ಚಿತ್ರದುರ್ಗ		ಹೊಸತು	27000-36500	ಚಾಲಿ	37899-40140
ಅಪಿ	45919-46329	**ಸಾಗರ**		ಕೋಕ	16199-33499
ಬೆಟ್ಟೆ	36000-36459	ಬಿಳಿಗೋಟು	22786-34199	ಕೆಂಪುಗೋಟು	28099-33399
ಕೆಂಪುಗೋಟು	30000-30479	ಚಾಲಿ	35599-38899	ರಾಶಿ	44619-46399
ರಾಶಿ	45439-45889	ಕೋಕ	11099-34499	ತಟ್ಟಿಬೆಟ್ಟೆ	34911-38409
ಹೊನ್ನಾವರ		ಕೆಂಪುಗೋಟು	30299-36069	**ಶಿರಸಿ**	
ಹಳೆಚಾಲಿ	37000-39000	ರಾಶಿ	35555-47339	ಬೆಟ್ಟೆ	39099-45369
ಕಾರ್ಕಳ		ಸಿಪ್ಪೆಗೋಟು	13119-21259	ಬಿಳಿಗೋಟು	27199-35309
ಹೊಸತು	25000-36500	**ಶಿವಮೊಗ್ಗ**		ಚಾಲಿ	36599-41111
ಹಳತು	30000-48500	ಬೆಟ್ಟೆ	46319-52800	ಕೆಂಪುಗೋಟು	26199-34399
ಕುಮಟ		ಗೊರಬಾಳು	24609-36409	ರಾಶಿ	45099-47399
		ಹೊಸತು	42800-46604		

ಮುಂಬೈ ಧಾರಣೆ

ಶೇಂಗಾ

09-11-2023

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	885 (885)
ಪಾಮ್ ವಾರದ ಡೆಲಿವರಿ	822 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,950 (60,350)
ಬೆಳ್ಳಿ ಕೆ.ಜಿ 70,400 (70,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಅಕ್ಟೋಬರ್‌ನಲ್ಲಿ ₹19,957 ಕೋಟಿ ಹೂಡಿಕೆ: ಎಎಂಎಫ್‌ಐ

ಈಕ್ವಿಟಿ ಎಂಎಫ್: ಹೂಡಿಕೆ ಹೆಚ್ಚಳ



ಬೆಂಗಳೂರು/ನವದೆಹಲಿ (ಪಿಟಿಐ/ರಾಯಿಟರ್ಸ್): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಅಕ್ಟೋಬರ್‌ನಲ್ಲಿ ₹19,957 ಕೋಟಿ ಹೂಡಿಕೆ ಆಗಿದೆ. ಸೆಪ್ಟೆಂಬರ್‌ನಲ್ಲಿ ಆಗಿದ್ದ ಹೂಡಿಕೆಗೆ ಹೋಲಿಸಿದರೆ ಶೇ 42ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಗುರುವಾರ ಹೇಳಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಸೆಪ್ಟೆಂಬರ್‌ನಲ್ಲಿ ₹14,091 ಕೋಟಿ ಬಂಡವಾಳ ಹೂಡಿಕೆ ಆಗಿತ್ತು ಎಂದು ಅದು ತಿಳಿಸಿದೆ. ಹೂಡಿಕೆದಾರರು ಸ್ಮಾಲ್‌ಕ್ಯಾಪ್ ಫಂಡ್‌ಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಅಕ್ಟೋಬರ್‌ನಲ್ಲಿ ಹೂಡಿಕೆ ಹೆಚ್ಚಾಗಲು ಕಾರಣ ಎಂದು ಹೇಳಿದೆ.

ಸ್ಮಾಲ್‌ಕ್ಯಾಪ್‌ಗಳಲ್ಲಿ ₹4,495 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಲಾರ್ಜ್ ಕ್ಯಾಪ್‌ಗಳಲ್ಲಿ ಆಗಿರುವ ಹೂಡಿಕೆಗೆ ಹೋಲಿಸಿದರೆ (₹724 ಕೋಟಿ) ಆರು ಪಟ್ಟು ಏರಿಕೆ ಕಂಡುಬಂದಿದೆ.

ಮಿಡ್‌ಕ್ಯಾಪ್ ಅಕ್ಟೋಬರ್‌ನಲ್ಲಿ ₹2,400 ಕೋಟಿ ಹೂಡಿಕೆ ಆಕರ್ಷಿಸಿದೆ. ಸೆಪ್ಟೆಂಬರ್‌ನಲ್ಲಿ ₹2 ಸಾವಿರ ಕೋಟಿ ಹೂಡಿಕೆ ಆಗಿತ್ತು. ಈ ವರ್ಷದಲ್ಲಿ ಈವರೆಗೆ ಸ್ಮಾಲ್ ಕ್ಯಾಪ್ ಶೇ 37ರಷ್ಟು ಮತ್ತು ಮಿಡ್‌ಕ್ಯಾಪ್ ಶೇ 29ರಷ್ಟು ಏರಿಕೆ ದಾಖಲಿಸಿವೆ.

ಅಕ್ಟೋಬರ್ ತಿಂಗಳನ್ನೂ ಒಳಗೊಂಡರೆ ಸತತ 32ನೇ ತಿಂಗಳಿನಿಂದಲೂ ಬಂಡವಾಳ ಒಳಹರಿವು ಆಗುತ್ತಿದೆ. ಈಕ್ವಿಟಿ ಎಂಎಫ್‌ನ ಎಲ್ಲಾ ವಿಭಾಗಗಳಲ್ಲಿಯೂ ಹೂಡಿಕೆ ಆಗುತ್ತಿದೆ.

ಡೆಟ್ ಫಂಡ್‌ಗಳಲ್ಲಿಯೂ ಅಕ್ಟೋಬರ್‌ನಲ್ಲಿ ₹42,634 ಕೋಟಿ ಹೂಡಿಕೆ ಆಗಿದೆ. ಆಗಸ್ಟ್‌ನಲ್ಲಿ ₹25,873 ಕೋಟಿ ಮತ್ತು ಸೆಪ್ಟೆಂಬರ್‌ನಲ್ಲಿ ₹1.01 ಲಕ್ಷ ಕೋಟಿಯಷ್ಟು ಬಂಡವಾಳವನ್ನು ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದರು.

ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಅಕ್ಟೋಬರ್‌ನಲ್ಲಿ ದಾಖಲೆಯ ₹16,900 ಕೋಟಿ ಹೂಡಿಕೆ ಆಗಿದೆ.

ಮ್ಯೂಚುವಲ್ ಫಂಡ್ ಉದ್ಯಮದಲ್ಲಿ 44 ಕಂಪನಿಗಳಿದ್ದು, ಅಕ್ಟೋಬರ್‌ನಲ್ಲಿ ಒಟ್ಟು ₹80,528 ಕೋಟಿ ಹೂಡಿಕೆ ಆಗಿದೆ. ಸೆಪ್ಟೆಂಬರ್‌ನಲ್ಲಿ ₹66,192 ಕೋಟಿ ಬಂಡವಾಳ ಹೊರಹರಿವು ಆಗಿತ್ತು ಎಂದು ಒಕ್ಕೂಟವು ಮಾಹಿತಿ ನೀಡಿದೆ.

ಸ್ಮಾಲ್‌ಕ್ಯಾಪ್‌ಗಳಲ್ಲಿ ಹೂಡಿಕೆ ಹೆಚ್ಚಿಸುವ ಬಗ್ಗೆ ಹೂಡಿಕೆದಾರರು ಎಚ್ಚರಿಕೆ ವಹಿಸುವುದು ಸೂಕ್ತ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ. ಷೇರುಪೇಟೆಯಲ್ಲಿನ ಈಚಿನ ಏರಿಕೆ ಮತ್ತು ಅಸ್ಥಿರತೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಎಚ್ಚರಿಕೆಯನ್ನು ನೀಡಿದ್ದಾರೆ.

ಹೂಡಿಕೆ ವಿವರ (₹ ಕೋಟಿಗಳಲ್ಲಿ)



ಎಂಎಫ್ ಉದ್ಯಮದ ನಿರ್ವಹಣಾ ಸಂಪತ್ತು

₹46.71 ಲಕ್ಷ ಕೋಟಿ — ಅಕ್ಟೋಬರ್ ಅಂತ್ಯಕ್ಕೆ

₹46.58 ಲಕ್ಷ ಕೋಟಿ — ಸೆಪ್ಟೆಂಬರ್ ಅಂತ್ಯಕ್ಕೆ

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ–ಮಧುಗಿರಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:06/2023–24 ದಿನಾಂಕ: 04.11.2023

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಅನ್ನು ಕರೆಯಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್‌ಗಳಿಗೆ ದಿ: **04.11.2023** ರಿಂದ ದಿ: **15.11.2023** ರಂದು ಕೊನೆಯ ದಿನಾಂಕ ವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ:080–25501216, 080–25501227ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ

DIPR/TUM/283/KSMCA/2023-24

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001
E-Mail Address: mimsmandyasupply@gmail.com , mimsmandya@gmail.com

ಮರು ಇ–ಟೆಂಡರ್ ಪ್ರಕಟಣೆ (ಕಾಲ್–3) – (ದ್ವಿಲಕೋಟೆ ಪದ್ಧತಿ)

ಸಂಖ್ಯೆ: ಮಿಮ್ಸ್/ಸರಬ/ಎಂಆರ್‌ಯು/ರಿ.ಇ–ಟೆಂಡರ್/07(2)/2020–21(ಕಾಲ್–3) ದಿ:07.11.2023

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಎಂಆರ್‌ಯು ಘಟಕಕ್ಕೆ ಅವಶ್ಯಕವಿರುವ ವಿವಿಧ ಉಪಕರಣಗಳನ್ನು ಟರ್ನ್‌ಕೀ ಆಧಾರದ ಮೇಲೆ ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.57.84 ಲಕ್ಷಗಳು (ಎಲ್ಲಾ ತೆರಿಗೆ ಇತ್ಯಾದಿಗಳು ಸೇರಿ).** ಇ.ಎಂ.ಡಿ ಮೊತ್ತ **ರೂ.1,16,000/–.** ರಿ.ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ: **10ನೆ ನವೆಂಬರ್ 2023,** ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ **ದಿನಾಂಕ: 29 ನೆ ನವೆಂಬರ್ ಸೆಪ್ಟೆಂಬರ್ 2023 ರ ಸಂಜೆ 5.00 ಗಂಟೆ.** ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/294/2023–24

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಎದಂಕಾ ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು.

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/23–24/1071 ದಿನಾಂಕ:–3.11.2023

ಟೆಂಡರ ಪ್ರಕಟಣೆ
(Through eprocurement portal only)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ 1ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ Construction of Bridge Across JagirNandihal Nala @ JagriNandihal Village in Lingasagur Tq. (KBJNL/2023-24/BR/WORK_INDENT23), ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರು ದಿನಾಂಕ 6.11.2023 ರಿಂದ 22.11.2023 ಸಾಯಂಕಾಲ 4.00 ಗಂಟೆಯವರೆಗೆ www.KPPP.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 24.11.2023 ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ವೆಬ್‌ಸೈಟ್ www.KPPP.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು ಕೃಭಾಜನಿನಿ, ನಾಎದಂಕಾ, ವಿಭಾಗ ರೋಡಲಬಂಡಾ

DIP/RCR/207/KSMC&A/Job No.204/2023-24

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.
ಸಂಖ್ಯೆ: ಬೆ.ಮ.ಸಾ.ಸಂ./ಕೇಕ/ಉಖನಿ/ಟೆಂಡರ್/11/2023–24 ದಿನಾಂಕ: 09.11.2023

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ನ.ಸಾ.ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸೇವೆಗಳನ್ನು ಪಡೆಯಲು KPPPನ ಮೂಲಕ ಟೆಂಡರ್ ಕರೆಯಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ವಿವರಣೆ	KPPP ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
ನಿಯಮಿತ ಟೆಂಡರ್			
1	BMTC/2023-24/ SE0192	ಬೆಮಸಾಸಂಸ್ಥೆಯ ಉಗ್ರಾಣದ ಬಿಡಿಭಾಗಗಳನ್ನು ಕೇಂದ್ರೀಯ ಉಗ್ರಾಣದಿಂದ ಘಟಕಗಳಿಗೆ ಹಾಗೂ ಘಟಕಗಳಿಂದ ಕೇಂದ್ರೀಯ ಉಗ್ರಾಣಕ್ಕೆ ಸಾಗಿಸಲು ಟ್ರಕ್‌ಗಳನ್ನು ಒದಗಿಸಲು ಸರಕು ಸಾಗಾಣೆ ಏಜೆನ್ಸಿಯನ್ನು ಆಯ್ಕೆ ಮಾಡುವ ಬಗ್ಗೆ.	24.11.2023 @14.30Hrs.

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕೆ.ಆರ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-01 ದೂರವಾಣಿ: 080-22291847
ಸಂಖ್ಯೆ: ದೈ.ಶಿ/ಕ್ರೀಡಾ.ಸಮವಸ್ತ್ರ.ಟೆಂಡರ್/2023–24 ದಿನಾಂಕ: 09.11.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ)

ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು–01 ಇವರು ಕೆ.ಟಿ.ಪಿ.ಪಿ ಕಾಯ್ದೆ 1999ರ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್‌ಗಳು) 2023–24 ನೇ ಸಾಲಿಗೆ ಸ್ಪೋರ್ಟ್ಸ್ ಡ್ರೆಸ್ ಮೆಟೀರಿಯಲ್‌ನ ತಯಾರಕರು/ಡೀಲರ್/ಪೂರೈಕೆದಾರರ ಸಂಸ್ಥೆಗಳಿಂದ **ವಿದ್ಯಾರ್ಥಿಗಳಿಗೆ ಕ್ರೀಡಾ ಉಡುಪುಗಳ ಸರಬರಾಜಿಗೆ** ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ **https://kppp.karnataka.gov.in** ಮೂಲಕ ಟೆಂಡರ್ ಆಹ್ವಾನಿಸಿದೆ. ಈ ಟೆಂಡರ್‌ನಲ್ಲಿ ನೋಂದಾಯಿತ ಸಂಸ್ಥೆಗಳು ಭಾಗವಹಿಸಬಹುದು. ವಿವರವಾದ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **https://kppp.karnataka.gov.in** ಹಾಗೂ **www.schooleducation.kar.nic.in** ಮೂಲಕ ಡೌನ್ ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಬೇಕು.

ಸಹಿ/– ಬಿ.ಎಸ್.ರಘುವೀರ್, ನಿರ್ದೇಶಕರು (ಮೈನಾರಿಟಿ), ಶಾಲಾ ಶಿಕ್ಷಣ ಇಲಾಖೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
NAAC Accredited with 'A' Grade 2022"
DEPARTMENT OF PHYSICAL EDUCATION & SPORTS
ಪಾವಟೆ ನಗರ ಧಾರವಾಡ–580003. PH: 0836-2215265 E-mail:kud.sports1@gmail.com
Ref No. KU/DPE/2023-24 ದಿನಾಂಕ : 09–11–2023

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಭಾಗಕ್ಕೆ ವಿಶ್ವವಿದ್ಯಾಲಯದ ಕ್ರೀಡಾಪಟುಗಳಿಗೆ ಟ್ರ್ಯಾಕಸೂಟ, ಕ್ರೀಡಾ ಸಮವಸ್ತ್ರ ಹಾಗೂ ಇತ್ಯಾದಿಗಳನ್ನು ಖರೀದಿಸಲು ಕ್ರೀಡಾ ಸಮವಸ್ತ್ರ ತಯಾರಕರು ಮತ್ತು ಸರಬರಾಜುದಾರರಿಂದ ಇ–ಪೋರ್ಟಲ್ ಮುಖಾಂತರ 2023–24 ನೇ ಸಾಲಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಇ–ಸಂಗ್ರಹಣಾ ದಾಖಲಾತಿಯು ಇ–ಸಂಗ್ರಹಣಾ ಪೋರ್ಟಲ್:https://www.kppp.karnataka.gov.in ಮುಖಾಂತರ Upload ಮಾಡಬಹುದು.

Upload ಮಾಡಲು ಕೊನೆಯ ದಿನಾಂಕ : **23–11–2023, 13–00 ಗಂಟೆ.**
ಮಾದರಿ (ಸ್ಯಾಂಪಲ್ಸ) ತಲುಪಿಸಬೇಕಾದ ಕೊನೆಯ ದಿನಾಂಕ : **23–11–2023, 17–00 ಗಂಟೆ.**

ಇ–ಸಂಗ್ರಹಣಾ ಪೋರ್ಟಲ್ ಮುಖಾಂತರ ಮಾಡಬೇಕಾಗಿದ್ದು, ಆಸಕ್ತಿಯುಳ್ಳವರು ಇ–ಸಂಗ್ರಹಣಾ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ನಿರ್ದೇಶಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇವರನ್ನು ಖುದ್ದಾಗಿ ಅಥವಾ ಫೋನ ನಂ. 0836–2215265 ಸಂಪರ್ಕಿಸಲು ಕೋರಿದೆ.

ಸಹಿ/–ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 09/2023–24 ದಿನಾಂಕ : 06.11.2023

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ **ಒಟ್ಟು 37 ಕಾಮಗಾರಿಗಳಿಗೆ ಇ–ಪ್ರೋಕ್** ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW-1.2,3&4ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.0.64 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.395.00 ಲಕ್ಷಗಳು ಆಗಿರುತ್ತವೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಬೇಕಾಗಿರುವ 37 ಕಾಮಗಾರಿಗಳಿಗೆ (**1 ಕಾಮಗಾರಿಗೆ ದಿನಾಂಕ: 24.11.2023 ಹಾಗೂ 36 ಕಾಮಗಾರಿಗಳಿಗೆ ದಿನಾಂಕ : 16.11.2023** ರಂದು **ಸಂಜೆ 4.30** ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 08372–297213, ಇ–ಮೇಲ್ : dsgadag@gmail.com
ಸಂ. ಗವೈವಿಸಂ/ಟೆಂಡರ/ಕ್ಯಾತ್ ಲ್ಯಾಬ್/03/2023–24 ದಿನಾಂಕ: 09.11.2023

ಅಲ್ಪಾವಧಿ ಮರು ಇ–ಟೆಂಡರ ಪ್ರಕಟಣೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಗದಗ ಇಲ್ಲಿಗೆ Cathlab With Flat Panel Detector with turnkeys ಸರಬರಾಜಿಗಾಗಿ ಆಸಕ್ತಿಯುಳ್ಳ ತಯಾರಕರಿಂದ, ಅಧಿಕೃತ ಮಾರಾಟಗಾರರಿಂದ ಹಾಗೂ ಸಂಘ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ದಿನಾಂಕ: 09.11.2023 ರಿಂದ ದಿನಾಂಕ:24.11.2023ರ ಸಾಯಂಕಾಲ 4:00ಗಂಟೆವರೆಗೆ ಇ–ಪೋರ್ಟಾಲ್‌ಸಂಖ್ಯೆ: DME/2023-24/IND0128/CALL-2 (https://kppp.karnataka.gov.in/) ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು. (ಅಂದಾಜು ಮೊತ್ತ. ರೂ.8.00 ಕೋಟಿಗಳು)

ಸಹಿ/– ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ವಾ.ಸಾ.ಇ/ಗದಗ/292/2023–24/ದೇಶಪಾಂಡೆಪಬ್ಲಿಸಿಟಿ

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ/2023–24/ ದಿನಾಂಕ:08.11.2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2023–24 ನೇ ಸಾಲಿನ ಎಸ್.ಎಫ್.ಸಿ. (ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ) ಅನುದಾನದಲ್ಲಿ 03 ಕಾಮಗಾರಿಗಳು, ಸನ್ 2023–24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ. 24.10, ಶೇ. 7.25 ಹಾಗೂ ಶೇ.5 ರ ಯೋಜನೆಯಲ್ಲಿ 02 ಕಾಮಗಾರಿಗಳು, ಸನ್ 2022–23 ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಅನುದಾನದಲ್ಲಿ 01 ಕಾಮಗಾರಿ ಮತ್ತು ಸನ್ 2023–24 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 04 ಕಾಮಗಾರಿಗಳು ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯುರಮೆಂಟ್ ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in)ನಲ್ಲಿ ಪ್ರಕಟಿಸಲಾಗಿದೆ.

1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28–11–2023

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/269/ಕೆಎಸ್‌ಎಂಸಿಎ/2023–24

ಡಾ|| ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಬೆಂಗಳೂರು
Dr. B.R. Ambedkar School of Economics University Bengaluru
NO: BASEU/ENG/14/2022 Date: 04/11/2023 Tender No: BASE/2023-24/SE0001

ಟೆಂಡರ್ ಪ್ರಕಟಣೆ

ಕುಲಸಚಿವರು ಡಾ. ಬಿ.ಆರ್. ಅಂಬೇಡ್ಕರ್, ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಬೆಂಗಳೂರು ರವರು ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ 3 ಸಂಖ್ಯೆಯ ಹವಾನಿಯಂತ್ರಿತ ಕಾರ್‌ಗಳನ್ನು ಒಂದು ವರ್ಷದ ಅವಧಿಗೆ ಬಾಡಿಗೆಗೆ ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. Tender No: BASE/2023-24/SE0001 **ಅಂದಾಜು ಮೊತ್ತ ರೂ.14,40,000/–, ಇ, ಎಂ.ಡಿ ರೂ.36,000/–.** ಟೆಂಡರ್ ಅನ್ನು **ದಿನಾಂಕ 20/11/2023 ರ ಸಂಜೆ 5:00 ಘಂಟೆಯೊಳಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ Website Karnataka public procurement **(https://kppp.karnataka.gov.in)** ಮುಖಾಂತರ ಸಲ್ಲಿಸಬೇಕು. ಟೆಂಡರ್ ಅನ್ನು ರದ್ದುಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ **Website (https://kppp.karnataka.gov.in)** ನಲ್ಲಿ ಪಡೆಯಬಹುದಾಗಿರುತ್ತದೆ.

ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು,

DIPR/CP/RO2060/AAPL/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560029
ಫೋನ್: 26096832/26096910/822 ಫ್ಯಾಕ್ಸ್: 080–25536105
Email: purchase@kmf.coop
ಸಂಖ್ಯೆ: ಕಹಾಮ/ಖರೀದಿ/ಟೆಂಡರ್–566/2023–24 ದಿನಾಂಕ 09.11.2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸರಕು ಮತ್ತು ಸೇವೆಗಳ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಸೇವೆ ಪಡೆಯಲು ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ವಿವರ	ಪರಿಮಾಣ	ಇ.ಎಂ.ಡಿ. (ರೂ.)
1.	Providing technical Man Power Service for Processing & Packing of UHT White Milk, Flavoured Milk, Milk Shake, Spiced Butter Milk, Lassi, Cream Etc., in Tetra Brick Packs At Mother Dairy, Bangalore for a period of two years.	As detailed in tender document	3,40,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ 09.11.2023 ರಿಂದ, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ 23.11.2023 ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 08.12.2023 ರಂದು ಸಂಜೆ 5.00 ಗಂಟೆವರೆಗೆ, ತಾಂತ್ರಿಕ ಟೆಂಡರ್ ತೆರಯುವ ದಿನಾಂಕ 11.12.2023 ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತು ವಾಣಿಜ್ಯ ಟೆಂಡರ್ ತೆರಯುವ ದಿನಾಂಕ ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

ಜಲಸಂಪನ್ಮೂಲ ಇಲಾಖೆ
ಆಣೆಕಟ್ಟು ಸುರಕ್ಷತಾ ಸಂಸ್ಥೆ (ಅ.ಸು.ಸಂ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರುರು, ಹಾಸನ ಜಿಲ್ಲೆ.
ದೂ: 08172–225424 ಇ–ಮೇಲ್: ee.cmogorur@gmail.com
ಸಂ: WRD/2023-24/SE0022 ದಿನಾಂಕ: 08.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ)

ಮುಖ್ಯ ಇಂಜಿನಿಯರ್‌ರವರ ಕಛೇರಿ, ಅ.ಸು.ಸಂ, ಬೆಂಗಳೂರು ಮತ್ತು ಕಾರ್ಯಪಾಲಕ ಇಂಜಿನಿಯರ್, ಅ.ಸು.ಸಂ, ಕೆ.ಇ.ಆರ್.ಎಸ್ ಕಛೇರಿಗೆ ಬಾಡಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ 04 ತಿಂಗಳ ಅವಧಿಗೆ ಎ.ಸಿ ಸಹಿತ (07) ಮತ್ತು ಎ.ಸಿ ರಹಿತ (02) ಒಟ್ಟು 09 ವಾಹನಗಳ ಸೇವೆಯನ್ನು ಒಟ್ಟು ಅಂದಾಜು ಮೊತ್ತ 16,08,000/– ರೂ.ಗಳಿಗೆ ಒದಗಿಸಲು ನೋಂದಾಯಿಸಿದ ಅರ್ಹ ಏಜೆನ್ಸಿದಾರರು / ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.11.2023 ಸಂಜೆ 5.30 ಗಂಟೆಗಳಾಗಿದ್ದು,** ಆರ್ಥಿಕ ಬಿಡ್ಡನ್ನು ದಿನಾಂಕ: **21.11.2023 ರಂದು ಬೆಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.inರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರುರು.

ವಾಸಾಸಂಇ/ವಾಪ್ರ/ಸ್ಪ್ಯಾನ್/2063/2023–24

ಕೊನೆಯ ಲೀಗ್ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಐದು ವಿಕೆಟ್ ಗೆಲುವು • ಮಿಂಚಿದ ಟ್ರೆಂಟ್ ಬೌಲ್ಟ್

ಸೆಮಿಫೈನಲ್‌ನತ್ತ ನ್ಯೂಜಿಲೆಂಡ್ ಹೆಜ್ಜೆ

• ಮಹಮ್ಮದ್ ನೂಮಾನ್

ಬೆಂಗಳೂರು: ಗೆಲುವು ಅನಿವಾರ್ಯವಾಗಿದ್ದ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿದ ನ್ಯೂಜಿಲೆಂಡ್ ತಂಡದವರು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಹೊಸ್ತಿಲಿಗೆ ಬಂದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ಬಳಗ ಅಧಿಕಾರಯುತ ಪ್ರದರ್ಶನ ನೀಡಿತು. ಮೊದಲು ಬ್ಯಾಟ್ ಮಾಡಿದ ಎದುರಾಳಿಗಳನ್ನು 171 ರನ್‌ಗಳಿಗೆ ನಿಯಂತ್ರಿಸಿತಲ್ಲದೆ, 23.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

ಡೆವೊನ್ ಕಾನ್ವೆ (45; 42 ಎ., 4X9), ರಚಿನ್ ರವೀಂದ್ರ (42; 34 ಎ., 4X3, 6X3) ಮತ್ತು ಡೆರಿಲ್ ಮಿಚೆಲ್ (43; 31 ಎ., 4X5, 6X2) ಅವರು ಜಯದ ಹಾದಿ ಸುಗಮಗೊಳಿಸಿದರು. ಲಂಕಾ ತಂಡವನ್ನು ಅಲ್ಪ ಮೊತ್ತಕ್ಕೆ ನಿಯಂತ್ರಿಸಿದ ಬೌಲರ್‌ಗಳಿಗೂ ಗೆಲುವಿನ ಶ್ರೇಯ ಸಲ್ಲಬೇಕು.

ತನ್ನ ಲೀಗ್ ವ್ಯವಹಾರ ಕೊನೆಗೊಳಿಸಿದ ಕಿವೀಸ್ 9 ಪಂದ್ಯಗಳಿಂದ 10 ಪಾಯಿಂಟ್ಸ್ ಸಂಗ್ರಹಿಸಿದೆ. ಅಫ್ಗಾನಿಸ್ತಾನ– ದಕ್ಷಿಣ ಆಫ್ರಿಕಾ (ನ.10) ಮತ್ತು ಪಾಕಿಸ್ತಾನ– ಇಂಗ್ಲೆಂಡ್ (ನ.11) ನಡುವಣ ಪಂದ್ಯಗಳ ಬಳಿಕವೇ ನ್ಯೂಜಿಲೆಂಡ್‌ನ ಸೆಮಿ ಪ್ರವೇಶ ನಿರ್ಧಾರವಾಗಲಿದೆ.

ಉತ್ತಮ ರನ್‌ರೇಟ್ ಹೊಂದಿರುವ ಕಾರಣ ಕಿವೀಸ್ ತಂಡ ಸೆಮಿಗೇರುವ ಸಾಧ್ಯತೆಯೇ ಅಧಿಕ. ಹಾಗಾದಲ್ಲಿ ನಾಲ್ಕರಫಟ್ಟದಲ್ಲಿ ಭಾರತ– ನ್ಯೂಜಿಲೆಂಡ್ ಹಣಾಹಣಿ ನಡೆಯಲಿದೆ.

ಸುಲಭ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡಕ್ಕೆ ಕಾನ್ವೆ ಮತ್ತು ರಚಿನ್ ಮೊದಲ ವಿಕೆಟ್‌ಗೆ 12.2 ಓವರ್‌ಗಳಲ್ಲಿ 86 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಇವರಿಬ್ಬರು ಎರಡು ರನ್‌ಗಳ ಅಂತರದಲ್ಲಿ ಮರಳಿದರು. ಆ ಬಳಿಕ ಮೂರು ವಿಕೆಟ್‌ಗಳನ್ನು ಅನಗತ್ಯವಾಗಿ ಕಳೆದುಕೊಂಡಿತು. ಗುರಿ ಕಡಿಮೆಯಿದ್ದ ಕಾರಣ ಒತ್ತಡಕ್ಕೆ ಒಳಗಾಗದೆ ಜಯ ಸಾಧಿಸಿತು.

ಕಿವೀಸ್ ಶಿಸ್ತಿನ ಬೌಲಿಂಗ್: ಮೊದಲು ಬ್ಯಾಟ್‌ಗೆ ಕಳುಹಿಸಲ್ಪಟ್ಟ ಲಂಕಾ ತಂಡ, ನ್ಯೂಜಿಲೆಂಡ್‌ನ ಶಿಸ್ತಿನ ಬೌಲಿಂಗ್ ಮುಂದೆ ನಲುಗಿ ಸವಾಲಿನ ಮೊತ್ತ ಪೇರಿಸಲು ವಿಫಲವಾಯಿತು. ಆರಂಭಿಕ ಬ್ಯಾಟರ್ ಕುಸಾಲ್ ಪೆರೇರಾ (51; 28 ಎ., 4X9, 6X2) ಅವರ ಅಬ್ಬರದ ಅರ್ಧಶತಕ ಹೊರತುಪಡಿಸಿದರೆ, ಲಂಕಾ ಇನಿಂಗ್ಸ್‌ನಲ್ಲಿ ಜೀವಕಳೆ ಇರಲಿಲ್ಲ.

ಖಾತೆ ತೆರೆಯುವ ಮುನ್ನವೇ ಪೆರೇರಾಗೆ ಜೀವದಾನ ಲಭಿಸಿತು. ಸೌಥಿ ಅವರ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಟಾಮ್ ಲೇಥಮ್ ಸುಲಭ ಕ್ಯಾಚ್ ಕೈಚೆಲ್ಲಿದರು. ಆದರೆ ಮುಂದಿನ ಎಸೆತದಲ್ಲಿ ಸೌಥಿ, ತಂಡಕ್ಕೆ ಮೊದಲ ಯಶಸ್ಸು ತಂದುಕೊಟ್ಟರು. ಪಥುಮ್ ನಿಸಾಂಕ (2) ಅವರನ್ನು ವಿಕೆಟ್‌ಕೀಪರ್‌ಗೆ ಕ್ಯಾಚ್ ಕೊಡಿಸುವಲ್ಲಿ ಯಶಸ್ವಿಯಾದರು.

ಎಡಗೈ ವೇಗಿ ಟ್ರೆಂಟ್ ಬೌಲ್ಟ್ (37ಕ್ಕೆ 3) ಐದನೇ ಓವರ್‌ನಲ್ಲಿ ಕುಸಾಲ್ ಮೆಂಡಿಸ್ (6) ಮತ್ತು ಸದೀರ ಸಮರವಿಕ್ರಮ (1) ಅವರನ್ನು ಔಟ್ ಮಾಡಿದರು. ಇವರಿಬ್ಬರು ಕ್ರಮವಾಗಿ ರಚಿನ್ ರವೀಂದ್ರ ಮತ್ತು ಡೆರಿಲ್ ಮಿಚೆಲ್‌ಗೆ ಕ್ಯಾಚಿತ್ತರು.

ಒಂದು ಬದಿಯಲ್ಲಿ ವಿಕೆಟ್ ಬೀಳುತ್ತಿದ್ದರೂ, ಪೆರೇರಾ ಅಬ್ಬರದ ಆಟವಾಡಿದರು. ಸೌಥಿ ಬೌಲ್ ಮಾಡಿದ ಇನಿಂಗ್ಸ್‌ನ ನಾಲ್ಕು ಮತ್ತು ಆರನೇ ಓವರ್‌ನಲ್ಲಿ ಒಟ್ಟು ಐದು ಬೌಂಡರಿ ಮತ್ತು ಎರಡು ಸಿಕ್ಸರ್ ಹೊಡೆದರಲ್ಲದೆ, 22 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಏಕದಿನ ವಿಶ್ವಕಪ್‌ನಲ್ಲಿ ಶ್ರೀಲಂಕಾ ಪರ ದಾಖಲಾದ ಎರಡನೇ ಅತಿವೇಗದ ಅರ್ಧಶತಕ ಇದು. ಆದರೆ ಅವರ ಬೀಸಾಟಕ್ಕೆ 10ನೇ ಓವರ್‌ನಲ್ಲಿ ತೆರೆಬಿತ್ತು. ಲಾಕಿ ಫರ್ಗ್ಯುಸನ್ ಬೌಲಿಂಗ್‌ನಲ್ಲಿ ಡ್ರೈವ್ ಮಾಡಲು ಮುಂದಾಗಿ ಮಿಚೆಲ್ ಸ್ಯಾಂಟ್ನರ್‌ಗೆ ಕ್ಯಾಚ್ ನೀಡಿದರು.

ಮಧ್ಯಮ ಕ್ರಮಾಂಕದಲ್ಲಿ ಮರು ಹೋರಾಟಕ್ಕೆ ಪ್ರಯತ್ನಿಸಿದ ಏಂಜೆಲೊ ಮ್ಯಾಥ್ಯೂಸ್ (16; 27 ಎ.) ಮತ್ತು ಧನಂಜಯ ಡಿಸಿಲ್ವಾ (19; 24 ಎ) ಅವರಿಗೆ ಸ್ಪಿನ್ನರ್ ಮಿಚೆಲ್ ಸ್ಯಾಂಟ್ನರ್ ಪೆವಿಲಿಯನ್ ಹಾದಿ ತೋರಿದರು. ಸ್ಕೋರ್ 105 ಆಗುವಷ್ಟರಲ್ಲಿ ಏಳು ವಿಕೆಟ್‌ಗಳು ಬಿದ್ದವು.

ಮಹೀಶ ತೀಕ್ಷಣ (ಔಟಾಗದೆ 38; 91 ಎ., 4X3) ಮತ್ತು ದಿಲ್ಶಾನ್ ಮದುಶಂಕ (19; 48 ಎ., 4X2) ಅವರು ಕೊನೆಯ ವಿಕೆಟ್‌ಗೆ 43 ರನ್ ಸೇರಿಸಿ ತಂಡ ಬೇಗನೇ ಆಲೌಟ್ ಆಗುವುದನ್ನು ತಪ್ಪಿಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 46.4 ಓವರ್‌ಗಳಲ್ಲಿ 171 (ಕುಸಾಲ್ ಪೆರೇರಾ 51, ಏಂಜೆಲೊ ಮ್ಯಾಥ್ಯೂಸ್ 16, ಧನಂಜಯ ಡಿಸಿಲ್ವಾ 19, ಮಹೀಶ ತೀಕ್ಷಣ ಔಟಾಗದೆ 38, ದಿಲ್ಶಾನ್ ಮದುಶಂಕ 19, ಟ್ರೆಂಟ್ ಬೌಲ್ಟ್ 37ಕ್ಕೆ 3, ಲಾಕಿ ಫರ್ಗ್ಯುಸನ್ 35ಕ್ಕೆ 2, ಮಿಚೆಲ್ ಸ್ಯಾಂಟ್ನರ್ 22ಕ್ಕೆ 2, ರಚಿನ್ ರವೀಂದ್ರ 21ಕ್ಕೆ 2); **ನ್ಯೂಜಿಲೆಂಡ್** 23.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 (ಡೆವೊನ್ ಕಾನ್ವೆ 45, ರಚಿನ್ ರವೀಂದ್ರ 42, ಕೇನ್ ವಿಲಿಯಮ್ಸನ್ 14, ಡೆರಿಲ್ ಮಿಚೆಲ್ 43, ಮಾರ್ಕ್ ಚಾಪ್‌ಮನ್ 7, ಗ್ಲೆನ್ ಫಿಲಿಪ್ಸ್ ಔಟಾಗದೆ 17, ಏಂಜೆಲೊ ಮ್ಯಾಥ್ಯೂಸ್ 29ಕ್ಕೆ 2)

ಫಲಿತಾಂಶ: ನ್ಯೂಜಿಲೆಂಡ್‌ಗೆ 5 ವಿಕೆಟ್ ಗೆಲುವು

ಪಂದ್ಯಶ್ರೇಷ್ಠ: ಟ್ರೆಂಟ್ ಬೌಲ್ಟ್

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಶ್ರೀಲಂಕಾದ ಚರಿತ್ ಅಸಲಂಕ ವಿಕೆಟ್ ಪಡೆದ ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಮುಖ್ಯಾಂಶಗಳು

- 10 ಪಾಯಿಂಟ್ಸ್ ಕಲೆಹಾಕಿದ ವಿಲಿಯಮ್ಸನ್ ಬಳಗ
- ರಚಿನ್ ರವೀಂದ್ರ ಆಲ್‌ರೌಂಡ್ ಆಟ
- ಭಾರತ– ನ್ಯೂಜಿಲೆಂಡ್ ಸೆಮಿ ಹಣಾಹಣಿ ಸಾಧ್ಯತೆ

ಬೌಲ್ಟ್ 50 ವಿಕೆಟ್ ಸಾಧನೆ

ವೇಗಿ ಟ್ರೆಂಟ್ ಬೌಲ್ಟ್ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ 50 ವಿಕೆಟ್ ಪಡೆದ ನ್ಯೂಜಿಲೆಂಡ್ ತಂಡದ ಮೊದಲ ಬೌಲರ್ ಎನಿಸಿಕೊಂಡರು. ಇದೇ ವೇಳೆ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ (ಎಲ್ಲ ಮೂರು ಮಾದರಿ) 600 ವಿಕೆಟ್ ಪೂರೈಸಿದರು. ಟಿಮ್ ಸೌಥಿ ಮತ್ತು ಡೇನಿಯಲ್ ವೆಟೋರಿ ಬಳಿಕ ಈ ಸಾಧನೆ ಮಾಡಿದ ನ್ಯೂಜಿಲೆಂಡ್‌ನ ಮೂರನೇ ಬೌಲರ್ ಎಂಬ ಗೌರವ ಅವರಿಗೆ ಒಲಿಯಿತು.

ಅಗ್ರ ಐವರು

ಬ್ಯಾಟಿಂಗ್	
ರಚಿನ್‌ರವೀಂದ್ರ (ನ್ಯೂಜಿಲೆಂಡ್)	565
ಕ್ವಿಂಟನ್‌ ಡಿ ಕಾಕ್ (ದಕ್ಷಿಣ ಆಫ್ರಿಕಾ)	550
ವಿರಾಟ್‌ಕೊಹ್ಲಿ (ಭಾರತ)	543
ಡೇವಿಡ್‌ವಾರ್ನರ್ (ಆಸ್ಟ್ರೇಲಿಯಾ)	446
ರೋಹಿತ್‌ಶರ್ಮಾ (ಭಾರತ)	442

ಬೌಲಿಂಗ್	
ದಿಲ್ಶಾನ್‌ಮಧುಶಂಕ (ಶ್ರೀಲಂಕಾ)	21
ಆ್ಯಡಂ ಜಂಪಾ (ಆಸ್ಟ್ರೇಲಿಯಾ)	20
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	17
ಮೊಹಮ್ಮದ್‌ಶಮಿ (ಭಾರತ)	16
ಮಿಚೆಲ್‌ಸ್ಯಾಂಟ್ನರ್ (ನ್ಯೂಜಿಲೆಂಡ್)	16

ಕ್ರೀಡಾಂಗಣದಲ್ಲಿ 17,500 ಪ್ರೇಕ್ಷಕರು

ಈ ಪಂದ್ಯ ವೀಕ್ಷಿಸಲು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುಮಾರು 17,500 ಪ್ರೇಕ್ಷಕರು ಸೇರಿದ್ದರು. ಇಲ್ಲಿ ಇದುವರೆಗೆ ನಡೆದಿರುವ ನಾಲ್ಕು ಪಂದ್ಯಗಳಿಗೂ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ಭಾನುವಾರ ನಡೆಯಲಿರುವ ಭಾರತ– ನೆದರ್ಲೆಂಡ್ಸ್ ಪಂದ್ಯಕ್ಕೆ ಕ್ರೀಡಾಂಗಣ ಕಿಕ್ಕಿರಿದು ತುಂಬುವ ಸಾಧ್ಯತೆಯಿದೆ.

ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	8	6	2	0	12	1.376
ಆಸ್ಟ್ರೇಲಿಯಾ	8	6	2	0	12	0.861
ನ್ಯೂಜಿಲೆಂಡ್	9	5	4	0	10	0.743
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	8	4	4	0	8	-0.338
ಇಂಗ್ಲೆಂಡ್	8	2	6	0	4	-0.885
ಬಾಂಗ್ಲಾದೇಶ	8	2	6	0	4	-1.142
ಶ್ರೀಲಂಕಾ	9	2	7	0	4	-1.419
ನೆದರ್ಲೆಂಡ್ಸ್	8	2	6	0	4	-1.635

ಅಫ್ಗನ್ ‘ಔಟ್’; ಪಾಕ್ ಸೆಮಿ ಸಾಧ್ಯತೆಯೂ ಕ್ಷೀಣ

ಬೆಂಗಳೂರು: ನ್ಯೂಜಿಲೆಂಡ್ ತಂಡ ಶ್ರೀಲಂಕಾ ವಿರುದ್ಧ ಗೆಲ್ಲುವ ಜತೆಯಲ್ಲೇ ರನ್‌ರೇಟ್ ಕೂಡಾ ಉತ್ತಮಪಡಿಸಿರುವುದರಿಂದ ನಾಲ್ಕರಫಟ್ಟ ಪ್ರವೇಶಿಸುವುದು ಬಹುತೇಕ ಖಚಿತವಾಗಿದೆ.

ಸೆಮಿಫೈನಲ್ ‘ರೇಸ್’ನಲ್ಲಿರುವ ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ತಂಡಗಳು ಕೊನೆಯ ಲೀಗ್ ಪಂದ್ಯಗಳನ್ನು ಗೆದ್ದರೂ, ರನ್‌ರೇಟ್‌ನಲ್ಲಿ ನ್ಯೂಜಿಲೆಂಡ್ (+ 0.743) ತಂಡವನ್ನು ಹಿಂದಿಕ್ಕುವುದು ಸುಲಭವಲ್ಲ.

ಅಫ್ಗನ್‌ಗೆ (-0.338) ಹೋಲಿಸಿದರೆ ಪಾಕ್ ತಂಡದ (0.036) ರನ್‌ರೇಟ್ ಉತ್ತಮವಾಗಿದೆ.

ರನ್‌ರೇಟ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಹಿಂದಿಕ್ಕಬೇಕಾದರೆ ಹಷ್ಮತ್ ಉಲ್ಲಾ ಶಹೀದಿ ಬಳಗ ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 438 ರನ್‌ಗಳಿಂದ ಮಣಿಸಬೇಕು. ಇದು ಅಸಾಧ್ಯವೆಂದೇ ಹೇಳಬಹುದು.

ಬಾಬರ್ ಅಜಂ ಬಳಗದ ಹಾದಿ ಕೂಡಾ ಸುಗಮವಾಗಿಲ್ಲ. ಕೊನೆಯ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 287 ರನ್‌ಗಳಿಗೂ ಅಧಿಕ ಅಂತರದಿಂದ ಸೋಲಿಸಿದರೆ ಮಾತ್ರ, ರನ್‌ರೇಟ್‌ನಲ್ಲಿ ನ್ಯೂಜಿಲೆಂಡ್ ಹಿಂದಿಕ್ಕಿ ಸೆಮಿ ಪ್ರವೇಶಿಸಲು ಸಾಧ್ಯ.

ಇಂಗ್ಲೆಂಡ್ ಮೊದಲು ಬ್ಯಾಟ್ ಮಾಡಿದರೆ ಕಡಿಮೆ ಓವರ್‌ಗಳಲ್ಲಿ ರನ್ ಬೆನ್ನಟ್ಟಬೇಕು. ಉದಾಹರಣೆಗೆ ಇಂಗ್ಲೆಂಡ್‌ಅನ್ನು 150 ರನ್‌ಗಳಿಗೆ ನಿಯಂತ್ರಿಸಿದರೆ, ಪಾಕ್ 3.4 ಓವರ್‌ಗಳಲ್ಲಿ ಗುರಿ ಬೆನ್ನಟ್ಟಬೇಕಿದೆ.

ಟಿ20 ಸರಣಿಗೆ ಹಾರ್ದಿಕ್ ಅಲಭ್ಯ?

ನವದೆಹಲಿ (ಪಿಟಿಐ): ಗಾಯಗೊಂಡಿರುವ ಹಾರ್ದಿಕ್ ಪಾಂಡ್ಯ ವಿಶ್ವಕಪ್ ಟೂರ್ನಿಯ ನಂತರ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯಲ್ಲಿ ಆಡುವುದು ಅನುಮಾನವಾಗಿದೆ.

ಇದರಿಂದಾಗಿ ಅವರ ಬದಲಿಗೆ ಸೂರ್ಯಕುಮಾರ್ ಯಾದವ್ ಅಥವಾ ಋತುರಾಜ್ ಗಾಯಕವಾಡ್ ಅವರು ತಂಡವನ್ನು ಮುನ್ನಡೆಸುವ ಸಾಧ್ಯತೆ ಇದೆ.

ಟಿ20 ತಂಡದ ನಾಯಕರೂ ಆಗಿರುವ ಅವರು ಈಚೆಗೆ ವಿಶ್ವಕಪ್ ಪಂದ್ಯದಲ್ಲಿ ಗಾಯಗೊಂಡಿದ್ದರು. ಎಡಗಾಲಿನ ಪಾದದ ಅಸ್ಥಿರಜ್ಜು ಹಾನಿಯಾಗಿದೆ. ಇದರಿಂದ ಚೇತರಿಸಿಕೊಳ್ಳಲು ಅವರಿಗೆ ಹೆಚ್ಚು ಸಮಯ ಬೇಕಿದೆ. ಆದ್ದರಿಂದ ಅವರು ವಿಶ್ವಕಪ್ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಡಿಸೆಂಬರ್ 10ರಿಂದ ನಡೆಯಲಿರುವ ಟಿ20 ಸರಣಿಯಲ್ಲಿ ಆಡುವ ಭಾರತ ತಂಡದೊಂದಿಗೆ ಅವರು ಪಯಣಿಸುವ ಸಾಧ್ಯತೆ ಇದೆ. ಅಲ್ಲಿಯವರೆಗೂ ಅವರು ವಿಶ್ರಾಂತಿ ತೆಗೆದುಕೊಳ್ಳಬಹುದು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಈ ಟೂರ್ನಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಮತ್ತು ವೇಗದ ಬೌಲರ್‌ಗಳು ಆಡುವ ಸಾಧ್ಯತೆ ಇಲ್ಲ. ವಿಶ್ವಕಪ್ ಟೂರ್ನಿಯಲ್ಲಿ ಆಡಿರುವ ಅವರೆಲ್ಲರೂ ನಂತರ ವಿಶ್ರಾಂತಿಗೆ ತೆರಳುವ ಸಾಧ್ಯತೆ ಇದೆ.

ಅಹಮದಾಬಾದ್‌ನಲ್ಲಿ ಇಂದು ಹಣಾಹಣಿ • ಶಹೀದಿ ಬಳಗಕ್ಕೆ ಸುಧಾರಿತ ಪ್ರದರ್ಶನದ ತವಕ

ದಕ್ಷಿಣ ಆಫ್ರಿಕಾಕ್ಕೆ ಅಫ್ಗಾನಿಸ್ತಾನ ಸವಾಲು

ಅಹಮದಾಬಾದ್ (ಎಎಫ್‌ಪಿ): ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ತಂಡಕ್ಕೆ ಸೆಮಿಫೈನಲ್ ಪ್ರವೇಶಿಸುವ ಹಾದಿ ಬಹುತೇಕ ಮುಚ್ಚಿದೆ.

ಮೂರು ದಿನಗಳ ಹಿಂದೆ ವಾಂಖೆಡೆ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾದ ವಿರುದ್ಧದ ಪಂದ್ಯದಲ್ಲಿ ಗೆಲುವಿನಂಚಿನಲ್ಲಿದ್ದ ತಂಡವು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಐತಿಹಾಸಿಕ ಇನಿಂಗ್ಸ್ ಮುಂದೆ ಮಂಡಿಯೂರಿತ್ತು.

ಮ್ಯಾಕ್ಸ್‌ವೆಲ್ ಕ್ಯಾಚ್ ಬಿಟ್ಟಿದ್ದ ಅಫ್ಗನ್ ಫೀಲ್ಡರ್‌ಗಳು ಬಲಾಢ್ಯ ತಂಡವನ್ನು ಸೋಲಿಸುವ ಅವಕಾಶವನ್ನೂ ಕೈಚೆಲ್ಲಿದ್ದರು.

ಮ್ಯಾಕ್ಸ್‌ವೆಲ್ ಆಟಕ್ಕೆ ಬೆಚ್ಚಿದ್ದ ಅಫ್ಗನ್ ತಂಡಕ್ಕೆ ಚೇತರಿಸಿಕೊಳ್ಳಲು ಇದೊಂದು ಅವಕಾಶ. ಇದೀಗ ರೌಂಡ್ ರಾಬಿನ್ ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಆಡಲು ಸಿದ್ಧವಾಗಿದೆ. ಟೂರ್ನಿಯಲ್ಲಿ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿದರೆ ಅಫ್ಗನ್ ತಂಡಕ್ಕೆ ಮತ್ತೊಂದು ಗರಿ ಮೂಡಲಿದೆ. ಏಕೆಂದರೆ ಈ ಟೂರ್ನಿಯಲ್ಲಿ ಹಷ್ಮತ್‌ವುಲ್ಲಾ ಶಹೀದಿ ಬಳಗವು ತೋರಿರುವ ದಿಟ್ಟತನ ಮತ್ತು ಅಮೋಘ ಆಟವು ಗಮನ ಸೆಳೆದಿದೆ.

ಇಂಗ್ಲೆಂಡ್, ಪಾಕಿಸ್ತಾನ, ಶ್ರೀಲಂಕಾ ತಂಡಗಳನ್ನೂ ಸೋಲಿಸಿರುವ ಅಫ್ಗನ್ ಭವಿಷ್ಯದಲ್ಲಿ ಬಹಳ ದೊಡ್ಡ ಸಾಧನೆ ಮಾಡುವ ಭರವಸೆ ಮೂಡಿಸಿದೆ. ಮ್ಯಾಕ್ಸ್‌ವೆಲ್ ಅವರು ‘ಅತಿಮಾನುಷ’ ಆಟವಾಡದೇ ಹೋಗಿದ್ದರೆ ಅಫ್ಗನ್ ತಂಡಕ್ಕೆ ಮತ್ತೊಂದು ಹೆಮ್ಮೆಯ ಗರಿ ಮೂಡುತ್ತಿತ್ತು. ಆಸ್ಟ್ರೇಲಿಯಾ ಎದುರು ಶತಕ ಬಾರಿಸಿದ್ದ ಇಬ್ರಾಹಿಂ ಜದ್ರಾನ್, ಉತ್ತಮ ಲಯದಲ್ಲಿರುವ ಶಹೀದಿ, ರೆಹಮತ್ ಶಾ ಅವರು ತಂಡದ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ.

ಈ ತಂಡದ ಪ್ರಮುಖ ಶಕ್ತಿಯೆಂದರೆ ಸ್ಪಿನ್ನರ್‌ಗಳು. ಅನುಭವಿ ರಶೀದ್ ಖಾನ್, ನೂರ್ ಅಹಮದ್ ಮತ್ತು ಮೊಹಮ್ಮದ್ ನಬಿ ಅವರು ಮತ್ತೊಮ್ಮೆ ತಮ್ಮ ಕೈಚಳಕ ಮೆರೆಯಲು ಸಿದ್ಧರಾಗಿದ್ದಾರೆ.

ಆದರೆ ದಕ್ಷಿಣ ಆಫ್ರಿಕಾ ತಂಡದಲ್ಲಿ ನಾಲ್ಕು ಶತಕ ಸಿಡಿಸಿರುವ ಕ್ವಿಂಟನ್ ಡಿಕಾಕ್, ಅಬ್ಬರದ ಬ್ಯಾಟರ್‌ಗಳಾದ ಹೆನ್ರಿಚ್ ಕ್ಲಾಸ್, ಏಡನ್ ಮರ್ಕರಂ ಮತ್ತು ರೆಸಿ ವ್ಯಾನ್ ಡರ್ ಡಸೆ ಅವರನ್ನು ಕಟ್ಟಿಹಾಕುವುದೇ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ಕಳೆದ ಪಂದ್ಯದಲ್ಲಿ ಭಾರತದ ಮುಂದೆ ದಕ್ಷಿಣ ಆಫ್ರಿಕಾ ತಂಡವು 243 ರನ್‌ಗಳಿಂದ ಸೋಲಲು ಬ್ಯಾಟರ್‌ಗಳ ವೈಫಲ್ಯವೇ ಕಾರಣವಾಗಿತ್ತು. ಆದ್ದರಿಂದ ಅಫ್ಗನ್ ಬೌಲರ್‌ಗಳನ್ನು ಎಚ್ಚರದಿಂದ ಎದುರಿಸಿ ಕೊನೆಯ ಪಂದ್ಯದಲ್ಲಿ ಜಯಿಸುವ ಛಲದಲ್ಲಿ ತೆಂಬಾ ಬವುಮಾ ಬಳಗವಿದೆ.

2019ರಲ್ಲಿ ಕಾರ್ಡಿಫ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾದಾಗ ದಕ್ಷಿಣ ಆಫ್ರಿಕಾ ತಂಡವು ಭರ್ಜರಿ ಜಯ ಸಾಧಿಸಿತ್ತು.

ಮುಖ್ಯಾಂಶಗಳು

- ಟೂರ್ನಿಯಲ್ಲಿ 4 ಶತಕ ಗಳಿಸಿರುವ ಕ್ವಿಂಟನ್ ಡಿ ಕಾಕ್ ಮೇಲೆ ಎಲ್ಲರ ಚಿತ್ತ
- ಎಂಟು ಪಂದ್ಯಗಳಲ್ಲಿ ಆರು ಪಂದ್ಯ ಗೆದ್ದಿರುವ ದಕ್ಷಿಣ ಆಫ್ರಿಕಾ

ಅಫ್ಗಾನಿಸ್ತಾನ ತಂಡದ ಆಟಗಾರ ಇಬ್ರಾಹಿಂ ಶಹೀದಿ –ಎಎಫ್‌ಪಿ ಚಿತ್ರ

ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್, ಏಡನ್ ಮರ್ಕರಂ ಮತ್ತು ಕ್ವಿಂಟನ್ ಡಿ ಕಾಕ್ ತಾಲೀಮು ನಡೆಸಿದರು –ಪಿಟಿಐ ಚಿತ್ರ

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮೆಗ್ ವಿದಾಯ

ಮೆಲ್ಬರ್ನ್(ಪಿಟಿಐ): ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

13 ವರ್ಷ ಅವರು ಆಸ್ಟ್ರೇಲಿಯಾ ತಂಡದಲ್ಲಿ ಆಡಿದ್ದಾರೆ. ತಂಡವು ಏಳು ಬಾರಿ ವಿಶ್ವಕಪ್ ಜಯಿಸಿದಾಗ ಪ್ರತಿನಿಧಿಸಿದ್ದರು. ಅದರಲ್ಲಿ ಐದು ಬಾರಿ ಅವರ ನಾಯಕತ್ವದಲ್ಲಿಯೇ ತಂಡವು ವಿಶ್ವಕಪ್ ಜಯಿಸಿತ್ತು. 31 ವರ್ಷದ ಮೆಗ್ ಲ್ಯಾನಿಂಗ್ ನಾಯಕತ್ವದ ಆಸ್ಟ್ರೇಲಿಯಾ ಈಚೆಗೆ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿಯೂ ಚಿನ್ನ ಜಯಿಸಿತ್ತು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ (ಎಲ್ಲ ಮಾದರಿ ಸೇರಿ) ಅತಿ ಹೆಚ್ಚು ರನ್ (8352) ಗಳಿಸಿದ ಆಸ್ಟ್ರೇಲಿಯಾದ ಆಟಗಾರ್ತಿ ಎಂಬ ಹೆಗ್ಗಳಿಕೆಯೂ ಅವರದ್ದಾಗಿದೆ. ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದು, ಟಿ20 ಲೀಗ್‌ಗಳಲ್ಲಿ ಆಡಲಿದ್ದಾರೆ.

‘ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವುದು ನನ್ನ ಅತ್ಯಂತ ಕಠಿಣ ನಿರ್ಧಾರವಾಗಿದೆ. ಆದರೆ ವಿದಾಯ ಹೇಳಲು ಇದು ಸೂಕ್ತ ಸಮಯವಾಗಿದೆ’ ಎಂದು ಲ್ಯಾನಿಂಗ್ ಹೇಳಿದ್ದಾರೆ.

2000ರ ಸಂದರ್ಭದಲ್ಲಿ ಆಸ್ಟ್ರೇಲಿಯಾ ಪುರುಷರ ತಂಡವು ಯಶಸ್ಸಿನ ಸುವರ್ಣ ಯುಗ ಕಂಡಿತ್ತು. ಅದೇ ರೀತಿಯಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡವು ಲ್ಯಾನಿಂಗ್ ನಾಯಕತ್ವದಲ್ಲಿ ಅಗಾಧ ಸಾಧನೆ ಮಾಡಿದೆ.

ಮೆಗ್ ಲ್ಯಾನಿಂಗ್

ಈಚೆಗೆ ಲ್ಯಾನಿಂಗ್ ಅವರ ಅನುಪಸ್ಥಿತಿಯಲ್ಲಿ ಹಂಗಾಮಿ ನಾಯಕಿಯಾಗಿದ್ದ ಅಲೀಸಾ ಹೀಲಿ ಅವರೇ ಪೂರ್ಣಾವಧಿ ನಾಯಕತ್ವ ವಹಿಸುವ ಸಾಧ್ಯತೆ ಇದೆ.

ಲ್ಯಾನಿಂಗ್ ನಿವೃತ್ತಿ ನಿರ್ಧಾರವು ದಿಢೀರ್ ಆಗಿಲ್ಲ. ಅವರು ಈ ವರ್ಷ ಇಂಗ್ಲೆಂಡ್, ಐರ್ಲೆಂಡ್ ಮತ್ತು ತವರಿನಲ್ಲಿಯೇ ನಡೆದ ವೆಸ್ಟ್ ಇಂಡೀಸ್ ಎದುರಿನ ಸರಣಿಗಳಿಗೆ ಗೈರುಹಾಜರಾಗಿದ್ದರು. ಅವರಿಗೆ ಅನಾರೋಗ್ಯ ಇದೆ ಎಂಬ ಮಾತುಗಳೂ ಕೇಳಿಬಂದಿದ್ದವು. ಆದರೆ ಅಧಿಕೃತವಾಗಿ ಈ ಬಗ್ಗೆ ಮಾಹಿತಿ ಇಲ್ಲ. 2022ರಲ್ಲಿಯೂ ಅವರು ಆರು ತಿಂಗಳೂ ವಿಶ್ರಾಂತಿ ತೆಗೆದುಕೊಂಡಿದ್ದರು. ಆ ಅವಧಿಯಲ್ಲಿ ಅವರು ಮೆಲ್ಬರ್ನ್‌ನಲ್ಲಿರುವ ಬಾರಿಷ್ಟಾ ಕೆಫೆಯಲ್ಲಿ ಕೆಲಸ ಮಾಡಿದ್ದರು.

ಸಿಂಗಪುರದಲ್ಲಿ ಜನಿಸಿ, ಆಸ್ಟ್ರೇಲಿಯಾದಲ್ಲಿ ಬೆಳೆದವರು ಲ್ಯಾನಿಂಗ್. 2010ರಲ್ಲಿ ಅವರು ನ್ಯೂಜಿಲೆಂಡ್ ವಿರುದ್ಧ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಆಗ ಅವರಿಗೆ 18 ವರ್ಷವಾಗಿತ್ತು. ಶತಕ ಗಳಿಸಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ್ತಿ, ಅತಿ ವೇಗದ ಶತಕ (40 ಎಸೆತ) ಗಳಿಕೆ ಮಾಡಿದ್ದು ಅವರ ದಾಖಲೆಗಳು. 21 ವರ್ಷ ವಯಸ್ಸಿನವರಿದ್ದಾಗಲೇ ಹಂಗಾಮಿ ನಾಯಕಿಯಾಗಿ ತಂಡವನ್ನು ಮುನ್ನಡೆಸಿದರು. 2014ರಲ್ಲಿ ಪೂರ್ಣಾವಧಿ ನಾಯಕಿಯಾದರು.

ಮೆಗ್ ಲ್ಯಾನಿಂಗ್ ಸಾಧನೆ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಟೆಸ್ಟ್	6	345	93	0	2
ಏಕದಿನ	103	4602	152*	15	21
ಟಿ20	132	3405	133*	2	15

ಕ್ರಿಕೆಟ್: ಪ್ರಿ ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ರೋಹನ್ ಎ. ಪಾಟೀಲ್ ಅವರ ಅಮೋಘ ಬ್ಯಾಟಿಂಗ್ ಮತ್ತು ಎ.ಸಿ. ರೋಹಿತ್ ಕುಮಾರ್ ಅವರ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಪುರುಷರ ‘ಒನ್‌ಡೇ ಟ್ರೋಫಿ’ ಕ್ರಿಕೆಟ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಸೂರತ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 5 ವಿಕೆಟ್‌ಗಳಿಂದ ಮಹಾರಾಷ್ಟ್ರವನ್ನು ಮಣಿಸಿತು.

ಮಹಾರಾಷ್ಟ್ರ ತಂಡ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 254 ರನ್ ಕಲೆಹಾಕಿತು. ರೋಹಿತ್ ಕುಮಾರ್ 35ಕ್ಕೆ 3 ವಿಕೆಟ್ ಪಡೆದು ಮಿಂಚಿದರು. ಮೊನೀಶ್ ರೆಡ್ಡಿ ಮತ್ತು ಯಶೋವರ್ಧನ್ ಪರಂತಪ್ ತಲಾ ಎರಡು ವಿಕೆಟ್ ಪಡೆದರು. ಕರ್ನಾಟಕ ತಂಡ 42.3 ಓವರ್‌ಗಳಲ್ಲಿ 5 ವಿಕೆಟ್‌ಗೆ 255 ರನ್ ಗಳಿಸಿ ಗೆಲುವು ಸಾಧಿಸಿತು. ರೋಹನ್ (87, 72ಎ), ಸ್ಮರಣ್ (ಔಟಾಗದೆ 53, 59ಎ) ಅರ್ಧಶತಕ ಗಳಿಸಿದರು.

ಟೇಬಲ್ ಟೆನಿಸ್: ಅಥರ್ವ, ತನಿಷ್ಕಾ ಚಾಂಪಿಯನ್

ಬೆಂಗಳೂರು: ಅಥರ್ವ ನವರಂಗ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆಯುತ್ತಿರುವ 25ನೇ ವರ್ಷದ ಎಂ.ಎಸ್.ರಾಮಯ್ಯ ಸ್ಮಾರಕ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗದ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಗುರುವಾರ ನಡೆದ ಫೈನಲ್‌ನಲ್ಲಿ ಅಥರ್ವ 11-3, 11-9, 11-5ರಿಂದ ಸಿದ್ಧಾಂತ್ ಧಾರಿವಾಲ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ 11-7, 11-6, 6-11, 11-9ರಿಂದ ತೆಶುಬ್ ದಿನೇಶ್ ವಿರುದ್ಧ; ಸಿದ್ಧಾಂತ್ 11-8, 13-11, 11-9ರಿಂದ ವೇದಾಂತ್ ವಶಿಷ್ಠ ವಿರುದ್ಧ ಜಯ ಸಾಧಿಸಿದ್ದರು. ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 11-9, 6-11, 11-6 , 5-11, 11-7ರಿಂದ ಆಯುಷಿ ಬಿ. ಗೋಡ್ಸೆ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ 11-8, 10-12, 15-13, 11-9ರಿಂದ ಹಿಯಾ ಸಿಂಗ್ ವಿರುದ್ಧ; ಆಯುಷಿ 11-7, 11-5, 9-11, 8-11, 11-9ರಿಂದ ಹಿಮಾಂಶಿ ಚೌಧರಿ ವಿರುದ್ಧ ಗೆಲುವು ಪಡೆದಿದ್ದರು.

ಟ್ರೋಫಿಯೊಂದಿಗೆ ತನಿಷ್ಕಾ, ಅಥರ್ವ

ತರಬೇತಿಗಾಗಿ ಜರ್ಮನಿಗೆ ಜಾವೆಲಿನ್ ಥ್ರೋಪಟು ಅನುರಾಣಿ

ನವದೆಹಲಿ (ಪಿಟಿಐ): ಚೀನಾದಲ್ಲಿ ಈಚೆಗೆ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಮಹಿಳೆಯರ ವಿಭಾಗದ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಅನುರಾಣಿ ಅವರು ತರಬೇತಿಗಾಗಿ ಜರ್ಮನಿಗೆ ತೆರಳಲಿದ್ದಾರೆ.

ಭಾರತ ಸರ್ಕಾರದ ಕ್ರೀಡಾ ಸಚಿವಾಲಯದ ಮಿಷನ್ ಒಲಿಂಪಿಕ್ ಸೆಲ್ ಅನುರಾಣಿ ಸೇರಿದಂತೆ ಕೆಲವು ಕ್ರೀಡಾಪಟುಗಳಿಗೆ ಅನುಮತಿ ನೀಡಿದೆ.

ಅನುರಾಣಿ

ಜರ್ಮನಿಯಲ್ಲಿ ಕೋಚ್ ವೆರ್ನರ್ ಡೇನಿಯಲ್ಸ್ ಅವರ ಬಳಿ ಅನುರಾಣಿ ತರಬೇತಿ ಪಡೆಯಲಿದ್ದಾರೆ.

ಆರ್ಚರಿಪಟು ಧೀರಜ್ ಬೊಮ್ಮದೇವರ ಅವರು ದಕ್ಷಿಣ ಕೊರಿಯಾದಲ್ಲಿ ತರಬೇತಿ ಪಡೆಯುವರು. ಅಲ್ಲಿಯ ಕಿಮ್ ಆರ್ಚರಿ ಶಾಲೆಯಲ್ಲಿ ಕೋಚ್ ಸೋನಮ್ ಟಿಶೆರಿಂಗ್ ಭೂಟಿಯಾ ಅವರಿಂದ ತರಬೇತಿ ಪಡೆಯುವರು.

ಗ್ರಿಕೊ ರೋಮನ್ ಕುಸ್ತಿಪಟು ಸುನಿಲ್ ಕುಮಾರ್ ಅವರು ಹಂಗರಿಯ ಬುಡಾಪೆಸ್ಟ್‌ನಲ್ಲಿ 68 ದಿನಗಳ ಕಾಲ ತರಬೇತಿ ಪಡೆಯಲು ಸಲ್ಲಿಸಿದ್ದ ಪ್ರಸ್ತಾವವನ್ನೂ ಅನುಮೋದಿಸಲಾಗಿದೆ.

ಶಾಜಿ ಪ್ರಭಾಕರ್ ವಜಾ: ಸ್ಥಿರೀಕರಿಸಿದ ಕಾರ್ಯಕಾರಿ ಸಮಿತಿ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮಹಾ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಶಾಜಿ ಪ್ರಭಾಕರ್ ಅವರನ್ನು ವಜಾಗೊಳಿಸಿರುವ ಕ್ರಮವನ್ನು ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಗುರುವಾರ ಸ್ಥಿರೀಕರಿಸಿದೆ. ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ, ನಂಬಿಕೆದ್ರೋಹದ ಕಾರಣ ನೀಡಿ ಶಾಜಿ ಅವರನ್ನು ಬುಧವಾರ ವಜಾಗೊಳಿಸಿದ್ದರು.

ಚೌಬೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯು, ಕರ್ನಾಟಕದ ಎಂ. ಸತ್ಯನಾರಾಯಣ ಅವರನ್ನು ಮಹಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿದ ಕ್ರಮವನ್ನೂ ಅನುಮೋದಿಸಿತು. ಆ ಮೂಲಕ ಔಪಚಾರಿಕ ಕ್ರಮ ಪೂರೈಸಿತು. ಭಾರತ ತಂಡದ ಮಾಜಿ ನಾಯಕರಾದ ಬೈಚುಂಗ್ ಭುಟಿಯಾ, ಕ್ಲೈಮಾಕ್ಸ್ ಲಾರೆನ್ಸ್ ಸೇರಿ ನಾಲ್ವರು ಸದಸ್ಯರು ಸಭೆಗೆ ಗೈರುಹಾಜರಾಗಿದ್ದರು.

ಸತ್ಯನಾರಾಯಣ ಅವರನ್ನು ಆಗಸ್ಟ್‌ನಲ್ಲಿ ಫೆಡರೇಷನ್‌ನ ಉಪ ಮಹಾಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು.

‘ಫೀಫಾ ಸಂತೋಷ್ ಟ್ರೋಫಿ’: ಸಂತೋಷ್ ಟ್ರೋಫಿಗಾಗಿ ನಡೆಯುವ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಹೆಸರನ್ನು ಇನ್ನು ಮುಂದೆ ‘ಫೀಫಾ ಸಂತೋಷ್ ಟ್ರೋಫಿ’ ಎಂದು ಕರೆಯಲಾಗುವುದು ಎಂದು ಸಭೆಯ ವೇಳೆ ಚೌಬೆ ತಿಳಿಸಿದರು. ಮುಂದಿನ ಸಾಲಿನ ಚಾಂಪಿಯನ್‌ಷಿಪ್ ಅರುಣಾಚಲ ಪ್ರದೇಶದಲ್ಲಿ ನಡೆಯಲಿದೆ. ಮಾರ್ಚ್ 9 ಅಥವಾ 10ರಂದು ಫೈನಲ್ ನಿಗದಿಯಾಗಿದ್ದು, ಫೀಫಾ ಅಧ್ಯಕ್ಷ ಗಿಯಾನಿ ಇನ್ಫಾಂಟಿನೊ ಹಾಜರಾಗಬಹುದೆಂಬ ನಿರೀಕ್ಷೆಯಲ್ಲಿದ್ದೇವೆ ಎಂದರು.

‘ಕೆಲಸ ಗುರುತಿಸಿ ಹೊಣೆ’: ಬೆಂಗಳೂರು ವರದಿ: ‘ರಾಜ್ಯದಲ್ಲಿ ನಾನು ನಾಲ್ಕು ವರ್ಷಗಳಲ್ಲಿ ಮಾಡಿದ ಕೆಲಸ ಗುರುತಿಸಿ ಅಧ್ಯಕ್ಷರು ನನಗೆ ಈ ಜವಾಬ್ದಾರಿ ನೀಡಿದ್ದಾರೆ. ಈಗ ಒಳ್ಳೆಯ ತಂಡವಿದೆ. ಒಳ್ಳೆಯ ಕೆಲಸ ಮಾಡಲು ನನ್ನಿಂದಾಷ್ಟು ಪ್ರಯತ್ನಿಸುವೆ’ ಎಂದು ಸತ್ಯನಾರಾಯಣ ಅವರು ಗುರುವಾರ ‘ಪ್ರಜಾವಾಣಿ’ಗೆ ತಿಳಿಸಿದರು.

37ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ತೆರೆ

ಶ್ರೀಹರಿ ನಟರಾಜ್ ಶ್ರೇಷ್ಠ ಅಥ್ಲೀಟ್

ಪ್ರಜಾವಾಣಿ ವಾರ್ತೆ

ಪಣಜಿ: ಮಹಾರಾಷ್ಟ್ರ ತಂಡ, ಗುರುವಾರ ಮುಕ್ತಾಯಗೊಂಡ 37ನೇ ರಾಷ್ಟ್ರೀಯ ಕ್ರೀಡಾಕೂಟದ ಸಮಗ್ರ ಪ್ರಶಸ್ತಿ ಗೆದ್ದುಕೊಂಡು ರಾಜಾ ಭಲೀಂದ್ರ ಸಿಂಗ್ ರೋಲಿಂಗ್ ಟ್ರೋಫಿ ತನ್ನದಾಗಿಸಿಕೊಂಡಿತು. 1994ರ ನಂತರ ಮೊದಲ ಬಾರಿ ಮಹಾರಾಷ್ಟ್ರ ಈ ಟ್ರೋಫಿ ಗೆದ್ದುಕೊಂಡಿದೆ.

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ತಂಡಕ್ಕೆ ಟ್ರೋಫಿ ಪ್ರಧಾನ ಮಾಡಿದರು. ಅಂತರರಾಷ್ಟ್ರೀಯ ಕರ್ನಾಟಕದ ಈಜುಪಟು ಶ್ರೀಹರಿ ನಟರಾಜ್ ಎಂಟು ಚಿನ್ನ ಸೇರಿದಂತೆ ಹತ್ತು ಪದಕಗಳನ್ನು ಗೆದ್ದುಕೊಂಡು ಶ್ರೇಷ್ಠ ಅಥ್ಲೀಟ್ ಗೌರವಕ್ಕೆ ಭಾಜನರಾದರು. ಅವರು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರಿಂದ ಟ್ರೋಫಿ ಸ್ವೀಕರಿಸಿದರು.

ಮಹಾರಾಷ್ಟ್ರದ ರಿದಮಿಕ್ ಜಿಮ್ನಾಸ್ಟ್ ಸಂಯುಕ್ತಾ ಪ್ರಸೇನ್ ಕಾಳೆ ಮತ್ತು ಒಡಿಶಾದ ಪ್ರಣತಿ ನಾಯಕ್ ಅವರು ಶ್ರೇಷ್ಠ ಮಹಿಳಾ ಅಥ್ಲೀಟ್ ಟ್ರೋಫಿ ಹಂಚಿಕೊಂಡರು. ಇಬ್ಬರೂ ಜಿಮ್ನಾಸ್ಟಿಕ್ಸ್‌ನಲ್ಲಿ ತಲಾ ನಾಲ್ಕು ಚಿನ್ನ, ಒಂದು ಬೆಳ್ಳಿ ಪದಕ ಗೆದ್ದುಕೊಂಡರು.

ಮಹಾರಾಷ್ಟ್ರ ತಂಡ 228 ಪದಕಗಳೊಂದಿಗೆ (80 ಚಿನ್ನ, 69 ಬೆಳ್ಳಿ, 79 ಕಂಚು) ವಿಜೃಂಭಿಸಿತು. 2007ರಿಂದ ಕಳೆದ ವರ್ಷದವರೆಗೆ ಸರ್ವಿಸಸ್ ಅಗ್ರಸ್ಥಾನ ಗೆಲ್ಲುತ್ತಾ ಬಂದಿತ್ತು. ಈ ಬಾರಿ ಆ ತಂಡ ಎರಡನೇ ಸ್ಥಾನ (66 ಚಿನ್ನ, 27 ಬೆಳ್ಳಿ, 33 ಕಂಚು) ಪಡೆಯಿತು. ಆತಿಥೇಯ ಗೋವಾ 9ನೇ ಸ್ಥಾನ ಗಳಿಸಿ (27 ಚಿನ್ನ ಸೇರಿ 92 ಪದಕ) ತನ್ನ ಇದುವರೆಗಿನ ಶ್ರೇಷ್ಠ ಪ್ರದರ್ಶನ ನೀಡಿತು.

ಗಾಲ್ಫ್‌ನಲ್ಲಿ ಕರ್ನಾಟಕದ ಯಶಸ್ ರಾಮಚಂದ್ರ ಚಿನ್ನದ ಪದಕ ಪಡೆದರು. ಮಹಿಳೆಯರ ಟೀಮ್ ವಿಭಾಗದಲ್ಲಿ ವಿಧಾತ್ರಿ ಅರಸ್– ಸಾನ್ವಿ ಸೋಮು ಅವರು ಕಂಚಿನ ಪದಕ ಪಡೆದರು.

ಮುಂದಿನ, 38ನೇ ರಾಷ್ಟ್ರೀಯ ಕ್ರೀಡೆಗಳು ಉತ್ತರಾಖಂಡದಲ್ಲಿ ನಡೆಯಲಿವೆ.

ಶ್ರೇಷ್ಠ ಅಥ್ಲೀಟ್ ಗೌರವಕ್ಕೆ ಭಾಜನರಾದ ಕರ್ನಾಟಕದ ಈಜುಪಟು ಶ್ರೀಹರಿ ನಟರಾಜ್ ಟ್ರೋಫಿ ಪಡೆದರು

LG
ಪೈ ಇಂಟರ್‌ನ್ಯಾಷನಲ್
India ka Celebration
Life's Good.
FESTIVE EXCLUSIVE OFFERS
WIN LG DREAM HOME PACKAGE
Every Day*
OLED TV • Side-by-Side Refrigerator • Front Load Washing Machine • Water Purifier • Microwave Oven
GRAND PRIZE
AUDI Q3*
To participate in these offers, send an SMS <"First Name" "Last Name" GTM Code> to 7835073507
HOME APPLIANCES OFFERS
FREE* GLASS BOWL KIT (On Select Models of Microwave Oven)
FREE* Maintenance worth ₹4200* (Part of 1st Year Package) (On Select Models of Water Purifier)
HOME ENTERTAINMENT OFFERS
3 YEAR* WARRANTY (With Select LG TVs)
FREE* LG SMART CAM Worth ₹9990 (With Select LG TVs)
Up to 26%* CASHBACK Max ₹26000* ON SELECT CREDIT / DEBIT CARDS
OLED CIRCLE Get benefits up to ₹50000*
UP TO 30% OFF ON LG SOUNDBAR* (With Select LG TVs)
FIXED EMI Starting from ₹999*
ADDITIONAL OFFERS
1* EMI Free / 0* Down Payment
*T&C apply.
ಮೆಗಾ ಫೆಸ್ಟಿವಲ್ ಸೇಲ್
THE KING OF SALE IS BACK
ಗೆಲ್ಲಿರಿ 8 ಕೋಟಿ ಮೌಲ್ಯದ ವರೆಗೂ ಆಕರ್ಷಕ ಬಹುಮಾನಗಳು
ಗೆಲ್ಲಿರಿ 30 ಲಕ್ಷ ದವರೆಗೂ ಉಚಿತ ಶಾಪಿಂಗ್
ಗೆಲ್ಲಿರಿ 10 HYUNDAI AURA CARS
ಗೆಲ್ಲಿರಿ 10 HYUNDAI GRAND i10 NIOS CARS
MFS Offer is Available @ Pai International Only
Celebrate Diwali with irresistible offers from LG.
OLED C3 | 195(77) / 164(65) / 139(55)
• Self-LIT Pixels / α9 AI Processor 4K Gen6 / 120Hz
• Dolby Vision & Dolby Atmos
• NVIDIA G-Sync / AMD FreeSync / VRR / WiFi 6
26% CASHBACK ₹26000 EMI: ₹999*
UHD-UR9050 | 190(75) / 164(65) / 139(55) 108(43)
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹5000 EMI: ₹999*
Nano 80 | 164(65) / 139(55)
• Real 4K NanoCell / α5 AI Processor 4K Gen5
• AI Brightness Control, Local Dimming
• Built-in Google Assistant & Alexa
10% CASHBACK ₹7500 EMI: ₹999*
UHD-UR8040 | 190(75) / 177(70) / 164(65) 139(55) / 127(50)
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹5000 EMI: ₹999*
UHD-UR7790 | 108(43)
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹3500 EMI: ₹999*
Presenting Wi-Fi Convertible Powered by AI ThinQ
NOW, CONVERT FREEZER TO FRIDGE FROM ANYWHERE!
BUY 1 LG SIDE-BY-SIDE REFRIGERATOR*
GET 1 DOUBLE DOOR REFRIGERATOR*
Worth ₹29499/-*
GL-B257EPZX
Side-By-Side, AI ThinQ, DoorCooling+™, Hygiene Fresh+™, Smart Diagnosis™, Multi Air Flow, Express Freeze, Easy Ice Maker (Door Mounted), Multi Digital Sensor, Smart Inverter Compressor™, Colour: Shiny Steel
EMI: ₹4,999*
15% CASHBACK ₹12000
Capacity: 655/650* Litres
GL-T342TPZY
AI ThinQ™, DoorCooling+™, Convertible, Digital Display, Smart Inverter Compressor™, Toughened Glass Shelves, Lower Door Basket, Auto Smart Connect™, Rating: 3-Star*/2-Star^, Colour: Shiny Steel
EMI: ₹2,999*
15% CASHBACK ₹7000
Capacity: 343*/322^ Litres
GL-T262TESX#
AI ThinQ™, DoorCooling+™, Convertible, Digital Display, Smart Inverter Compressor™, Toughened Glass Shelves, Lower Door Basket, Auto Smart Connect™, Rating: 3-Star, Colour: Ebony Sheen
EMI: ₹1,999*
10% CASHBACK ₹2500
Capacity: 246* Litres
NEW ARRIVAL
FHD1107STB 11 kg (Wash) 7 kg (Dry)
AI DD®, 6 Motion DD, TurboWash 360°, Steam+, LG ThinQ™ (Wi-Fi), Smart Diagnosis, 10-Year Warranty*, RPM: Max. 1400, Color: Black VCM
15% CASHBACK ₹9000 EMI: ₹6,299*
FHP1411Z9B 11 kg
AI DD®, 6 Motion DD, TurboWash 360°, Steam+, LG ThinQ™ (Wi-Fi), Smart Diagnosis, 10-Year Warranty*, RPM: Max. 1400, Color: Platinum Silver
15% CASHBACK ₹9000 EMI: ₹2,999*
FHV1409Z4M 9 kg
AI DD®, 6 Motion DD, Steam™, Smart Diagnosis, 10-Year Warranty*, RPM: Max. 1400, Color: Middle Black
20% CASHBACK ₹12000 EMI: ₹3,317*
THD10SWP 10 kg
AI DD®, 6 Motion DD, Direct Drive Motor, TurboWash™, LG ThinQ™ (Wi-Fi), Smart Diagnosis, Color: Middle Black
12% CASHBACK ₹7000 EMI: ₹1,999*
T70AJMB1Z 7 kg
Smart Inverter Motor, Auto Tub Clean, Jet Spray+, TurboWash™, Smart Diagnosis, TurboDrum, Soft Closing Door, Color: Middle Black
5% CASHBACK ₹2500 EMI: ₹1,750*
*T&C apply.
PRODUCT & SERVICE RELATED ENQUIRIES
+91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY
FOR REFRIGERATORS, WASHING MACHINES, LED TV'S
Store Locator

ಪೂರ್ವಿಕಾ
ನಮ್ಮ ಮನೆ ದೀಪಾವಳಿ
ಪೂರ್ವಿಕಾವಿನಲ್ಲಿ ಪ್ರಾಡಕ್ಟ್‌ಗಳನ್ನು ಖರೀದಿಸಿ,
ಕೋಟಿಗಟ್ಟಲೆ ಬಹುಮಾನಗಳನ್ನು ಗೆಲ್ಲಿರಿ,
EXCHANGE BONUS* upto ₹10,000
WIN REFRIGERATOR
WIN WASHING MACHINE
WIN *Tata altroz car applicable only for Samsung smartphone customers only
WIN *BMW Bike applicable only for Vivo smartphone customers only
WIN AIRCONDITIONER
₹1* DOWN PAYMENT
WIN SMARTWATCH
WIN iPHONE 15
WIN SMARTTV
WIN GOLD VOUCHER worth ₹10,000 GOLD VOUCHER
WIN Upto ₹5,000 GIFT VOUCHER
WIN SMARTPHONE
WIN LAPTOP
HDFC BANK FESTIVE TREATS 10% INSTANT DISCOUNT* On Credit card & Debit card EMIs
*T&C Apply. #Min.Trxn: ₹15,000/-. Max discount upto ₹2,000. Offer valid from 21.10.2023 to 15.11.2023
ICICI Bank UP TO ₹3,000* DISCOUNT
10% INSTANT DISCOUNT* SBI card
#Min. Trxn.: ₹22,500; Max. Discount: ₹3,000 per card. Valid only on EMI Trxns. Validity: 15 Oct - 14 Nov 2023. T&C Apply.
iPhone 15 (128GB) ₹79,900 Effective Price ₹43,900* ₹68* Per day EMI
FREE Apple 20W adapter Worth ₹1,900
iPhone 15 Plus (128GB) ₹89,900 Effective Price ₹53,900* ₹82* Per day EMI
FREE Apple 20W adapter Worth ₹1,900
iPhone 13 (128GB) ₹69,900 Effective Price ₹23,990* ₹36* Per day EMI
*PRICE AFTER STORE DISCOUNT, EXCHANGE VALUE, EXCHANGE BONUS & BANK CASHBACK
vivo V29 5G Upto ₹3,500 Cashback
Upto 80% Discount on Smartglass Worth ₹6999
vivo Y200 5G NEW ARRIVAL Upto ₹2,500 Cashback
Upto 85% Discount on Calling Smartwatch Worth ₹6999
oppo Reno 10 Pro+ 5G Upto 10% INSTANT DISCOUNT SBI
Upto 75% Discount on Mixer Grinder Worth ₹4210
OPPO Find N3 Flip
FREE JBL TWS Worth ₹7,999
Upto ₹12,000 Bank Instant cashback
SAMSUNG Galaxy Z Fold 5 | Z Flip 5
Upto ₹9,000 UPGRADE BONUS + Upto ₹7,000 Bank Instant cashback
SAMSUNG Galaxy S23 FE 5G ₹59,900 EFFECTIVE PRICE ₹49,999* *Including Bank offer & Exchange Bonus
SAMSUNG Galaxy A34 5G Upto ₹3,000 DISCOUNT + Upto ₹2,000 SBI Cashback
SAMSUNG Galaxy A05S NEW ARRIVAL ₹1,666 EASY EMI + Upto ₹1,000 SBI Cashback
Redmi Note 12 5G Upto ₹2,250 ICICI Bank Bank Instant Cashback
Upto 85% Discount on Calling Smartwatch Worth ₹6999
Redmi 12C 6GB + 128GB ₹10,199 ₹9,399
Upto 65% Discount on Neckband Worth ₹1499
realme 11 5G 8GB + 256GB ₹19,999 ₹17,599
Upto 85% Discount on Calling Smartwatch Worth ₹6999
realme 11 Pro 5G ₹24,999 ₹23,599
Upto 85% Discount on Calling Smartwatch Worth ₹6999
TECNO Camon 20 Pro 5G Upto 10% INSTANT DISCOUNT
Upto 85% Discount on Calling Smartwatch Worth ₹6999
itel S23 (16GB* + 128GB) ₹10,999 SPECIAL PRICE ₹7,499
NOKIA G42 5G NEW ARRIVAL JUST PAY ₹1
Upto 85% Discount on Calling Smartwatch Worth ₹6999
ONEPLUS Nord CE 3 5G Upto ₹1,500 DISCOUNT + Upto ₹2,000 ICICI Bank Bank Instant Cashback
SMART TV'S
xiaomi Smart TV 32" A Series ₹24,999 EFFECTIVE PRICE ₹9,999* *Including Bank offer
Haier 32 & 43" TV Upto 10% INSTANT DISCOUNT EMI START @ ₹1,554
hp HP 15s fq 5202TU i5 EMI ₹2,985* Upto ₹2,000 INSTANT DISCOUNT
Lenovo IdeaPad Slim 1 R3 EMI ₹1,266* Upto 10% INSTANT DISCOUNT
DELL Inspiron 3520 i3 EMI ₹1,666* Upto ₹2,000 INSTANT DISCOUNT
ASUS TUF Gaming i5 EMI ₹3,582* Upto ₹3,000 INSTANT DISCOUNT
ASUS X1500EA i3 EMI ₹1,416* Upto 10% INSTANT DISCOUNT
Macbook Air M1 ₹99,900 Effective price ₹56,990
*PRICE AFTER STORE DISCOUNT, EXCHANGE VALUE, EXCHANGE BONUS & BANK CASHBACK
Buy ₹50,00 & above LAPTOPS & Get Hp Printer Worth ₹6,980 ₹3,999 only *On selected models only
BUY LAPTOPS & GET FREE* Keyboard & Mouse Mouse Pad Backpack Gaming Headset
Upto ₹10,000 EXCHANGE BONUS
conekt Rhythm Smartglass Upto 70% Discount ₹1999
ANKER Soundcore P25i TWS ₹2499 ₹1999
conekt Insane 1220 Soundbar ₹21999 ₹7499
JBL Tune 230NC TWS Upto 50% Discount
ZEBRONICS Yoga 2 ₹1699 ₹899
URBAN WAVE Smartwatch Upto 70% Discount ₹1,699
FIRE-BOLTT Atlas Smartwatch ₹18999 ₹2499
Buy Smartphone Below ₹10,000 & Get 65% upto DISCOUNT On neckbands worth ₹1,499
Buy Smartphone Above ₹40,000 & Get 75% upto DISCOUNT On Mixer Grinder worth ₹4,210
Buy Smartphone Above ₹25,000 & Get 80% upto DISCOUNT On Smart audio glass worth ₹6,999
Buy Smartphone Above ₹10,000 & Get 85% upto DISCOUNT On Smartwatch worth ₹6,999
60 DAYS FREE SCREEN* REPLACEMENT
SCAN QR CODE TO CHAT ONLINE
Upto 10%* INSTANT DISCOUNT
BAJAJ FINSERV
IDFC FIRST Bank
HDB FINANCIAL SERVICES
TVS CREDIT
HDFC BANK
ICICI Bank
FEDERAL BANK
kotak
Pine Labs
paytm
DBS
*EMI OPTIONS AVAILABLE ON SELECTED SHOWROOM ONLY
Customer Helpline : 99406 88855
Shop online @ www.poorvika.com
POORVIKA

ಶುಕ್ರವಾರ, ನವೆಂಬರ್ 10, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ನಡೆದ 'ಪಿಪ್ಪಾ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಮೃಣಾಲ್ ಠಾಕೂರ್ ಪಾಲ್ಗೊಂಡಿದ್ದರು

RAMRAJ

ಕಾಟನ್
ಭಾರತೀಯ ಸಂಸ್ಕೃತಿ

ಹಬ್ಬ ಬಂದರೆ
ರಾಮ್‌ರಾಜ್ ನಿರಂತರ!!

ಬದಲಾಗದ ನಮ್ಮ ಸಂಸ್ಕೃತಿ...!
ಎಂದೆಂದಿಗೂ ರಾಮ್‌ರಾಜ್ ನಿರಂತರ...!

RAMRAJ COTTON BANGALORE SHOWROOMS

Bangalore : KG Road • Shivaji Nagar • Ulsoor • Gandhi Bazar • Malleshwaram • Jayanagar : 30th Cross Road • SS Plaza, 10th B Main Road Koramangala • Rajaji Nagar • R.T. Nagar • Vijayanagar• Banashankari •Yeshwanthpur • Yelachenahalli• Uttarahalli • HSR Layout Ramamurthy Nagar • J.P. Nagar • RR Nagar • Marathahalli • KR Puram • Kengeri • Hesaragatta • Yelhanka • Nelamangala Devanahalli • Chintamani • Kanakapura • Ramnagara • Tumkur

Available at company showrooms & All Leading Textile Shops I Shop online @ www.ramrajcotton.in

202 ಮಂದಿಯಿಂದ ಚರ್ಮದಾನ • ಹೊರ ರಾಜ್ಯಗಳಿಂದಲೂ ಬೇಡಿಕೆ

ಚರ್ಮ ಬ್ಯಾಂಕ್: ಸೀಮಿತ ದಾಸ್ತಾನು

• ವರುಣ ಹೆಗಡೆ

ಬೆಂಗಳೂರು: ಬೆಂಕಿ ಅವಘಡ, ರಸ್ತೆ ಅಪಘಾತ ಸೇರಿ ವಿವಿಧ ಪ್ರಕರಣಗಳಿಂದಾಗಿ ಮನುಷ್ಯರ ಚರ್ಮಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಚರ್ಮದಾನದ ಬಗ್ಗೆ ಜನರಲ್ಲಿ ಅಷ್ಟಾಗಿ ಜಾಗೃತಿ ಮೂಡದಿದ್ದರಿಂದ ರಾಜ್ಯದ ಪ್ರಥಮ ಸರ್ಕಾರಿ ಚರ್ಮ ಬ್ಯಾಂಕ್‌ನಲ್ಲಿ ಸದ್ಯ 11 ಸಾವಿರ ಚದರ ಸೆಂ.ಮೀ. ಚರ್ಮ ಮಾತ್ರ ದಾಸ್ತಾನು ಇದೆ.

ಈಗ ಇರುವ ಚರ್ಮ 6 ರಿಂದ 15 ಮಂದಿಗೆ ಸಹಕಾರಿಯಾಗಲಿದೆ. ಪ್ರತಿ ವರ್ಷ ದೀಪಾವಳಿ ಸಂದರ್ಭದಲ್ಲಿ ಹೆಚ್ಚಾಗಿ ಪಟಾಕಿ ಅವಘಡಗಳು ವರದಿಯಾಗುತ್ತಿವೆ. ಈ ಅವಧಿಯಲ್ಲಿ ಸಹಜವಾಗಿ ಚರ್ಮಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಲಿದೆ. ವಿವಿಧ ಆಸ್ಪತ್ರೆಗಳೂ ಚರ್ಮ ಕಸಿಗಾಗಿ ಚರ್ಮಕ್ಕೆ ಬೇಡಿಕೆ ಸಲ್ಲಿಸಲಿವೆ. ಚರ್ಮದಾನಿಗಳ ಸಂಖ್ಯೆ ಏರಿಕೆಯಾಗದಿದ್ದರೆ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ.

2016ರಲ್ಲಿ ಆರಂಭವಾದ ಚರ್ಮ ಬ್ಯಾಂಕ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ವಿಕ್ಟೋರಿಯಾ ಆಸ್ಪತ್ರೆಯಡಿ ಕಾರ್ಯನಿರ್ವಹಿಸುತ್ತಿದೆ. ಇದುವರೆಗೆ 202 ಮೃತ ದಾನಿಗಳಿಂದ ಚರ್ಮ ಸಂಗ್ರಹಿಸಿರುವ ಬ್ಯಾಂಕ್, ಇತರ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಪೂರೈಸಿದೆ. ಈವರೆಗೆ 201 ಮಂದಿಗೆ ಉಚಿತವಾಗಿ ಚರ್ಮ ಕಸಿ ನಡೆಸಲು ಈ ಬ್ಯಾಂಕ್ ಸಹಕಾರಿಯಾಗಿದೆ.

2020 ಹಾಗೂ 2021ರಲ್ಲಿ ಕೋವಿಡ್ ಕಾರಣ ಚರ್ಮ ಸಂಗ್ರಹಕ್ಕೆ ಹಿನ್ನಡೆಯಾಗಿತ್ತು. ಕೋವಿಡ್ ಮೊದಲ ಅಲೆಯಲ್ಲಿ ಒಬ್ಬರಿಂದ ಮಾತ್ರ ಚರ್ಮ ಸಂಗ್ರಹ ಪ್ರಕ್ರಿಯೆ ನಡೆದಿತ್ತು. ಎರಡನೇ ಅಲೆಯ ಅವಧಿಯಲ್ಲಿ ಯಾವುದೇ ಮೃತ ವ್ಯಕ್ತಿಯ ಕುಟುಂಬದ ಸದಸ್ಯರು ಚರ್ಮದಾನಕ್ಕೆ ಸಂಬಂಧಿಸಿದಂತೆ ಚರ್ಮದ ಬ್ಯಾಂಕ್ ಸಂಪರ್ಕಿಸಿರಲಿಲ್ಲ. ಇದರಿಂದ ಬೇಡಿಕೆ ಹಾಗೂ ಪೂರೈಕೆ ನಡುವೆ ಭಾರಿ ವ್ಯತ್ಯಯವಾಗಿತ್ತು.

ಚರ್ಮದ ಕಸಿಗೆ ನೆರವು: 'ಸುಟ್ಟ ಗಾಯ, ರಸ್ತೆ ಅಪಘಾತ ಸೇರಿದಂತೆ ವಿವಿಧ ಸಂದರ್ಭದಲ್ಲಿ ಶೇ 50ಕ್ಕೂ ಅಧಿಕ ಚರ್ಮ ಹಾನಿಯಾದವರು ಚೇತರಿಸಿಕೊಳ್ಳಲು ಚರ್ಮದ ಕಸಿ ಅಗತ್ಯ. ವ್ಯಕ್ತಿ ಮೃತಪಟ್ಟ 6ರಿಂದ 8 ಗಂಟೆಯೊಳಗೆ ಚರ್ಮ ಪಡೆದುಕೊಳ್ಳಬೇಕು. ಚರ್ಮದಾನದ ಬಗ್ಗೆ ಬಹುತೇಕರಲ್ಲಿ ತಪ್ಪು ಕಲ್ಪನೆಯಿದೆ. ಇದರಿಂದಾಗಿ ಚರ್ಮ ಸಂಗ್ರಹಕ್ಕೆ ಹಿನ್ನಡೆಯಾಗುತ್ತಿದೆ' ಎಂದು ಸ್ಕಿನ್ ಬ್ಯಾಂಕ್ ಮುಖ್ಯಸ್ಥ ಡಾ.ಕೆ.ಟಿ. ರಮೇಶ್ ತಿಳಿಸಿದರು.

'ವ್ಯಕ್ತಿ ಮೃತಪಟ್ಟಾಗ ಕುಟುಂಬಸ್ಥರು ಅಂಗಾಂಗದ ಮಾದರಿಯಲ್ಲಿಯೇ ಚರ್ಮವನ್ನು ಕೂಡ ದಾನ ಮಾಡಬಹುದು. ರಾಜ್ಯದ ವಿವಿಧೆಡೆಯಿಂದಷ್ಟೇ ಅಲ್ಲದೆ, ಹೊರರಾಜ್ಯಗಳಿಂದಲೂ ಚರ್ಮಕ್ಕೆ ಬೇಡಿಕೆ ಸಲ್ಲಿಕೆಯಾಗುತ್ತಿದೆ. ಆದರೆ, ಬೇಡಿಕೆಯಷ್ಟು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಚರ್ಮ ಬ್ಯಾಂಕ್‌ನಲ್ಲಿ ಚರ್ಮವನ್ನು ಶೇಖರಿಸಿ ಇಡುತ್ತಿರುವುದು – ಪ್ರಜಾವಾಣಿ ಚಿತ್ರ

5 ವರ್ಷದವರೆಗೂ ಶೇಖರಣೆ ಸಾಧ್ಯ

18 ವರ್ಷ ದಾಟಿದ ವ್ಯಕ್ತಿ ಮರಣ ಹೊಂದಿದ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಪಡೆದು ಕಾಲು ಹಾಗೂ ತೊಡೆಯ ಭಾಗದ ಚರ್ಮದ ಮೇಲ್ಪದರ ಪಡೆಯಲಾಗುತ್ತದೆ. ದಾನಿಯು ಎಚ್‌ಐವಿ, ಎಚ್‌ಸಿವಿ, ಚರ್ಮದ ಕ್ಯಾನ್ಸರ್ ಪೀಡಿತರಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಚರ್ಮ ಪಡೆದು, ಅಗತ್ಯ ಇರುವವರಿಗೆ ಅದನ್ನು ನೀಡಲಾಗುತ್ತದೆ. ವೈದ್ಯಕೀಯ ಉಪಕರಣದ ಸಹಾಯದಿಂದ ರಕ್ತಸ್ರಾವ ಆಗದ ರೀತಿಯಲ್ಲಿ ಚರ್ಮದ ಮೇಲ್ಪದರವನ್ನು ಮಾತ್ರ ತೆಗೆಯಲಾಗುತ್ತದೆ ಎಂದು ಚರ್ಮ ಬ್ಯಾಂಕಿನ ಉಸ್ತುವಾರಿ ಬಿ.ಎನ್. ನಾಗರಾಜ್ ತಿಳಿಸಿದರು.

'ನೇತ್ರದಾನ, ಅಂಗಾಂಗಗಳನ್ನು ದಾನ ಮಾಡಲು ಜನ ಸಿದ್ಧರಿದ್ದಾರೆ. ಆದರೆ, ಚರ್ಮದಾನ ಮಾಡುವುದರಿಂದ ದೇಹ ವಿರೂಪಗೊಳ್ಳುತ್ತದೆ ಎಂಬ ತಪ್ಪು ಕಲ್ಪನೆಯಿಂದ ಹಿಂಜರಿಯುತ್ತಾರೆ. ದಾನಿಗಳಿಂದ ದೇಹದ ಎಲ್ಲ ಚರ್ಮ ಪಡೆಯುವುದಿಲ್ಲ. ತೊಡೆಗಳು ಮತ್ತು ಕಾಲುಗಳಿಂದ (1,000ದಿಂದ 1,500 ಚದರ ಸೆಂ.ಮೀ) ಚರ್ಮದ ಹೊರ ಪದರವನ್ನು ಮಾತ್ರ ಪಡೆಯಲಾಗುತ್ತದೆ' ಎಂದರು.

ಸಹಾಯವಾಣಿ: 080 26703633 ಅಥವಾ 8277576147

ವರ್ಷವಾರು ಚರ್ಮ ದಾನಿಗಳು

ವರ್ಷ	ದಾನಿಗಳು
2016	18
2017	40
2018	33
2019	17
2020	09
2021	18
2022	40
2023	36

ಚರ್ಮದಾನದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಜನರಿಗೆ ಜಾಗೃತಿ ಮೂಡುತ್ತಿದೆ. ಇದು ಕೂಡ ಅಂಗಾಂಗ ದಾನದಂತೆ ಸರಳ ಪ್ರಕ್ರಿಯೆ. ಜನರು ದಾನಕ್ಕೆ ಮುಂದೆ ಬರಬೇಕು
ಡಾ.ಕೆ.ಟಿ. ರಮೇಶ್
ಚರ್ಮ ಬ್ಯಾಂಕ್ ಮುಖ್ಯಸ್ಥ

ದೀಪಾವಳಿ: ಖಾಸಗಿ ಬಸ್ ದರ ದುಪ್ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಜೊತೆಗೆ, ವಾರಾಂತ್ಯದ ರಜಾ ದಿನಗಳು ಒಟ್ಟೊಟ್ಟಿಗೆ ಬಂದಿರುವುದರಿಂದ ಈ ಅವಧಿಯಲ್ಲಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಾಗಿದ್ದು, ಖಾಸಗಿ ಬಸ್‌ಗಳು ಟಿಕೆಟ್ ದರವನ್ನು ಏರಿಸಿವೆ.

ಶನಿವಾರದಿಂದ ಮಂಗಳವಾರದ ವರೆಗೆ ಸಾಲು ಸಾಲು ರಜೆಗಳಿದ್ದು, ಇದನ್ನು ಗಮನಿಸಿಯೇ ಕೆಲವು ಖಾಸಗಿ ಬಸ್‌ಗಳು ಶುಕ್ರವಾರ, ಶನಿವಾರ, ಭಾನುವಾರದ ಟಿಕೆಟ್ ದರವನ್ನು ಎರಡುಪಟ್ಟು ಹೆಚ್ಚಿಸಿದ್ದರೆ, ಇನ್ನೂ ಕೆಲವು ಬಸ್‌ಗಳು ಮೂರು ಪಟ್ಟು ಟಿಕೆಟ್ ದರ ಏರಿಸಿವೆ. ಸಾಮಾನ್ಯ ದಿನಗಳಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಖಾಸಗಿ ಬಸ್‌ಗಳಲ್ಲಿ ₹ 700 ರಿಂದ ₹ 1,000ವರೆಗೆ ಇದ್ದ ದರಗಳು ಈಗ ₹1,500ರಿಂದ ₹ 3,000 ವರೆಗೆ ಏರಿಕೆಯಾಗಿದೆ. ಮಂಗಳೂರಿಗೆ ₹ 700ರಿಂದ ₹ 950ರವರೆಗೆ ಇದ್ದಿದ್ದು ₹1400–₹ 2000ಕ್ಕೆ ಏರಿದೆ. ಶಿರಸಿಗೆ ₹ 700–₹ 900 ಇದ್ದಿದ್ದು ₹ 1850–₹ 2,500ರವರೆಗೆ ಹೆಚ್ಚಳವಾಗಿದೆ. ಇದೇ ರೀತಿ ರಾಜ್ಯದ ವಿವಿಧ ನಗರಗಳಿಗೆ ತೆರಳುವವರಿಗೆ ಬಸ್ ದರ ಬರೆ ಎಳೆದಿದೆ.

ಕೆಎಸ್‌ಆರ್‌ಟಿಸಿ ಭರ್ತಿ: ದೀಪಾವಳಿ ಪ್ರಯುಕ್ತ ಕೆಎಸ್‌ಆರ್‌ಟಿಸಿ 2000 ವಿಶೇಷ ಬಸ್‌ಗಳನ್ನು ನ.10ರಿಂದ ರಸ್ತೆಗೆ ಇಳಿಸುತ್ತಿದೆ. ಮುಂಗಡ ಕಾಯ್ದಿರಿಸಲು ಅವಕಾಶ ನೀಡಲಾಗಿದ್ದು, ಎಲ್ಲ ಬಸ್‌ಗಳ ಸೀಟುಗಳು ಭರ್ತಿಯಾಗಿವೆ. ತಡೆ ರಹಿತ ಬಸ್‌ಗಳಲ್ಲಿ ಮಾತ್ರ ಸೀಟುಗಳು ಲಭ್ಯವಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು ಹೊರರಾಜ್ಯಗಳ ಮಧುರೆ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್, ಎರ್ನಾಕುಲಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಚುನಾವಣೆಗೆ ಕೊಪ್ಪಳ ಕಾಂಗ್ರೆಸ್ ನಾಯಕರನ್ನು ಒಂದುಗೂಡಿಸುವ ಸವಾಲು

'ಲೋಕ'ದಲ್ಲೂ ಮುಂದುವರಿದ ಮುನಿಸು?

• ಪ್ರಮೋದ

ಕೊಪ್ಪಳ: ಜಿಲ್ಲೆಯ ಪ್ರತಿಷ್ಠಿತ ಕಣವಾಗಿದ್ದ ಗಂಗಾವತಿ ಕ್ಷೇತ್ರದಲ್ಲಿ ಹಿಂದಿನ ವಿಧಾನಸಭಾ ಚುನಾವಣೆ ವೇಳೆ ಆಂತರಿಕ ಬೇಗುದಿಯಿಂದ ಬಳಲಿದ್ದ ಕಾಂಗ್ರೆಸ್ ಪಕ್ಷದ ನಾಯಕರ ಮುನಿಸು ಇನ್ನೂ ಕಡಿಮೆಯಾದಂತಿಲ್ಲ.

ಆಗ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಮತ್ತು ವಿಧಾನಪರಿಷತ್ ಮಾಜಿ ಸದಸ್ಯ ಎಚ್.ಆರ್. ಶ್ರೀನಾಥ್ ಟಿಕೆಟ್ ಕೇಳಿದ್ದರು. ಹೈಕಮಾಂಡ್ ಅನ್ಸಾರಿ ಅವರಿಗೆ ಮಣೆ ಹಾಕಿದ್ದರಿಂದ ಮುನಿಸಿಕೊಂಡಿದ್ದ ಶ್ರೀನಾಥ್, ಗಂಗಾವತಿ ಕ್ಷೇತ್ರ ಬಿಟ್ಟು ಬೇರೆ ಕಡೆ ಪ್ರಚಾರ ಮಾಡಿದ್ದರು. ಶ್ರೀನಾಥ್ ಅವರ ಆಪ್ತ, ವಿಧಾನಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ತಮ್ಮ 'ದಣಿ'ಗೆ ಟಿಕೆಟ್ ಸಿಗದ ಕಾರಣಕ್ಕೆ ಕಾಂಗ್ರೆಸ್ ತೊರೆದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸೇರಿ ಜನಾರ್ದನ ರೆಡ್ಡಿ ಗೆಲುವಿಗೆ, ಅನ್ಸಾರಿ ಸೋಲಿಗೆ ಪ್ರಮುಖ ಕಾರಣರಾಗಿದ್ದರು.

ಸಂಗಟಿ ಅವರು ರೆಡ್ಡಿಗೆ ಬೆಂಬಲ ನೀಡಿದ್ದು, ಶ್ರೀನಾಥ್ ಅಸಹಕಾರ ತೋರಿದ್ದು ತಮ್ಮ ನಾಯಕನ ಸೋಲಿಗೆ ಕಾರಣ ಎನ್ನುವ ಬೇಸರ ಈಗಲೂ ಅನ್ಸಾರಿ ಅವರ ಬೆಂಬಲಿಗರಲ್ಲಿದೆ. ಲೋಕಸಭಾ ಚುನಾವಣೆಗೆ ತಯಾರಿ ನಡೆಸಲು ಕೊಪ್ಪಳದಲ್ಲಿ ನಡೆದ ಮೊದಲ ಪೂರ್ವಭಾವಿ ಸಭೆಯಲ್ಲಿ ಈ ಮುನಿಸು ಮತ್ತೆ ಬಹಿರಂಗವಾಗಿದೆ. ಅನ್ಸಾರಿ ಕಾರ್ಯಕ್ರಮದಿಂದ ದೂರ ಉಳಿದಿದ್ದರು.

ಇನ್ನೊಂದೆಡೆ ಕಾರ್ಯಕ್ರಮದ ಸ್ವಾಗತ ಬ್ಯಾನರ್‌ನಲ್ಲಿ ಎಚ್.ಆರ್. ಶ್ರೀನಾಥ್ ಭಾವಚಿತ್ರಕ್ಕೆ ಹಲವರು ಮಸಿ ಬಳಿದಿದ್ದಾರೆ. ಅಚ್ಚರಿಯೆಂದರೆ ಕೆಆರ್‌ಪಿಪಿ ಮುಖಂಡ ಸಂಗಟಿ ಚಿತ್ರವೂ ಕಾಂಗ್ರೆಸ್ ಕಾರ್ಯಕ್ರಮದಲ್ಲಿತ್ತು!

ಇದು ಜಿಲ್ಲೆಯ ರಾಜಕಾರಣದ ಪಡಸಾಲೆಯಲ್ಲಿ ಮತ್ತೆ ಚರ್ಚೆಗೆ ಗ್ರಾಸವಾಗಿದೆ. ಚುನಾವಣೆಯ ಫಲಿತಾಂಶದ ಬಳಿಕ ಅನ್ಸಾರಿ ಜಿಲ್ಲೆಯಲ್ಲಿ ನಡೆದ ಪಕ್ಷದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿಲ್ಲ. ಇತ್ತೀಚೆಗೆ ಮುಖ್ಯಮಂತ್ರಿ ಭೇಟಿ ನೀಡಿದ್ದಾಗ ಮಾತ್ರ ಬಂದಿದ್ದರು. ಶ್ರೀನಾಥ್ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ ಎಂದು ಖುದ್ದು ಅನ್ಸಾರಿಯೇ ಸಿ.ಎಂ.ಗೆ ದೂರು ನೀಡಿದ್ದರೂ ಯಾವುದೇ ಕ್ರಮವಾಗಿಲ್ಲ. ಇದು ಅನ್ಸಾರಿ ಬೇಸರಕ್ಕೆ ಕಾರಣವಾಗಿದೆ ಎನ್ನುವುದು ಸ್ಪಷ್ಟ.

'ಜಿಲ್ಲೆಯ ಕಾಂಗ್ರೆಸ್ ನಾಯಕರಲ್ಲಿ ಯಾವುದೇ ಆಂತರಿಕ ಭಿನ್ನಾಭಿಪ್ರಾಯ ಇಲ್ಲ' ಎಂದು ಪಕ್ಷದ ಜಿಲ್ಲಾಧ್ಯಕ್ಷರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳುತ್ತಿದ್ದಾರೆ. ಹೀಗಿದ್ದರೂ ಅನ್ಸಾರಿ ಮತ್ತು ಶ್ರೀನಾಥ್ ನಡುವಣ ಬಿಕ್ಕಟ್ಟು ಪಕ್ಷಕ್ಕೆ ಇಕ್ಕಟ್ಟಿನ ಪರಿಸ್ಥಿತಿ ತಂದೊಡ್ಡುತ್ತದೆ ಎನ್ನುವ ಆತಂಕ ಉಳಿದ ನಾಯಕರದ್ದಾಗಿದೆ. ಮುಂಬರುವ ಲೋಕಸಭಾ ಚುನಾವಣೆಗೆ ನಾಲ್ಕೈದು ಜನ ಆಕಾಂಕ್ಷಿಗಳಿರುವ ಕೊಪ್ಪಳ ಕ್ಷೇತ್ರದಲ್ಲಿ ಗಂಗಾವತಿಯ ನಾಯಕರನ್ನು ಸಂಭಾಳಿಸುವುದು ಉಳಿದವರಿಗೆ ಸವಾಲಾಗಿದೆ.

ಅಶಾಂತಿ ಸೃಷ್ಟಿಸಲು ಕಿಡಿಗೇಡಿಗಳು ಭಾವಚಿತ್ರಕ್ಕೆ ಮಸಿ ಬಳಿದಿದ್ದಾರೆ. ನಾನು ಪಕ್ಷ ವಿರೋಧಿ ಕೆಲಸ ಮಾಡಿಲ್ಲ. ಪಕ್ಷದ ನಿಷ್ಠಾವಂತ ನಾಯಕ
ಎಚ್.ಆರ್. ಶ್ರೀನಾಥ್,
ವಿಧಾನಪರಿಷತ್ ಮಾಜಿ ಸದಸ್ಯ

ಯಾರೂ ಪಕ್ಷ ವಿರೋಧಿ ಚಟುವಟಿಕೆ ಮಾಡದಂತೆ ನೋಡಿಕೊಳ್ಳುವೆ. ಪಕ್ಷ ಸೂಚಿಸುವ ಅಭ್ಯರ್ಥಿಯನ್ನು ಗೆಲ್ಲಿಸುವುದಕ್ಕೆ ನನ್ನ ಆದ್ಯತೆ
ಆರ್.ಬಿ.ತಿಮ್ಮಾಪುರ, ಚುನಾವಣೆ ವೀಕ್ಷಕ, ಕೊಪ್ಪಳ ಲೋಕಸಭಾ ಕ್ಷೇತ್ರ

ಸುದ್ದಿ 2 ನಿಮಿಷ

₹15 ಸಾವಿರ ಕೋಟಿ ಮೊತ್ತದ ವಿದ್ಯುತ್ ಯೋಜನೆಗೆ ಒಪ್ಪಂದ

ಬೆಂಗಳೂರು: ಜಲ ವಿದ್ಯುತ್, ಸೋಲಾರ್ ಸೇರಿದಂತೆ ₹15 ಸಾವಿರ ಕೋಟಿ ಮೊತ್ತದ ವಿವಿಧ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಗುರುವಾರ ಒಪ್ಪಂದ ಮಾಡಿಕೊಂಡಿತು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹಾಗೂ 'ತೆಹ್ರಿ ಹೈಡ್ರೊ ಡೆವಲಪ್‌ಮೆಂಟ್ ಕಾರ್ಪೊರೇಶನ್' (ಟಿಎಚ್‌ಡಿಸಿಎಲ್) ತಾಂತ್ರಿಕ ನಿರ್ದೇಶಕ ಭೂಪೇಂದ್ರ ಗುಪ್ತ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, ಕೇಂದ್ರ ಸರ್ಕಾರದ ಟಿಎಚ್‌ಡಿಸಿಎಲ್ ಜತೆ ಮಾಡಿಕೊಂಡಿರುವ ಈ ಒಪ್ಪಂದ ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು, ಕೊರತೆ ನೀಗಿಸಲು ಸಹಕಾರಿಯಾಗಲಿದೆ. ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ, ಯೋಜನೆಯ ತ್ವರಿತ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡಲಿದೆ ಎಂದು ಹೇಳಿದರು.

'ಕೇಂದ್ರ ಇಂಧನ ಸಚಿವ ಆರ್.ಕೆ.ಸಿಂಗ್ ಹಾಗೂ ಟಿಎಚ್‌ಡಿಸಿಎಲ್ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಆರ್.ಕೆ. ಬಿಷ್ಣೋಯ್ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ಚರ್ಚೆ ನಡೆಸಲಾಗಿತ್ತು. ಒಪ್ಪಂದದಂತೆ ಕದ್ರಾ ಜಲಾಶಯದಲ್ಲಿ 100 ಮೆಗಾವಾಟ್ ಸಾಮರ್ಥ್ಯದ 'ಫ್ಲೋಟಿಂಗ್ ಸೋಲಾರ್', 170 ಮೆಗಾವಾಟ್ ಸಾಮರ್ಥ್ಯದ ನೆಲದಡಿಯ ವಿದ್ಯುತ್ ಯೋಜನೆ, ಕೆಪಿಸಿಎಲ್ ಆವರಣದಲ್ಲಿ ಮೇಲ್ಛಾವಣಿ ಸೌರ ಸ್ಥಾವರ, ವಾರಾಹಿಯಲ್ಲಿ 1,500 ಮೆಗಾವಾಟ್ ಸಾಮರ್ಥ್ಯದ 'ಪಂಪ್ಡ್ ಸ್ಟೋರೇಜ್' ಘಟಕ ಸ್ಥಾಪನೆ ಮಾಡಲಾಗುವುದು ಎಂದು ವಿವರಿಸಿದರು.

ಬೀದರ್‌ನಲ್ಲಿ 500 ಮೆಗಾವಾಟ್ ಸಾಮರ್ಥ್ಯದ ಸೋಲಾರ್ ಪಾರ್ಕ್ ಸ್ಥಾಪಿಸಲು ಕ್ರೆಡಲ್ ಸಂಸ್ಥೆ ಹಾಗೂ ಟಿಎಚ್‌ಡಿಸಿಎಲ್ ಮಧ್ಯೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳಲಾಯಿತು.

ಶಾಲಾ ಪರೀಕ್ಷೆ ಮಂಡಳಿಗೆ ಮಂಜುಶ್ರೀ ಅಧ್ಯಕ್ಷೆ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧ್ಯಕ್ಷೆಯಾಗಿ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ವರ್ಗಾವಣೆ ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಯಾಗಿದ್ದ ಎನ್. ಮಂಜುಳಾ ಅವರನ್ನು ಮೂಲಸೌಕರ್ಯ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಈ ಹುದ್ದೆಯನ್ನು ಹೆಚ್ಚುವರಿಯಾಗಿ ನಿಭಾಯಿಸುತ್ತಿದ್ದ ಗೌರವಗುಪ್ತ ಅವರನ್ನು ಹೊಣೆಯಿಂದ ಬಿಡುಗಡೆ ಮಾಡಲಾಗಿದೆ.

ಕ್ರೂಸರ್‌ಗೆ ಟೆಂಪೊ ಡಿಕ್ಕಿ ಇಬ್ಬರು ಸ್ಥಳದಲ್ಲೇ ಸಾವು

ಕೋರ (ತುಮಕೂರು): ಇಲ್ಲಿನ ರಾಷ್ಟ್ರೀಯ ಹೆದ್ದಾರಿ ಬಳಿ ಗುರುವಾರ ಮುಂಜಾನೆ ನಿಂತಿದ್ದ ಕ್ರೂಸರ್‌ಗೆ ಹಿಂಬದಿಯಿಂದ ಟೆಂಪೊ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕ್ರೂಸರ್ ಚಾಲಕ ಗಂಗಾವತಿ ಮೂಲದ ಶಂಕರ್ (35), ಪಡಿತರ ವಿತರಣಾ ಕೇಂದ್ರದ ಮಾಲೀಕ ಸತೀಶ್ (40) ಮೃತರು.ಮತ್ತೊಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಡಿತರ ವಿತರಣಾ ಕೇಂದ್ರದ ಮಾಲೀಕರು ಕಮಿಷನ್ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರಿನಲ್ಲಿ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸಲೆಂದು ಸತೀಶ್ ತೆರಳುತ್ತಿದ್ದರು.

ಕ್ರೂಸರ್‌ನ ಹಿಂಬದಿ ಟೈಯರ್ ಪಂಕ್ಚರ್ ಆಗಿತ್ತು. ಹೆದ್ದಾರಿ ಬದಿ ವಾಹನ ನಿಲ್ಲಿಸಿ ಟೈಯರ್ ಬದಲಿಸುತ್ತಿದ್ದಾಗ ಟೆಂಪೊ ಚಾಲಕನ ಅಜಾಗರೂಕತೆಯಿಂದ ಅಪಘಾತ ನಡೆದಿದೆ. ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.

ಕೋರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತುಮಕೂರು ಗ್ರಾಮಾಂತರ ಸಿಪಿಐ ಲಕ್ಷ್ಮೀಕಾಂತ್, ಕೋರ ಪಿಎಸ್‌ಐ ಸಂಗಮೇಶ್ ಮೇಟಿ ಹಾಗೂ ಸಿಬ್ಬಂದಿ ಭೇಟಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸರ್ಕಾರದ ವಿರುದ್ಧ ಸತ್ಯಾಗ್ರಹ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರ ಅನುಮೋದಿಸಿದ್ದ ಕಾಮಗಾರಿ ಗಳಿಗೆ ಹಣ ಬಿಡುಗಡೆ ಮಾಡದ ಕಾಂಗ್ರೆಸ್ ಸರ್ಕಾರದ ವಿರುದ್ಧ ಸತ್ಯಾಗ್ರಹ ನಡೆಸಲಾಗುವುದು' ಎಂದು ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದಲ್ಲಿ ಹಣ ಬಿಡುಗಡೆಯಾಗದೆ ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಗುರುವಾರ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಕಾಂಗ್ರೆಸ್ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ. ಇದೊಂದೇ ಕ್ಷೇತ್ರವಲ್ಲ, ರಾಜ್ಯದ ಹಲವು ಭಾಗಗಳಲ್ಲಿ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಸರ್ಕಾರ ಅಭಿವೃದ್ಧಿಗೆ ಕೊಡಲಿ ಪೆಟ್ಟು ನೀಡಿದೆ. ಸರ್ಕಾರದ ಈ ಧೋರಣೆಯನ್ನು ಖಂಡಿಸಿ ಎಲ್ಲೆಡೆ ಪ್ರತಿಭಟನೆ ನಡೆಸಲಾಗುವುದು' ಎಂದರು.

'ವಿಧಾನಸೌಧ ಅಥವಾ ಸ್ವಾತಂತ್ರ್ಯ ಉದ್ಯಾನದಲ್ಲಿ ಈ ತಿಂಗಳ ಕೊನೆಯ ದಿನಗಳಲ್ಲಿ ಮೂರು ದಿನ ಸತ್ಯಾಗ್ರಹ ನಡೆಸಲಾಗುತ್ತದೆ. ಬೆಳಗಾವಿ ಅಧಿವೇಶದಲ್ಲಿ ಈ ವಿಚಾರದ ಬಗ್ಗೆ ಚರ್ಚಿಸಲು ಶಾಸಕರಿಗೆ ತಿಳಿಸಿದ್ದೇನೆ' ಎಂದರು.

'ಹಳೆಯ ಕೆಲಸಕ್ಕೂ ಶೇ 7.5ರಿಂದ 8ರಷ್ಟು ಕಮಿಷನ್ ಕೇಳುತ್ತಿದ್ದಾರೆ. ಹೀಗಾಗಿ, ಕೆಲಸ ಮಾಡಲು ಯಾವ ಗುತ್ತಿಗೆದಾರರೂ ಮುಂದೆ ಬರುತ್ತಿಲ್ಲ. ಈ ಸರ್ಕಾರದ ಆಡಳಿತ ವೈಖರಿಯನ್ನು ಖಂಡಿಸುತ್ತೇನೆ. ವೈಯಕ್ತಿಕ ದ್ವೇಷ ಮಾಡದೆ ಅಭಿವೃದ್ಧಿ ಕಾರ್ಯದತ್ತ ಗಮನಹರಿಸಬೇಕು' ಎಂದು ಒತ್ತಾಯಿಸಿದರು.

'ಕಾಮಗಾರಿಗಳಲ್ಲಿ ಅಕ್ರಮವಾಗಿದ್ದರೆ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳಬೇಕು. ಎಲ್ಲ ಕೆಲಸಗಳನ್ನು ತಡೆಹಿಡಿಯುವುದು ಸರಿಯಲ್ಲ' ಎಂದರು

'ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರಕ್ಕೆ ₹126 ಕೋಟಿ ಅನುದಾನ ರದ್ದುಪಡಿಸಿರುವುದನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡಿದ್ದೆ. ಆಗ ಯಡಿಯೂರಪ್ಪ ಅವರು ಸಮಾಧಾನ ಪಡಿಸಿದ್ದರು. ಇಂದಿಗೂ ಆ ಅನುದಾನ ನೀಡಿಲ್ಲ. ಹೀಗಾಗಿ, ನಮ್ಮ ನಾಯಕರು ಇದೀಗ ಸ್ಥಗಿತ ಕಾಮಗಾರಿಗಳ ವೀಕ್ಷಣೆ ಮಾಡಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗದೆ ಹಣ ಬಿಡುಗಡೆ ಮಾಡಬೇಕು' ಎಂದು ಶಾಸಕ ಮುನಿರತ್ನ ಆಗ್ರಹಿಸಿದರು.

'ಯಾರು ಎಲ್ಲಿಗಾದರೂ ಹೋಗಲಿ'

'ಯಾರು ಎಲ್ಲಿಗೆ ಬೇಕಾದರೂ ಹೋಗಲಿ, ಅದರ ಬಗ್ಗೆ ನಾನು ಚಿಂತೆ ಮಾಡುತ್ತಿಲ್ಲ' ಎಂದು ಯಡಿಯೂರಪ್ಪ ಹೇಳಿದರು. ದೀಪಾವಳಿ ಬಳಿಕ ಬಿಜೆಪಿಯ ಒಂದಷ್ಟು ನಾಯಕರು ಕಾಂಗ್ರೆಸ್ ಸೇರುವ ಬಗ್ಗೆ ಅವರು ಹೀಗೆ ಪ್ರತಿಕ್ರಿಯಿಸಿದರು. 'ರಾಜ್ಯ ಸರ್ಕಾರದ ವಿರುದ್ಧ ಪ್ರಬಲ ವಿರೋಧ ಪಕ್ಷವಾಗಿ ಕೆಲಸ ಮಾಡುವ ಬಗ್ಗೆ ಯೋಚಿಸುತ್ತೇನೆ' ಎಂದೂ ಅವರು ಹೇಳಿದರು.

ಮಂಗಳೂರು–ಬೆಂಗಳೂರು ಹೈಸ್ಪೀಡ್ ಕಾರಿಡಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮಂಗಳೂರು ಇಂಟಿಗ್ರೇಟೆಡ್ ಗ್ರೀನ್ ಫೀಲ್ಡ್ ಹೈಸ್ಪೀಡ್ ಕಾರಿಡಾರ್ ನಿರ್ಮಾಣ ಕುರಿತಂತೆ ಯೂರೋಪಿಯನ್ ಬ್ಯುಸಿನೆಸ್ ಅಂಡ್ ಟೆಕ್ನಾಲಜಿ ಸಂಸ್ಥೆಯ ನಿಯೋಗ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಗುರುವಾರ ಚರ್ಚೆ ನಡೆಸಿತು.

ಈ ಹೈಸ್ಪೀಡ್ ಕಾರಿಡಾರ್ ನಿರ್ಮಾಣದಿಂದ ಮಂಗಳೂರು ಅಭಿವೃದ್ಧಿಯ ಜತೆಗೆ ಮಾರ್ಗ ಮಧ್ಯೆ ಬರುವ ಇತರ ಎಲ್ಲ ನಗರಗಳ ಅಭಿವೃದ್ಧಿಗೂ ಸಹಕಾರಿಯಾಗಲಿದೆ. 6 ರಿಂದ 8 ಪಥಗಳ ಈ ಕಾರಿಡಾರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಂತದ ಮಾತುಕತೆ ನಡೆಯಿತು ಎಂದು ದಿನೇಶ್ ಗುಂಡೂರಾವ್ ಸುದ್ದಿಗಾರರಿಗೆ ತಿಳಿಸಿದರು.

ಈ ಯೋಜನೆಯಿಂದ ಮಂಗಳೂರು ಮಾತ್ರವಲ್ಲದೇ, ಇತರ ನಗರಗಳಿಗೂ ಹೆಚ್ಚಿನ ಬಂಡವಾಳ ಹರಿದು ಬರಲಿದ್ದು, ಈ ಎಲ್ಲ ನಗರಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮಂಗಳೂರು ಬಂದರಿಗೂ ಇದು ಸಂಪರ್ಕ ಕಲ್ಪಿಸುವುದರಿಂದ ವ್ಯಾಪಾರ– ಉದ್ಯಮಗಳ ಬೆಳವಣಿಗೆಗೂ ಅನುಕೂಲವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರಿಡಾರ್ ಸಾಗಿ ಹೋಗುವ ನಕಾಶೆ ಸಮೇತ ಹೆಚ್ಚಿನ ಮಾಹಿತಿಯೊಂದಿಗೆ ಚರ್ಚಿಸುವ ಅಗತ್ಯವಿದೆ. ಈ ವಿಚಾರವಾಗಿ ಲೋಕೋಪಯೋಗಿ ಸಚಿವರು ಮತ್ತು ಮುಖ್ಯಮಂತ್ರಿ ಅವರ ಜತೆ ಮಾತುಕತೆ ನಡೆಸುವುದಾಗಿಯೂ ದಿನೇಶ್ ಭರವಸೆ ನೀಡಿದರು.

ಮಂಗಳೂರು ಸುಸ್ಥಿರ ಅಭಿವೃದ್ಧಿಗೆ ಸಹಾಯಕವಾಗುವ ಇಂತಹ ಯೋಜನೆಗಳನ್ನು ರಾಜ್ಯ ಸರ್ಕಾರ ಪ್ರೋತ್ಸಾಹಿಸಲಿದೆ. ಇಂತಹ ಯೋಜನೆಗಳ ಅನುಷ್ಠಾನಕ್ಕೆ ಖಾಸಗಿ ಸಹಭಾಗಿತ್ವವೂ ಬೇಕಾಗಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ಉಡುಪಿ ಜಿಲ್ಲಾ ಉಸ್ತುವಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಇದ್ದರು.

ಹಲವು ಮಂದಿ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುವ ಸಾಧ್ಯತೆ

'ಫ್ರೂಟ್ಸ್' ನೋಂದಣಿಗೆ ರೈತರ ನಿರಾಸಕ್ತಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬೆಳೆ ವಿಮೆ, ಬರ ಪರಿಹಾರ ಸೇರಿ ವಿವಿಧ ಸೌಲಭ್ಯಗಳನ್ನು ಪಡೆಯಲು 'ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ' (ಫ್ರೂಟ್ಸ್) ತಂತ್ರಾಂಶದಲ್ಲಿ ರೈತರು ಹೆಸರು ನೋಂದಾಯಿಸಬೇಕು. ಗುರುತಿನ ಸಂಖ್ಯೆ ಪಡೆಯಬೇಕು. ಆದರೆ, ನೋಂದಣಿಗೆ ಬಹುತೇಕ ಮಂದಿ ನಿರಾಸಕ್ತಿ ತೋರಿರುವ ಕಾರಣ ಸೌಲಭ್ಯದಿಂದ ವಂಚಿತರಾಗುವ ಸಾಧ್ಯತೆ ಹೆಚ್ಚಿದೆ.

ರಾಜ್ಯದಲ್ಲಿ 2.12 ಕೋಟಿ ಸರ್ವೆ ಸಂಖ್ಯೆಗಳಿವೆ (ಪ್ಲಾಟ್). 'ಫ್ರೂಟ್ಸ್' ತಂತ್ರಾಂಶದಲ್ಲಿ 1.30 ಕೋಟಿ ಸರ್ವೆ ನಂಬರ್ ನೋಂದಣಿಯಾಗಿವೆ. ಶೇ 79.78ರಷ್ಟು ನೋಂದಣಿಯಾಗಿದ್ದು, ಗದಗ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಶೇ 42.46 ನೋಂದಾಯಿಸಿರುವ ಬೆಂಗಳೂರು ನಗರ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಇನ್ನೂ 82 ಲಕ್ಷ ನೋಂದಣಿ ಆಗಬೇಕಿದೆ.

ಒಬ್ಬ ರೈತನಿಗೆ ಐದು ಎಕರೆವರೆಗೆ ಬರ ಪರಿಹಾರ ನೀಡಲು ಅವಕಾಶವಿದೆ. ಐದು ಎಕರೆ ಭೂಮಿಯನ್ನು ಎರಡು ಸರ್ವೆ ಸಂಖ್ಯೆಗಳಲ್ಲಿ ಹೊಂದಿರುವ ರೈತರು, ಎರಡು ಎಕರೆ ಭೂಮಿಯ ಒಂದು ಸರ್ವೆ ಸಂಖ್ಯೆ ನೀಡಿ 'ಫ್ರೂಟ್ಸ್' ತಂತ್ರಾಂಶದಲ್ಲಿ ಹೆಸರು ನೋಂದಾಯಿಸಿದ್ದಾರೆ. ಆದರೆ, ಇನ್ನೂ ಮೂರು ಎಕರೆ ಭೂಮಿಯ ಸರ್ವೆ ಸಂಖ್ಯೆ ನೋಂದಾಯಿಸಿಲ್ಲ. ಇದರಿಂದ ಎರಡು ಎಕರೆ ಭೂಮಿಗೆ ಮಾತ್ರ ಪರಿಹಾರ ಸಿಗುತ್ತದೆಯೇ ಹೊರತು ಉಳಿದ ಮೂರು ಎಕರೆ ಭೂಮಿಗೆ ಸಿಗುವುದಿಲ್ಲ.

'ಪ್ರತಿಯೊಬ್ಬ ರೈತ ತಾವು ಹೊಂದಿರುವ ಭೂಮಿಯ ಎಲ್ಲ ಸರ್ವೆ ಸಂಖ್ಯೆಗಳನ್ನು ತಂತ್ರಾಂಶದಲ್ಲಿ ದಾಖಲಿಸಬೇಕು. ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ಸೌಲಭ್ಯ, ಬ್ಯಾಂಕ್ ಸಾಲ ಸೇರಿ ವಿವಿಧ ಸೌಲಭ್ಯಗಳನ್ನು ಪಡೆಯಲು ಇದೇ ಆಧಾರ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಲಕ್ಷ್ಮಣ ಕಳ್ಳೇನ್ನವರ ತಿಳಿಸಿದರು.

'ನಾಲ್ಕು ವರ್ಷಗಳಿಂದ ತಂತ್ರಾಂಶದಲ್ಲಿ ರೈತರ ಭೂ ದಾಖಲೆಗಳನ್ನು ನೋಂದಾಯಿಸುವ ಕಾರ್ಯ ನಡೆದಿದ್ದು, ರಾಜ್ಯದಲ್ಲಿ ಈವರೆಗೆ ಶೇ 61.34ರಷ್ಟು ದಾಖಲಿಸಲು ಸಾಧ್ಯವಾಗಿದೆ. ನೋಂದಣಿ ಆಗದಿದ್ದರೆ, ಪರಿಹಾರ ಸಿಗುವುದಿಲ್ಲ' ಎಂದರು.

'ಎಲ್ಲ ಹೊಲಗಳ ನೋಂದಣಿ ಮಾಡಬೇಕು ಎಂಬ ಮಾಹಿತಿ ರೈತರಿಗೆ ಗೊತ್ತಿಲ್ಲ. ಹಲವಾರು ರೈತರು ಒಂದೇ ಹೊಲ ನೋಂದಣಿ ಮಾಡಿಕೊಂಡಿದ್ದಾರೆ' ಎಂದು ರೈತ ಮುಖಂಡ, ಬೀಳಗಿಯ ಸಿದ್ದಪ್ಪ ಬಳಗಾನೂರ ತಿಳಿಸಿದರು.

ಎಲ್ಲೆಲ್ಲಿ ನೋಂದಣಿ

ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ, ಪಶುಸಂಗೋಪನೆ, ರೇಷ್ಮೆ ಇಲಾಖೆ ಕಚೇರಿಗಳಲ್ಲಿ, ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿ ಬಳಿ ನೋಂದಣಿ ಮಾಡಿಸಬಹುದು. ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಒಂದು ಭಾವಚಿತ್ರ, ಜಾತಿ ಪ್ರಮಾಣಪತ್ರ (ಪರಿಶಿಷ್ಟ ಜಾತಿ, ಪಂಗಡದವರು) ಪ್ರತಿಗಳನ್ನು ನೀಡಿದರೆ, ಹೆಸರು ನೋಂದಣಿ ಆಗುತ್ತದೆ.

ದೊರೆಯುವ ಸೌಲಭ್ಯ

'ಫ್ರೂಟ್ಸ್'ನಲ್ಲಿ ಭೂ ವಿವರ ನೋಂದಾಯಿಸಿಕೊಂಡು ಗುರುತಿನ ಸಂಖ್ಯೆ ಪಡೆದರೆ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯಲ್ಲಿ ಸಿಗುವ ಬೀಜ, ರಸಗೊಬ್ಬರ, ಕೃಷಿ ಯಂತ್ರೋಪಕರಣ, ಹನಿ ನೀರಾವರಿ ಸೇರಿದಂತೆ ವಿವಿಧ ಖರೀದಿಗಳ ಮೇಲೆ ಸಬ್ಸಿಡಿ ಪಡೆಯಬಹುದಾಗಿದೆ. ಪಶು ಸಂಗೋಪನೆ, ಮೀನುಗಾರಿಕೆ ಇಲಾಖೆಯ ಸೌಲಭ್ಯಗಳಿಗೂ ಅನ್ವಯವಾಗಲಿದೆ.

ಹೊಲದಲ್ಲಿ ಬೆಳೆದಿರುವ ಮಾಹಿತಿ ಇದರಲ್ಲಿಯೇ ದೊರೆಯಲಿದ್ದು, ಅದನ್ನು ಆಧರಿಸಿದ ಬೆಳೆ ವಿಮೆ ಪರಿಹಾರ, ಬರ ಪರಿಹಾರ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ರೈತರಿಗೆ ಬ್ಯಾಂಕ್‌ಗಳು ಸಾಲವನ್ನೂ ಇದೇ ಆಧಾರದ ಮೇಲೆ ನೀಡಲಿವೆ. ಬೆಂಬಲ ಬೆಲೆಯಡಿ ಮಾರಾಟಕ್ಕೂ ಬೇಕಾಗಲಿದೆ.

ರಾಜ್ಯದಲ್ಲಿ ನೋಂದಣಿಯಾಗಿರುವ ವಿವರ

ಜಿಲ್ಲೆ	ಶೇಕಡವಾರ
ಗದಗ	79.78
ಬಾಗಲಕೋಟೆ	76.87
ಹಾವೇರಿ	75.44
ದಾವಣಗೆರೆ	71.41
ಚಿತ್ರದುರ್ಗ	71.29
ಧಾರವಾಡ	70.79
ವಿಜಯಪುರ	70.30
ಕೊಪ್ಪಳ	68.86
ಕಲಬುರಗಿ	67.92
ಬೀದರ	67.73
ಶಿವಮೊಗ್ಗ	65.96
ಹಾಸನ	65.87
ಬೆಳಗಾವಿ	65.73
ವಿಜಯನಗರ	64.59
ಉತ್ತರ ಕನ್ನಡ	63.09
ಯಾದಗಿರಿ	61.73
ಚಿಕ್ಕಬಳ್ಳಾಪುರ	60.02
ಮಂಡ್ಯ	59.49
ರಾಯಚೂರು	58.51
ಚಿಕ್ಕಮಗಳೂರು	58.28
ಬೆಂಗಳೂರು ಗ್ರಾಮೀಣ	58.08
ಬಳ್ಳಾರಿ	57.80
ಕೋಲಾರ	57.43
ಕೊಡಗು	56.19
ತುಮಕೂರು	55.98
ಮೈಸೂರು	54.46
ಚಾಮರಾಜನಗರ	53.58
ದಕ್ಷಿಣ ಕನ್ನಡ	49.35
ರಾಮನಗರ	48.91
ಉಡುಪಿ	48.41
ಬೆಂಗಳೂರು ಗ್ರಾಮೀಣ	42.56

'ಫ್ರೂಟ್ಸ್' ನೋಂದಣಿಯಲ್ಲಿ ಬಾಗಲಕೋಟೆ ಜಿಲ್ಲೆ (ಶೇ 76.87) ರಾಜ್ಯಕ್ಕೆ ಎರಡನೇ ಸ್ಥಾನದಲ್ಲಿದೆ. ಶೀಘ್ರ ನೋಂದಣಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ
ಕೆ.ಎಂ. ಜಾನಕಿ,
ಜಿಲ್ಲಾಧಿಕಾರಿ, ಬಾಗಲಕೋಟೆ

ಬರ ಪರಿಹಾರ ಸಿಗದಿರುವ ಬಗ್ಗೆ ದೂರುಗಳಿವೆ. ಇದನ್ನು ನಿವಾರಿಸಲು 'ಫ್ರೂಟ್ಸ್' ತಂತ್ರಾಂಶ ಆಧರಿಸಿ ಪರಿಹಾರ ಬಿಡುಗಡೆ ಮಾಡುವ ಉದ್ದೇಶವಿದೆ
ಕೃಷ್ಣ ಬೈರೇಗೌಡ,
ಕಂದಾಯ ಸಚಿವ

ಕುರುಬಗೊಂಡ ಬ್ಯಾಂಕ್‌ನಲ್ಲಿ ನಗದು, ಚಿನ್ನಾಭರಣ ನಾಪತ್ತೆ

ಬ್ಯಾಂಕ್‌ಗೆ ₹1.62 ಕೋಟಿ ವಂಚನೆ ಸಹಾಯಕ ವ್ಯವಸ್ಥಾಪಕಿ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ತಾಲ್ಲೂಕಿನ ಕುರುಬಗೊಂಡ ಗ್ರಾಮದ ಯೂನಿಯನ್ ಬ್ಯಾಂಕ್‌ನಲ್ಲಿ ಲಕ್ಷಾಂತರ ರೂಪಾಯಿ ನಗದು ಮತ್ತು ಚಿನ್ನಾಭರಣ ದೋಚಿ, ಗ್ರಾಹಕರಿಗೆ ವಂಚಿಸಿದ ಆರೋಪದ ಮೇಲೆ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕಿ ಅರ್ಚನಾ ಬೆಟಗೇರಿ ಎಂಬವರನ್ನು ಹಾವೇರಿಯ ಸಿಇಎನ್ ಅಪರಾಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅರ್ಚನಾ ಬೆಟಗೇರಿ, ದಿನಗೂಲಿ ಕೆಲಸಗಾರ ಶಾಂತಪ್ಪ ಯಲಗಚ್ಚ ಮತ್ತು 'ಬಿಸಿನೆಸ್ ಕರೆಸ್ಪಾಂಡೆಂಟ್' ಪ್ರವೀಣ ಚಿಕ್ಕಲಿಂಗದಹಳ್ಳಿ ಎಂಬವರ ಮೇಲೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕ ರವಿರಾಜ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಎಟಿಎಂನಿಂದಲೂ ಹಣ ದರೋಡೆ: '13 ಗ್ರಾಹಕರು ಬ್ಯಾಂಕ್‌ನಲ್ಲಿ ಚಿನ್ನಾಭರಣ ಒತ್ತೆ ಇಟ್ಟು, ಸಾಲ ಪಡೆದಿದ್ದ ಒಟ್ಟು ₹49,47,792 ಮೌಲ್ಯದ ಚಿನ್ನಾಭರಣವನ್ನು ಅರ್ಚನಾ ಬೆಟಗೇರಿ ಒಯ್ದಿದ್ದಾರೆ. ಎರಡನೇ ಆರೋಪಿ ಶಾಂತಪ್ಪ ಮತ್ತು ಮೂರನೇ ಆರೋಪಿ ಪ್ರವೀಣ ಜೊತೆ ಸೇರಿ ಒಳಸಂಚು ಮಾಡಿ, ಕುರುಬಗೊಂಡ ಬ್ಯಾಂಕ್ ಆವರಣದಲ್ಲಿನ ಎಟಿಎಂ ಕೇಂದ್ರದಿಂದ ₹31,33,500 ನಗದನ್ನು ಚೀಲಗಳಲ್ಲಿ ತುಂಬಿಕೊಂಡು ಹೋಗಿದ್ದಾರೆ' ಎಂದು ದೂರಿನಲ್ಲಿ ಹೇಳಲಾಗಿದೆ.

ಸುಳ್ಳು ಲೆಕ್ಕ ಸೃಷ್ಟಿ: 'ಬ್ಯಾಂಕ್‌ನ ಭದ್ರತಾ ಕೊಠಡಿಗೆ ಹೋಗಿ ಅಲ್ಲಿನ ದಾಖಲೆಗಳನ್ನು ಚೀಲಗಳಲ್ಲಿ ತುಂಬಿಕೊಂಡು, ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ನಂಬಿಕೆ ದ್ರೋಹ ಮಾಡಿ, ಸುಳ್ಳು ಲೆಕ್ಕ ನಮೂದಿಸಿ, ಎಲೆಕ್ಟ್ರಾನಿಕ್ ದಸ್ತಾವೇಜು ಸೃಷ್ಟಿಸಿ, ಗ್ರಾಹಕರಿಂದ ಪಡೆದ ಡಿಪಾಜಿಟ್ ಹಣದ ಬಗ್ಗೆ ಕಂಪ್ಯೂಟರ್‌ಗಳಲ್ಲಿ ದಾಖಲಿಸದೇ ಮೋಸ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅರ್ಚನಾ ಬೆಟಗೇರಿ

ಯೂನಿಯನ್ ಬ್ಯಾಂಕಿನ ಕುರುಬಗೊಂಡ ಶಾಖೆಯ ಆವರಣ

ಕುರುಬಗೊಂಡ ಯೂನಿಯನ್ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿಚಾರಣೆ ನಡೆದಿದೆ. ತನಿಖೆಯಲ್ಲಿ ಇನ್ನಷ್ಟು ಮಾಹಿತಿ ಲಭ್ಯವಾಗಲಿದೆ
ಶಿವಕುಮಾರ ಗುಣಾರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

ಏನಿದು ಪ್ರಕರಣ?

ಕುರುಬಗೊಂಡ ಶಾಖೆಯ ಯೂನಿಯನ್ ಬ್ಯಾಂಕ್‌ನಲ್ಲಿ ಅರ್ಚನಾ ಬೆಟಗೇರಿ ಎರಡೂವರೆ ವರ್ಷಗಳಿಂದ ಪ್ರಭಾರ ವ್ಯವಸ್ಥಾಪಕಿಯಾಗಿದ್ದಾರೆ. ಸ್ವಂತ ಲಾಭಕ್ಕಾಗಿ ಗ್ರಾಹಕರ ₹1,12,78,920 ನಗದು ಮತ್ತು ₹49,47,792 ಮೌಲ್ಯದ ಚಿನ್ನಾಭರಣ ಸೇರಿ ಒಟ್ಟು ₹1.62 ಕೋಟಿ ವಂಚಿಸಿರುವ ಬಗ್ಗೆ ದೂರಿನಲ್ಲಿ ತಿಳಿಸಲಾಗಿದೆ.

'ಬ್ಯಾಂಕ್‌ಗೆ ಹಣ ಜಮೆ ಮಾಡಲು ಬಂದ 9 ಗ್ರಾಹಕರಿಂದ ಒಟ್ಟು ₹81,45,420 ಪಡೆದು, ನಗದು ರಸೀದಿಗಳಿಗೆ ಮತ್ತು ಭದ್ರತಾ ಪತ್ರಗಳಿಗೆ ಸಹಿ ಮಾಡಿ, ಸೀಲು ಹಾಕಿ ಗ್ರಾಹಕರಿಗೆ ಕೊಟ್ಟಿದ್ದರು. ನಂತರ ಗ್ರಾಹಕರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡದೆ ಅರ್ಚನಾ ಸ್ವಂತಕ್ಕೆ ಬಳಸಿಕೊಂಡಿದ್ದಾರೆ' ಎಂದು ಆರೋಪಿಸಲಾಗಿದೆ.

ಶುಕ್ರವಾರ, ನವೆಂಬರ್ 10, 2023 | ₹ 7.00 |
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ನಾ ಕೋಳಿಕ್ಕೆ ರಂಗ' ಎನ್ನುತ್ತಾ ಬಂದಿದ್ದಾರೆ ನಟ ಮಾಸ್ಟರ್ ಆನಂದ್

ಮಲ್ಟಿಸ್ಪೆಶಾಲಿಟ ಆಸ್ಪತ್ರೆಗಾಗಿ ಹೋರಾಟ 2B
ಹಳೆ ಕಾಫಿಗೆ ಬೇಡಿಕೆ ಕುಸಿತ: ಷರತ್ತು ವಿಧಿಸಿದ ಖರೀದಿ ಏಜೆನ್ಸಿಗಳು
ಆಳ-ಅಗಲ
ತಮಿಳುನಾಡಿನಲ್ಲಿ ಮೀಸಲಾತಿ ಶೇ 69 + 10
ಯುದ್ಧ, ಬಿಕ್ಕಟ್ಟು; ಗ್ರಾನೈಟ್ ಉದ್ಯಮಕ್ಕೆ ಹೊಡೆತ 2B
ಆಘಾತ ತಂದ ಏಜೆನ್ಸಿಗಳ ನಿರ್ಧಾರ 2B

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಶಾಸಕರು, ಸಂಸದರ ವಿರುದ್ಧ ಕ್ರಿಮಿನಲ್ ಪ್ರಕರಣಗಳು

ತ್ವರಿತ ವಿಚಾರಣೆಗೆ ವಿಶೇಷ ಪೀಠ

ನವದೆಹಲಿ (ಪಿಟಿಐ): ಶಾಸಕರು ಹಾಗೂ ಸಂಸದರ ವಿರುದ್ಧ ದಾಖಲಾಗಿರುವ ಐದು ಸಾವಿರಕ್ಕೂ ಹೆಚ್ಚಿನ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯು ತ್ವರಿತವಾಗಿ ನಡೆಯುವಂತೆ ನೋಡಿಕೊಳ್ಳಲು ವಿಶೇಷ ಪೀಠ ರಚಿಸಬೇಕು ಎಂದು ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚನೆ ನೀಡಿದೆ.

ಇಂತಹ ಪ್ರಕರಣಗಳಲ್ಲಿ 'ಅಪರೂಪದ ಹಾಗೂ ಬಲವಾದ ಕಾರಣಗಳು ಇಲ್ಲದಿದ್ದರೆ ವಿಶೇಷ ನ್ಯಾಯಾಲಯಗಳು ವಿಚಾರಣೆಯನ್ನು ಮುಂದೂಡಬಾರದು' ಎಂದು ಕೂಡ ಸುಪ್ರೀಂ ಕೋರ್ಟ್ ಸೂಚಿಸಿದೆ.

ಹೈಕೋರ್ಟ್‌ಗಳು, ಜಿಲ್ಲಾ ನ್ಯಾಯಾಧೀಶರು ಹಾಗೂ ಶಾಸಕರು, ಸಂಸದರಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗೆ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯಗಳಿಗೆ ಹಲವು ಮಾರ್ಗ-ದರ್ಶನಗಳನ್ನು ನೀಡಿರುವ ಸುಪ್ರೀಂ ಕೋರ್ಟ್, ಸಂಸದರು ಮತ್ತು ಶಾಸಕರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಆದ್ಯತೆ ನೀಡಬೇಕು ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಈ ಸೂಚನೆಗಳನ್ನು ನೀಡಿದೆ. ದೇಶದಾದ್ಯಂತ ಇರುವ ವಿಚಾರಣಾ ನ್ಯಾಯಾಲಯಗಳಿಗೆ ಅನ್ವಯವಾಗುವಂತೆ ಏಕರೂಪಿ ಮಾರ್ಗಸೂಚಿ ಹೊರಡಿಸಲು ಹಲವು ಕಾರಣಗಳಿಂದಾಗಿ ಸಾಧ್ಯವಾಗುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಿಚಾರಣಾ ನ್ಯಾಯಾಲಯಗಳ ಮೇಲ್ವಿಚಾರಣೆಯ ಹೊಣೆ ಹೈಕೋರ್ಟ್‌ಗಳಿಗೆ ಇರುವ ಕಾರಣ, ವಿಚಾರಣೆಗಳು ತ್ವರಿತವಾಗಿ ಆಗುವಂತೆ ನೋಡಿಕೊಳ್ಳುವ ಹೊಣೆಯನ್ನು ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳಿಗೆ ಬಿಟ್ಟಿದೆ.

ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಬಹುದಾದ ಪ್ರಕರಣಗಳು ಸಂಸದರು ಹಾಗೂ ಶಾಸಕರ ವಿರುದ್ಧ ದಾಖಲಾಗಿದ್ದಲ್ಲಿ ಅಂತಹ ಪ್ರಕರಣಗಳ ವಿಚಾರಣೆಗೆ ಸಂಬಂಧಪಟ್ಟ ನ್ಯಾಯಾಲಯಗಳು ಆದ್ಯತೆ ನೀಡಬೇಕು. ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಶಿಕ್ಷೆ ವಿಧಿಸಬಹುದಾದ ಪ್ರಕರಣಗಳು ದಾಖಲಾಗಿದ್ದಲ್ಲಿ, ಅವುಗಳಿಗೆ ಕೂಡ ಆದ್ಯತೆ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಪ್ರಕರಣಗಳ ವಿಚಾರಣೆಗೆ ತಡೆಯಾಜ್ಞೆ ಇದ್ದಲ್ಲಿ, ಅಂತಹ ಪ್ರಕರಣಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯು ವಿಶೇಷ ಪೀಠದ ಎದುರು ತರಬಹುದು. ವಿಶೇಷ ಪೀಠವು ಆ ಪ್ರಕರಣದ ವಿಚಾರಣೆಗೆ ಇರುವ ತಡೆಯಾಜ್ಞೆ ತೆರವು ಮಾಡುವುದು ಸೇರಿದಂತೆ ಯಾವುದೇ ಸೂಕ್ತ ಆದೇಶವನ್ನು ನೀಡಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಹೈಕೋರ್ಟ್‌ಗಳು ತಮ್ಮ ವೆಬ್‌ಸೈಟ್ ಮೂಲಕ, ಇಂತಹ ಪ್ರಕರಣಗಳ ಜಿಲ್ಲಾವಾರು ವಿವರ ನೀಡಬೇಕು ಎಂದು ಸೂಚಿಸಲಾಗಿದೆ.

ರಾಜಕಾರಣಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯನ್ನು ತ್ವರಿತಗೊಳಿಸಬೇಕು ಎಂದು ಕೋರಿ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿ ಸುಪ್ರೀಂ ಕೋರ್ಟ್ ಈ ಸೂಚನೆಗಳನ್ನು ಹೊರಡಿಸಿದೆ. ವಿಚಾರಣೆಗಳನ್ನು ತ್ವರಿತಗೊಳಿಸಬೇಕು ಎಂಬುದಷ್ಟೇ ಅಲ್ಲದೆ, ಕ್ರಿಮಿನಲ್ ಪ್ರಕರಣಗಳಲ್ಲಿ ತಪ್ಪಿತಸ್ಥ ಎಂದು ಕೋರ್ಟ್ ಘೋಷಿಸಿದಲ್ಲಿ ಶಾಸಕ ಹಾಗೂ ಸಂಸದರಿಗೆ ಆಜೀವ ನಿಷೇಧ ಹೇರಬೇಕು ಎಂದು ಕೂಡ ಅರ್ಜಿಯಲ್ಲಿ ಕೋರಲಾಗಿತ್ತು.

ಅಂಕಿ-ಅಂಶಗಳು

5,175
ರಾಜಕಾರಣಿಗಳ ವಿರುದ್ಧ ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳು

2,116
ರಾಜಕಾರಣಿಗಳ ವಿರುದ್ಧ ದಾಖಲಾಗಿರುವ ಇಷ್ಟು ಪ್ರಕರಣಗಳು ಐದು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಬಾಕಿ ಉಳಿದಿವೆ

(ಅಮಿಕಸ್ ಕ್ಯೂರಿ ಅವರು ಕೋರ್ಟ್‌ಗೆ ಸಲ್ಲಿಸಿದ್ದ 2022 ನವೆಂಬರ್ 14ರ ಮಾಹಿತಿ)

ಚುನಾವಣೆಯಲ್ಲಿ ಸರ್ಕಾರಿ ವೈದ್ಯರ ಸ್ಪರ್ಧೆಗೆ ಅಸ್ತು

ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಸರ್ಕಾರಿ ವೈದ್ಯಾಧಿಕಾರಿಯೊಬ್ಬರಿಗೆ ಅವಕಾಶ ನೀಡಿರುವ ರಾಜಸ್ಥಾನ ಹೈಕೋರ್ಟ್, ಒಂದು ವೇಳೆ ಅಧಿಕಾರಿ ಸೋತರೆ ಕರ್ತವ್ಯಕ್ಕೆ ಮರಳಲು ಕೂಡಾ ಅನುವು ಮಾಡಿಕೊಟ್ಟಿದೆ.

ವೈದ್ಯ ದೀಪಕ್ ಘೋಘ್ರಾ (43) ಅವರು ಭಾರತೀಯ ಟ್ರೈಬಲ್ ಪಕ್ಷದ (ಬಿಟಿಪಿ) ಅಭ್ಯರ್ಥಿಯಾಗಿ ಡುಂಗರ್‌ಪುರ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದಾರೆ. ಅವರು ಬಿಟಿಪಿ ರಾಜ್ಯ ಅಧ್ಯಕ್ಷ ವೆಲಾರಾಮ್ ಘೋಘ್ರಾ ಅವರ ಮಗ. ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ವೈದ್ಯಾಧಿಕಾರಿ ದೀಪಕ್ ಅವರಿಗೆ ಕರ್ತವ್ಯದಿಂದ ಬಿಡುವು ನೀಡಬೇಕು. ಅಧಿಕಾರಿಯು ಚುನಾವಣೆಯಲ್ಲಿ ಸೋತರೆ ಅವರನ್ನು ಕರ್ತವ್ಯಕ್ಕೆ ಪುನಃ ಸೇರಿಸಿಕೊಳ್ಳಬೇಕು ಎಂದು ಪ್ರತಿವಾದಿಗಳಿಗೆ ಹೈಕೋರ್ಟ್ ಸೂಚಿಸಿದೆ.

ಸರ್ಕಾರಿ ವೈದ್ಯರೊಬ್ಬರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಹೈಕೋರ್ಟ್ ಅವಕಾಶ ನೀಡಿರುವುದು ರಾಜ್ಯದಲ್ಲಿ ಇದೇ ಮೊದಲು ಎಂದು ದೀಪಕ್ ಅವರು ಪ್ರತಿಕ್ರಿಯಿಸಿದ್ದಾರೆ.

ಸಿ.ಎಂ ನಿವಾಸಕ್ಕೆ ಮುತ್ತಿಗೆ: ರೈತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಕಬ್ಬು ಬಾಕಿ ಹಣ ಹಾಗೂ ಹೆಚ್ಚುವರಿ ದರ ನಿಗದಿಗೆ ಆಗ್ರಹಿಸಿ ನಗರದ ಟಿ.ಕೆ.ಬಡಾವಣೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದರು.

ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಸದಸ್ಯರು ಮುತ್ತಿಗೆ ಮುಂದಾದಾಗ ಮನೆಗೆ 100 ಮೀಟರ್ ಹಿಂದೆಯೇ ಪೊಲೀಸರು ಅವರನ್ನು ತಡೆದರು. ಆಕ್ರೋಶಗೊಂಡ ರೈತರು ಮನೆಯತ್ತ ಮುನ್ನುಗ್ಗಿದಾಗ ಪೊಲೀಸರು ಅವರನ್ನು ಬಂಧಿಸಿ, ಬಿಡುಗಡೆ ಮಾಡಿದರು.

ಬಿಗಿಭದ್ರತೆ: ಪ್ರತಿಭಟನೆ ಹಿನ್ನೆಲೆಯಲ್ಲಿ ಪೊಲೀಸರು ಮುಖ್ಯಮಂತ್ರಿ ನಿವಾಸವನ್ನು ಸಂಪರ್ಕಿಸುವ ನಾಲ್ಕು ರಸ್ತೆಗಳಿಗೂ ಬ್ಯಾರಿಕೇಡ್ ಅಳವಡಿಸಿ ಸಂಚಾರ ನಿರ್ಬಂಧಿಸಿದ್ದರು. ಮನೆ ಮುಂಭಾಗವೂ 100ಕ್ಕೂ ಹೆಚ್ಚು ಕೆಎಸ್‌ಆರ್‌ಪಿ, ವಿಶೇಷ ಕಾರ್ಯಪಡೆ ಕಮಾಂಡೊಗಳು ಭದ್ರತೆ ಒದಗಿಸಿದ್ದರು.

2B ಪುಟ ನೋಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರಿನ ನಿವಾಸಕ್ಕೆ ಮುತ್ತಿಗೆಗೆ ಯತ್ನಿಸಿದ ರೈತ ಮುಖಂಡರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದರು– ಪ್ರಜಾವಾಣಿ ಚಿತ್ರ

ಒಳ ಪುಟ

ಆರ್ಚರಿ: ಭಾರತದ ಪರನೀತ್ ಕೌರ್‌ಗೆ ಚಿನ್ನ 8



ಮಾಸ್ಟರ್ 'ರಂಗ'ನ ಕನಸು

ಜನರನ್ನು ನಗಿಸಲು 'ನಾ ಕೋಳಿಕ್ಕೆ ರಂಗ' ಎನ್ನುತ್ತಾ ನಟ ಮಾಸ್ಟರ್ ಆನಂದ್ ಇಂದು(ನ.10) ತೆರೆ ಮೇಲೆ ಬರುತ್ತಿದ್ದಾರೆ. ಕಿರುತೆರೆ, ಬೆಳ್ಳಿತೆರೆಯ ಹೆಜ್ಜೆಗಳನ್ನು ನೆನಪಿಸಿಕೊಳ್ಳುತ್ತಾ ತಮ್ಮ ಗುರಿಯನ್ನು ಆನಂದ್ **ಸಿನಿಮಾ ಪುರವಣಿ** ಜೊತೆಗೆ ಹಂಚಿಕೊಂಡರು...

ಅಭಿಲಾಷ್ ಪಿ.ಎಸ್.

ಮಾಸ್ಟರ್ ಆನಂದ್

• 'ಪ್ರೇಮಂ ಪೂಜ್ಯಂ' ಆನಂದ್ ಕಂಬ್ಯಾಕ್ ಚಿತ್ರವಾಗಿತ್ತು. ಮತ್ತೆ ತೆರೆ ಮೇಲೆ ಹೆಚ್ಚು ಕಾಣಿಸಿಕೊಳ್ಳಲಿಲ್ಲವೇಕೆ?

ನನಗೆ ಈ 'ಕಂಬ್ಯಾಕ್' ಎನ್ನುವ ಪದಪ್ರಯೋಗದ ಬಗ್ಗೆ ಬೇರೆಯದೇ ಆಲೋಚನೆ ಇದೆ. ಒಬ್ಬ ನಟ ಇಂಡಸ್ಟ್ರಿಗೆ ಬಂದ ನಂತರ, ಜನರ ಮನದಲ್ಲಿ ಆತನಿಗೆ ಜಾಗ ಸಿಕ್ಕಿತು ಎಂದರೆ ಯಾವುದೇ 'ಗೋಬ್ಯಾಕ್', 'ಕಂಬ್ಯಾಕ್' ಇರುವುದಿಲ್ಲ. ಇದು ನಾನು ನಂಬಿರುವ ತತ್ವ. ಸಿನಿಮಾವನ್ನು ದಿನನಿತ್ಯ ಮಾಡಲು ಸಾಧ್ಯವಿಲ್ಲ. ಒಂದು ವರ್ಷ, ಎರಡು ವರ್ಷ ಬಿಟ್ಟು ಸಿನಿಮಾ ಮಾಡಿದರೆ ಅದನ್ನು ಕಂಬ್ಯಾಕ್ ಅನ್ನಲು ಸಾಧ್ಯವಿಲ್ಲ. 25 ವರ್ಷ ಸಿನಿಮಾದಿಂದ ದೂರವಿದ್ದು, ಮತ್ತೆ ತೆರೆ ಮೇಲೆ ಬಂದರೆ ಕಂಬ್ಯಾಕ್ ಎನ್ನಬಹುದು. ಈಗ ಬರುತ್ತಿರುವ ಸಿನಿಮಾಗಳನ್ನು ನೋಡಿದರೆ, ಒಬ್ಬರು ಮೂರ್ನಾಲ್ಕು ವರ್ಷಕ್ಕೊಂದು ಸಿನಿಮಾ ಮಾಡುತ್ತಿದ್ದಾರೆ. ಉತ್ತಮವಾದ ಒಂದು ಸಿನಿಮಾ ನೀಡದೇ ಇದ್ದರೆ ಯಾವ ಕಂಬ್ಯಾಕೂ ಇಲ್ಲ. ಒಂದೊಳ್ಳೆಯ ಪಾತ್ರದ ಮುಖಾಂತರ ಜನರ ಮುಂದೆ ಬರದೇ ಇದ್ದರೆ ಎಷ್ಟೇ ಸಿನಿಮಾ ಮಾಡಿದರೂ ಪ್ರಯೋಜನವಿಲ್ಲ. ಹತ್ತು ಕಟ್ಟೋ ಬದಲು ಒಂದು ಮುತ್ತು ಕಟ್ಟು ಎನ್ನುವುದು ನನ್ನ ಪಾಲಿಸಿ. ಅಸ್ತಿತ್ವ ತೋರಿಸಿಕೊಳ್ಳುವ ಬದಲು ಒಳ್ಳೆಯ ಸಿನಿಮಾಗಳನ್ನು ಮಾಡೋಣ ಎನ್ನುವುದು ನನ್ನ ಗುರಿ. 'ಪ್ರೇಮಂ ಪೂಜ್ಯಂ' ಬಳಿಕ ಹಲವು ಆಫರ್‌ಗಳು ಬಂದವು. ಕೇವಲ ಫ್ರೆಂಡ್ ಆಗಿ, ಪೋಷಕ ನಟನಾಗಿ ಮಾಡುವಾಗ ಅದರಲ್ಲಿ ಸತ್ವ ಏನಿದೆ? ಅದಕ್ಕಾಗಿ ನಾನು ಗುಣಮಟ್ಟದ ಪಾತ್ರಗಳಿಗಾಗಿ ಕಾಯುವೆ.

ಇವತ್ತು ಒಬ್ಬ ನಟ, ನಿರ್ದೇಶಕ ನಾನಿಷ್ಟೇ ಸಿನಿಮಾ ಮಾಡುವುದು ಎಂದು ಗುರಿ ಇಟ್ಟುಕೊಂಡಿರುತ್ತಾನೆ. ಆ ಸಿನಿಮಾಗಳಿಗೇ ಹೆಚ್ಚಿನ ಗಮನಹರಿಸುತ್ತಾರೆ. ಹಿಂದಿನ ಕಾಲದಲ್ಲಿ ನಿರ್ದೇಶಕನೊಬ್ಬ ಜೀವನಪೂರ್ತಿ ಸಿನಿಮಾ ಮಾಡಿ ದುಡಿದ ಹಣವನ್ನು, ಇಂದು ನಿರ್ದೇಶಕನೊಬ್ಬ ಒಂದೆರಡು ಸಿನಿಮಾಗಳಲ್ಲಿ ಮಾಡುತ್ತಾನೆ. ಇವತ್ತು ಸಿನಿಮಾ ಗುಣಮಟ್ಟದ ಮೇಲೆ ಗಮನ ಹೆಚ್ಚಿದೆ. ಗುಣಮಟ್ಟದ ಪಾತ್ರಗಳು, ಕಂಟೆಂಟ್‌ಗಳು ಬಂದಾಗ ಅದನ್ನು ಆರಿಸಿಕೊಳ್ಳುವ ಅವಕಾಶ ನನ್ನ ಮುಂದಿದೆ; ಅನಿವಾರ್ಯ ಅಲ್ಲ.

• ಕಿರುತೆರೆ ಮೇಲೆ ಹೆಚ್ಚಿನ ಗಮನವೇ?

ಹಾಗೇನಿಲ್ಲ. ಅದು ಎಲ್ಲರಲ್ಲಿರುವ ಒಂದು ಭ್ರಮೆ. ನಾನು ಯಾವುದೇ ಧಾರಾವಾಹಿ ಮಾಡುತ್ತಿಲ್ಲ. ನಾನು ರಿಯಾಲಿಟಿ ಶೋಗಳ ನಿರೂಪಣೆ ಮಾಡುತ್ತಿದ್ದೇನೆ. ಇದು ತಿಂಗಳಲ್ಲಿ ನಾಲ್ಕೇ ದಿನ. ವಾಹಿನಿಯವರು ಒಂದು ದಿನ ಶೂಟಿಂಗ್ ನಡೆಸಿದರೆ, ಕಂಟೆಂಟ್‌ಗಳ ಮಹಾಪೂರವನ್ನೇ ಸೃಷ್ಟಿಸುತ್ತಾರೆ. ರೀಲ್ಸ್, ಫೋಟೊ, ಪ್ರೊಮೊ... ಹೀಗೆ. ಅದು ಪ್ರತಿನಿತ್ಯ ಒಂದಲ್ಲ ಒಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಲೇ ಇರುತ್ತದೆ. ಕಳೆದ ಐದು ವರ್ಷಗಳಿಂದ ಇತ್ತೀಚೆಗೆ ನಾನು ನಾನ್–ಫಿಕ್ಷನ್ ಕಾರ್ಯಕ್ರಮಗಳನ್ನು ಹೆಚ್ಚು ಮಾಡುತ್ತಿದ್ದೇನೆ. ಈ ಕಂಟೆಂಟ್‌ಗಳು ಜನರನ್ನು ಆವರಿಸಿರುವ ಕಾರಣ ನಾನು ಕಿರುತೆರೆಯಲ್ಲೇ ಹೆಚ್ಚು ತೊಡಗಿಸಿಕೊಂಡಿದ್ದೇನೆ ಎನ್ನುವ ಭಾವನೆ ಮೂಡುತ್ತದೆ. ಆದರೆ ವಾಸ್ತವದಲ್ಲಿ ನನ್ನ ಬಳಿ ಒಂದಿಷ್ಟು ಆರೋಗ್ಯಕರ ಸಮಯ ಉಳಿಯುತ್ತದೆ. ಈ ಅವಧಿಯನ್ನು ನಾನು ಕುಟುಂಬಕ್ಕೆ, ವೈಯಕ್ತಿಕ ಗುರಿ ಸಾಧಿಸಲು, ಕಥೆಗಳನ್ನು ಬರೆಯಲು, ಮನರಂಜನಾ ಕ್ಷೇತ್ರದ ಸಂಶೋಧನೆಗಳಿಗೆ ವಿನಿಯೋಗಿಸುತ್ತಿದ್ದೇನೆ. ಕಂಟೆಂಟ್ ಮಾರುಕಟ್ಟೆ ಹಿರಿದಾಗಿದೆ. ಕಾಲ, ಸಮಯ ಕೂಡಿಬಂದಾಗ ನಾನು ಸಿದ್ಧಪಡಿಸಿದ ಕಂಟೆಂಟ್‌ಗಳನ್ನು ಈ ಮಾರುಕಟ್ಟೆಗೆ ಬಿಡುತ್ತೇನೆ.

• 'ನಾ ಕೋಳಿಕ್ಕೆ ರಂಗ' ಯಾವ ಮಾದರಿಯ ಸಿನಿಮಾ? ನಿಮ್ಮ ಪಾತ್ರದ ಬಗ್ಗೆ ಹೇಳಿ.

ಇದೊಂದು ಹಳ್ಳಿ ಸೊಗಡಿನ ಸಿನಿಮಾ. ಇಲ್ಲಿ ಮನರಂಜನೆಗೆ ಆದ್ಯತೆ ಇದೆ. ಮನರಂಜನೆಗಾಗಿ ಚಿತ್ರಮಂದಿರಗಳಿಗೆ ಪ್ರೇಕ್ಷಕರು ಆಗಮಿಸುತ್ತಾರೆ. ನಮ್ಮ ಸಿನಿಮಾದಲ್ಲಿ ಮನರಂಜನೆಗೇನೂ ಕೊರತೆ ಇಲ್ಲ. ನಮ್ಮ ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಪ್ರಾಣಿ ಹಿಂಸೆ ಬಗ್ಗೆ ಸಂದೇಶವೊಂದನ್ನು ನೀಡಿದ್ದೇವೆ. ನನ್ನ ಪಾತ್ರದ ಹೆಸರು 'ರಂಗ'. ಉಂಡಾಡಿ ಗುಂಡ ಈತ. ಆತನ ಜೊತೆಯಲ್ಲೊಂದು ಹುಂಜ. ತಂದೆಯ ಪಿಂಚಣಿ ಹಣದಲ್ಲಿ ಜೀವನ ಸಾಗಿಸುವ ಕುಟುಂಬ. ಹೆಚ್ಚಿನ ಜವಾಬ್ದಾರಿ ಇರದ 'ರಂಗ'ನ ಸುತ್ತ ಚಿತ್ರದ ಕಥೆಯಿದೆ. ಒಂದು ನಾಯಿ, ಬೆಕ್ಕು, ಟಗರಿನ ಜೊತೆಗೆ ಮನುಷ್ಯನ ಸಂಬಂಧ ಗಾಢವಾಗಿರುವುದನ್ನು ನೋಡಿರುತ್ತೇವೆ. ಇಲ್ಲಿ 'ಹುಂಜ'ದ ಜೊತೆಗೆ ನನ್ನ ಪಾತ್ರ ಭಾವನಾತ್ಮಕವಾಗಿ ಎಷ್ಟು ಬೆಸೆದುಕೊಂಡಿದೆ ಎನ್ನುವುದನ್ನು ನೋಡಬಹುದು.

• ಆನಂದ್ ಮೇಲೆ ಜನರು ಇಟ್ಟಿರುವ ನಿರೀಕ್ಷೆ ಹೇಗಿದೆ?

ಮೊದಲಿಗೆ 'ನಾ ಕೋಳಿಕ್ಕೆ ರಂಗ' ಸಿನಿಮಾ ಹೆಚ್ಚು ಭಾವನಾತ್ಮಕವಾಗಿ ಮೂಡಿಬಂದಿತ್ತು. ಒಬ್ಬ ಕಲಾವಿದನಾಗಿ ನಾನು ಈ ಗಾಢವಾದ ಭಾವನೆಗಳಲ್ಲಿ ಚೆನ್ನಾಗಿ ಸ್ಕೋರ್ ಮಾಡಿದ್ದೇನೆ, ವಿಭಿನ್ನವಾಗಿ ನಟಿಸಿದ್ದೇನೆ ಎನಿಸಿತು. ಆದರೆ ನನ್ನ ಸಿನಿಮಾ ಎಂದ ಮೇಲೆ ಜನರಿಗೆ ಒಂದಿಷ್ಟು ಹಾಸ್ಯದ ನಿರೀಕ್ಷೆ ಇರುತ್ತದೆ. ಹೀಗಾಗಿ ಮತ್ತೊಮ್ಮೆ 35–40 ನಿಮಿಷಕ್ಕೆ ಬೇಕಾಗುವಷ್ಟು ಹಾಸ್ಯ ದೃಶ್ಯಗಳನ್ನು ಶೂಟಿಂಗ್ ಮಾಡಿ, ಇಡೀ ಸಿನಿಮಾಗೆ ಮರುರೂಪ ನೀಡಿದೆವು. ಜನರ ನಿರೀಕ್ಷೆ ಒಂದು ರೀತಿ ತೀರದ ದಾಹ. ಜನರ ಮನಸ್ಸಿನಲ್ಲಿ ಯಾವ ರೀತಿ ಛಾಪು ಒತ್ತಿರುತ್ತೇವೆಯೋ ಅದನ್ನು ಮೀರಿ ಹೊಸದನ್ನು ನೀಡುವುದೇ ಒಂದು ಸವಾಲು.

• ಆನಂದ್ ಕೈಯಲ್ಲಿರುವ ಪ್ರಾಜೆಕ್ಟ್‌ಗಳು...

ಸದ್ಯ ಯಾವುದೇ ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಕಥೆಗಳನ್ನು ಕೇಳುತ್ತಿದ್ದೇನೆ. ಕೆಲವು ಚರ್ಚೆಯ ಹಂತದಲ್ಲಿವೆ. ಪಾತ್ರಗಳನ್ನು ಮಾಡುವುದಕ್ಕಿಂದ ನನ್ನದೇ ಒಂದಿಷ್ಟು ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳುವ ತಯಾರಿಯಲ್ಲಿದ್ದೇನೆ. ❖

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದು ತೆರೆಗೆ

ಸಚಿನ್ ಶೆಟ್ಟಿ ನಿರ್ದೇಶನದ 'ವಸಂತಕಾಲದ ಹೂಗಳು' ಚಿತ್ರವು ಇಂದು(ನ.10) ತೆರೆಕಂಡಿದೆ. ಚಿತ್ರದಲ್ಲಿ ಸಚಿನ್ ರಾಠೋಡ್ ಮತ್ತು ರಾಧಾ ಭಗವತಿ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ.

ಕಿರುತೆರೆಯ ಜನಪ್ರಿಯ ಧಾರಾವಾಹಿ 'ರಾಮಾಚಾರಿ'ಯಲ್ಲಿ ನಾಯಕನ ತಂಗಿ ಪಾತ್ರದಲ್ಲಿ ನಟಿಸಿದ್ದ ರಾಧಾ ಭಗವತಿ ಈ ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ಚಿತ್ರವನ್ನು ನಟ ಧ್ರುವ ಸರ್ಜಾ ಅವರು ಪ್ರಸ್ತುತಪಡಿಸುತ್ತಿದ್ದಾರೆ.

ಅಶೋಕ ರಾಠೋಡ್ ಹಾಗೂ ಸಿದ್ದು ರಸೂರೆ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಟೀನೇಜ್ ಲವ್ ಸ್ಟೋರಿ ಹೊಂದಿರುವ ಈ ಚಿತ್ರ ಸಂಪೂರ್ಣವಾಗಿ ಬಿಜಾಪುರದಲ್ಲಿ ಚಿತ್ರೀಕರಣಗೊಂಡಿದೆ. ❖

'ನೆಲ್ಸನ್'ನಲ್ಲಿ ಲಿಯೋನಿಲ್ಲಾ

'ಗೊಂಬೆಗಳ ಲವ್' ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಟ ಅರುಣ್ ಕುಮಾರ್, 'ಮರಿ ಟೈಗರ್'ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂದು ಗಾಂಧಿನಗರದಿಂದ ಇತ್ತೀಚೆಗೆ ಸುದ್ದಿ ಹೊರಬಿದ್ದಿತ್ತು. 'ನೆಲ್ಸನ್' ಹೆಸರಿನ ಈ ಚಿತ್ರದಲ್ಲಿ ನಟ ವಿನೋದ್ ಪ್ರಭಾಕರ್ ಅವರ ಜೊತೆಗೆ ಯಾರಿರಲಿದ್ದಾರೆ ಎನ್ನುವ ಸುಳಿವು ಸಿಕ್ಕಿದೆ.

ಕರಾವಳಿಯ ಲಿಯೋನಿಲ್ಲಾ ಶ್ವೇತಾ ಡಿಸೋಜಾ 'ನೆಲ್ಸನ್' ತಂಡ ಸೇರಿಕೊಂಡಿದ್ದಾರೆ. ಅವರ ಪಾತ್ರದ ಬಗ್ಗೆ ಚಿತ್ರತಂಡದಿಂದ ಇನ್ನಷ್ಟೇ ಮಾಹಿತಿ ಹೊರಬೀಳಬೇಕಿದೆ. ಹಿಂದಿ ಸಿನಿಮಾ 'Y'ಯಿಂದ ತಮ್ಮ ನಟನೆಯ ಪಯಣ ಆರಂಭಿಸಿದ್ದ ಲಿಯೋನಿಲ್ಲಾ, ಬಳಿಕ ಕನ್ನಡದ 'ಖಾಸಗಿ ಪುಟಗಳು', 'ಹೆಜ್ಜಾರು' ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಹೆಜ್ಜಾರು' ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಸಿನಿಮಾ ಕ್ಷೇತ್ರದ ಜೊತೆಗೆ ಐ.ಟಿ. ಉದ್ಯೋಗಿಯಾಗಿಯೂ ಕೆಲಸ ಮಾಡುತ್ತಿರುವ ಲಿಯೋನಿಲ್ಲಾ, 'ನೆಲ್ಸನ್' ಜೊತೆಗೆ ಮತ್ತೊಂದು ಪ್ರಾಜೆಕ್ಟ್ ಕೂಡ ಒಪ್ಪಿಕೊಂಡಿದ್ದಾರೆ.

1960 ರಿಂದ 90ರ ದಶಕದಲ್ಲಿ ಚಾಮರಾಜನಗರದಲ್ಲಿ ನಡೆಯುವ ನೈಜ ಕಥೆಯನ್ನು 'ನೆಲ್ಸನ್' ಸಿನಿಮಾ ಹೊತ್ತಿದೆ. ಗ್ಯಾಂಗ್‌ಸ್ಟರ್‌ನ ಜೀವನದ ಸುತ್ತ ಕಥಾಹಂದರವಿದ್ದು, ವಿನೋದ್ ಪ್ರಭಾಕರ್ ಅವರು ಹಿಂದೆಂದೂ ಕಾಣದ ಅವತಾರದಲ್ಲಿ ಚಿತ್ರದ ಪೋಸ್ಟರ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ದೀಪ ಫಿಲ್ಮ್ಸ್ ಬ್ಯಾನರ್‌ನಲ್ಲಿ ಬಿ.ಎಂ. ಶ್ರೀರಾಮ್ (ಕೋಲಾರ) ಈ ಚಿತ್ರಕ್ಕೆ ಹಣ ಹೂಡಿದ್ದು, ಇದೇ ತಿಂಗಳಲ್ಲಿ ಚಿತ್ರತಂಡ ಶೂಟಿಂಗ್ ಅಖಾಡಕ್ಕೆ ಇಳಿಯಲಿದೆ. ❖

ಭಟ್ರ 'ಗರಡಿ'ಯ ಸೋನಲ್ ಮೊಂತೆರೋ

ಎಪಿಎಸ್

ಯೋಗರಾಜ್ ಭಟ್ ನಿರ್ದೇಶನದ 'ಪಂಚತಂತ್ರ' ಸಿನಿಮಾ ಮೂಲಕ ಗಾಂಧಿನಗರದಲ್ಲಿ ಗುರುತಿಸಿಕೊಂಡ ನಟಿ ಸೋನಲ್ ಮೊಂತೆರೋ, ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಅತಿ ಹೆಚ್ಚು ಸಿನಿಬ್ಯಾಂಕ್ ಹೊಂದಿರುವವರು. ಭಟ್ರು ಸಾಮಾನ್ಯವಾಗಿ ತಮ್ಮ ಹೊಸ ಸಿನಿಮಾಗಳಲ್ಲಿ ಬೇರೆ ಬೇರೆ ನಟಿಯರನ್ನೇ ತೆರೆ ಮೇಲೆ ತರುತ್ತಾರೆ. ಆದರೆ 'ಗರಡಿ' ಸಿನಿಮಾಗಾಗಿ ತಮ್ಮ 'ಪಂಚತಂತ್ರ'ದ 'ಸಾಹಿತ್ಯ'ಳನ್ನೇ ಭಟ್ರು ಆಯ್ಕೆ ಮಾಡಿಕೊಂಡಿದ್ದಾರೆ. ಈ ಸಿನಿಮಾ ಇಂದು(ನ.10) ತೆರೆಕಂಡಿದೆ. 'ನರ್ಸಮ್ಮ', 'ಸಾಹಿತ್ಯ' ಹೀಗೆ ಹಲವು ನಾಮಧೇಯಗಳನ್ನು ಹೊಂದಿರುವ ಸೋನಲ್ 'ಗರಡಿ'ಯ ಅನುಭವಗಳನ್ನು 'ಸಿನಿಮಾ ಪುರವಣಿ' ಜೊತೆ ಹಂಚಿಕೊಂಡಿದ್ದಾರೆ.

'ನಟರ ಬದುಕಿನಲ್ಲಿ ಒಂದು ಬ್ರೇಕ್ ಇರುತ್ತದೆ. ನನಗದು ಸಿಕ್ಕಿದ್ದು ಯೋಗರಾಜ್ ಭಟ್ ಅವರ 'ಪಂಚತಂತ್ರ' ಸಿನಿಮಾದಲ್ಲಿ. ಅಲ್ಲಿಂದ ಸೋನಲ್, ಯಾರೆಂಬುದು ಗಾಂಧಿನಗರಕ್ಕೆ ತಿಳಿಯಿತು. ಇದಾದ ಬಳಿಕ 'ಗಾಳಿಪಟ–2' ಚಿತ್ರದಲ್ಲೇ ನಾನು ನಟಿಸಬೇಕಿತ್ತು. ಆದರೆ ಅದರ ಸಂಪೂರ್ಣ ಪಾತ್ರವರ್ಗವೇ ಬದಲಾಯಿತು. ನಂತರದಲ್ಲಿ ಅವರ ಸಿನಿಮಾಗಳಲ್ಲಿ ಅವಕಾಶ ಸಿಗಲಿದೆ ಎನ್ನುವ ಯಾವ ಸುಳಿವೂ ನನಗೆ ಇರಲಿಲ್ಲ. 'ಗರಡಿ' ಚಿತ್ರಕ್ಕೂ ಮೊದಲು ಬೇರೊಬ್ಬರು ನಾಯಕಿ ಇದ್ದರು. ಕೊನೆಯ ಕ್ಷಣದಲ್ಲಿ ಈ ಅವಕಾಶ ನನಗೆ ದೊರೆಯಿತು. ನನ್ನ ನಟನಾ ಸಾಮರ್ಥ್ಯದ ಮೇಲಿನ ನಂಬಿಕೆ ಹಾಗೂ ಸಂಭಾಷಣೆಯನ್ನು ಒಪ್ಪಿಸುವ ರೀತಿ ಅವರಿಗೆ ಇಷ್ಟವೆಂದು ಸಂದರ್ಶನವೊಂದರಲ್ಲಿ ಯೋಗರಾಜ್ ಭಟ್ ಹೇಳಿದ್ದರು. ಭಟ್ರ ಗರಡಿಯಿಂದ ಬಂದವಳು ನಾನು. ಹೀಗಾಗಿ ಒಂದೊಳ್ಳೆಯ ಪ್ರಾಜೆಕ್ಟ್‌ನಲ್ಲಿ ಅವಕಾಶ ನೀಡಿರುವುದಕ್ಕೆ ಖುಷಿ ಇದೆ'.

'ಈ ಸಿನಿಮಾ ನಿರೂಪಣೆ ಮಾಡುವ ಸಂದರ್ಭದಲ್ಲಿ ಈ ಪಾತ್ರವನ್ನು ನಿರ್ವಹಿಸಲು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ನನಗೆ ನಾನೇ ಕೇಳಿಕೊಂಡಿದ್ದೆ. ಏಕೆಂದರೆ ಇದು ತೆರೆಯ ಮೇಲೆ ನೋಡುವಷ್ಟು ಸುಲಭವಿಲ್ಲ. ಸಿಟಿ ಹುಡುಗಿಯಂತೆ ವರ್ತಿಸುವ ಪಾತ್ರ ನನ್ನದು. ನನ್ನ ಪಾತ್ರಕ್ಕೆ ಎರಡು ಶೇಡ್ಸ್ ಇವೆ. ಚಿತ್ರದ ಮೊದಲಾರ್ಧದಲ್ಲಿ ಎಷ್ಟು ಬಬ್ಲಿಯಾಗಿರುತ್ತೇನೋ, ದ್ವಿತೀಯಾರ್ಧದಲ್ಲಿ ಅಷ್ಟೇ ಗಾಢವಾಗಿ ಪರಿಣಾಮ ಬೀರುವ ಅಂಶಗಳು ನನ್ನ ಪಾತ್ರದಲ್ಲಿವೆ. ನಟರಾದ ಬಿ.ಸಿ. ಪಾಟೀಲ್ ಹಾಗೂ ರವಿಶಂಕರ್ ಅವರ ಜೊತೆ ತೆರೆಹಂಚಿಕೊಂಡಿದ್ದು ವಿಭಿನ್ನ ಅನುಭವ' ಎನ್ನುತ್ತಾರೆ ಸೋನಲ್.

'ಸಿನಿಮಾ ಮಾಡಬೇಕು ಎನ್ನುವುದಷ್ಟೇ ನನ್ನ ಗುರಿ. 'ಬನಾರಸ್'ನಲ್ಲಿ ಝೈದ್ ಖಾನ್, 'ಗರಡಿ'ಯಲ್ಲಿ ಯಶಸ್ ಸೂರ್ಯ ಇಬ್ಬರೂ ಹೊಸ ಹೀರೊಗಳು. ನಾನು ಅವರಿಗಿಂತ ಹೆಚ್ಚಿನ ಸಿನಿಮಾ ಮಾಡಿದ್ದೇನೆ ಎನ್ನುವ ಅಹಂ ನನಗೆ ಇಲ್ಲ. ಹೀಗೆ ಅಹಂ ಇದ್ದರೆ ಮನೆಯಲ್ಲೇ ಇರಬೇಕಷ್ಟೆ! ನಾನು ನೋಡುವುದು ನನ್ನ ಪಾತ್ರದ ಬರವಣಿಗೆಯನ್ನು. ಅದನ್ನು ನಿರ್ದೇಶಕರು ಹೆಣೆದ ರೀತಿಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಆ ಪಾತ್ರಕ್ಕೆ ನ್ಯಾಯ ದೊರಕಿಸಿಕೊಡಲು ಆಗುತ್ತದೆಯೇ ಎನ್ನುವುದನ್ನು ನೋಡುತ್ತೇನೆ. 'ಗರಡಿ' ಸಿನಿಮಾದಲ್ಲಿ ಯೋಗರಾಜ್ ಭಟ್ ಅವರು ನನ್ನ ಪಾತ್ರವನ್ನು ಅದ್ಭುತವಾಗಿ ಬರೆದಿದ್ದಾರೆ. ನನ್ನ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಇಲ್ಲಿ ಸಾಧ್ಯವಾಗಿದೆ'.

'ಕನ್ನಡದ ಇಂಡಸ್ಟ್ರಿಗೆ ಇನ್ನೊಂದು ಸ್ಟಾರ್ ಸಿಕ್ಕಿದ್ದಾರೆ ಎನ್ನಬಹುದು. ಸೂರ್ಯ ಅದ್ಭುತವಾದ ನಟ. ನನಗೆ ಹೇಗೆ 'ಪಂಚತಂತ್ರ' ಬ್ರೇಕ್ ನೀಡಿತೋ, ಅದೇ ರೀತಿ ಸೂರ್ಯನಿಗೆ ಈ ಸಿನಿಮಾ ಬ್ರೇಕ್ ನೀಡಲಿದೆ ಎನ್ನುವ ಭರವಸೆ ನನಗಿದೆ. ನಾನು ಮೂರು ಹೊಸ ಸಿನಿಮಾಗಳಿಗೆ ಸಹಿ ಹಾಕಿದ್ದೇನೆ. ಸ್ಯಾಂಡಲ್‌ವುಡ್‌ನಲ್ಲೇ ನನಗೆ ಸಾಲು ಸಾಲು ಅವಕಾಶಗಳು ಬರುತ್ತಿವೆ. 'ಬನಾರಸ್' ಸಿನಿಮಾ ಬಳಿಕ ಇತರೆ ಇಂಡಸ್ಟ್ರಿಗಳಿಂದಲೂ ಅವಕಾಶಗಳು ಬರುತ್ತಿವೆ' ಎಂದ ಸೋನಲ್, ತಮ್ಮ ಮುಂದಿನ ಸಿನಿಮಾಗಳ ಪಟ್ಟಿ ಬಿಚ್ಚಿಟ್ಟರು. ''ಗರಡಿ' ಬಳಿಕ, 'ರೋಲೆಕ್ಸ್', 'ಬುದ್ಧಿವಂತ–2', 'ಶುಗರ್ ಫ್ಯಾಕ್ಟರಿ', 'ಮಾದೇವ', 'ಮಿ.ನಟವರ್‌ಲಾಲ್', 'ಸರೋಜಿನಿ', 'ತಲ್ವಾರ್ ಪೇಟೆ', 'ಭಗವಾನ್ ಶ್ರೀ ಕೃಷ್ಣ ಪರಮಾತ್ಮ', 'ಮಾರ್ಗರೇಟ್ ಲವರ್ ಆಫ್ ರಾಮಾಚಾರಿ' ಸಿನಿಮಾಗಳು ಬಿಡುಗಡೆಗೆ ಸಜ್ಜಾಗುತ್ತಿವೆ'' ಎಂದರು. ❖

ಯಶಸ್ ಭವಿಷ್ಯ 'ಗರಡಿ'ಯಲ್ಲಿ

'ಗರಡಿ' ಸಿನಿಮಾ ಮೂಲಕ ನಟ ಯಶಸ್ ಸೂರ್ಯ ಬೆಳ್ಳಿತೆರೆಯಲ್ಲಿ ನಾಯಕನಾಗಿ ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. 15 ವರ್ಷಗಳಿಂದ ಚಿತ್ರರಂಗದಲ್ಲಿರುವ ಚನ್ನಪಟ್ಟಣ ಮೂಲದ ಯಶಸ್, ಬೆಂಗಳೂರಿನಲ್ಲಿ ಬೆಳೆದವರು. ಬಿ.ಕಾಂ. ವಿದ್ಯಾಭ್ಯಾಸದ ಬಳಿಕ ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿಟ್ಟು, ನಂತರ ಸಿನಿಮಾ ಕ್ಷೇತ್ರದಲ್ಲಿ ಬೆಳೆದವರು. 'ಓ ಗುಲಾಬಿ', 'ಸೈನೈಡ್' ಮುಂತಾದ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದ್ದ ಸೂರ್ಯ, 'ಯುಗ ಯುಗಗಳೇ ಸಾಗಲಿ' ಸಿನಿಮಾ ಮೂಲಕ ನಾಯಕನಾಗಿ ತೆರೆ ಮೇಲೆ ಕಾಣಿಸಿಕೊಂಡರು. ನಂತರ 'ಶಿಶಿರ', 'ತೂಫಾನ್', 'ಶ್ರಾವಣಿ ಸುಬ್ರಮಣ್ಯ', 'ಸಂಗಮ', 'ಮೈಲಾರಿ', 'ಚಿಂಗಾರಿ', 'ಚಕ್ರವರ್ತಿ', 'ಕುರುಕ್ಷೇತ್ರ' ಹೀಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದರು. ನಟ ದರ್ಶನ್ ಅವರಿಂದಾಗಿ 'ಗರಡಿ' ಸಿನಿಮಾದಲ್ಲಿ ನಾಯಕನ ಪಾತ್ರ ಸಿಕ್ಕಿತು ಅನ್ನುವ ಯಶಸ್ ಸೂರ್ಯ, ಈ ಸಿನಿಮಾ ತಮ್ಮ ಸಿನಿಪಯಣಕ್ಕೆ ಒಳ್ಳೆಯ ಮುನ್ನುಡಿ ಬರೆಯಲಿದೆ ಎಂದು ನಂಬಿದ್ದಾರೆ.

ಯಶಸ್ ಸೂರ್ಯ

ಶುಕ್ರವಾರ, ನವೆಂಬರ್ 10, 2023 | ₹ 7.00 |
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ ಪ್ರದರ್ಶನ
ಗುವಾಹಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಾವಿದೆಯೊಬ್ಬರು ಕಥಕ್ ನೃತ್ಯ ಪ್ರದರ್ಶಿಸಿದರು

ಮಹದಾಯಿ 'ವನ್ಯಜೀವಿ' ತಕರಾರು ಇತ್ಯರ್ಥಕ್ಕೆ ಪ್ರಯತ್ನ 3
ಕಲಬುರಗಿಯಲ್ಲಿ ಪ್ರವೇಶಾತಿಯೇ ಆಗಿಲ್ಲ! ಬಳ್ಳಾರಿಯಲ್ಲೂ ಕುಂದಿದ ಉತ್ಸಾಹ
ಮಾನಹಾನಿ ಪ್ರಕರಣ: ಬಜರಂಗ್‌ಗೆ ಜಾಮೀನು 8
ಸಂಜೆ ಕಾಲೇಜಿಗೆ ಶೂನ್ಯ ದಾಖಲಾತಿ 3

ಹುಲಿ ಸಂರಕ್ಷಿತ ಪ್ರದೇಶದಲ್ಲಿ ಚಟುವಟಿಕೆ: ವರದಿಗೆ ವರ್ಷ– ಕ್ರಮಕ್ಕಿಲ್ಲ ಆಸಕ್ತಿ

ಬಿಆರ್‌ಟಿ: ಅಕ್ರಮ ರೆಸಾರ್ಟ್

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದಲ್ಲಿ ರೆಸಾರ್ಟ್, ಹೋಂ ಸ್ಟೇ ಹಾಗೂ ಲಾಡ್ಜ್‌ಗಳು ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ.

ಈ ಕುರಿತು ರಾಜ್ಯ ಗುಪ್ತಚರ ಇಲಾಖೆಯು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಅ. 16ರಂದು ಸಲ್ಲಿಸಿದ ವರದಿ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಅಕ್ರಮ ನಿರ್ಮಾಣಗಳ ಪೈಕಿ ಪ್ರಮುಖವಾದ ಏಳನ್ನು ಪಟ್ಟಿ ಮಾಡಿರುವ ಇಲಾಖೆ, ಇವು ಯಾವುವೂ ಪ್ರವಾಸೋದ್ಯಮ ಚಟುವಟಿಕೆ ನಡೆಸಲು ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಸೂಕ್ಷ್ಮ ವಲಯ ಆಗಿರುವುದರಿಂದ ಅರಣ್ಯ ಇಲಾಖೆಯಿಂದಲೂ ನಿರಾಕ್ಷೇಪಣಾ ಪತ್ರ ಪಡೆದಿಲ್ಲ. ಇವುಗಳ ಮಾಲೀಕರು ನಿಯಮ ಮೀರಿ ಕಟ್ಟಡ ನಿರ್ಮಿಸಿದ್ದಲ್ಲದೆ, ಗಿರಿಜನ ಅಭಿವೃದ್ಧಿ ಹೆಸರಿನಲ್ಲಿ ಭೂ ಪರಿವರ್ತನೆ ಆದೇಶವನ್ನು ಪಡೆದು, ಲಾಭಕ್ಕಾಗಿ ಅನ್ಯ ಚಟುವಟಿಕೆ ನಡೆಸುತ್ತಿದ್ದಾರೆ ಎಂದು ವರದಿ ಹೇಳಿದೆ.

ಪರಿಸರ ಸೂಕ್ಷ್ಮ ವಲಯದಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಬೆಳಗಾವಿಯ ಗಿರಿಧರ್ ಕುಲಕರ್ಣಿ, ದೆಹಲಿಯಲ್ಲಿರುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ (ಎನ್‌ಟಿಸಿಎ) ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದ ಎನ್‌ಟಿಸಿಎ ಸಹಾಯಕ ಐಜಿಎಫ್ ಹರಿಣಿ ವೇಣುಗೋಪಾಲ್ ಅವರು ಎಲ್ಲ ರೆಸಾರ್ಟ್, ಲಾಡ್ಜ್‌ಗಳು ನಿಯಮ ಮೀರಿ ಕಾರ್ಯನಿರ್ವಹಿಸುತ್ತಿವೆ ಎಂದು ವಿವರವಾದ ವರದಿಯನ್ನೂ 2022ರ ನ. 28ರಂದೇ ನೀಡಿದ್ದಾರೆ. ವರ್ಷ ಕಳೆದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ವನ್ಯಜೀವಿ ಸಂರಕ್ಷಣಾ ಕಾಯ್ದೆ ಕಲಂ 33ಎ ಪ್ರಕಾರ, ರಾಷ್ಟ್ರೀಯ ಮಂಡಳಿಯ ಪೂರ್ವಾನುಮತಿ ಪಡೆಯದ ಹೊರತು ವನ್ಯಜೀವಿ ಧಾಮದ ಒಳಗೆ ವಾಣಿಜ್ಯ ಉದ್ದೇಶಕ್ಕೆ ಲಾಡ್ಜ್, ಹೋಟೆಲ್, ಸಫಾರಿ ಪಾರ್ಕ್ ನಿರ್ಮಿಸುವಂತಿಲ್ಲ. ಅಲ್ಲದೆ, ಹುಲಿ ಸಂರಕ್ಷಿತ ಸೂಕ್ಷ್ಮ ಪ್ರದೇಶಗಳಲ್ಲಿ ಪ್ರವಾಸೋದ್ಯಮ ನಡೆಸುವುದನ್ನು ನಿಲ್ಲಿಸಬೇಕೆಂದು ಎನ್‌ಟಿಸಿಎ ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ಲಾಡ್ಜ್, ರೆಸಾರ್ಟ್, ಹೋಟೆಲ್ ಮತ್ತು ಹೋಂ ಸ್ಟೇ (ಬಿಳಿಗಿರಿ ಭವನ ಅತಿಥಿಗೃಹ, ಬಿ.ಆರ್. ಹಿಲ್ಸ್ ಪ್ರವಾಸಿ ಮಂದಿರ, ಹೋಟೆಲ್ ಮಯೂರ ಮತ್ತು ಅತಿಗಣ್ಯ ವ್ಯಕ್ತಿಗಳ ವಸತಿಗೃಹ) ನಡೆಸುವುದು ಕೂಡಾ ಎನ್‌ಟಿಸಿಎ ಮಾರ್ಗಸೂಚಿ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದೂ ವರದಿಯಲ್ಲಿದೆ.

ಗೊರುಕನ ಆಯುರ್ವೇದಿಕ್ ಎಕೋ ವೆಲ್‌ನೆಸ್ ರೆಸಾರ್ಟ್‌ನವರು ಪರಿಸರ ಶಿಕ್ಷಣ ಮತ್ತು ಆಯುರ್ವೇದಿಕ್ ಚಿಕಿತ್ಸೆ ನೀಡುವ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಿದ್ದರು. ಈ ಜಾಗವನ್ನು ರೆಸಾರ್ಟ್‌ಗೆ ಬಳಕೆ ಮಾಡುತ್ತಿದ್ದುದರಿಂದ ಭೂ ಪರಿವರ್ತನೆ ಆದೇಶವನ್ನು ಜಿಲ್ಲಾಧಿಕಾರಿ ರದ್ದುಪಡಿಸಿದ್ದಾರೆ. ಇದರ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಯಳಂದೂರು ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ರಜತಾದ್ರಿ ಹಿಲ್ ವಿಲ್ಲಾ ಮಾಲೀಕರು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ. ಅರಣ್ಯ ಕಾಯ್ದೆ ಉಲ್ಲಂಘಿಸಿದ ಕಾರಣಕ್ಕೆ ಈ ರೆಸಾರ್ಟ್‌ನ ಮಾಲೀಕರ ವಿರುದ್ಧ ಅರಣ್ಯ ಇಲಾಖೆ 2019 ನ. 19ರಂದು ಪ್ರಕರಣ ದಾಖಲಿಸಿದೆ. ಅದರ ವಿರುದ್ಧ ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದು, 2023ರ ಜ. 12ರಂದು ಪ್ರಕರಣ ವಜಾಗೊಂಡಿದೆ. ಉಳಿದವರು ವಾಣಿಜ್ಯ ಚಟುವಟಿಕೆಗಾಗಿ ಭೂ ಪರಿವರ್ತನೆ ಮಾಡಿಸಿಕೊಂಡಿಲ್ಲ ಎಂದೂ ವರದಿ ವಿವರಿಸಿದೆ.

ಪ್ರಮುಖ ರೆಸಾರ್ಟ್, ಹೋಂ ಸ್ಟೇ

1. **ಗಿರಿದರ್ಶಿನಿ ರೆಸಿಡೆನ್ಸಿ,** ಚಂಪಕಾರಣ್ಯ ಹೋಂ ಸ್ಟೇ; ಎರಡು ಕಟ್ಟಡಗಳಲ್ಲಿ 8 ರೂಂಗಳಿವೆ, ಪ್ರವಾಸೋದ್ಯಮ ಇಲಾಖೆಯ ಅನುಮತಿ ಇಲ್ಲ.
2. **ಆಕಾಶ್ ಲಾಡ್ಜ್** (ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ (ವಿಜಿಕೆಕೆ) ಜಮೀನಿನಲ್ಲಿ ಕಾರ್ಯನಿರ್ವಹಣೆ– ಇದು ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ಸೆಂಟರ್ ಆಗಿ ಬದಲಾಗಿದೆ); ವ್ಯವಸಾಯಕ್ಕೆ ಸೂಕ್ತವಲ್ಲವೆಂದು 1995ರಲ್ಲಿ ಸರ್ಕಾರೇತರ ಸಂಸ್ಥೆ ವಿಜಿಕೆಕೆಗೆ ಆಶ್ರಯ ಯೋಜನೆಯಲ್ಲಿ ಈ ಜಾಗ ಮಂಜೂರಾಗಿದ್ದು, ಸೋಲಿಗ ಜನಾಂಗದ ಕಲ್ಯಾಣಕ್ಕೆ ಬಳಸಬೇಕೆಂದು ನಿರ್ದೇಶನವಿದೆ. ಈಗ ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ (ಎನ್‌ಜಿಒ) ಬಾಡಿಗೆಗೆ ಪಡೆದು ಗಿರಿಜನರ ಆರೋಗ್ಯಕ್ಕೆ ಸಂಬಂಧಿಸಿದ ಸಂಶೋಧನೆ ಕೈಗೊಂಡಿದ್ದಾರೆ.
3. **ಗೊರುಕನ ಆಯುರ್ವೇದಿಕ್ ಎಕೋ ವೆಲ್‌ನೆಸ್ ರೆಸಾರ್ಟ್;** 10 ಕಾಟೇಜ್‌ನ ಟ್ರೀ ಹಟ್ ಕ್ಯಾಬಿನ್ ಕಾಟೇಜ್ ಮತ್ತು ಸ್ಪಾ ಒಳಗೊಂಡ ಈ ಪ್ರದೇಶ, ಪರಿಸರ ಶಿಕ್ಷಣ ಮತ್ತು ಆಯುರ್ವೇದಿಕ್ ಚಿಕಿತ್ಸೆ ಹೆಸರಿನಲ್ಲಿ ಅನುಮತಿ ಪಡೆದು ರೆಸಾರ್ಟ್ ರೀತಿ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಗೆ ಸುಮಾರು ₹ 3.5 ಕೋಟಿ ವೆಚ್ಚವಾಗಿದೆ
4. **ರಜತಾದ್ರಿ ಹಿಲ್ ವಿಲ್ಲಾ** (ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ); ಕಂದಾಯ ಇಲಾಖೆಯಿಂದ 2004ರಲ್ಲಿ ಭೂ ಪರಿವರ್ತನೆ ಆದೇಶ ಆಗಿದೆ. 6,500 ಚ. ಮೀ ಪ್ರದೇಶದಲ್ಲಿ 8 ರೂಂಗಳನ್ನು ಹೊಂದಿದ್ದು, ಪ್ರವಾಸೋದ್ಯಮ ಉದ್ದೇಶಕ್ಕೆ ಬಳಸಲಾಗುತ್ತಿದೆ. ಅಕ್ರಮ ಕಟ್ಟಡ ನಿರ್ಮಾಣ ಸಂಬಂಧ ಮಾಲೀಕರ ವಿರುದ್ಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿಕೊಂಡಿದೆ.
5. **ಶ್ವೇತಗಿರಿ ಹೋಂ ಸ್ಟೇ;** ಕಾರ್ಯನಿರ್ವಹಿಸುತ್ತಿದೆ
6. **ರಾಜ್‌ಕುಮಾರ್ ಲಾಡ್ಜ್** (ನಡೆಯುತ್ತಿಲ್ಲ); ಎರಡು ರೂಂಗಳಿದ್ದು, ಈ ಕಟ್ಟಡ ಹೊರತುಪಡಿಸಿ ಉಳಿದ ಪ್ರದೇಶದಲ್ಲಿ ಕಾಫಿ ಮತ್ತು ಕಾಳುಮೆಣಸು ಬೆಳೆಯಲಾಗುತ್ತಿದೆ
7. **ಸೋಮಣ್ಣ ರೂಮ್ಸ್;** ಸದ್ಯ ಯಾವುದೇ ಚಟುವಟಿಕೆ ನಡೆಯುತ್ತಿಲ್ಲ

ಬಿಳಿಗಿರಿರಂಗನಬೆಟ್ಟದಲ್ಲಿ ಗೊರುಕನ ರೆಸಾರ್ಟ್‌ನ ಸ್ಪಾ/ಆಯುರ್ವೇದ ಕೇಂದ್ರದ ನೋಟ. ರೆಸಾರ್ಟ್‌ಗೆ ಹೊಂದಿಕೊಂಡಿರುವ ನೀರಿನ ತೊರೆಯಲ್ಲಿ ಈ ಕಟ್ಟಡ ನಿರ್ಮಿಸಲಾಗಿದೆ ಎಂದು ವರದಿ ಹೇಳಿದೆ

ಹೀಗಿದೆ ಬಿಆರ್‌ಟಿ ವನ್ಯಜೀವಿ ಧಾಮ

ಬಿಆರ್‌ಟಿ ವನ್ಯಜೀವಿ ಧಾಮವನ್ನು ರಾಜ್ಯ ಸರ್ಕಾರ 2011ರಲ್ಲಿ ಬಿಳಿಗಿರಿ ರಂಗನಾಥ ದೇವಸ್ಥಾನ ಹುಲಿ ಸಂರಕ್ಷಿತಾ ಪ್ರದೇಶವೆಂದು ಘೋಷಣೆ ಮಾಡಿತ್ತು. ಬಿಆರ್‌ಟಿ ವ್ಯಾಪ್ತಿಯ ಕಂದಾಯ ಗ್ರಾಮ ಮತ್ತು ಹುಲಿ ಸಂರಕ್ಷಿತಾ ಪ್ರದೇಶವನ್ನು ಬಿಆರ್‌ಟಿ ಸೂಕ್ಷ್ಮವಲಯ ಎಂದು ಘೋಷಿಸಿ 2019 ನ. 19ರಂದು ಅಧಿಸೂಚನೆ ಹೊರಡಿಸಲಾಗಿದೆ. ಹುಲಿ ಸಂರಕ್ಷಿತ ಪ್ರದೇಶದ 6 ಕಿ.ಮೀ ಹೊರಗಿನ ಪ್ರದೇಶವೂ ಸೇರಿ ಒಟ್ಟು 262.43 ಚದರ ಕಿಲೋ ಮೀಟರ್ ವಿಸ್ತೀರ್ಣವಿದೆ. ಬಿಆರ್‌ಟಿ ಗ್ರಾಮ ವ್ಯಾಪ್ತಿಯು 22,640.12 ಎಕರೆ ಇದ್ದು, ಅದರಲ್ಲಿ 22,215.12 ಎಕರೆ ಮೀಸಲು ಅರಣ್ಯ. 560.20 ಎಕರೆ ಕಂದಾಯ ಮತ್ತು ಖಾಸಗಿ ಭೂಮಿ. ಕಂದಾಯ ಮತ್ತು ಖಾಸಗಿ ಜಮೀನಿನಲ್ಲಿ ಲಾಡ್ಜ್‌ಗಳು, ಹೋಂ ಸ್ಟೇ, ರೆಸಾರ್ಟ್ ಕಾರ್ಯನಿರ್ವಹಿಸುತ್ತಿವೆ.

ಮಧ್ಯಪ್ರದೇಶದ ಸತ್ನಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ಮೋದಿ ಅವರಿಗೆ ಹೂವಿನ ಹಾರ ಹಾಕಿ ಗೌರವಿಸಲಾಯಿತು
–ಪಿಟಿಐ ಚಿತ್ರ

ಮಧ್ಯಪ್ರದೇಶದ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಕರೆ

ಕಾಂಗ್ರೆಸ್‌ಗೆ 100 ವರ್ಷ ಅಧಿಕಾರ ಕೊಡಬೇಡಿ

ಛತರ್‌ಪುರ (ಮಧ್ಯಪ್ರದೇಶ) (ಪಿಟಿಐ): ಕಾಂಗ್ರೆಸ್ ಪಕ್ಷವು ದೇಶದ ಪ್ರಗತಿಯನ್ನು ಹಿಮ್ಮುಖವಾಗಿ ಕೊಂಡೊಯ್ಯುವಲ್ಲಿ ಪರಿಣತಿ ಪಡೆದಿದೆ. ಹಾಗಾಗಿ ಕನಿಷ್ಠ ನೂರು ವರ್ಷಗಳವರೆಗೆ ಆ ಪಕ್ಷವನ್ನು ಅಧಿಕಾರದಿಂದ ದೂರವಿಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಮತದಾರರಲ್ಲಿ ಮನವಿ ಮಾಡಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಬಲೆಗೆ ಜನರು ಬೀಳಬಾರದು. 'ವಾಹನವು ನಮ್ಮನ್ನು ರಿವರ್ಸ್ ಗೇರ್‌ನಲ್ಲಿ ಹಿಮ್ಮುಖವಾಗಿ ಕೊಂಡೊಯ್ಯುವಂತೆ ಕಾಂಗ್ರೆಸ್ ಕೂಡ ಉತ್ತಮ ಆಡಳಿತವನ್ನು ಕೆಟ್ಟ ಆಡಳಿತವಾಗಿ ಪರಿವರ್ತಿಸಿ ದೇಶದ ಪ್ರಗತಿಯನ್ನು ಹಿಮ್ಮುಖವಾಗಿ ಕೊಂಡೊಯ್ಯಬಲ್ಲದು' ಎಂದು ಎಚ್ಚರಿಸಿದರು.

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಬುಂದೇಲ್ ಖಂಡದಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಏನನ್ನೂ ಮಾಡಲಿಲ್ಲ. ಇದೇ ಪ್ರದೇಶ 100 ವರ್ಷಗಳ ಹಿಂದೆ ಅನೇಕ ನೀರಿನ ಒರತೆಗಳನ್ನು ಹೊಂದಿತ್ತು. ಈಗ ಜನರು ಹನಿ ನೀರಿಗೆ ಹಾತೊರೆಯುವಂತೆ ಆಗಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಪಕ್ಷವನ್ನು ನೂರು ವರ್ಷಗಳವರೆಗೆ ಅಧಿಕಾರಕ್ಕೆ ತರದೆ ಆ ಪಕ್ಷವೂ ಅಧಿಕಾರಕ್ಕೆ ಹಾತೊರೆಯುವಂತೆ ಮಾಡಬೇಕು. ಆಗ ಅದು ಸುಧಾರಣೆ ಆಗಬಹುದು ಎಂದರು.

ಕಾಂಗ್ರೆಸ್‌ಗೆ ದೇಶದ ಬಗ್ಗೆ ಯೋಚನೆಯಿಲ್ಲ. ಸ್ವಹಿತವೇ ಮುಖ್ಯವಾಗಿದೆ. ದೇಶದ ಅಭಿವೃದ್ಧಿಗೆ ಆ ಪಕ್ಷ ಏನನ್ನೂ ಮಾಡಿಲ್ಲ ಎಂದು ಆರೋಪಿಸಿದ ಅವರು, ಕಾಂಗ್ರೆಸ್ ನಾಯಕರು ಬೆಳ್ಳಿ ಚಮಚವನ್ನು ಬಾಯಲ್ಲಿಟ್ಟುಕೊಂಡು ಜನಿಸಿದ್ದಾರೆ. ಅವರಿಗೆ ಬಡತನವನ್ನು ಹಾಸ್ಯ ಮಾಡುವುದೇ ಸಾಹಸ ಪ್ರವಾಸೋದ್ಯಮ ಆಗಿದೆ ಎಂದು ಅಣಕವಾಡಿದರು.

ಕಾಂಗ್ರೆಸ್‌ಗೆ ಇಡೀ ದೇಶ ದೆಹಲಿಯಲ್ಲಿ ಆರಂಭವಾಗಿ ದೆಹಲಿಯಲ್ಲೇ ಕೊನೆಗೊಳ್ಳುತ್ತದೆ. ಆ ಪಕ್ಷದ ನಾಯಕರು ತಮ್ಮ ವಿದೇಶಿ ಸ್ನೇಹಿತರನ್ನು ದೆಹಲಿಯಿಂದ ಹೊರಗೆ ಕರೆದೊಯ್ಯುವಾಗ ಕೊಳಚೆ ಪ್ರದೇಶದಲ್ಲಿನ ಬಡತನವನ್ನು ಮಾತ್ರ ತೋರಿಸುತ್ತಾರೆ ಮತ್ತು ಅಲ್ಲಿ ಅವರ ಜತೆ ಫೋಟೊ ತೆಗೆಸಿಕೊಳ್ಳುತ್ತಾರೆ ಎಂದು ಟೀಕಿಸಿದರು. ಆದರೆ ಇಂದು ಮೋದಿ ಬಡವರಿಗೆ ಮನೆಗಳನ್ನು ಒದಗಿಸಿದ್ದಾರೆ ಎಂದರು.

ರಫ್ತು ಶೇ 50ರಷ್ಟು ಕುಂಠಿತ, ಸ್ಥಳೀಯ ಮಾರುಕಟ್ಟೆಯನ್ನೇ ನೆಚ್ಚಿದ ಉದ್ಯಮಿಗಳು

ಯುದ್ಧ, ಬಿಕ್ಕಟ್ಟು; ಗ್ರಾನೈಟ್ ಉದ್ಯಮಕ್ಕೆ ಹೊಡೆತ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಭಾರತ ಮತ್ತು ಚೀನಾ ನಡುವಿನ ಬಿಕ್ಕಟ್ಟು, ಅಮೆರಿಕದಲ್ಲಿ ಆರ್ಥಿಕ ಹಿಂಜರಿತ, ರಷ್ಯಾ-ಉಕ್ರೇನ್ ಯುದ್ಧ, ಇಸ್ರೇಲ್-ಹಮಾಸ್ ಕದನವು ಕರಿಕಲ್ಲು (ಗ್ರಾನೈಟ್) ಮತ್ತು ನೈಸರ್ಗಿಕ ಕಲ್ಲು (ಸ್ಟೋನ್) ಉದ್ಯಮಕ್ಕೆ ತೀವ್ರ ಹೊಡೆತ ಬಿದ್ದಿದೆ.

ವರ್ಷದಿಂದಲೂ ದೇಶ ಹಾಗೂ ರಾಜ್ಯದಿಂದ ಗ್ರಾನೈಟ್ ರಫ್ತಿನ ಪ್ರಮಾಣ ಕಡಿಮೆಯಾಗಿದ್ದು, ಕರಿಕಲ್ಲು ಉದ್ಯಮಕ್ಕೆ ಹೆಸರಾಗಿರುವ ಜಿಲ್ಲೆಯಲ್ಲೂ ಗಣಿಗಾರಿಕೆ ಬಹುತೇಕ ಸ್ಥಗಿತಗೊಳ್ಳುವ ಹಂತಕ್ಕೆ ಬಂದಿದೆ. ಸ್ಥಳೀಯ ಮಾರುಕಟ್ಟೆಗೆ ಮಾತ್ರ ಪೂರೈಕೆಯಾಗುತ್ತಿದೆ.

ಪ್ರಮುಖವಾಗಿ ಅಮೆರಿಕ, ಯುರೋಪ್, ಚೀನಾಕ್ಕೆ ಗ್ರಾನೈಟ್, ಮಾರ್ಬಲ್ ಸೇರಿದಂತೆ ಕಲ್ಲಿನ ಉತ್ಪನ್ನಗಳು ರಫ್ತಾಗುತ್ತವೆ. ವಾರ್ಷಿಕವಾಗಿ ₹15 ಸಾವಿರ ಕೋಟಿಯಷ್ಟು ವಹಿವಾಟು ನಡೆಯುತ್ತದೆ.

'ಒಂದು ವರ್ಷದಿಂದ ರಫ್ತಿನ ಪ್ರಮಾಣ ಶೇ 40ರಿಂದ ಶೇ 50ರಷ್ಟು ಕಡಿಮೆಯಾಗಿದ್ದು, ಕ್ವಾರಿಗಳಲ್ಲಿ ಉತ್ಪಾದನೆ ಕಡಿಮೆ ಮಾಡಿದ್ದೇವೆ. ಚೀನಾವು ಕರಿಕಲ್ಲು ಉತ್ಪನ್ನಗಳ ದೊಡ್ಡ ಗ್ರಾಹಕನಾಗಿದ್ದು, ಆಂಧ್ರಪ್ರದೇಶದಿಂದ ಹೆಚ್ಚು ರಫ್ತಾಗುತ್ತಿತ್ತು. ಎರಡೂ ದೇಶಗಳ ನಡುವೆ ಉಂಟಾಗಿರುವ ಬಿಕ್ಕಟ್ಟು ಉದ್ಯಮಕ್ಕೆ ಹಿನ್ನಡೆಯಾಗಿದೆ' ಎಂದು ಭಾರತೀಯ ಗ್ರಾನೈಟ್ ಮತ್ತು ಕಲ್ಲು ಉದ್ಯಮದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ಕೃಷ್ಣಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.



ಚಾಮರಾಜನಗರ ಜಿಲ್ಲೆಯ ಕರಿಕಲ್ಲು ಕ್ವಾರಿಯೊಂದರಲ್ಲಿ ಗಣಿಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು

ಪ್ರಜಾವಾಣಿ ವಿಶೇಷ

ರಾಜ್ಯದ ಉದ್ದಿಮೆಗೂ ನಷ್ಟ: ಕರಿಕಲ್ಲು ಹಾಗೂ ಕಲ್ಲಿನ ಇತರ ಉತ್ಪನ್ನಗಳನ್ನು ರಫ್ತು ಮಾಡುವುದರಲ್ಲಿ ದೇಶದಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ. ವಾರ್ಷಿಕವಾಗಿ ₹2,000 ಕೋಟಿಯಷ್ಟು ವಹಿವಾಟು ನಡೆಯುತ್ತದೆ.

ರಾಜ್ಯದಲ್ಲಿ ಚಾಮರಾಜನಗರ, ಇಳಕಲ್, ಕನಕಪುರ, ತುಮಕೂರು, ಹಾಸನ, ಮಂಗಳೂರಿನಲ್ಲಿ ಕರಿಕಲ್ಲು ಕ್ವಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಹೊರದೇಶಗಳಿಗೆ ರಫ್ತಾಗುತ್ತದೆ. ಅಮೆರಿಕ, ಯುರೋಪ್ ರಾಷ್ಟ್ರಗಳಿಗೆ ಕಳುಹಿಸಲಾಗುತ್ತದೆ. ಸ್ಮಾರಕಗಳ ನಿರ್ಮಾಣಕ್ಕಾಗಿ ಗ್ರಾನೈಟ್, ಮಾರ್ಬಲ್‌ಗಳನ್ನು ಖರೀದಿಸುತ್ತಾರೆ.

'ಅಮೆರಿಕದಲ್ಲಿ ಆರ್ಥಿಕ ಹಿಂಜರಿತದೊಂದಿಗೆ ಕೃತಕ ಗ್ರಾನೈಟ್, ಮಾರ್ಬಲ್‌ಗಳು ಹೆಚ್ಚು ಜನಪ್ರಿಯವಾಗುತ್ತಿವೆ. ನಮ್ಮ ದೇಶದಲ್ಲೇ ಉತ್ಪಾದನೆಯಾಗಿ ಅಲ್ಲಿಗೆ ಹೋಗುತ್ತಿವೆ. ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಹಿಂದಿನ ಅವಧಿಗೆ ಹೋಲಿಸಿದರೆ, ಬೇಡಿಕೆ ಶೇ 20ರಷ್ಟು ಕಡಿಮೆಯಾಗಿದೆ' ಎಂದು ಕೃಷ್ಣಪ್ರಸಾದ್ ಹೇಳಿದರು.

'ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧದಿಂದ ಯುರೋಪ್ ಮಾರುಕಟ್ಟೆ ಬಿದ್ದು ಹೋಗಿದೆ. ಇತ್ತೀಚೆಗೆ ಇಸ್ರೇಲ್-ಹಮಾಸ್ ಸಂಘರ್ಷದಿಂದ ಮಧ್ಯಪ್ರಾಚ್ಯದ ಮಾರುಕಟ್ಟೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ' ಎಂದು ಒಕ್ಕೂಟದ ಉಪಾಧ್ಯಕ್ಷ ಹಾಗೂ ಚಾಮರಾಜನಗರ ಜಿಲ್ಲಾ ಗ್ರಾನೈಟ್ ಕ್ವಾರಿ ಮಾಲೀಕರ ಸಂಘದ ಅಧ್ಯಕ್ಷ ಅಧ್ಯಕ್ಷ ಜಿ.ಎಂ.ಹೆಗಡೆ ತಿಳಿಸಿದರು.

'ನಮಗೆ ಅಮೆರಿಕ, ಯುರೋಪ್ ರಾಷ್ಟ್ರಗಳು ಪ್ರಮುಖ ಗ್ರಾಹಕರು. ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಇರುವುದರಿಂದ ಬಡ್ಡಿದರ ಹೆಚ್ಚಳ ಸೇರಿದಂತೆ ನಿಯಮಗಳನ್ನು ಬಿಗಿಗೊಳಿಸಿದ್ದಾರೆ. ಚೀನಾದ ವೀಸಾ ಸಮಸ್ಯೆಯೂ ಬಾಧಿಸುತ್ತಿದೆ. ಉದ್ದಿಮೆ ಚೇತರಿಕೆಗೆ ಎಷ್ಟು ಸಮಯಬೇಕು ಎಂಬುದು ತಿಳಿದಿಲ್ಲ' ಎಂದು ಜಿಲ್ಲೆಯ ಕರಿಕಲ್ಲು ಉದ್ಯಮಿ ಆಲೂರು ಪ್ರದೀಪ್ ಹೇಳಿದರು.

ಕರಿಕಲ್ಲು ಉತ್ಪಾದನೆ ಗಣನೀಯ ಇಳಿಕೆ

ಚಾಮರಾಜನಗರ ಜಿಲ್ಲೆಯ 45 ಕರಿಕಲ್ಲು ಕ್ವಾರಿಗಳ ಪೈಕಿ ಬಹುತೇಕ ಕ್ವಾರಿಗಳಲ್ಲಿ ತೆಗೆಯುವ ಕರಿಕಲ್ಲನ್ನು ರಫ್ತು ಮಾಡಲಾಗುತ್ತದೆ. ಸ್ಥಳೀಯ ಮಾರುಕಟ್ಟೆಗೆ ಹೋಗುವುದು ಕಡಿಮೆ.

'ಪ್ರತಿ ತಿಂಗಳು 3,000ದಿಂದ 3,500 ಘನ ಮೀಟರ್‌ನಷ್ಟು ಕಲ್ಲು ಉತ್ಪಾದನೆಯಾಗುತ್ತಿತ್ತು. ಈಗ ಹೊರದೇಶಗಳ ಮಾರುಕಟ್ಟೆ ಬಂದ್ ಆಗಿರುವುದರಿಂದ 600ರಿಂದ 1000 ಘನ ಮೀಟರ್‌ಗಳಷ್ಟು ಕಲ್ಲನ್ನು ಮಾತ್ರ ತೆಗೆಯಲಾಗುತ್ತಿದೆ. ಹಲವು ಮಾಲೀಕರು ಕ್ವಾರಿಯನ್ನು ಸ್ಥಗಿತಗೊಳಿಸಿದ್ದಾರೆ. ಸ್ಥಳೀಯ ಮಾರುಕಟ್ಟೆಗೆ ಪೂರೈಸುವವರು ಮಾತ್ರ ಗಣಿಗಾರಿಕೆ ನಡೆಸುತ್ತಿದ್ದಾರೆ' ಎಂದು ಜಿ.ಎಂ.ಹೆಗಡೆ ಮಾಹಿತಿ ನೀಡಿದರು.

ಕರಿಕಲ್ಲು ತುಂಬಿರುವ ಟ್ರಕ್

ತಾತ್ಕಾಲಿಕ ಹಿನ್ನಡೆ. ಆದರೆ, ಎಷ್ಟು ದಿನ ಇರ ಬಹುದು ಎಂದು ಹೇಳಲಾಗಲ್ಲ. ನೈಸರ್ಗಿಕ ಕಲ್ಲಿನ ಉತ್ಪನ್ನಗಳಿಗೆ ಬೇಡಿಕೆ ಇದ್ದೇ ಇದೆ

ಎಸ್.ಕೃಷ್ಣಪ್ರಸಾದ್, ಭಾರತೀಯ ಗ್ರಾನೈಟ್ ಮತ್ತು ಕಲ್ಲು ಉದ್ಯಮದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

ಸಾಲ ತೆಗೆದುಕೊಂಡಿರುತ್ತೇವೆ. ಕಾರ್ಮಿಕರಿಗೆ ವೇತನವನ್ನು ಕೊಡಬೇಕಾಗಿದೆ. ಹಾಗಾಗಿ, ಸ್ವಲ್ಪ ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುತ್ತಿದ್ದೇವೆ

ಆಲೂರ್ ಪ್ರದೀಪ್, ಚಾಮರಾಜನಗರದ ಉದ್ಯಮಿ

ಸುದ್ದಿ 2 ನಿಮಿಷ

ಮೇಘಾಲಯ; ಮಳೆ ನೀರು ಸಂಗ್ರಹ, ಸುಸ್ಥಿರತೆಗೆ ಕ್ರಮ

ಶಿಲ್ಲಾಂಗ್ (ಪಿಟಿಐ): ಮೇಘಾಲಯದಲ್ಲಿ ವಾರ್ಷಿಕ ಮಳೆಯಿಂದಾಗಿ ಸುಮಾರು 63 ಬಿಲಿಯನ್ ಕ್ಯೂಬಿಕ್ ಲೀಟರ್ ನೀರು ಹರಿದುಬರಲಿದ್ದು, ಈ ಪೈಕಿ ರಾಜ್ಯವು ಕೇವಲ 1 ಬಿಲಿಯನ್ ಕ್ಯೂಬಿಕ್ ಲೀಟರ್ ನೀರನ್ನು ಮಾತ್ರವೇ ಉಳಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿ ಸಿ.ಕೆ.ಸಂಗ್ಮಾ ಹೇಳಿದ್ದಾರೆ.

ಜಲಜೀವನ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಮೇಘಾಲಯ ವಾಟರ್ ಸ್ಮಾರ್ಟ್ ಕಿಡ್ ಯೋಜನೆಗೆ ಚಾಲನೆ ನೀಡಿ ಅವರು ಈ ಮಾತು ಹೇಳಿದರು. ಮಕ್ಕಳಲ್ಲಿ ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಮೇಘಾಲಯವು ಭೂಮಂಡಲದಲ್ಲಿಯೇ ಅತ್ಯಂತ ತೇವಯುಕ್ತವಾಗಿರುವ ಪ್ರದೇಶಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುರಿಯುವ ಒಟ್ಟು ಮಳೆ ಪ್ರಮಾಣದಲ್ಲಿ ಸುಮಾರು 31 ಬಿಲಿಯನ್ ಕ್ಯೂಬಿಕ್ ಲೀಟರ್ ನೀರು ಬಾಂಗ್ಲಾದೇಶಕ್ಕೆ ಹರಿದುಹೋದರೆ, ಅಷ್ಟೇ ಪ್ರಮಾಣದ ನೀರು ಅಸ್ಸಾಂಗೆ ಹರಿದುಹೋಗಲಿದೆ ಎಂದು ತಿಳಿಸಿದರು.

ನೀರು ಸಂರಕ್ಷಣೆ ಮತ್ತು ಸುಸ್ಥಿರಾಭಿವೃದ್ಧಿಗೆ ಒತ್ತು ನೀಡಲು ಕೇಂದ್ರ ಜಲ ಸಚಿವಾಲಯದ ವಿವಿಧ ಕಾರ್ಯಕ್ರಮಗಳ ನೆರವಿನಲ್ಲಿ ರಾಜ್ಯ ಸರ್ಕಾರ ವಿವಿಧ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿದೆ. ರಾಜ್ಯದಲ್ಲಿ 1000 ಜಲಸಂಗ್ರಹಾಗಾರಗಳನ್ನು ನಿರ್ಮಿಸಲು ಒತ್ತು ನೀಡಲಾಗಿದೆ ಎಂದು ತಿಳಿಸಿದರು.

'ಜಾಗತಿಕ ಬಿಕ್ಕಟ್ಟಿಗೆ ಪರಿಹಾರ ನಿರ್ಧಾರ ಕೈಗೊಳ್ಳಲು ಭಾರತ ಮುಕ್ತ'

ವಾಷಿಂಗ್ಟನ್ (ಪಿಟಿಐ): 'ಭಾರತವು ಎಂದಿಗೂ ಅಮೆರಿಕದ ಕಾರ್ಯತಂತ್ರ ಪಾಲುದಾರಿಕೆ ರಾಷ್ಟ್ರವಾಗಿಯೇ ಇರಲಿದ್ದು, ಅದು ಜಗತ್ತಿನ ಯಾವುದೇ ಬಿಕ್ಕಟ್ಟಿನ ಕುರಿತು ತೀರ್ಮಾನ ಕೈಗೊಳ್ಳಲು ಅದು ಮುಕ್ತವಾಗಿದೆ' ಎಂದು ಶ್ವೇತಭವನ ಹೇಳಿದೆ.

ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯತಂತ್ರ ಸಂವಹನೆಯಲ್ಲಿ ಸಂಯೋಜಕ ಜಾನ್ ಕಿರ್ಬಿ ಈ ಮಾತು ಹೇಳಿದ್ದಾರೆ. 'ಮಧ್ಯಪ್ರಾಚ್ಯ ಭಾಗದ ಬಿಕ್ಕಟ್ಟು ನಿವಾರಿಸಲು ಭಾರತದ ಯಾವುದೇ ಯತ್ನವನ್ನು ಆ ದೇಶವು ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಜೊತೆಗೆ ಹೊಂದಿರುವ ಬಾಂಧವ್ಯದ ದೃಷ್ಟಿಕೋನದಿಂದಲೇ ನೋಡಲಿದೆ ಎಂದು ಹೇಳಿದರು.

'ಭಾರತವು ಅಮೆರಿಕದ ಮುಖ್ಯ ಕಾರ್ಯತಂತ್ರ ರಾಷ್ಟ್ರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿಯೂ ಅದನ್ನು ನೀವು ಗಮನಿಸಿದ್ದೀರಿ' ಎಂದು ಕಿರ್ಬಿ ಶ್ವೇತಭವನದಲ್ಲಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಜಗತ್ತಿನ ಯಾವುದೇ ಬಿಕ್ಕಟ್ಟಿನ ಕುರಿತು ನಿಲುವು ಏನಿರಬೇಕು ಎಂಬುದನ್ನು ತೀರ್ಮಾನಿಸುವ ವಿವೇಚನೆಯು ಭಾರತ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರದ್ದೆ ಆಗಿದೆ' ಎಂದು ಪ್ರತಿಕ್ರಿಯಿಸಿದರು.

ಸಿ.ಎಂ ನಿವಾಸಕ್ಕೆ ಮುತ್ತಿಗೆ: ರೈತರು ವಶಕ್ಕೆ

ಒಂದನೇ ಪುಟದಿಂದ

ತಮಟೆ ಚಳವಳಿ: ಮೈಸೂರು, ಚಾಮರಾಜನಗರ, ಹಾಸನ, ಬೆಂಗಳೂರು ಗ್ರಾಮಾಂತರದಿಂದ ಆಗಮಿಸಿದ್ದ ನೂರಾರು ರೈತರು ಮುಖ್ಯಮಂತ್ರಿ ನಿವಾಸದ ಮುಂದೆ ಜಮಾಯಿಸಿ, ತಮಟೆ ಚಳವಳಿ ನಡೆಸಿದರು. ರಸ್ತೆಯಲ್ಲೇ ಮಲಗಿ ಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿದರು. ರೈತರ ಬಂಧನದ ಬಳಿಕ ಸಿಎಆರ್ ಮೈದಾನದಲ್ಲಿ ನೂರಾರು ರೈತರು ಸಭೆ ಸೇರಿ ಮುಂದಿನ ಹೋರಾಟದ ಕಾರ್ಯಯೋಜನೆ ರೂಪಿಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, 'ರೈತರ ಕೂಗಿಗೆ ಸ್ಪಂದಿಸುವ ಬದಲು ಪ್ರತಿಭಟಿಸುವವರ ಬಾಯಿ ಮುಚ್ಚಿಸುತ್ತಿರುವುದು ಸರ್ವಾಧಿಕಾರಿ ಧೋರಣೆ. ಕಬ್ಬು ಬೆಳೆಗಾರರಿಗೆ ಘೋಷಿಸಿರುವ ಬೆಂಬಲ ಬೆಲೆಯ ಬಾಕಿ ಹಣ ಪಾವತಿಸಿ. ಪ್ರಸಕ್ತ ಸಾಲಿಗೆ ಹೆಚ್ಚುವರಿ ದರ ನಿಗದಿ ಮಾಡಿ, ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾಧ್ಯಕ್ಷ ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಾರ್ಯಾಧ್ಯಕ್ಷ ಹಳ್ಳಿಕರಂಡಿ ಭಾಗ್ಯರಾಜ್, ಕಿರುಗಸೂರು ಶಂಕರ್ ಇದ್ದರು.

120ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ; 140 ಕಿ.ಮೀ ಪಾದಯಾತ್ರೆ ಪೂರ್ಣ

ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಗಾಗಿ ತೀವ್ರ ಹೋರಾಟ

ಪ್ರಜಾವಾಣಿ ವಾರ್ತೆ

ಕಾರವಾರ: ಜಿಲ್ಲೆಯಲ್ಲಿ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಗೆ ಸ್ಥಾಪನೆಗೆ ಒತ್ತಾಯಿಸಿ ಸಮಾನ ಮನಸ್ಕ ಹೋರಾಟಗಾರರು ಶಿರಸಿಯಿಂದ ಕಾರವಾರಕ್ಕೆ 140 ಕಿ.ಮೀ. ಪಾದಯಾತ್ರೆ ನಡೆಸಿದರು. ಹೆದ್ದಾರಿ ಅಂಚಿನಲ್ಲಿರುವ 120ಕ್ಕೂ ಹೆಚ್ಚು ಗ್ರಾಮಗಳ ಜನರನ್ನು ಭೇಟಿಯಾಗಿ, ಅವರ ಬೆಂಬಲ ಪಡೆದರು.

ಹೋರಾಟದ ನೇತೃತ್ವದ ವಹಿಸಿದ ಶಿರಸಿಯ ಅನಂತಮೂರ್ತಿ ಹೆಗಡೆ ಮಾತನಾಡಿ, 'ನವೆಂಬರ್ 2ರಂದು ಶಿರಸಿಯಿಂದ ಪಾದಯಾತ್ರೆ ಆರಂಭಿಸಿ ಗುರುವಾರ (ನವೆಂಬರ್ 9) ಕಾರವಾರ ತಲುಪಿದ್ದೇವೆ. ಒಟ್ಟು ಎಂಟು ದಿನಗಳಲ್ಲಿ ರಾತ್ರಿ ವೇಳೆ ಸಮುದಾಯ ಭವನ, ದೇವಸ್ಥಾನದ ಸಭಾಂಗಣದಲ್ಲಿ ವಾಸ್ತವ್ಯ ಮಾಡಿದೆವು. ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯ ಅಗತ್ಯ ಕುರಿತು ಜನರಿಗೆ ಮನವರಿಕೆ ಮಾಡಿದೆವು' ಎಂದರು.

'ಜ್ವರ, ಕೆಮ್ಮಿಗೆ ಚಿಕಿತ್ಸೆ ಸಿಗುವುದು ಹೊರತುಪಡಿಸಿದರೆ ಜಿಲ್ಲೆಯಲ್ಲಿ ಗಂಭೀರ ಅಥವಾ ಮಾರಣಾಂತಿಕ ಕಾಯಿಲೆಗೆ ಸೂಕ್ತ ಚಿಕಿತ್ಸೆ ಸಿಗುತ್ತಿಲ್ಲ. ತೀವ್ರ ಸ್ವರೂಪದಲ್ಲಿ ಗಾಯಗೊಂಡವರನ್ನು ಚಿಕಿತ್ಸೆಗಾಗಿ 100 ಕೀ.ಮೀ ದೂರದ ಹುಬ್ಬಳ್ಳಿ ಅಥವಾ 250 ಕಿ.ಮೀ ದೂರದ ಮಂಗಳೂರಿನ ಆಸ್ಪತ್ರೆಗೆ ಸಾಗಿಸಬೇಕಿದೆ. ಆಸ್ಪತ್ರೆ ತಲುಪುವಷ್ಟರಲ್ಲಿ ಪ್ರಾಣ ಹೋಗಿರುತ್ತದೆ. ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಗಾಗಿ ಹಲವು ವರ್ಷಗಳಿಂದ ಬೇಡಿಕೆಯಿಟ್ಟರೂ ಸ್ಪಂದನೆ ಸಿಕ್ಕಿಲ್ಲ' ಎಂದರು.

'ಸುಸಜ್ಜಿತ ಆಸ್ಪತ್ರೆಗಾಗಿ ವಿವಿಧ ಸ್ವರೂಪಗಳಲ್ಲಿ ಹೋರಾಟ ನಡೆದರೂ ಸರ್ಕಾರದಿಂದ ಸ್ಪಂದನೆ ಸಿಗದಿರುವುದು ಬೇಸರದ ಸಂಗತಿ. ಜಿಲ್ಲೆಯಲ್ಲಿ ಆರೋಗ್ಯ ಕ್ಷೇತ್ರ ಸುಧಾರಿಸಲು ಇಚ್ಛಾಶಕ್ತಿಯ ಕೊರತೆಯಿದೆ' ಎಂದು ಸಾಮಾಜಿಕ ಕಾರ್ಯಕರ್ತ ವೆಂಕಟೇಶ ನಾಯ್ಕ ಹೇಳಿದರು. ಪಾದಯಾತ್ರೆಯ ಬಳಿಕ, ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಕಾಶ ರಜಪೂತ್ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು.

ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ ಸ್ಥಾಪನೆಗೆ ಒತ್ತಾಯಿಸಿ ಪ್ರತಿಭಟನಕಾರರು ಪಾದಯಾತ್ರೆ ಮೂಲಕ ಸಾಗಿದರು

15 ಎಕರೆ ಜಾಗ ಮೀಸಲು

ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ ಸ್ಥಾಪನೆಗೆ ಜಿಲ್ಲೆಯ ಕುಮಟಾದಲ್ಲಿ ಜಾಗ ಗುರುತಿಸಿ, ಹಿಂದಿನ ಬಿಜೆಪಿ ಸರ್ಕಾರವು 2023ರ ಬಜೆಟ್‌ನಲ್ಲಿ ಘೋಷಿಸಿತ್ತು.

'15 ಎಕರೆ ಜಾಗ ಮೀಸಲಿಡಲಾಗಿದೆ. ಈ ಪೈಕಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಜಾಗ ಹಸ್ತಾಂತರ ಪ್ರಕ್ರಿಯೆ ಮುಗಿದಿದೆ. ಕೃಷಿ ಇಲಾಖೆಗೆ ಸೇರಿದ ಜಾಗ ಸ್ವಾಧೀನಕ್ಕೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪ್ರಕ್ರಿಯೆ ಮುಗಿದ ಬಳಿಕ ಆಸ್ಪತ್ರೆ ಸ್ಥಾಪನೆಗೆ ಅಗತ್ಯ ಕ್ರಮಕ್ಕಾಗಿ ಕ್ರಿಮ್ಸ್ ಅಧೀನಕ್ಕೆ ಜಾಗ ನೀಡಲಾಗುವುದು' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಕಾಶ ರಜಪೂತ್ ತಿಳಿಸಿದರು.

ಕಂಡಲ ಬ್ಯಾಂಕ್ ಹಗರಣ: ಎರಡನೇ ದಿನವೂ ಇ.ಡಿ ಪರಿಶೀಲನೆ

ತಿರುವನಂತಪುರ (ಪಿಟಿಐ): ಕೇರಳದ ಕಂಡಲ ಸೇವಾ ಸಹಕಾರಿ ಬ್ಯಾಂಕ್ ಮೇಲೆ ಬುಧವಾರ ದಾಳಿ ನಡೆಸಿದಿದ್ದ ಜಾರಿ ನಿರ್ದೇಶನಾಲಯ ಗುರುವಾರವೂ ಪರಿಶೀಲನೆ ಮುಂದುವರಿಸಿತು.

ಕಾಟ್ಟಕ್ಕಡದಲ್ಲಿರುವ ಬ್ಯಾಂಕ್ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸ್ಥಳಗಳು, ಬ್ಯಾಂಕ್‌ನ ಮಾಜಿ ಅಧ್ಯಕ್ಷ, ಸಿಪಿಐ ನಾಯಕ ಎನ್. ಭಾಸುರಾಂಗನ್ ಅವರ ನಿವಾಸಗಳಲ್ಲಿ ಶೋಧ ನಡೆಯುತ್ತಿದೆ.

ಇ.ಡಿ ದಾಳಿಯ ಭಾಗವಾಗಿ ಭಾಸುರಾಂಗನ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಈ ವೇಳೆ ಅವರು ಅಸ್ವಸ್ಥರಾಗಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇ.ಡಿ ದಾಳಿ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಸಿಪಿಐನ ಜಿಲ್ಲಾ ಘಟಕ, 'ಭಾಸುರಾಂಗನ್ ಅವರ ವಿರುದ್ಧ ಹಿಂದೆಯೇ ಕ್ರಮ ಕೈಗೊಳ್ಳಲಾಗಿದೆ. ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೂ ಉಚ್ಚಾಟಿಸಲಾಗಿದೆ' ಎಂದು ತಿಳಿಸಿದೆ.

ನಕಲಿ ಮದ್ಯ ಸೇವನೆ ಶಂಕೆ: ಆರು ಸಾವು

ಚಂಡೀಗಡ(ಪಿಟಿಐ): ಹರಿಯಾಣದ ಯಮುನಾನಗರ ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಲ್ಲಿ ಶಂಕಿತ ನಕಲಿ ಮದ್ಯ ಸೇವನೆಯಿಂದ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ.

ಗುಂಡಿನ ದಾಳಿ: ಹೆಡ್‌ಕಾನ್‌ಸ್ಟೆಬಲ್ ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ರಾಮಗಢ ಸೆಕ್ಟರ್‌ನಲ್ಲಿನ ಅಂತರರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನದ ಸೈನಿಕರು ಗುರುವಾರ ನಸುಕಿನಲ್ಲಿ ನಡೆಸಿದ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಹೆಡ್‌ಕಾನ್‌ಸ್ಟೆಬಲ್ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಿಜೋರಾಂನ ಐಜ್ವಾಲ್ ನಿವಾಸಿ ಲಾಲ್ ಫಾಮ್ ಕಿಮಾ (50) ಮೃತಪಟ್ಟವರು.

ಅಪ್ರಚೋದಿತ ದಾಳಿಯಲ್ಲಿ ಕಿಮಾ ಗಾಯಗೊಂಡ ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು. ನಂತರ ಜಮ್ಮುವಿನ ಆಸ್ಪತ್ರೆಗೆ ಕಳಿಸಿಕೊಡಲಾಯಿತು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಮಗಢ ಪ್ರದೇಶದಲ್ಲಿ ಪಾಕಿಸ್ತಾನದ ಪಡೆಗಳು ನಡೆಸಿದ ಅಪ್ರಚೋದಿತ ಗುಂಡಿನ ದಾಳಿಗೆ ಬಿಎಸ್‌ಎಫ್ ಪಡೆಗಳು ಸಹ ತಕ್ಕ ಉತ್ತರ ನೀಡಿವೆ ಎಂದು ಗಡಿ ಭದ್ರತಾ ಪಡೆಯು ಹೇಳಿಕೆಯಲ್ಲಿ ತಿಳಿಸಿದೆ.

'ಅಂತರರಾಷ್ಟ್ರೀಯ ಗಡಿಯಲ್ಲಿನ ಗುಂಡಿನ ದಾಳಿ, ಶೆಲ್ ದಾಳಿಗೂ ವಿಸ್ತರಣೆಗೊಂಡಿದ್ದು ಸ್ಥಳೀಯ ನಿವಾಸಿಗಳಲ್ಲಿ ಭಯದ ಮನೋರೋಗ ಸೃಷ್ಟಿಸಿದೆ' ಎಂದು ಜೆರ್ಡಾ ಗ್ರಾಮ ವಾಸಿ ಮೋಹನ್ ಸಿಂಗ್ ಭಾಟ್ಟಿ ಹೇಳಿದ್ದಾರೆ.

2021ರ ಫೆ.25ರಂದು ನಡೆದ ಕದನ ವಿರಾಮ ಒಪ್ಪಂದದ ಬಳಿಕ ಇದೂವರೆಗೂ ಆರು ಬಾರಿ ಉಲ್ಲಂಘನೆಯಾಗಿದೆ.

ಜಮ್ಮುವಿನ ಅಂತರ ರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನದ ಸೈನಿಕರು 24 ದಿನದಲ್ಲಿ ಮೂರನೇ ಬಾರಿಗೆ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿದ್ದು, ಸಾಂಬಾ ಜಿಲ್ಲೆಯ ಗಡಿ ಹೊರ ಠಾಣೆಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದ್ದಾರೆ.

ಇ.ಡಿ ವಿಚಾರಣೆಗೆ ಹಾಜರಾದ ಅಭಿಷೇಕ್ ಬ್ಯಾನರ್ಜಿ

ಕೋಲ್ಕತ್ತ(ಪಿಟಿಐ): ಶಾಲಾ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಮರೆಮಾಚಲು ಏನೂ ಇಲ್ಲ. ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಗೆ ಸಹಕರಿಸುತ್ತೇನೆ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಅಭಿಷೇಕ್ ಬ್ಯಾನರ್ಜಿ ಗುರುವಾರ ತಿಳಿಸಿದ್ದಾರೆ.

ಕೋಲ್ಕತ್ತದ ಇ.ಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದ ಬಳಿಕ ಅವರು ಈ ಹೇಳಿಕೆ ನೀಡಿದ್ದಾರೆ.

ತನಿಖಾ ಸಂಸ್ಥೆಗೆ 6 ಸಾವಿರ ಪುಟಗಳ ಪ್ರತಿಕ್ರಿಯೆ ಸಲ್ಲಿಸಲಾಗಿದೆ ಎಂದು ಅಭಿಷೇಕ್ ಹೇಳಿದ್ದಾರೆ.

'ಇ.ಡಿ. ಇನ್ನೊಮ್ಮೆ ಸಮನ್ಸ್ ನೀಡಿದರೂ ವಿಚಾರಣೆಗೆ ಹಾಜರಾಗುತ್ತೇನೆ. ಅವರು ಕೇಳಿರುವ ಎಲ್ಲಾ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ' ಎಂದಿದ್ದಾರೆ.

'ಬಿಜೆಪಿಗೆ ಅಭಿಷೇಕ್ ಫೋಬಿಯಾ': ಬಿಜೆಪಿಯು ಕೇಂದ್ರ ತನಿಖಾ ಸಂಸ್ಥೆಗಳನ್ನು ರಾಜಕೀಯ ಹಿತಾಸಕ್ತಿಗಳಿಗೆ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿರುವ ಟಿಎಂಸಿ, 'ಆ ಪಕ್ಷವು 'ಅಭಿಷೇಕ್ ಫೋಬಿಯಾ'ದಿಂದ ಬಳಲುತ್ತಿದೆ' ಎಂದು ಟಿಎಂಸಿ ಸಂಸದ ಸಂತನು ಸೇನ್ ಹೇಳಿದ್ದಾರೆ.

ಕೇಂದ್ರ ತನಿಖಾ ಸಂಸ್ಥೆಗಳು ಅಭಿಷೇಕ್ ಬ್ಯಾನರ್ಜಿ ಅವರ ಕುಟುಂಬ ಸದಸ್ಯರಿಗೆ ಕಿರುಕುಳ ನೀಡುತ್ತಿವೆ ಎಂದು ಆರೋಪಿಸಿದ್ದಾರೆ.

ಮಳೆ: ತುಂಗಭದ್ರಾ ಜಲಾಶಯಕ್ಕೆ 4,860 ಕ್ಯೂಸೆಕ್ ಒಳಹರಿವು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಜಯ ನಗರ ಜಿಲ್ಲೆಯ ಹೊಸಪೇಟೆ ಸಹಿತ ಹಲವೆಡೆ ಬುಧವಾರ ರಾತ್ರಿಯಿಡೀ ಜಿಟಿ ಜಿಟಿ ಮಳೆ ಸುರಿದಿದೆ. ತುಂಗಭದ್ರಾ ನದಿಯ ಜಲಾನಯನ ಪ್ರದೇಶದಲ್ಲಿ ಮಳೆ ಸುರಿದ ಕಾರಣ 20 ದಿನದ ಬಳಿಕ ಜಲಾಶಯಕ್ಕೆ ಮತ್ತೆ ಒಳಹರಿವು ಆರಂಭವಾಗಿದೆ.

ತುಂಗಭದ್ರಾ ಜಲಾಶಯಕ್ಕೆ ಗುರುವಾರ 4,860 ಕ್ಯೂಸೆಕ್ ಒಳಹರಿವು ಬಂದಿದ್ದು, ಸದ್ಯ ಜಲಾಶಯದಲ್ಲಿ 25.87 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಕಾಲುವೆಗಳಿಗೆ 9,874 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಜಲಾಶಯದಲ್ಲಿ 102.05 ಟಿಎಂಸಿ ಅಡಿ ನೀರು ಸಂಗ್ರಹ ಇತ್ತು.

ತುಂಗಭದ್ರಾ ಜಲಾಶಯದ ಬಲದಂಡೆ ಮೇಲ್ಮಟ್ಟದ ಕಾಲುವೆಯಲ್ಲಿ ನೀರು ಹರಿಸುವುದನ್ನು ಶುಕ್ರವಾರದಿಂದ (ನ.10) ಸ್ಥಗಿತಗೊಳಿಸಲು ನೀರಾವರಿ ಸಲಹಾ ಸಮಿತಿ ಈಗಾಗಲೇ ನಿರ್ಧರಿಸಿದೆ. ಆದರೆ ಈ ಪ್ರಸ್ತಾವಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಬೆಳೆದು ನಿಂತ ಭತ್ತ ಕಟಾವು ಹಂತಕ್ಕೆ ಬರುತ್ತಿದ್ದು, ಈ ಹಂತದಲ್ಲಿ ನೀರು ಹರಿಸುವುದು ಸ್ಥಗಿತಗೊಳಿಸಬಾರದು ಎಂದು ರೈತರು ಒತ್ತಾಯಿಸಿದ್ದಾರೆ. ಈ ಬಾರಿ ಎರಡನೇ ಬೆಳೆಗೆ ನೀರು ಹರಿಸುವ ಸಾಧ್ಯತೆ ಇಲ್ಲ ಎಂದು ಈಗಾಗಲೇ ತಿಳಿಸಲಾಗಿದ್ದು, ಹಿಂಗಾರು ಮಳೆಯತ್ತ ಎಲ್ಲರ ಗಮನ ನೆಟ್ಟಿದೆ.

'ಮಳೆ ಸುರಿದರೆ ಜಲಾಶಯಕ್ಕೆ ನೀರು ಹರಿದು ಬರಬಹುದು. ಇದರಿಂದ ನೀರಿನ ಕೊರತೆ ನೀಗಲಿದೆ' ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.

ಹಳೆ ಕಾಫಿಗೆ ಬೇಡಿಕೆ ಕುಸಿತ: ಷರತ್ತು ವಿಧಿಸಿದ ಖರೀದಿ ಏಜೆನ್ಸಿಗಳು

ಆಘಾತ ತಂದ ಏಜೆನ್ಸಿಗಳ ನಿರ್ಧಾರ

• ಆದಿತ್ಯ ಕೆ.ಎ.

ಬೆಂಗಳೂರು: ಚೇತರಿಕೆ ಹಾದಿಯಲ್ಲಿದ್ದ ಕಾಫಿ ಧಾರಣೆ ಕೆಲವು ದಿನಗಳಿಂದ ಕುಸಿತದ ಹಾದಿ ಹಿಡಿದಿದ್ದು ಕಾಫಿ ಮಾರುಕಟ್ಟೆಯಲ್ಲಿ ತಲ್ಲಣ ಆರಂಭವಾಗಿದೆ. ಖರೀದಿ ಏಜೆನ್ಸಿಗಳಲ್ಲಿ (ಕ್ಯೂರಿಂಗ್) ಬೆಳೆಗಾರರು ದಾಸ್ತಾನು ಮಾಡಿದ್ದ ಹಿಂದಿನ ವರ್ಷದ ಉತ್ಪನ್ನಕ್ಕೆ ನಿರೀಕ್ಷಿತ ಬೆಲೆ ದೊರೆಯುತ್ತಿಲ್ಲ. ಇದರಿಂದ ರಾಜ್ಯದ ಬೆಳೆಗಾರರು ಕಂಗಾಲಾಗಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಾಫಿಗೆ ಬೇಡಿಕೆ ಕುಸಿದಿರುವ ಪರಿಣಾಮ ದಾಸ್ತಾನು ಮಾಡಿಕೊಂಡಿದ್ದ ಕಾಫಿಯನ್ನು ಖರೀದಿ ಏಜೆನ್ಸಿಗಳು ಬೆಳೆಗಾರರಿಗೇ ವಾಪಸ್ ನೀಡುತ್ತಿವೆ. ಚಿಕ್ಕಮಗಳೂರು, ಕೊಡಗು ಹಾಗೂ ಹಾಸನದ ಬೆಳೆಗಾರರಿಗೆ ನಷ್ಟದ ಭೀತಿ ಎದುರಾಗಿದೆ.

ದೊಡ್ಡ ಹಾಗೂ ಕೆಲವು ಸಣ್ಣ ಬೆಳೆಗಾರರು ಕ್ಯೂರಿಂಗ್‌ಗಳಲ್ಲಿ ಕಾಫಿ ದಾಸ್ತಾನು ಮಾಡುತ್ತಾರೆ. ಜತೆಗೆ, ಸಣ್ಣ ವ್ಯಾಪಾರಸ್ಥರೂ ಏಜೆನ್ಸಿಯಲ್ಲಿ ಕಾಫಿ ಇಟ್ಟಿರುತ್ತಾರೆ. ಧಾರಣೆ ಹೆಚ್ಚಾದ ಸಂದರ್ಭಗಳಲ್ಲಿ ಅಂದಿನ ದರಕ್ಕೆ ಬಿಲ್ ಹಾಕಿಸಿ, ಮಾರಾಟ ಮಾಡುತ್ತಾರೆ. ಈಗ ಅದೇ ಮುಳುವಾಗಿದೆ.

'ಕ್ಯೂರಿಂಗ್‌ಗಳಲ್ಲಿ ಇಟ್ಟಿರುವ ಕಾಫಿಗೆ ಬಿಲ್ ಮಾಡಿಸಿಕೊಳ್ಳಬೇಕು. ಹೊಸ ಹಾಗೂ ಹಳೆ ಉತ್ಪನ್ನದ ನಡುವೆ (ತಲಾ 50 ಕೆ.ಜಿ ಚೀಲಕ್ಕೆ) ₹1,500 ವ್ಯತ್ಯಾಸವಾಗುವ ಸಾಧ್ಯತೆಯಿದೆ. ತಕ್ಷಣವೇ ಬೆಳೆಗಾರರು ತಮ್ಮ ನಿರ್ಧಾರ ತಿಳಿಸಬೇಕು. ನಿರ್ಧಾರ ತಿಳಿಸದಿದ್ದರೆ ವ್ಯತ್ಯಾಸದ ಬೆಲೆಯಲ್ಲಿ ಬಿಲ್ ಮಾಡಿಸಬಹುದು ಎಂದೇ ಭಾವಿಸುತ್ತೇವೆ. ಈಗಿರುವ ಧಾರಣೆಗೆ ಬಿಲ್ ಹಾಕಿಸಲು ಒಪ್ಪಿಗೆ ಇಲ್ಲದವರ ಕಾಫಿಯನ್ನು ಪ್ರತ್ಯೇಕವಾಗಿ ಇಡಲಾಗುವುದು. ಆ ಉತ್ಪನ್ನವನ್ನು ಖರೀದಿಸುವುದಿಲ್ಲ. ಬೆಳೆಗಾರರಿಗೆ ವಾಪಸ್ ಕೊಡಲಾಗುವುದು' ಎಂದು ಹಲವು ಕಾಫಿ ಕ್ಯೂರಿಂಗ್‌ಗಳು ಬೆಳೆಗಾರರಿಗೆ ಸಂದೇಶ ಕಳುಹಿಸುತ್ತಿವೆ. ಈ ನಿರ್ಧಾರವು ಬೆಳೆಗಾರರಿಗೆ ಆಘಾತ ತಂದಿದೆ.

ಕಳೆದ ವರ್ಷದ ಕಾಫಿ ಹಂಗಾಮಿನಲ್ಲಿ ಅರೇಬಿಕಾ, ರೋಬಸ್ಟಾ ಕಾಫಿ ಧಾರಣೆ ನಾಗಾಲೋಟದಲ್ಲಿ ಏರಿಕೆ ಕಂಡಿತ್ತು. 50 ಕೆ.ಜಿ ತೂಕದ ರೊಬಸ್ಟಾ ಪಾರ್ಚ್‌ಮೆಂಟ್ ಬೆಲೆ ₹10 ಸಾವಿರಕ್ಕೆ ತಲುಪಿತ್ತು. ಕಾಫಿ ಇತಿಹಾಸದಲ್ಲಿ ರೊಬಸ್ಟಾ ಪಾರ್ಚ್‌ಮೆಂಟ್‌ಗೆ ಸಿಕ್ಕಿದ ಗರಿಷ್ಠ ಬೆಲೆ ಇದಾಗಿತ್ತು. ಅರೇಬಿಕಾ ಕಾಫಿ ಪಾರ್ಚ್‌ಮೆಂಟ್ ಸಹ ₹16,200ಕ್ಕೆ ಮುಟ್ಟಿತ್ತು. ಈಗ ಅದೇ ಅರೇಬಿಕಾ ಕಾಫಿ ಚೀಲಕ್ಕೆ ₹11,250 ಮಾತ್ರ ದರವಿದೆ. ಹಿಂದಿನ ದರಕ್ಕೆ ಹೋಲಿಸಿದರೆ ಪ್ರತಿ ಚೀಲದ ಮೇಲೆ ₹4,950 ಇಳಿಕೆ ಕಂಡಿದೆ.

ಧಾರಣೆ ಸ್ಥಿತಿಗತಿ (ತಲಾ 50 ಕೆ.ಜಿ ಚೀಲಕ್ಕೆ, ರೂಗಳಲ್ಲಿ)

ಕಾಫಿ ಮಾದರಿ	2022ರ ಜುಲೈ	2023ರ ಫೆಬ್ರುವರಿ	ಇದೇ ನವೆಂಬರ್‌ನಲ್ಲಿ
ಅರೇಬಿಕಾ ಪಾರ್ಚ್‌ಮೆಂಟ್	16,200	14,500	11,250
ಅರೇಬಿಕಾ ಚೆರ್ರಿ	8,820	7,140	6,440
ರೊಬಸ್ಟಾ ಪಾರ್ಚ್‌ಮೆಂಟ್	10,000	9,100	9,800
ರೊಬಸ್ಟಾ ಚೆರ್ರಿ	5,100	4,900	5,960

ಹತ್ತು ವರ್ಷದಿಂದ ಏಜೆನ್ಸಿಯಲ್ಲಿ ಕಾಫಿ ದಾಸ್ತಾನು ಮಾಡುತ್ತಿದ್ದೇನೆ. ಹಳೆ, ಹೊಸ ಕಾಫಿಗೆ ದರ ವ್ಯತ್ಯಾಸ ಮಾಡಿರಲಿಲ್ಲ. ದರ ಹೆಚ್ಚಾದ ವೇಳೆಯಲ್ಲಿ 2 ವರ್ಷದ ಉತ್ಪನ್ನವನ್ನು ಒಟ್ಟಿಗೇ ಬಿಲ್ ಹಾಕಿಸುತ್ತಿದ್ದೆ.

ಸಂದೇಶ್, ಬೆಳೆಗಾರ, ಮೂಡಿಗೆರೆ

'ಮೂರು ವರ್ಷಗಳಿಂದ ಬ್ರೆಜಿಲ್, ವಿಯೆಟ್ನಾಂ ಹಾಗೂ ಇಂಡೋನೇಷ್ಯಾದಲ್ಲಿ ಹಿಮಪಾತ, ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿತ್ತು. ಈ ವರ್ಷ ಕಾಫಿ ಬೆಳೆಯುವ ರಾಷ್ಟ್ರಗಳಲ್ಲಿ ಬೆಳೆಗೆ ವಾತಾವರಣ ಪೂರಕವಾಗಿದ್ದು, ಗರಿಷ್ಠಮಟ್ಟದಲ್ಲಿ ಉತ್ಪನ್ನ ಬರುವ ನಿರೀಕ್ಷೆಯಿದೆ. ರಫ್ತು ಪ್ರಮಾಣವೂ ಕುಸಿದಿದೆ. ಈಗಾಗಲೇ ಕಾಫಿ ಕೊಯ್ಲು ಆರಂಭವಾಗಿದ್ದು ಹೊಸ ಉತ್ಪನ್ನ ಮಾರುಕಟ್ಟೆಗೆ ಬಂದರೆ ಮತ್ತಷ್ಟು ಬೆಲೆ ಕುಸಿಯುವ ಸಾಧ್ಯತೆಯಿದೆ. ಕಾಫಿ ದಾಸ್ತಾನು ಮಾಡಿಕೊಂಡಿದ್ದ ಖರೀದಿ ಏಜೆನ್ಸಿಗಳಿಗೂ ನಷ್ಟದ ಭೀತಿ ಎದುರಾಗಿದೆ' ಎಂದು ಮಾರಾಟ ಪ್ರತಿನಿಧಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕಲಬುರಗಿಯಲ್ಲಿ ಪ್ರವೇಶಾತಿಯೇ ಆಗಿಲ್ಲ ● ಬಳ್ಳಾರಿಯಲ್ಲೂ ಕುಂದಿದ ಉತ್ಸಾಹ

ಸಂಜೆ ಕಾಲೇಜಿಗೆ ಶೂನ್ಯ ದಾಖಲಾತಿ

● ಬಷೀರಅಹ್ಮದ್ ನಗಾರಿ

ಕಲಬುರಗಿ: ದುಡಿಯುವ ಯುವಜನರ ಕಲಿಕಾಸಕ್ತಿಗೆ ಬಲ ತುಂಬಲು 'ಸಂಧ್ಯಾ ಶಕ್ತಿ' ಯೋಜನೆಯಡಿ ರಾಜ್ಯ ಸರ್ಕಾರ ಆರಂಭಿಸಿದ್ದ 'ಸಂಜೆ ಕಾಲೇಜು'ಗಳಿಗೆ ಕಲ್ಯಾಣ ಭಾಗದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಲಬುರಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) 2021-22ರಲ್ಲಿ ಆರಂಭವಾಗಬೇಕಿದ್ದ ಸಂಜೆ ಕಾಲೇಜು ಈತನಕ ಆರಂಭವೇ ಆಗಿಲ್ಲ. ಜಾಗೃತಿ, ಪ್ರಚಾರದ ಕೊರತೆಯಿಂದಾಗಿ ಸಂಜೆ ಕಾಲೇಜಿಗೆ ಪ್ರವೇಶಾತಿ ಕೋರಿ ಕನಿಷ್ಠ ಒಂದೇ ಒಂದು ಅರ್ಜಿ ಕೂಡ ಸಲ್ಲಿಕೆಯಾಗಿಲ್ಲ.

'ನಾನು ಈ ವರ್ಷದ ಆಗಸ್ಟ್ ತಿಂಗಳಲ್ಲಷ್ಟೇ ಅಧಿಕಾರ ವಹಿಸಿಕೊಂಡಿರುವೆ. ದಾಖಲೆ ಪ್ರಕಾರ ಹೇಳುವುದಾರೆ ಕಳೆದ ಮೂರು ವರ್ಷಗಳಲ್ಲಿ ಒಂದೂ ಪ್ರವೇಶಾತಿ ನಡೆದಿಲ್ಲ. ಶೀಘ್ರವೇ ಸಮಿತಿಯೊಂದನ್ನು ರಚಿಸಿ ಸಂಜೆ ಕಾಲೇಜಿನ ಕುರಿತು ಜಾಗೃತಿ ಮೂಡಿಸಲಾಗುವುದು. ಈಗಾಗಲೇ ಈ ವರ್ಷದ ಪ್ರವೇಶಾತಿ ಅವಧಿ ಮುಗಿದಿದೆ. ಮುಂದಿನ ವರ್ಷದ ಪ್ರವೇಶಾತಿಗೆ ವ್ಯಾಪಕ ಪ್ರಚಾರ ನಡೆಸಲಾಗುವುದು' ಎನ್ನುತ್ತಾರೆ ಕಲಬುರಗಿ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಪ್ರಭಾರ ಪ್ರಾಚಾರ್ಯೆ ಸವಿತಾ ತಿವಾರಿ.

ಬಳ್ಳಾರಿಯಲ್ಲಿ ಪ್ರವೇಶಾತಿ ಕುಸಿತ:

ಕಾಲೇಜು ಶಿಕ್ಷಣ ಇಲಾಖೆಯ ಕಲಬುರಗಿ ಪ್ರಾದೇಶಿಕ ವಲಯ ವ್ಯಾಪ್ತಿಗೆ ಬರುವ ಬಳ್ಳಾರಿಯಲ್ಲಿ ಸಂಜೆ ಕಾಲೇಜಿಗೆ ಸ್ವಲ್ಪ ಸ್ಪಂದನೆ ಇದೆ. ಆದರೂ, ವರ್ಷದಿಂದ ವರ್ಷಕ್ಕೆ ಪ್ರವೇಶಾತಿ ಗಣನೀಯವಾಗಿ ಕುಸಿಯುತ್ತಲೇ ಇದೆ.

'2021-22ರಲ್ಲಿ ಬಿ.ಕಾಂ. ಹಾಗೂ ಬಿ.ಸಿ.ಎ. ಕೋರ್ಸ್‌ಗಳಿಗೆ ತಲಾ 15 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. 2022-23ರಲ್ಲಿ ಪದವಿ ಮೊದಲ ವರ್ಷಕ್ಕೆ ಬಿ.ಕಾಂಗೆ ಒಬ್ಬರೇ ಒಬ್ಬರೂ ಪ್ರವೇಶಾತಿ ಪಡೆಯಲಿಲ್ಲ. ಬಿಸಿಎಗೆ ಮೂರು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಪ್ರಸಕ್ತ 2023-24ನೇ ಸಾಲಿನಲ್ಲಿ ಎರಡೂ ಕೋರ್ಸ್‌ಗಳಿಗೆ ತಲಾ ಒಬ್ಬೊಬ್ಬರು ಪ್ರವೇಶ ಪಡೆದಿದ್ದಾರೆ. ಸಂಜೆ ಕಾಲೇಜಿನಲ್ಲಿ ಸದ್ಯ 22 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ' ಎಂದು ಬಳ್ಳಾರಿಯ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಮಂಜುನಾಥ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಲಿಕೆಗೆ ಸಹಕಾರ:

'ಸಂಜೆ ಕಾಲೇಜಿನ ಕೋರ್ಸ್ ನಡೆಸಲು ಕನಿಷ್ಠ 15 ವಿದ್ಯಾರ್ಥಿಗಳು ಅಗತ್ಯ. 2021-22ರಲ್ಲಿ ದಾಖಲಾದ ತಲಾ 15 ವಿದ್ಯಾರ್ಥಿಗಳಲ್ಲಿ ಎರಡನೇ ವರ್ಷಕ್ಕೆ ಬಡ್ತಿ ಪಡೆಯುವ ವೇಳೆಗೆ ಅದು ತಲಾ 11ಕ್ಕೆ ಕುಸಿಯಿತು.

ಇದರಿಂದ ಉಪನ್ಯಾಸಕ ಕಾರ್ಯಭಾರ ತೋರಿಸುವುದು ಸಾಧ್ಯವಾಗಲಿಲ್ಲ. ಬೋಧಕರೇ ಇಲ್ಲದಂತಾಯಿತು. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿ ಕಾಯಲು ಆಸಕ್ತ ವಿದ್ಯಾರ್ಥಿಗಳಿಗೆ ರೆಗ್ಯುಲರ್ ಕ್ಲಾಸ್‌ಗಳಿಗೆ ಹಾಜರಾಗಲು ಅವಕಾಶ ಮಾಡಿಕೊಟ್ಟಿದ್ದೇವೆ. ಕೆಲ ವಿದ್ಯಾರ್ಥಿಗಳು ಸ್ವಯಂ ಅಧ್ಯಯನದಲ್ಲಿ ತೊಡಗಿದ್ದಾರೆ' ಎಂದೂ ಮಂಜುನಾಥ ವಿವರಿಸಿದರು.

ಏನಿದು 'ಸಂಧ್ಯಾ ಶಕ್ತಿ' ಯೋಜನೆ?

2021-22ನೇ ಸಾಲಿನ ಬಜೆಟ್‌ನಲ್ಲಿ ಸಂಧ್ಯಾ ಶಕ್ತಿ ಯೋಜನೆಯಡಿ ರಾಜ್ಯದ 11 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳಿರುವ ಬಿ.ಕಾಂ ಹಾಗೂ ಬಿಸಿಎ ಕೋರ್ಸ್‌ಗಳುಳ್ಳ ಸಂಜೆ ಕಾಲೇಜು ತೆರೆಯುವುದಾಗಿ ರಾಜ್ಯ ಸರ್ಕಾರ ಘೋಷಿಸಿತ್ತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಆವರಣದಲ್ಲಿ ಸಂಜೆ ಕಾಲೇಜು ತೆರೆದು, ಈಗಿರುವ ಮೂಲಸೌಕರ್ಯವನ್ನು ಬಳಸಿಕೊಂಡೇ ಕಲಿಸುವಂತೆ ಸೂಚಿಸಿತ್ತು.

ಬಳಿಕ ಸಂಜೆ ಕಾಲೇಜಿಗೆ ಒಬ್ಬರು ಪ್ರಾಂಶುಪಾಲರು, ಏಳು ಬೋಧಕರು ಸೇರಿದಂತೆ ಒಟ್ಟು 13 ಸಿಬ್ಬಂದಿ ಬೇಕು ಎಂಬ ಬೇಡಿಕೆಗಳು ಕಾಲೇಜು ಶಿಕ್ಷಣ ಇಲಾಖೆಗಳಿಗೆ ಸಲ್ಲಿಕೆಯಾಗಿದ್ದವು.

ಬೇರೆ ಕಾಲೇಜಿಗೆ ಕೊಟ್ಟರೆ ಉತ್ತಮ...: 'ಕಲಬುರಗಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಗಾಗಲೇ 20ಕ್ಕೂ ಹೆಚ್ಚಿನ ಕೋರ್ಸ್‌ಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅದರೊಂದಿಗೆ ಸಂಜೆ ಕಾಲೇಜು ನಡೆಸುವುದು ಅವರಿಗೆ ಕಷ್ಟವಾಗಬಹುದು. ನಗರದಲ್ಲೇ ಇರುವ ಬೇರೆ ಕಾಲೇಜಿನಲ್ಲಿ ಸಂಜೆ ಕಾಲೇಜು ಆರಂಭಿಸಿದರೆ ವಿದ್ಯಾರ್ಥಿಗಳನ್ನು ಸೆಳೆಯಬಹುದು' ಎಂಬುದು ಶಿಕ್ಷಣ ಪ್ರೇಮಿಗಳ ಅಭಿಪ್ರಾಯ.

ನಮ್ಮಲ್ಲಿ ಕೊಠಡಿಗಳು ಸೇರಿ ಅಗತ್ಯ ಸೌಕರ್ಯಗಳಿವೆ. ವಿದ್ಯಾರ್ಥಿಗಳು ಬಂದರೆ ಸಂಜೆ ಕಾಲೇಜು ನಡೆಸುತ್ತೇವೆ

ಸವಿತಾ ತಿವಾರಿ,
ಪ್ರಭಾರ ಪ್ರಾಚಾರ್ಯೆ, ಸರ್ಕಾರಿ ಪದವಿ ಕಾಲೇಜು (ಸ್ವಾಯತ್ತ) ಕಲಬುರಗಿ

ಮಹದಾಯಿ 'ವನ್ಯಜೀವಿ' ತಕರಾರು ಇತ್ಯರ್ಥಕ್ಕೆ ಪ್ರಯತ್ನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಅನುಷ್ಠಾನಕ್ಕೆ ನಿರ್ಣಾಯಕ ಪ್ರಕ್ರಿಯೆಯಾಗಿರುವ ವನ್ಯಜೀವಿ ಅನುಮೋದನೆ ಪಡೆಯಲು ಕರ್ನಾಟಕ ಸರ್ಕಾರವು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಪ್ರಸ್ತಾವ ಸಲ್ಲಿಸಿದೆ. ಮಂಡಳಿಯ ಸ್ಥಾಯಿ ಸಮಿತಿಯ ಮುಂದಿನ ಸಭೆಯಲ್ಲಿ ಈ ಪ್ರಸ್ತಾವವು ಚರ್ಚೆಗೆ ಬರಲಿದೆ.

ಮಹದಾಯಿಯ ಭಾಗವಾದ ಕಳಸಾ ನಾಲಾ ತಿರುವು ಯೋಜನೆಯ ಅನುಷ್ಠಾನಕ್ಕೆ 26.92 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಬೇಕಿದೆ. ವನ್ಯಜೀವಿ ಧಾಮದಿಂದ ಈ ಯೋಜನೆಗೆ ನೀರು ಹರಿಸಲಾಗುತ್ತಿದೆ ಎಂದು ಗೋವಾ ಸರ್ಕಾರವು ತಗಾದೆ ಎತ್ತಿದೆ. ಮಹದಾಯಿ ವನ್ಯಜೀವಿ ಧಾಮವನ್ನು ಹುಲಿ ಕಾರಿಡಾರ್ ಎಂದು ಘೋಷಿಸುವಂತೆ ಮುಂಬೈ ಹೈಕೋರ್ಟ್ ಆದೇಶಿಸಿದೆ. ಹೀಗಾಗಿ, ಮಹದಾಯಿ ಯೋಜನೆಯ ಅನುಷ್ಠಾನಕ್ಕೆ ವನ್ಯಜೀವಿ ಅನುಮೋದನೆ ಪಡೆಯುವುದು ಅನಿವಾರ್ಯ. ಜತೆಗೆ, ಇದು ಸಂಕೀರ್ಣ ಪ್ರಕ್ರಿಯೆ ಎಂಬುದು ವನ್ಯಜೀವಿ ತಜ್ಞರ ಅಭಿಮತ.

ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು, ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿಯ ಈ ಯೋಜನೆಗೆ ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯು 2018ರ ಆಗಸ್ಟ್ 14ರಂದು 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿತ್ತು. ಈ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ 2022ರ ಡಿಸೆಂಬರ್ 29ರಂದು ಅನುಮೋದನೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.78 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್) ಒಪ್ಪಿಗೆ ನೀಡಲು ರಾಜ್ಯ ಸರ್ಕಾರ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಕಳಸಾ ನಾಲಾ ತಿರುವು ಯೋಜನೆಗೆ 26.92 ಹೆಕ್ಟೇರ್ ಮೀಸಲು ಅರಣ್ಯ ಬಳಕೆಗೆ ಸಚಿವಾಲಯದ ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು ಜನವರಿ 20ರಂದು ನಿರಾಕರಿಸಿತ್ತು. ಹುಲಿ ಕಾರಿಡಾರ್ ಹಾಗೂ ಪರಿಹಾರಾತ್ಮಕ ಹಸಿರು ಬೆಳೆಸುವ ಯೋಜನೆ ಕುರಿತು ವಿಸ್ತೃತ ಚರ್ಚೆ ನಡೆಯಬೇಕಿದೆ ಹಾಗೂ ಕರ್ನಾಟಕ ಸರ್ಕಾರ ಇನ್ನಷ್ಟು ವಿವರಣೆ ನೀಡಬೇಕು ಎಂದು ಸ್ಪಷ್ಟಪಡಿಸಿತ್ತು.

ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹೊಸದಾಗಿ ನೇಮಕವಾದ ಯೋಧರು ಗುರುವಾರ ಶ್ರೀನಗರ ಹೊರವಲಯದ ಹಮ್‌ಹಮಾದಲ್ಲಿ ನಡೆದ ನಿರ್ಗಮನ ಪಥ ಸಂಚಲನದಲ್ಲಿ ಭಾಗವಹಿಸಿದ್ದರು —ಎಎಫ್‌ಪಿ ಚಿತ್ರ

ಮಣಿಪುರ: ಅಂತರ್ಜಾಲ ಸೇವೆ ಭಾಗಶಃ ತೆರವು

ಇಂಫಾಲ: ಜನಾಂಗೀಯ ಹಿಂಸಾಚಾರದಿಂದ ನಲುಗುತ್ತಿರುವ ಮಣಿಪುರದ ನಾಲ್ಕು ಜಿಲ್ಲಾ ಕೇಂದ್ರಗಳಲ್ಲಿ ಅಂತರ್ಜಾಲ ಸೇವೆ ನಿಷೇಧವನ್ನು ಸರ್ಕಾರವು ತೆರವುಗೊಳಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪ್ರಯೋಗಾರ್ಥವಾಗಿ ನಾಗಾ ಬಹುಸಂಖ್ಯಾತ ಉಖ್ರುಲ್, ಸೇನಾಪತಿ, ಚಂಧೇಲ್ ಮತ್ತು ತಮೆಂಗ್ ಲೊಂಗ್ ಜಿಲ್ಲಾ ಕೇಂದ್ರಗಳಲ್ಲಿ ಇಂಟರ್‌ನೆಟ್ ನಿಷೇಧ ತೆರವುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಯೋಗಾರ್ಥವಾಗಿ ಮೊಬೈಲ್ ಟವರ್ ಕಾರ್ಯಗತಗೊಳಿಸುವಂತೆ ಮಣಿಪುರದ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಮೇಲ್‌ಶಾಂತಿ ಆಯ್ಕೆ ಪ್ರಶ್ನಿಸಿದ್ದ ಅರ್ಜಿ ವಜಾ

ಕೊಚ್ಚಿ (ಪಿಟಿಐ): ಶಬರಿಮಲೆಯ ಅಯ್ಯಪ್ಪ ದೇವಸ್ಥಾನದ ಮುಖ್ಯ ಅರ್ಚಕರ (ಮೇಲ್‌ಶಾಂತಿ) ಆಯ್ಕೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಅನಿಲ್ ಕೆ. ನರೇಂದ್ರನ್ ಮತ್ತು ಜಿ. ಗಿರೀಶ್ ಅವರಿದ್ದ ನ್ಯಾಯಪೀಠವು ಅರ್ಜಿದಾರರ ವಾದ ಹಾಗೂ ಆಯ್ಕೆ ಪ್ರಕ್ರಿಯೆಯನ್ನು ದಾಖಲಿಸಿರುವ ಸಿಸಿಟಿವಿ ದೃಶ್ಯಾವಳಿಯನ್ನು ಗಮನಿಸಿ ಅರ್ಜಿ ತಿರಸ್ಕರಿಸಿದೆ. 'ಆಯ್ಕೆ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸಲು ಕಾರಣಗಳು ಕಾಣುತ್ತಿಲ್ಲ' ಎಂದು ವಿಭಾಗೀಯ ಪೀಠ ಹೇಳಿದೆ.

2023-24ನೆಯ ಸಾಲಿಗೆ ಮಹೇಶ್ ಪಿ.ಎನ್. ಅವರನ್ನು ದೇವಸ್ಥಾನದ ಮೇಲ್‌ಶಾಂತಿ ಆಗಿ ಆಯ್ಕೆ ಮಾಡಿದ್ದನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು. ಅಯ್ಯಪ್ಪ ಸ್ವಾಮಿಯ ಭಕ್ತ ಎಂದು ಹೇಳಿಕೊಂಡಿರುವ ಮಧುಸೂದನನ್ ನಂಬೂದಿರಿ ಎನ್ನುವವರು ಈ ಅರ್ಜಿ ಸಲ್ಲಿಸಿದ್ದರು. ಆಯ್ಕೆ ಪ್ರಕ್ರಿಯೆಯನ್ನು ಹೊಸದಾಗಿ ನಡೆಸುವಂತೆ ಸೂಚಿಸಬೇಕು ಎಂದು ಕೂಡ ಅವರು ಕೋರಿದ್ದರು.

ಮಹೇಶ್ ಅವರ ಹೆಸರು ಇದ್ದ ಚೀಟಿಯನ್ನು ಮಡಚಿದ ಶಬರಿಮಲೆಯ ವಿಶೇಷ ಆಯುಕ್ತರು, ಅದನ್ನು ಒಂದು ಬೆಳ್ಳಿ ಪಾತ್ರೆಗೆ ಹಾಕುವ ಮೊದಲು ತಮ್ಮ ಎರಡೂ ಹಸ್ತ ಬಳಸಿ ಸುತ್ತಿಲ್ಲ ಎಂದು ಅರ್ಜಿದಾರರು ದೂರಿದ್ದರು.

ಪಾತ್ರೆಯನ್ನು ಕುಲುಕುವ ಸಂದರ್ಭದಲ್ಲಿ, ಸರಿಯಾಗಿ ಸುತ್ತಿಲ್ಲದ ಚೀಟಿಗಳು ಮೇಲಕ್ಕೆ ಬರುತ್ತವೆ. ಇದರಿಂದಾಗಿ ಚೀಟಿ ಎತ್ತುವ ಮಗು ಸುರುಳಿ ಸುತ್ತಿಲ್ಲದ ಚೀಟಿಯನ್ನೇ ಮೊದಲು ಎತ್ತುವ ಸಂದರ್ಭ ಸೃಷ್ಟಿಯಾಗುತ್ತದೆ ಎಂದು ಅವರು ವಾದಿಸಿದ್ದರು. ಇದರಿಂದಾಗಿ ಮಹೇಶ್ ಅವರು ಮೇಲ್‌ಶಾಂತಿ ಆಗಿ ಆಯ್ಕೆಯಾಗಿದ್ದಾರೆ ಎಂದು ಹೇಳಿದ್ದರು.

ಶಬರಿಮಲೆಯ ವಿಶೇಷ ಆಯುಕ್ತರ ಪರವಾಗಿ ಹಾಜರಿದ್ದ ಅಮಿಕಸ್ ಕ್ಯೂರಿ ಅವರು, ಬೆಳ್ಳಿ ಪಾತ್ರೆಗಳನ್ನು ದೇವಸ್ಥಾನದ ಗರ್ಭಗುಡಿಯಲ್ಲಿ ತಂತ್ರಿಗಳು ಸರಿಯಾಗಿ ಕುಲುಕಿದ್ದಾರೆ ಎಂದು ವಿವರಿಸಿದರು. ಪಂದಲ ರಾಜಕುಟುಂಬದವರು ನಿಯೋಜಿಸಿದ್ದ ಪುಟ್ಟ ಮಗುವೊಂದು ಚೀಟಿಯನ್ನು ಎತ್ತುವ ಕೆಲಸ ಮಾಡಿದೆ ಎಂಬ ಮಾಹಿತಿ ನೀಡಿದರು.

'ದೃಶ್ಯಾವಳಿಯಲ್ಲಿ ಇರುವ ಪ್ರಕಾರ, ಪಾತ್ರೆಗಳನ್ನು ಗರ್ಭಗುಡಿಯಲ್ಲಿ ಸರಿಯಾಗಿ ಕುಲುಕಿರುವ ಕಾರಣ ಅರ್ಜಿಯಲ್ಲಿನ ಆರೋಪಗಳಿಗೆ ಯಾವುದೇ ಆಧಾರ ಇಲ್ಲ' ಎಂದು ಅಮಿಕಸ್ ಕ್ಯೂರಿ ಹೇಳಿದ್ದರು.

ಲಂಡನ್‌ನ ಡೌನಿಂಗ್ ಸ್ಟ್ರೀಟ್‌ನಲ್ಲಿ ದೀಪಾವಳಿ ನಿಮಿತ್ತ ನಡೆದ ಕಾರ್ಯಕ್ರಮದಲ್ಲಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಪತ್ನಿ ಅಕ್ಷತಾ ಮೂರ್ತಿ ಜೊತೆಗೂಡಿ ಭಾಗಿಯಾಗಿದ್ದರು –ಪಿಟಿಐ ಚಿತ್ರ

ಬ್ರಿಟನ್: ದೀಪಾವಳಿ ಸಂಭ್ರಮ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿಯ ಅಧಿಕೃತ ನಿವಾಸ ಮತ್ತು ಕಚೇರಿ 10 ಡೌನಿಂಗ್ ಸ್ಟ್ರೀಟ್‌ನಲ್ಲಿ ಪ್ರಧಾನಿ ರಿಷಿ ಸುನಕ್ ಮತ್ತು ಪತ್ನಿ ಅಕ್ಷತಾ ಮೂರ್ತಿ ದೀಪ ಬೆಳಗುವ ಮೂಲಕ ದೀಪಾವಳಿ ಆಚರಿಸಿದ್ದಾರೆ.

ಈ ವಿಶೇಷ ಕಾರ್ಯಕ್ರಮದಲ್ಲಿ ಭಾರತೀಯ ಸಮುದಾಯದವರು, ಸಂಸದರು, ಉದ್ಯಮಿಗಳು ಹಾಗೂ ಬಾಲಿವುಡ್ ತಾರೆಯರು ಇದ್ದರು.

ಬ್ರಿಟನ್‌ನ ಮೊದಲ ಭಾರತೀಯ ಪರಂಪರೆಯ ಪ್ರಧಾನ ಮಂತ್ರಿಯಾಗಿ ಸುನಕ್ ಅಧಿಕಾರ ವಹಿಸಿಕೊಂಡು ವರ್ಷ ಕಳೆದಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನಿ ನಿವಾಸವನ್ನು ಮಾರಿಗೋಲ್ಡ್ ಮತ್ತು ಮೇಣದಬತ್ತಿ ಪರಿಕಲ್ಪನೆಯಲ್ಲಿ ಅಲಂಕರಿಸಲಾಗಿತ್ತು.

'ನಮಗೆ ಮತ್ತು ನಮ್ಮ ಕುಟುಂಬಗಳಿಗೆ ದೀಪಾವಳಿಯು ವಿಶೇಷ ಸಮಯವಾಗಿದೆ. ಕಳೆದ ವರ್ಷ ಇದೇ ವೇಳೆಗೆ ಬ್ರಿಟನ್ ಪ್ರಧಾನಿಯಾದ ಅದ್ಭುತ ನೆನಪುಗಳನ್ನು ತರುತ್ತಿದೆ'ಎಂದು ಸುನಕ್ ಹೇಳಿದ್ದಾರೆ.

'ನಾನು ಪ್ರಧಾನಿಯಾಗಿ ವರ್ಷ ಕಳೆದಿದೆ. ಅದು ಕಠಿಣ ಪರಿಶ್ರಮದ ವರ್ಷವಾಗಿತ್ತು. ಕೆಲವು ನೈಜ ಪ್ರಗತಿ ಆಗಿದೆ. ಆ ನೆನಪು ನನ್ನ ಜೀವನದುದ್ದಕ್ಕೂ ನನ್ನೊಂದಿಗೆ ಉಳಿಯುತ್ತದೆ' ಎಂದು ಹೇಳಿದ್ದಾರೆ.

ತಮಿಳುನಾಡಿನಲ್ಲಿ ವ್ಯಾಪಕ ಮಳೆ: ಹಲವು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ

ಚೆನ್ನೈ: ಈಶಾನ್ಯ ಮಾರುತಗಳು ಬಿರುಸುಗೊಂಡಿದ್ದು, ತಮಿಳುನಾಡಿನ ರಾಜ್ಯದಾದ್ಯಂತ ವ್ಯಾಪಕ ಮಳೆಯಾಗುತ್ತಿದೆ. ಅದರಲ್ಲೂ ದಕ್ಷಿಣದ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ.

ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಮಧುರೈ, ಥೇಣಿ, ದಿಂಡಿಗಲ್, ತಿರುನಲ್ವೇಲಿ, ತೆಂಕಶಿ, ತಿರುಪ್ಪೂರ್ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲದೆ ನೀಲಗಿರಿ ಜಿಲ್ಲೆಯ ನಾಲ್ಕು ತಾಲೂಕುಗಳು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಗುರುವಾರ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು.

ಇಲ್ಲಿನ ಪ್ರಾದೇಶಿಕ ಹವಾಮಾನ ಕೇಂದ್ರವು (ಆರ್‌ಎಂಸಿ), ರಾಜ್ಯದಾದ್ಯಂತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದೆ.

ನವೆಂಬರ್ 8ರಂದು ಸಂಜೆ 5.30ಕ್ಕೆ ಪೂರ್ವ ಮಧ್ಯ ಅರೇಬಿಯನ್ ಸಮುದ್ರದ ಮೇಲೆ ಕಡಿಮೆ ಒತ್ತಡದ ಪ್ರದೇಶವು ರೂಪುಗೊಂಡಿದೆ. ಈ ಮಾರುತಗಳು ಪಶ್ಚಿಮಕ್ಕೆ ಚಲಿಸುವ ಸಾಧ್ಯತೆಯಿದೆ ಎಂದು ಅದು ಹೇಳಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.

-ಮಹಾತ್ಮ ಗಾಂಧಿ

ದೆಹಲಿಯ ಮಲಿನಗೊಂಡ ಗಾಳಿ ನಿಯಂತ್ರಣಕ್ಕೆ ಸಮಗ್ರ ಸೂತ್ರ ಬೇಕು

ಪ್ರತಿವರ್ಷ ಈ ಸಂದರ್ಭದಲ್ಲಿ ದೆಹಲಿಯ ಜನ ವಿಷಕಾರಿ ಗಾಳಿಯನ್ನು ಉಸಿರಾಡುತ್ತಾರೆ. ದೆಹಲಿಯಲ್ಲಿ ವಾಯುಮಾಲಿನ್ಯವು ಅಪಾಯಕಾರಿ ಮಟ್ಟವನ್ನು ತಲುಪುತ್ತದೆ. ಜನರ ದೈನಂದಿನ ಜೀವನಕ್ಕೆ ಕೂಡ ತೊಂದರೆ ಉಂಟಾಗುತ್ತದೆ. ದೆಹಲಿಯಲ್ಲಿ ಶಾಲೆಗಳನ್ನು ಮುಚ್ಚಲಾಗಿದೆ. ಅಲ್ಲಿ ಸಮ-ಬೆಸ ನೋಂದಣಿ ಸಂಖ್ಯೆಯ ವಾಹನಗಳಿಗೆ ದಿನ ಬಿಟ್ಟು ದಿನ ಮಾತ್ರ ರಸ್ತೆಗಿಳಿಯಲು ಅವಕಾಶ ಕಲ್ಪಿಸುವ ಮೂಲಕ ವಾಹನಗಳ ಸಂಚಾರದ ಮೇಲೆ ನಿಯಂತ್ರಣ ಹೇರಲು ಪ್ರಯತ್ನಗಳು ನಡೆದಿವೆ. ದೆಹಲಿಯ ವಾಯುಮಾಲಿನ್ಯಕ್ಕೆ ವಾಹನಗಳು ಉಗುಳುವ ಹೊಗೆಯ ಕೊಡುಗೆಯ ಪ್ರಮಾಣವು ಶೇಕಡ 30ರಷ್ಟು ಇದೆ. ವಾಯುಮಾಲಿನ್ಯವನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳು ಯಾವುವು ಎಂಬುದನ್ನು ಪ್ರಮಾಣಪತ್ರದ ಮೂಲಕ ತಿಳಿಸುವಂತೆ ದೆಹಲಿ ಸರ್ಕಾರ ಹಾಗೂ ನೆರೆಯ ಕೆಲವು ರಾಜ್ಯಗಳ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ದೆಹಲಿಯಲ್ಲಿನ ಪರಿಸ್ಥಿತಿಯು ಜನರ ಆರೋಗ್ಯದ ಕೊಲೆ ಎಂದು ಕೋರ್ಟ್ ವ್ಯಾಖ್ಯಾನಿಸಿದೆ. ನೆರೆಯ ಪಂಜಾಬ್ ಹಾಗೂ ಹರಿಯಾಣದ ರೈತರು ಮುಂಗಾರಿನ ಭತ್ತದ ಕೊಯ್ಲು ಮುಗಿಸಿದ ತಕ್ಷಣ ಹಿಂಗಾರಿಗೆ ಗೋಧಿಯ ಬಿತ್ತನೆಗಾಗಿ ಭತ್ತದ ಕೂಳೆಗಳಿಗೆ ಬೆಂಕಿ ಕೊಡುತ್ತಾರೆ. ಇದು, ದೆಹಲಿಯ ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣ. ಕೂಳೆ ಸುಡುವ ಪರಿಪಾಟವು ಕಡಿಮೆ ಆಗಿದೆ ಎಂದು ಹೇಳಲಾಗುತ್ತಿದೆ.

ಆದರೆ ಗಾಳಿಯ ಗುಣಮಟ್ಟವು ತೀರಾ ಕೆಟ್ಟು ಹೋಗಿರುವಾಗ, ಜನರು ಮಾಲಿನ್ಯದ ಪರಿಣಾಮವನ್ನು ಎದುರಿಸುತ್ತಿರುವಾಗ, 'ಕಡಿಮೆ ಆಗಿದೆ' ಎಂಬ ಮಾತು ಸಮಾಧಾನ ತರುವುದಿಲ್ಲ. ಸಮಸ್ಯೆಯ ಬಗ್ಗೆ ಜನರಿಗೆ ಹಾಗೂ ಸರ್ಕಾರಕ್ಕೆ ಇಷ್ಟು ವರ್ಷಗಳಿಂದ ಅರಿವಿದ್ದರೂ, ಅದನ್ನು ಪರಿಹರಿಸಲು ಯಾವುದೇ ಪರಿಣಾಮಕಾರಿ ಕಾರ್ಯತಂತ್ರವನ್ನು ರೂಪಿಸಿಲ್ಲ ಎಂಬುದು ವಾಸ್ತವ. ಈ ವಿಚಾರದ ಬಗ್ಗೆ ತಕ್ಷಣ ಗಮನ ಹರಿಸಬೇಕಾಗಿದೆ, ಇದರ ಬಗ್ಗೆ ಮೇಲ್ವಿಚಾರಣೆ ನಡೆಸಬೇಕಾಗಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ವಾಯು ಗುಣಮಟ್ಟ ಉತ್ತಮವಾಗಬೇಕು ಎಂದಾದರೆ ಮಾಲಿನ್ಯಕ್ಕೆ ಕಾರಣವಾಗುವ ಎಲ್ಲ ಚಟುವಟಿಕೆಗಳನ್ನು ವರ್ಷದುದ್ದಕ್ಕೂ ನಿಯಂತ್ರಿಸಲು ಸಮಗ್ರ ಕ್ರಿಯಾಯೋಜನೆ ರೂಪಿಸಿ, ಜಾರಿಗೆ ತರಬೇಕು

ರಾಷ್ಟ್ರ ರಾಜಧಾನಿಯು ಎದುರಿಸುತ್ತಿರುವ ಪರಿಸ್ಥಿತಿಯ ಗಾಂಭೀರ್ಯ ಅರ್ಥ ಮಾಡಿಕೊಳ್ಳಲು ಗಾಳಿಯ ಗುಣಮಟ್ಟಕ್ಕೆ ಸಂಬಂಧಿಸಿದ ಕೆಲವು ಮಾಹಿತಿಯನ್ನು ಉಲ್ಲೇಖಿಸಬೇಕು. ಅಲ್ಲಿ ಗಾಳಿಯ ಗುಣಮಟ್ಟದ ಸೂಚ್ಯಂಕವು (ಎಕ್ಯೂಐ) 470ಕ್ಕೆ ತಲುಪಿದೆ. ಆರೋಗ್ಯವಂತ ಮನುಷ್ಯನ ಪಾಲಿಗೆ ಈ ಸೂಚ್ಯಂಕವು 50 ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಒಳ್ಳೆಯದು. ಪಿಎಂ 2.5 (ಗಾಳಿಯಲ್ಲಿ ತೇಲುವ, 2.5 ಮೈಕ್ರಾನ್ ಗಾತ್ರದ ಕಣಗಳು) ಪ್ರಮಾಣ 360ಕ್ಕಿಂತ ಹೆಚ್ಚಾಗಿದೆ. ಇದು ವಿಶ್ವ ಆರೋಗ್ಯ ಸಂಸ್ಥೆ ನಿಗದಿ ಮಾಡಿರುವುದಕ್ಕಿಂತ ಹಲವು ಪಟ್ಟು ಹೆಚ್ಚು. ಈ ಅಂಕಿ-ಸಂಖ್ಯೆಗಳನ್ನು ಹಲವು ವರ್ಷಗಳಿಂದ ಹೇಳುತ್ತ ಬರಲಾಗಿದೆ. ದೆಹಲಿಯು ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ನಗರ ಎಂಬ ವಾಸ್ತವವನ್ನು ಇವು ಹೇಳುತ್ತವೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮಲಿನಗೊಂಡಿರುವ ನಗರಗಳಲ್ಲಿ ಇದೂ ಒಂದು. ಮಾಲಿನ್ಯದ ಕಾರಣದಿಂದಾಗಿ ಸೃಷ್ಟಿಯಾಗುವ ಆರೋಗ್ಯ ಸಮಸ್ಯೆಗಳು ಇಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿವೆ. ಇಲ್ಲಿ ಪ್ರತಿ ಮೂವರು ಮಕ್ಕಳಲ್ಲಿ ಒಂದು ಮಗು ಆಸ್ತಮಾ ಅಥವಾ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಎದುರಿಸುತ್ತಿದೆ. ಈ ಸಮಸ್ಯೆಗಳು ಮಕ್ಕಳ ಸಾವಿಗೆ ಕಾರಣವಾಗುತ್ತಿರುವುದೂ ಇದೆ. ಕೆಟ್ಟ ಗಾಳಿಯು ಕ್ಯಾನ್ಸರ್‌ಕಾರಕವೂ ಹೌದು. ವಾಯುಮಾಲಿನ್ಯವು ಉತ್ಪಾದಕತೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆ. ಆ ಮೂಲಕ ದೇಶದ ಜಿಡಿಪಿ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಸಾರ್ವಜನಿಕ ಆರೋಗ್ಯ ಸೇವೆಗಳ ವ್ಯವಸ್ಥೆಯು ಹೇಳಿಕೊಳ್ಳುವಷ್ಟು ಉತ್ತಮವಾಗಿ ಇಲ್ಲದಿದ್ದಾಗ, ಮಾಲಿನ್ಯವು ಜನರ ಮೇಲೆ ಹಾಗೂ ಸರ್ಕಾರಗಳ ಮೇಲೆ ಬಹಳ ದೊಡ್ಡ ಹೊರೆಯನ್ನು ಹೊರಿಸುತ್ತದೆ.

ದೆಹಲಿಯಲ್ಲಿ ವಾಯುಮಾಲಿನ್ಯಕ್ಕೆ ಕಾರಣವಾಗುತ್ತಿರುವ ಅಂಶಗಳು ಹಲವು ಇವೆ. ಕೂಳೆ ಸುಡುವುದು, ವಾಹನಗಳ ಸಂಚಾರ ಭಾರಿ ಪ್ರಮಾಣದಲ್ಲಿ ಇರುವುದು, ಅನಿಯಂತ್ರಿತ ಕಟ್ಟಡ ನಿರ್ಮಾಣ ಕಾಮಗಾರಿ ಸೇರಿದಂತೆ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸಬೇಕಾಗಿದೆ. ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯು ಅಸಮರ್ಪಕವಾಗಿದೆ. ಇದರಿಂದಾಗಿ ಸಮಸ್ಯೆ ಬಿಗಡಾಯಿಸುತ್ತಿದೆ. ರಾಜಕೀಯ ಪಕ್ಷಗಳ ನಡುವಿನ ಆರೋಪ-ಪ್ರತ್ಯಾರೋಪಗಳು ಜನರಿಗೆ ಯಾವುದೇ ಪ್ರಯೋಜನ ತಂದುಕೊಡುವುದಿಲ್ಲ. ವಾಯುಮಾಲಿನ್ಯ ನಿಯಂತ್ರಿಸುವ ವಿಚಾರದಲ್ಲಿ ವಿವಿಧ ಸಂಸ್ಥೆಗಳ ನಡುವೆ ಸಮನ್ವಯದ ಕೊರತೆ ಕಾಣುತ್ತಿದೆ. ಸಮ-ಬೆಸ ನೋಂದಣಿ ಸಂಖ್ಯೆಯ ವಾಹನಗಳು ದಿನ ಬಿಟ್ಟು ದಿನ ರಸ್ತೆಗೆ ಇಳಿಯಬೇಕು ಎಂಬ ನಿಯಮವನ್ನು 2017ರಲ್ಲಿ ಅಲ್ಪ ಅವಧಿಗೆ ಜಾರಿಗೆ ತರಲಾಗಿತ್ತು. ಆದರೆ ಅದರ ಅನುಷ್ಠಾನ ಹಾಗೂ ಪರಿಣಾಮದ ವಿಚಾರವಾಗಿ ದೆಹಲಿ ಸರ್ಕಾರ ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನಡುವೆ ಒಮ್ಮತ ಇರಲಿಲ್ಲ. ವಾಯು ಗುಣಮಟ್ಟ ಉತ್ತಮವಾಗಬೇಕು ಎಂದಾದರೆ, ಮಾಲಿನ್ಯಕ್ಕೆ ಕಾರಣವಾಗುವ ಎಲ್ಲ ಚಟುವಟಿಕೆಗಳನ್ನು ವರ್ಷದುದ್ದಕ್ಕೂ ನಿಯಂತ್ರಿಸಲು ಸಮಗ್ರ ಕ್ರಿಯಾಯೋಜನೆ ರೂಪಿಸಿ, ಜಾರಿಗೆ ತರಬೇಕು. ಇಂತಹ ಕೆಲಸ ಆಗುತ್ತಿರುವಂತೆ ಕಾಣುತ್ತಿಲ್ಲ.

ದಿನದ ಟ್ವೀಟ್

ಸಮಸ್ಯೆ ಏನು?

ಯೋಜನಾ ಆಯೋಗವನ್ನು ಇಲ್ಲವಾಗಿಸಿ, ನೀತಿ ಆಯೋಗವನ್ನು ರಚಿಸಲಾಯಿತು. ಯೋಜನೆ ರೂಪಿಸುವ ಪ್ರಕ್ರಿಯೆಯನ್ನು ಹೊರಗುತ್ತಿಗೆಗೆ ನೀಡಬಹುದು ಎಂದು ನೀತಿ ಆಯೋಗ ನಿರ್ಧರಿಸಿತು. ಹಾಗಾಗಿ, ನೀತಿ (ಮತ್ತು ಇತರ ಸಚಿವಾಲಯಗಳು) ₹ 500 ಕೋಟಿ ಮೌಲ್ಯದ ಕನ್ಸಲ್ಟಿಂಗ್ ಗುತ್ತಿಗೆಗಳನ್ನು ನೀಡಿದವು! ಕಡಿಮೆ ಖರ್ಚಿನಲ್ಲಿ ನೀತಿ ಆಯೋಗವೇ ಈ ಕೆಲಸವನ್ನು ಮಾಡದಿರುವುದೇಕೆ? ಪ್ರತಿಭೆಯ ಕೊರತೆಯೇ? ದೂರದೃಷ್ಟಿಯ ಕೊರತೆಯೇ? ಮಾನವಸಂಪನ್ಮೂಲದ ಕೊರತೆಯೇ? ಅಥವಾ ವಿದೇಶಿ ಸಲಹಾ ಸಂಸ್ಥೆಗಳ ಮೇಲೆ ಪ್ರೀತಿಯೇ? ನಿಜಕ್ಕೂ ನನಗೆ ತಿಳಿಯದಾಗಿದೆ.

ಸಂದೀಪ್ ಮನುಧಾನೆ, ಉದ್ಯಮಿ

ಕಿಡಿನುಡಿ

ಬೆಂಗಳೂರಿನ ಕೆಲವು ರಸ್ತೆಗಳನ್ನು ನೋಡಿದರೆ ನಾವು ಹಳ್ಳಿಯಲ್ಲಿ ಇದ್ದೇವೋ ನಗರದಲ್ಲಿ ಇದ್ದೇವೋ ಎಂಬುದೇ ಗೊತ್ತಾಗದಂತಾಗಿದೆ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಡೆದ ಕಾಮಗಾರಿಗಳಿಗೆ ಸೇಡಿನ ರಾಜಕಾರಣದಿಂದಾಗಿ ಹಣ ಬಿಡುಗಡೆ ಮಾಡುತ್ತಿಲ್ಲ. ಈ ರೀತಿಯ ಸೇಡಿನ ರಾಜಕಾರಣವನ್ನು ನಿರೀಕ್ಷೆ ಮಾಡಿರಲಿಲ್ಲ.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

25 ವರ್ಷಗಳ ಹಿಂದೆ

ಮಂಗಳವಾರ, 10-11-1998

- **ನ್ಯಾ. ಸಲ್ಡಾನ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾಪ**

ಬೆಂಗಳೂರು, ನ. 9– 'ಹೈಕೋರ್ಟಿನ ನ್ಯಾಯಮೂರ್ತಿ ಎಂ.ಎಫ್.ಸಲ್ಡಾನ ಅವರು ಶಾಸನಸಭೆ ಹಾಗೂ ಶಾಸಕರ ಬಗ್ಗೆ ಸಾರ್ವಜನಿಕವಾಗಿ ಅವಹೇಳನಕಾರಿಯಾಗಿ ಮಾತನಾಡಿರುವುದಕ್ಕೆ ಅವರ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ಅನುಮತಿ ಕೋರಿ, ಅವರನ್ನು ವಿಚಾರಣೆಗೆ ಗುರಿಪಡಿಸಬೇಕು' ಎಂದು ಒತ್ತಾಯಿಸಿದ ಅಪರೂಪದ ಪ್ರಸಂಗ ವಿಧಾನಸಭೆಯಲ್ಲಿ ಇಂದು ನಡೆಯಿತು.

'ಸಲ್ಡಾನ ಅವರನ್ನು ಆ ಸ್ಥಾನದಿಂದ ತೆಗೆದುಹಾಕುವಂತೆ ಸದನವು ನಿರ್ಣಯ ತೆಗೆದುಕೊಂಡು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಬೇಕು' ಎಂದು ಬಿಜೆಪಿಯ ಹಿರಿಯ ಸದಸ್ಯ ಎಚ್.ಎನ್.ನಂಜೇಗೌಡ ಅವರು ಒತ್ತಾಯಿಸಿದರು.

- **ದಿಗ್ಬಂಧನ ತೆರವು: ಕ್ಲಿಂಟನ್ ಆದೇಶ**

ವಾಷಿಂಗ್ಟನ್, ನ. 9 (ಯುಎನ್‌ಐ)– ಭಾರತ ಮತ್ತು ಪಾಕಿಸ್ತಾನದ ಮೇಲೆ ಹೇರಲಾಗಿರುವ ದಿಗ್ಬಂಧನಗಳಲ್ಲಿ ಕೆಲವನ್ನು ಹಿಂತೆಗೆದುಕೊಳ್ಳುವ ಅಧಿಕೃತ ಆದೇಶವನ್ನು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಇಂದು ಹೊರಡಿಸಿದರು.

50 ವರ್ಷಗಳ ಹಿಂದೆ

ಶನಿವಾರ, 10-11-1973

- **ಆರು ಅಂಶಗಳ ಕದನವಿರಾಮ ಒಪ್ಪಂದ: ಈಜಿಪ್ಟ್-ಇಸ್ರೇಲ್ ಸಮ್ಮತಿ**

ವಾಷಿಂಗ್ಟನ್, ನ. 9– ಆರು ಅಂಶಗಳ ಕದನವಿರಾಮ ಒಪ್ಪಂದವನ್ನು ಇಸ್ರೇಲ್ ಮತ್ತು ಈಜಿಪ್ಟ್ ಎರಡೂ ಒಪ್ಪಿವೆ ಎಂದು ಅಮೆರಿಕ ಸರ್ಕಾರ ಇಂದು ಪ್ರಕಟಿಸಿತು.

ಪಶ್ಚಿಮ ಏಷ್ಯಾ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯುವ ಮಾತುಕತೆಗೆ ಹಾದಿ ಸುಗಮಗೊಳಿಸಲು ಉದ್ದೇಶಿಸಲಾಗಿದೆ. ಈ ವರ್ಷದ ಅಂತ್ಯದ ಹೊತ್ತಿಗೆ ಪಶ್ಚಿಮ ಏಷ್ಯಾ ಸಮಸ್ಯೆ ಇತ್ಯರ್ಥದ ಬಗ್ಗೆ ಶಾಂತಿ ಮಾತುಕತೆಗೆ ಇದು ನೆರವಾಗಲಿದೆ.

ಈ ಒಪ್ಪಂದವು ಬಿಕ್ಕಟ್ಟನ್ನು ಸಡಿಲಗೊಳಿಸುತ್ತದೆ. ಯುದ್ಧ ಬಂದಿಗಳ ವಿನಿಮಯಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಅಮೆರಿಕದ ಅಧಿಕಾರಿಗಳು ಇಂದು ತಿಳಿಸಿದರು.

- **ಮಿತ್ರ ರಾಷ್ಟ್ರ ಭಾರತಕ್ಕೆ ತೈಲ ಸರಬರಾಜು ಕಡಿತ ಆಗದು: ಸೌದಿ ಭರವಸೆ**

ನವದೆಹಲಿ, ನ. 9– ಭಾರತಕ್ಕೆ ಪೆಟ್ರೋಲಿಯಂ ಸರಬರಾಜನ್ನು ಕಡಿಮೆ ಮಾಡುವುದಿಲ್ಲ; ಅದು ಹಿಂದಿನಂತೆಯೇ ಮುಂದುವರಿಯುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ಸೌದಿ ಅರೇಬಿಯಾ ತಿಳಿಸಿದೆ.

ಬೆಳಕಿನ ಹಬ್ಬದಲ್ಲಿ ಬೆಳಕನ್ನು ಮೀರಿ ಸದ್ದು ಮಾಡುವ ಹುಮ್ಮಸ್ಸೇ ಹೆಚ್ಚು ಕಾಣುತ್ತದೆ

ಹಸಿರು ಪಟಾಕಿ: ಬಣ್ಣ ಮಾತ್ರ ಬೇರೆ!

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ನೀವು ಕೊಳ್ಳುವ ಪಟಾಕಿ ಹಸಿರು ಪಟಾಕಿ ಹೌದೇ ಅಲ್ಲವೇ ಎಂಬುದನ್ನು ಹೇಗೆ ಪತ್ತೆ ಹಚ್ಚುತ್ತೀರಿ? ಸುಲಭವಾಗಿ ಗುರುತಿಸಲು ಹೀಗೆ ಮಾಡಿ. ಸಿಡಿಯುವ ಪಟಾಕಿ ಹಸಿರು ಬಣ್ಣ ಹೊಮ್ಮಿಸದಿದ್ದರೆ ಅದು ಹಸಿರು ಪಟಾಕಿ! ಹಸಿರು ಬಣ್ಣ ಹೊಮ್ಮಿಸಿದರೆ ಅದು ಹಸಿರು ಪಟಾಕಿಯಲ್ಲ!

ವಿಚಿತ್ರವೆನ್ನಿಸುತ್ತಿದ್ದರೆ ಅದು ಏಕೆ, ಹೇಗೆ ಎಂದು ತಿಳಿಯಲು ಮುಂದೆ ಓದಿರಿ. ಹಸಿರು ಪಟಾಕಿ ಎಂದರೆ, ಅದರ ಹೊರಭಾಗಕ್ಕೆ ಸುತ್ತಿದ ಹಾಳೆ ಹಸಿರಾಗಿರುತ್ತದೆ ಎಂದಲ್ಲ. ಸಿಡಿದಾಗ ಅತಿಯಾದ ಹೊಗೆ, ಶಬ್ದ ಎಬ್ಬಿಸದ, ವಾತಾವರಣದ ಮಾಲಿನ್ಯ ತಡೆಯುವ ಪರಿಸರಸ್ನೇಹಿ ಪಟಾಕಿಯನ್ನು ಹಸಿರು ಪಟಾಕಿ ಎನ್ನುತ್ತೇವೆ. ಇವು ಸಿಡಿದಾಗ ಹೊಗೆಯ ಬದಲಿಗೆ ನೀರಿನ ಆವಿ ಚಿಮ್ಮಿಸುತ್ತವೆ. ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಪ್ರಖರ ಬೆಳಕು ಸೂಸುವ, ಕಡಿಮೆ ಗಂಧಕವುಳ್ಳ ಇವು ದೂಳನ್ನು ಸಂಪೂರ್ಣ ನಿಯಂತ್ರಿಸಿ ಶೇಕಡ 40ರಷ್ಟು ಮಾಲಿನ್ಯವನ್ನು ಕಡಿಮೆ ಮಾಡುತ್ತವೆ.

ಹಸಿರು ಪಟಾಕಿಗಳಲ್ಲಿ ನೀರಿನಲ್ಲಿ ಕರಗಬಲ್ಲ ಥರ್ಮೈಟ್ ಮತ್ತು ಅಲ್ಯೂಮಿನಿಯಂ ಹುಡಿಗಳಿರುತ್ತವೆ. ಮಾಮೂಲಿ ಪಟಾಕಿಗಳಲ್ಲಿರುವ ಬೇರಿಯಂ ನೈಟ್ರೇಟ್, ಚಾರ್ಕೋಲ್, ಲೀಥಿಯಂ, ಆರ್ಸೆನಿಕ್ ಮತ್ತು ಸತುವಿನಂಥ ಭಾರದ, ವಿಷಕಾರಿ ಲೋಹಗಳ ಬಳಕೆ ಇರುವುದಿಲ್ಲ. ಜಿಯೋಲೈಟ್ ಸಂಯುಕ್ತ ಬಳಸುವುದರಿಂದ ಏಳುವ ಅಲ್ಪಸ್ವಲ್ಪ ಹೊಗೆಯೂ ನಿಯಂತ್ರಣದಲ್ಲಿ ಇರುತ್ತದೆ.

ಪ್ರತಿವರ್ಷ ದೀಪಾವಳಿ ಬಂದಾಗ ಹಸಿರು ಪಟಾಕಿಯ ಮಾತು ಬರುತ್ತದೆ. ಸಿಡಿಸುವುದಿದ್ದರೆ ಹಸಿರು ಪಟಾಕಿಗಳನ್ನು ಮಾತ್ರ ಎಂದು ಸರ್ಕಾರ ಹೇಳುತ್ತದೆ. ಬೇರಿಯಂ ಸಂಯುಕ್ತವಿರುವ ಪಟಾಕಿಯನ್ನು ದೇಶದಾದ್ಯಂತ ನಿಷೇಧಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮಾಮೂಲಿ ಪಟಾಕಿಗೂ ಹಸಿರು ಪಟಾಕಿಗೂ ಏನು ವ್ಯತ್ಯಾಸ ಎಂದು ಗೊತ್ತಿರದ ಅನೇಕರು, ಅಂಗಡಿಯವನು ಹೇಳುವುದನ್ನು ನಂಬಿ ಖರೀದಿಸುತ್ತಾರೆ ಮತ್ತು ಸಿಡಿಸಿ ಆನಂದಿಸುತ್ತಾರೆ. ಉನ್ನತ ವಿದ್ಯಾಭ್ಯಾಸ ಮಾಡಿರುವವರಿಗೂ ಹಸಿರು ಪಟಾಕಿಯ ಬಗ್ಗೆ ಅಷ್ಟಾಗಿ ತಿಳಿದಿರುವುದಿಲ್ಲ. ಎಲ್ಲೆಲ್ಲಿ ಮಾರುತ್ತಾರೆ, ಬಾಕ್ಸಿನ ಮೇಲೆ ಯಾವ ಗುರುತಿದ್ದರೆ ಅದು ಹಸಿರು ಪಟಾಕಿ, ಮಾಮೂಲಿ ಪಟಾಕಿಗಿಂತ ಎಷ್ಟು ಸುರಕ್ಷಿತ ಎಂಬ ಬಗ್ಗೆ ಸ್ವಲ್ಪವೂ ಮಾಹಿತಿ ಇರುವುದಿಲ್ಲ.

ಭಾರತದಲ್ಲಿ ಈಗ ಸ್ವಾಸ್, ಸ್ಟಾರ್ ಮತ್ತು ಸಫಲ್ ಎಂಬ ಮೂರು ಬಗೆಯ ಹಸಿರು ಪಟಾಕಿಗಳು ಲಭ್ಯವಿವೆ. ಸ್ವಾಸ್ (ಸೇಫ್ ವಾಟರ್ ರಿಲೀಸರ್)- ಈ ಪಟಾಕಿ ಸಿಡಿದಾಗ ನಮ್ಮ ಕಣ್ಣು, ಮೈಗೆ ಸುರಕ್ಷಿತವೆನಿಸುವ ನೀರಿನ ಆವಿ ಬಿಡುಗಡೆಯಾಗುತ್ತದೆ. ಸ್ಟಾರ್ (ಸೇಫ್ ಥರ್ಮೈಟ್ ಕ್ರ್ಯಾಕರ್) ಪಟಾಕಿ ಸಿಡಿದಾಗ ಮಾಮೂಲಿಗಿಂತ ಕಡಿಮೆ ಶಬ್ದ ಹೊಮ್ಮುತ್ತದೆ. ಸಫಲ್ (ಸೇಫ್ ಮಿನಿಮಲ್ ಅಲ್ಯೂಮಿನಿಯಂ) ಪಟಾಕಿ ಸಿಡಿದಾಗ ಕಡಿಮೆ ಹೊಗೆ ಮತ್ತು ಪ್ರಖರ ಬೆಳಕು ಹೊಮ್ಮುತ್ತದೆ. ಈ ಮೂರೂ ಬಗೆಯ ಪಟಾಕಿಗಳನ್ನು ಸಿಡಿಸಿದಾಗ ವಾತಾವರಣಕ್ಕೆ ಸೇರಿಕೊಳ್ಳುವ ಲೋಹದ ತೇಲುಕಣಗಳ (ಪಾರ್ಟಿಕ್ಯುಲೇಟ್ ಮ್ಯಾಟರ್) ಪ್ರಮಾಣ ಶೇ 30ರಿಂದ 40ರಷ್ಟು ಕಡಿಮೆಯಾಗುತ್ತದೆ ಎಂದು ಕೇಂದ್ರೀಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್) ಪ್ರಮಾಣಿಸಿದೆ.

ಅಚ್ಚರಿಯೆಂದರೆ, ಹಸಿರು ಪಟಾಕಿಗಳಲ್ಲಿ ಹಸಿರು ಬಣ್ಣ ಹೊಮ್ಮಿಸುವ ಬೇರಿಯಂ ನೈಟ್ರೇಟ್ ಸಂಯುಕ್ತವೇ ಇರುವುದಿಲ್ಲ. ಪಟಾಕಿ ಸಿಡಿದಾಗ ಹಸಿರು ಬಣ್ಣ ಹೊಮ್ಮುವುದೇ ಇಲ್ಲ!

ಸುಪ್ರೀಂ ಕೋರ್ಟ್‌ನ ಆದೇಶದಂತೆ ಸಿಎಸ್‌ಐಆರ್ ಹಾಗೂ ನ್ಯಾಷನಲ್ ಎನ್ವಿರಾನ್‌ಮೆಂಟಲ್ ಎಂಜಿನಿಯರಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು (ನೀರಿ) ಪ್ರಮಾಣೀಕರಿಸಿದ ಉದ್ಯಮಗಳು ಮಾತ್ರ ಹಸಿರು ಪಟಾಕಿ ತಯಾರಿಸುತ್ತವೆ. ಹಸಿರು ಪಟಾಕಿಗಳ ಮೇಲೆ ಕ್ಯುಆರ್ ಕೋಡ್ ಇರಲೇಬೇಕು ಎಂದು ನ್ಯಾಯಾಲಯ ಹೇಳಿದೆ. ಉತ್ಪಾದನೆಗೆ ಕೇಂದ್ರ ಸರ್ಕಾರ ಹಲವು ಉದ್ಯಮಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹಸಿರು ಪಟಾಕಿಗಳ ಮೇಲೆ ನೀರಿ ಮತ್ತು ಸಿಎಸ್‌ಐಆರ್‌ನ ಲೋಗೊ ಮತ್ತು ಕ್ಯುಆರ್ ಕೋಡ್‌ಗಳು ಇರುತ್ತವೆ. ಮೊಬೈಲಿನ ಪ್ಲೇಸ್ಟೋರ್‌ನಲ್ಲಿರುವ ಆ್ಯಪ್ ಬಳಸಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿದರೆ ಅದು ಹಸಿರು ಪಟಾಕಿ ಹೌದೋ ಅಲ್ಲವೋ ಎನ್ನುವುದು ತಿಳಿಯುತ್ತದೆ.

ಸಿಡಿದಾಗ ಹೊಮ್ಮುವ ಶಬ್ದದ ವಿಚಾರದಲ್ಲಿ ಮಾಮೂಲಿ ಮತ್ತು ಹಸಿರು ಪಟಾಕಿಗಳ ನಡುವೆ ಅಂಥ ವ್ಯತ್ಯಾಸವೇನೂ ಇಲ್ಲ. ಹಸಿರು ಪಟಾಕಿಗಳು ಗರಿಷ್ಠ 125 ಡೆಸಿಬಲ್ (ಡಿ.ಬಿ.) ಶಬ್ದ ಹೊಮ್ಮಿಸಿದರೆ ಸಾಮಾನ್ಯ ಪಟಾಕಿಗಳು 125- 160 ಡೆಸಿಬಲ್ ಶಬ್ದ ಉಂಟುಮಾಡುತ್ತವೆ. ಮನುಷ್ಯನ ಕಿವಿಗಳು 70ರಿಂದ 80 ಡಿ.ಬಿವರೆಗಿನ ಶಬ್ದವನ್ನು ಸಹಜವಾಗಿ ತಡೆದುಕೊಳ್ಳುತ್ತವೆ. ನಮ್ಮ ಉಸಿರಾಟದ ಶಬ್ದ 10 ಡಿ.ಬಿ.ಯಷ್ಟಿದ್ದರೆ, ಮೋಟರ್ ಬೈಕಿನ ಶಬ್ದ 85-90 ಡಿ.ಬಿ. ಇರುತ್ತದೆ.

ಪಟಾಕಿಗಳಲ್ಲಿ ಹೆಚ್ಚು ಶಬ್ದ, ಬೆಳಕು ಹಾಗೂ ಬಣ್ಣಗಳನ್ನು ಉತ್ಪತ್ತಿ ಮಾಡಲು ಬಳಕೆಯಾಗುವ ಹಲವು ಲೋಹಗಳು ಜನರ ಆರೋಗ್ಯ ಕೆಡಿಸುತ್ತವೆ. ಪಟಾಕಿ ಸಿಡಿದಾಗ ಗಾಳಿಯಲ್ಲಿ ತೇಲುವ ತಾಮ್ರದ ತೇಲುಕಣಗಳು ಚರ್ಮ ವ್ಯಾಧಿ ತರುತ್ತವೆ, ಅಲ್ಯೂಮಿನಿಯಂನ ಕಣಗಳು ಮೆದುಳು ಮತ್ತು ಶ್ವಾಸಕೋಶದ ಕಾರ್ಯಕ್ಷಮತೆಯ ಮೇಲೆ ಅಡ್ಡಪರಿಣಾಮ ಬೀರುತ್ತವೆ, ಸ್ಟ್ರಾನ್ಷಿಯಂ ಕಣಗಳು ಮಕ್ಕಳ ಎಲುಬುಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ, ಚಾರ್ಕೋಲ್ ಮತ್ತು ಗಂಧಕವು ಶ್ವಾಸಕೋಶದ ಕ್ಯಾನ್ಸರ್ ತರುವ ಸಾಧ್ಯತೆ ಇದೆ ಮತ್ತು ಥೈರಾಯಿಡ್ ಗ್ರಂಥಿಗಳ ಚಟುವಟಿಕೆಯನ್ನು ದಾರಿತಪ್ಪಿಸುತ್ತವೆ ಎಂಬುದಕ್ಕೆ ವೈಜ್ಞಾನಿಕ ದಾಖಲೆಗಳಿವೆ. ಕೆಲವು ಹಸಿರು ಪಟಾಕಿಗಳಲ್ಲಿ ಅಲ್ಯೂಮಿನಿಯಂ, ಪೊಟಾಶಿಯಂ ನೈಟ್ರೇಟ್ ಮತ್ತು ಇಂಗಾಲ ಇರುತ್ತವಾದರೂ ಮಾಮೂಲಿ ಪಟಾಕಿಗಳಿಗಿಂತ ಶೇ 40ರಷ್ಟು ಕಡಿಮೆ ಪ್ರಮಾಣವನ್ನು ಒಳಗೊಂಡಿರುತ್ತವೆ.

ಪಟಾಕಿಗಳು ಉರಿದಾಗ, ಸಿಡಿದಾಗ, ತಿರುಗಿದಾಗ ತಮ್ಮಲ್ಲಿರುವ ರಾಸಾಯನಿಕಗಳಿಂದಾಗಿ ಬೇರೆ ಬೇರೆ ಬಣ್ಣ ಸೂಸಿ ನೋಡುಗರ ಹೃನ್ಮನಗಳಲ್ಲಿ ಬಣ್ಣದ ಚಿತ್ತಾರ ಮೂಡಿಸುತ್ತವೆ. ಸ್ಟ್ರಾನ್ಷಿಯಂ ಮತ್ತು ಲೀಥಿಯಂ ಲೋಹಗಳು ದಟ್ಟ ಕೆಂಪು ವರ್ಣ ಹೊಮ್ಮಿಸಿದರೆ, ತಾಮ್ರವು ದಟ್ಟ ನೀಲಿಬಣ್ಣ ನೀಡುತ್ತದೆ. ಬೆಳ್ಳಿ ಬೆಳಕು ಸೂಸಲು ಟೈಟಾನಿಯಂ ಮತ್ತು ಮೆಗ್ನೀಶಿಯಂ ಉರಿಯಲೇಬೇಕು. ಕ್ಯಾಲ್ಶಿಯಂ ಕಿತ್ತಳೆ, ರುಬಿಡಿಯಮ್ ನೇರಳೆ ಬಣ್ಣ ಸೂಸುತ್ತವೆ. ಸೋಡಿಯಂ ಹಳದಿಯ ಉತ್ಪಾತ ಸೃಷ್ಟಿಸುತ್ತದೆ ಮತ್ತು ಬೇರಿಯಂ ದಟ್ಟ ಹಸಿರು ಬಣ್ಣ ಕಕ್ಕುತ್ತದೆ. ಬೇರಿಯಂ ಮತ್ತು ತಾಮ್ರವನ್ನು ಸೇರಿಸಿದರೆ ಹಸಿರು ಹಾಗೂ ಟರ್ಕ್ವೈಸ್ ಬಣ್ಣದ ಜ್ವಾಲೆಗಳೇಳುತ್ತವೆ.

ಪಟಾಕಿಗಳಲ್ಲಿ ಸೋಡಿಯಂ ಸ್ಯಾಲಿಸಿಲಿಕೇಟ್ ಮತ್ತು ಪೊಟಾಶಿಯಂ ಪರ್‌ಕ್ಲೋರೇಟ್‌ನ ಸಾವಯವ ಲವಣಗಳ ಪದರಗಳಿದ್ದರೆ, ಪ್ರತಿ ಪದರ ಒಂದರ ಹಿಂದೊಂದರಂತೆ ಅನಿಲವನ್ನು ಹೊರಬಿಡುತ್ತ ತೀಕ್ಷ್ಣವಾದ ವಿಶಲ್ ಸದ್ದು ಹೊರಡಿಸುತ್ತದೆ. ಅಲ್ಯೂಮಿನಿಯಂ ತುಂಡುಗಳಿದ್ದರೆ ಹಾವು ಬುಸುಗುಡುವ ರೀತಿಯಲ್ಲಿ ಸದ್ದು ಕೇಳಿಸುತ್ತದೆ. ಟೈಟಾನಿಯಂ ಪೌಡರ್ ಬಿಳಿಕಿಡಿ ಹೊಮ್ಮಿಸಿ ಕಿವಿ ಗಡಚಿಕ್ಕುವಂತಹ ಸದ್ದು ಮಾಡುತ್ತದೆ.

ಹಿಂದಿನ ವರ್ಷ ಮಾರುಕಟ್ಟೆಗೆ ಬಂದ ಹಸಿರು ಪಟಾಕಿಯ ಪ್ರಮಾಣ ಶೇ 40ರಷ್ಟಿತ್ತು. ಜನರಿಗೆ ಸ್ಪಷ್ಟ ತಿಳಿವಳಿಕೆ ಇಲ್ಲದ್ದರಿಂದ ಮಾರಾಟದಲ್ಲಿ ಬಹಳಷ್ಟು ನಷ್ಟವಾಗಿತ್ತು ಎನ್ನುವ ಪಟಾಕಿ ಮಾರಾಟಗಾರರು, ಜನರಿಗೆ ಹಸಿರು ಪಟಾಕಿಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ವಿಫಲವಾಗಿದೆ ಎನ್ನುತ್ತಾರೆ. ಎರಡು ವರ್ಷದ ಹಿಂದೆ 'ಹಸಿರು ಪಟಾಕಿ' ಹೆಸರಿನಲ್ಲಿ ಮಾರಾಟವಾಗಿದ್ದ ನಕಲಿ ಪಟಾಕಿಗಳನ್ನು ಮಹಾರಾಷ್ಟ್ರದ ಆವಾಜ್ ಫೌಂಡೇಷನ್ ಪತ್ತೆಹಚ್ಚಿತ್ತು.

ಹಸಿರು ಪಟಾಕಿ ಎಂದರೆ ಠುಸ್ ಪಟಾಕಿ, ಢಂ ಎಂದು ಪಟಾಕಿ ಹೊಡೆದರೆ ಸೊಳ್ಳೆಗಳು ನಾಶವಾಗುತ್ತವೆ ಎನ್ನುವವರು ಬಹಳಷ್ಟು ಮಂದಿ ಇದ್ದಾರೆ. ಪಟಾಕಿಗಳ ಕರ್ಕಶ ಸದ್ದಿನಿಂದ ಹಕ್ಕಿಗಳು ದಿಕ್ಕಾಪಾಲಾಗುತ್ತವೆ. ಎಳೆಯ ಮಕ್ಕಳು ಹಾಗೂ ಹಿರಿಯರ ಕರ್ಣಪಟಲದ ಮೇಲೆ ಭಾರಿ ಒತ್ತಡ ಬೀಳುತ್ತದೆ. ಗಾಳಿಯಲ್ಲಿ ಲೋಹದ ತೇಲುಕಣಗಳ ಪ್ರಮಾಣ ಹೆಚ್ಚಾಗಿ ಉಸಿರಾಟಕ್ಕೆ ತೊಂದರೆಯಾಗುತ್ತದೆ. ದೀಪಾವಳಿಯು ಬೆಳಕಿನ ಹಬ್ಬ ಎಂದು ಗೊತ್ತಿದ್ದರೂ ಬೆಳಕನ್ನು ಮೀರಿ ಸದ್ದು ಮಾಡುವ ಹುಮ್ಮಸ್ಸೇ ಜಾಸ್ತಿ ಕಾಣಿಸುತ್ತದೆ. ಅದು ಕೊನೆಯಾಗಬೇಕು.

ಚುರುಮುರಿ

ವಿಪರೀತ ಬುದ್ಧಿ!

• ಬಿ.ಎನ್.ಮಲ್ಲೇಶ್

'ಲೇ ತೆಪರ, ಅದೇನೋ ಡೀಪ್‌ಫೇಕ್ ಅಂತ ಸುದ್ದಿ ಹೊಂಟೇತಲ್ಲ, ಏನಲೆ ಅದು?' ದುಬ್ಬೀರ ಕೇಳಿದ.

'ಅದಾ? ಬ್ಯಾಡ ಬಿಡಪ, ಹೆಣ್ಮಕ್ಳ ವಿಷ್ಯ ಹೆಂಗೆಂಗೋ ಮಾತಾಡಂಗಿಲ್ಲ. ಆಮೇಲೆ ಈ ಮಂಜಮ್ಮ ಹಿಡ್ಕಂಡ್ ಒದ್ರೆ ಬಿಡಿಸ್ಕಳಾರು ಯಾರು...' ತೆಪರೇಸಿ ತಲಿ ಒಗೆದ.

'ಆಹಾ ಮಳ್ಳ, ಪರ್ವಾಗಿಲ್ಲ ಅದೇನ್ ಹೇಳು' ಮಂಜಮ್ಮ ಪರ್ಮಿಶನ್ ಕೊಟ್ಟಳು.

'ಅದೂ ಡೀಪ್ ಅಂದ್ರೆ ಒಂಥರ ಜಾದೂ ಇದ್ದಂಗೆ. ಇರೋದನ್ನ ಇಲ್ಲದಂಗೆ ಮಾಯ ಮಾಡಿಬಿಡೋದು. ಫೇಕ್ ಅಂದ್ರೆ ಯಾರದೋ ಫೋಟೊ ಜತಿಗೆ ಇನ್ಯಾರದೋ ಫೋಟೊ ಜೋಡಿಸಿಬಿಡೋದು'.

'ಹ್ಞಾಂ... ಕರೆಕ್ಟ್, ನಮ್ ಕೊಟ್ರ ಒಂದ್ಸಲ ಮೋದಿ ಸಾಹೇಬ್ರು ತನ್ನ ಹೆಗಲ ಮೇಲೆ ಕೈ ಹಾಕಿ ಫೋಟೊ ಹೊಡೆಸ್ಕಂಡಂಗೆ ಒಂದ್ ಫೋಟೊ ತಂದಿದ್ದ...' ಮಂಜಮ್ಮ ನೆನಪಿಸಿಕೊಂಡಳು.

'ಈ ಫೋಟೊ, ವಿಡಿಯೊ ಎಲ್ಲ ತಮಗೆ ಬೇಕಾದಂಗೆ ತಿರುಚೋದ್ನ ಡೀಪ್‌ಫೇಕ್ ಅಂತಾರೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕಲ್ತೋರಿಗೆ ಇದು ಬಾಳ ಸುಲಭ' ತೆಪರೇಸಿ ವಿವರಿಸಿದ.

'ಅಯ್ಯೋ ಹೌದಾ? ನನ್ ಮಗ ಈಗ ಅದ್ನೇ ಓದಾಕೆ ಹೋಗಿರಾದು...' ಕೊಟ್ರನಿಗೆ ಗಾಬರಿಯಾಯಿತು.

'ಲೇಯ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂದ್ರೆ ಕೃತಕ ಬುದ್ಧಿಮತ್ತೆ ಅಂತ. ಅಲ್ಲಿ ಇಂಥದ್ನೆಲ್ಲ ಕಲ್ಸಲ್ಲ' ಪರ್ಮೇಶಿ ವಾದಿಸಿದ.

'ಕೃತಕ ಬುದ್ಧಿ ಅಲ್ಲ, ವಿಪರೀತ ಬುದ್ಧಿ ಅನ್ನು, ಒಬ್ಬರ ತಲಿ ತೆಗೆದು ಇನ್ನೊಬ್ರಿಗೆ ಜೋಡ್ಸೋದು. ಈಗ ಮಂಜಮ್ಮನ ತಲಿ ತೆಗೆದು...'

ಗುಡ್ಡೆ ಮಾತನ್ನ ಅರ್ಧಕ್ಕೇ ತಡೆದ ಮಂಜಮ್ಮ, 'ಲೇಯ್, ನನ್ ತಲಿ ತಂಟೆಗೆ ಬರ್ಬೇಡ, ಬೇಕಾದ್ರೆ ಆ ಕೊಟ್ರನ ತಲಿ ತೆಗಿ' ಎಂದಳು.

'ನೋ ಯೂಸ್' ಎಂದ ಗುಡ್ಡೆ.

'ಯಾಕೆ?'

'ಕೊಟ್ರನಿಗೆ ತಲಿ ಇದ್ರೆ ತಾನೇ ತೆಗಿಯಾಕೆ?...'

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಶೀರ್ಷಿಕೆ ನೋಡಿ ಮರುಳಾಗದಿರಿ

ಒಂದು ವಿಷಯದ ಬಗ್ಗೆ ಹಲವಾರು ಬಾರಿ ಅದದೇ ಮೆಸೇಜು ಬಂದಾಗ, ಸುಳ್ಳುಸುದ್ದಿಯೇ ಸತ್ಯ ಎಂಬ ಭ್ರಮೆ ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ

• ಮನೋಜ ಗೋಡಬೋಲೆ

ಇಂಗ್ಲಿಷ್ ಪತ್ರಿಕೆಯೊಂದರ ಆನ್‌ಲೈನ್ ಆವೃತ್ತಿಯಲ್ಲಿ ಇತ್ತೀಚೆಗೆ ಪ್ರಕಟವಾದ ಸುದ್ದಿಯೊಂದು ಗಮನ ಸೆಳೆಯಿತು. 'ಅರಿಸಿನವು ಜನರನ್ನು ಸಾಯಿಸುವುದನ್ನು ತಡೆಯುವುದು ಹೇಗೆ?' ಎಂಬ ತಲೆಬರಹವಿದ್ದ ಸುದ್ದಿಯನ್ನೋದಿ ಕಣ್ಣುಗಳನ್ನು ನಂಬಲಾಗಲಿಲ್ಲ. ತಲೆ-ತಲಾಂತರದಿಂದ ಭಾರತೀಯ ಅಡುಗೆಯ ಅವಿಭಾಜ್ಯ ಅಂಗವಾಗಿರುವ ಮತ್ತು ಔಷಧದ ಭಂಡಾರವಾಗಿರುವ ಅರಿಸಿನದ ಕುರಿತು ಇದೆಂತಹ ಸುದ್ದಿ ಎಂಬ ವಿಚಾರ ತೀವ್ರ ಕಳವಳವನ್ನು ಉಂಟುಮಾಡಿತ್ತು.

ಸುದ್ದಿಯ ಮೇಲೆ ಕ್ಲಿಕ್ ಮಾಡಿ ವಿವರಗಳನ್ನು ಓದಿದಾಗ ಸುದ್ದಿಯ ಸತ್ಯಾಸತ್ಯತೆ ತಿಳಿದುಬಂತು. ಅರಿಸಿನವನ್ನು ಇನ್ನಷ್ಟು ಹಳದಿ ಮಾಡಲು, ಆ ಮೂಲಕ ಹೆಚ್ಚು ದರ ಗಿಟ್ಟಿಸಲು ಕೊಯ್ಲೋತ್ತರ ಸಂಸ್ಕರಣೆಯಲ್ಲಿ ಸೀಸದ ಕ್ರೋಮೇಟ್ ರಾಸಾಯನಿಕವನ್ನು ಬಳಸಲಾಗುತ್ತದೆ. ಹೀಗಾಗಿ, ಅಂತಹ ಅರಿಸಿನವನ್ನು ಬಳಸುವುದರಿಂದ ನರಮಂಡಲಕ್ಕೆ ಹಾನಿಯಾಗಿ ಕ್ರಮೇಣ ಅಂಗಾಂಗಗಳು ಬಾಧೆಗೊಳಗಾಗಿ ವ್ಯಕ್ತಿ, ವಿಶೇಷವಾಗಿ ಮಕ್ಕಳು ಸಾಯುವ ಸಂಭವವುಂಟು. ಇದು ಲೇಖನದ ಸಾರಾಂಶ. ಜೊತೆಗೆ, ಅದನ್ನು ತಡೆಯಲು ಯಾವ ದೇಶದಲ್ಲಿ ಏನೇನು ಕ್ರಮ ಕೈಗೊಳ್ಳಲಾಗಿದೆ ಎಂಬಂತಹ ವಿವರಗಳು ನಮೂದಾಗಿದ್ದವು. ಲೇಖನದ ಕೊನೆಯಲ್ಲಿ ಸಣ್ಣ ಅಕ್ಷರಗಳಲ್ಲಿ ಲೇಖಕಿಯು 'ಈ ಲೇಖನವನ್ನು ಯಾವುದೋ ಸುದ್ದಿಯ ಮೂಲದಿಂದ ಯಥಾವತ್ ಪ್ರಕಟಿಸಲಾಗಿದೆ. ಶೀರ್ಷಿಕೆಯನ್ನಷ್ಟೇ ಬದಲಾಯಿಸಿದ್ದೇವೆ' ಎಂದು ಘೋಷಿಸಿಕೊಂಡಿದ್ದರು.

ವಿಷಯವನ್ನು ರಸವತ್ತಾಗಿಸಲು ಏನೆಲ್ಲಾ ವಾಮಮಾರ್ಗಗಳನ್ನು ಬಳಸಬಹುದು ಎಂಬುದಕ್ಕೆ ಇದು ಉದಾಹರಣೆಯಷ್ಟೇ. ಹಲವಾರು ವೆಬ್‌ಸೈಟುಗಳ ಬಂಡವಾಳ ಇಂತಹವೇ ಆಗಿರುತ್ತವೆ. ಆಕರ್ಷಕ, ಕುತೂಹಲಕಾರಿ, ವಿವಾದಾತ್ಮಕ ಶೀರ್ಷಿಕೆಗಳನ್ನು ಕೊಟ್ಟಷ್ಟೂ ಓದುಗರ ಸಂಖ್ಯೆ ಜಾಸ್ತಿಯಾಗುವುದನ್ನು ಅವರು ಕಂಡುಕೊಂಡಿದ್ದಾರೆ. ಒಮ್ಮೆ ಯೋಚಿಸಿ ನೋಡಿ: ಈ ಮೇಲಿನ ಶೀರ್ಷಿಕೆಯನ್ನು ನೋಡಿ, ಇಷ್ಟು ವರ್ಷಗಳಿಂದ ಬಳಸಿಕೊಂಡು ಬಂದಿದ್ದ ವಸ್ತು ಎಷ್ಟು ಘಾತಕವೆಂದು ಯಾರಾದರೂ ನಂಬಿ, ಅದನ್ನು ಯಥಾವತ್ ಯಾರಿಗಾದರೂ ಫಾರ್ವರ್ಡ್ ಮಾಡಿದರೆ ಏನಾದೀತು? ಎಷ್ಟೋ ಜನರಿಗೆ ವಾಟ್ಸ್‌ಆ್ಯಪ್, ಯುಟ್ಯೂಬಿನಲ್ಲಿ ಬರುವ ಮಾಹಿತಿಗಳಿಗೆ ತಲೆಬುಡ ಇರುವುದಿಲ್ಲ ಎಂಬುದೇ ಗೊತ್ತಿರುವುದಿಲ್ಲ. ಅದರಲ್ಲೂ ವಿಶೇಷವಾಗಿ ಹಿರಿಯರು, ಹಳ್ಳಿಗಾಡಿನ ಅಮಾಯಕರು ಇತ್ತೀಚೆಗಷ್ಟೇ ಇಂಟರ್ನೆಟ್ ಯುಗಕ್ಕೆ ತೆರೆದುಕೊಳ್ಳುತ್ತಿದ್ದಾರೆ. ಅಂತಹವರ ಗತಿ ಏನಾಗಬೇಡ?

ನಾವು ಚಿಕ್ಕವರಿದ್ದಾಗ, ವೀರಪ್ಪನ್ ಬಂಧನದಂತಹ ಕೋಲಾಹಲಕರ ವಿಷಯಗಳತ್ತಲೇ ಗಿರಕಿ ಹೊಡೆಯುತ್ತಾ, ಅವುಗಳನ್ನೇ ಬಂಡವಾಳ ಮಾಡಿಕೊಂಡ ಕೆಲವು ಸಂಜೆ ಪತ್ರಿಕೆಗಳಿದ್ದವು. ಗಮನಸೆಳೆಯುವ ತಲೆಬರಹ ಕೊಟ್ಟು, ಬಿಸಿದೋಸೆಯಂತೆ ತಮ್ಮ ಪತ್ರಿಕೆಯ ಪ್ರತಿಗಳನ್ನು ಮಾರುತ್ತಿದ್ದವು.

ಕೆಲ ದಿನಗಳ ಕೆಳಗೆ ಹಿರಿಯರೊಬ್ಬರು ಫೋನ್ ಮಾಡಿ, ಜೈವಿಕ ಕಳೆನಾಶಕಗಳ ಕುರಿತು ಮಾಹಿತಿ ಕೇಳಿದರು. ಅವರು ಇತ್ತೀಚೆಗಷ್ಟೇ ಸ್ಮಾರ್ಟ್‌ಫೋನ್ ತೆಗೆದುಕೊಂಡಿದ್ದಾರೆ. ಪರಿಸರ ಪರ ಒಲವಿರುವ ವ್ಯಕ್ತಿ. ಸಾಧ್ಯವಾದಷ್ಟೂ ರಾಸಾಯನಿಕ ಮುಕ್ತ ಜೀವನ ನಡೆಸುವ ಧ್ಯೇಯವುಳ್ಳವರು. ಅಂತಹವರು ಯುಟ್ಯೂಬಿನಲ್ಲಿ ಏನನ್ನೋ ಹುಡುಕುತ್ತಿದ್ದಾಗ ಅವರೆದುರು ಜೈವಿಕ ಕಳೆನಾಶಕಗಳ ತಯಾರಿ ಮತ್ತು ಉಪಯೋಗಗಳ ಕುರಿತು ಹಲವಾರು ವಿಡಿಯೊಗಳು ತೆರೆದುಕೊಂಡವು. ಕುತೂಹಲಗೊಂಡ ಅವರು ಅವುಗಳ ಕುರಿತು ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು ನನ್ನಿಂದ ಬಯಸಿದ್ದರು. ಅವರಿಂದ ಪಡೆದ ವಿವರಣೆಯಲ್ಲಿ, ನಿರ್ದಿಷ್ಟ ಸಸ್ಯಗಳನ್ನು ಕೊಳೆಸಿ, ಕಷಾಯ ಮಾಡಿ ನಂತರ ಉಪ್ಪು ಮತ್ತು ಸುಣ್ಣವನ್ನು ಹೆಚ್ಚಾಗಿ ಬಳಕೆ ಮಾಡಿ, ಆ ಮೂಲಕ ಕಳೆಗಿಡಗಳನ್ನು ನಾಶ ಮಾಡಬಹುದು ಎಂಬ ಸಂಗತಿಯ ಅನಾವರಣವಾಯಿತು.



ಸಾಮಾನ್ಯವಾಗಿ ಉಪ್ಪು ಮತ್ತು ಸುಣ್ಣವನ್ನು ನೀರಿಗೋ ಮಣ್ಣಿಗೋ ಬೆರೆಸಿದಾಗ ಕ್ಷಾರೀಯತೆ ಹೆಚ್ಚಿ ಆ ಮೂಲಕ ತಾತ್ಕಾಲಿಕವಾಗಿ ಸ್ವಲ್ಪಮಟ್ಟಿಗೆ ಕಳೆಗಿಡಗಳು ಬೆಳೆಯಲಾರವೇನೊ. ಕ್ರಮೇಣ ಕ್ಷಾರೀಯತೆಗೆ ಹೊಂದಿಕೊಳ್ಳುವ ಬೇರೆ ಸಸ್ಯಗಳು ಆ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ. ಆದರೆ, ಅವುಗಳ ಯಥೇಚ್ಛ ಬಳಕೆಯಿಂದ ಅವು ಕ್ರಮೇಣ ಮಣ್ಣಿನ ಗುಣಮಟ್ಟವನ್ನೇ ಬದಲಾಯಿಸಿ, ಇಲ್ಲಿಯವರೆಗೆ ಬೆಳೆಯಲಾಗುತ್ತಿದ್ದ ಬೆಳೆಯನ್ನೂ ಬಾಧಿಸದಿರವು. ಹಲವಾರು ಎಕರೆ ಅಡಿಕೆ ತೋಟವನ್ನು ಹೊಂದಿರುವ ಅವರು, ಆ ಮ್ಯಾಜಿಕ್ ಫಾರ್ಮುಲಾವನ್ನು ಅನುಸರಿಸಿ ತಯಾರಿಸಿದ ಮಿಶ್ರಣವನ್ನು ತಮ್ಮ ತೋಟಕ್ಕೆ ಸಿಂಪಡಿಸುತ್ತಾ ಹೋದರೆ, ಕ್ರಮೇಣ ಅವರ ತೋಟವೂ ಕ್ಷಾರೀಯತೆಯಿಂದ ಬಾಧೆಗೆ ಒಳಗಾಗಬಹುದು. ಈ ವಿಷಯವನ್ನು ಅವರಿಗೆ ಮನದಟ್ಟು ಮಾಡಿಸಿದೆ.

ಸ್ಮಾರ್ಟ್‌ಫೋನು ಮತ್ತು ಇಂಟರ್ನೆಟ್ ಈಗ ವ್ಯಾಪಕವಾಗಿವೆ. ಅಲ್ಲಿ ಮಾಹಿತಿಗಳ ಮಹಾಪೂರವೇ ಹರಿಯುತ್ತಿದೆ. ಸುದ್ದಿಯು ನಿಜವೋ ಸುಳ್ಳೋ ಎಂಬುದರ ಮೂಲಕ್ಕೇ ಹೋಗಿ ಹುಡುಕಿ, ಉತ್ತರ ಕಂಡುಕೊಂಡ ನಂತರವಷ್ಟೇ ಅಪ್‌ಲೋಡ್, ಫಾರ್ವರ್ಡ್ ಮಾಡುವುದರಿಂದ ಎಲ್ಲರಿಗೂ ಹಿತವಲ್ಲವೇ?

ಲೇಖಕ: ಸಹಪ್ರಾಧ್ಯಾಪಕ, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ವಿಭಾಗ, ಎಸ್‌ಡಿಎಂ ಕಾಲೇಜು, ಉಜಿರೆ

ವಾಚಕರ ವಾಣಿ

ಹೀಗಿದೆ ನಮ್ಮ ಮುಖ್ಯೋಪಾಧ್ಯಾಯರ ಸ್ಥಿತಿ...

'ಮುಖ್ಯೋಪಾಧ್ಯಾಯ ಮತ್ತು ವೃತ್ತಿಗೌರವ' ಎಂಬ ಪ.ರಾಮಕೃಷ್ಣ ಶಾಸ್ತ್ರಿ ಅವರ ಲೇಖನ (ಸಂಗತ, ನ. 9) ಮುಖ್ಯೋಪಾಧ್ಯಾಯರ ಪ್ರಸ್ತುತ ಸ್ಥಿತಿಗತಿಗೆ ಹಿಡಿದ ಕನ್ನಡಿಯಾಗಿದೆ. ನಮ್ಮೂರಿನ ಮುಖ್ಯೋಪಾಧ್ಯಾಯರು ಸುಮಾರು ಐದಾರು ವರ್ಷಗಳ ಹಿಂದೆ ಮಂಜೂರಾದ ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗದೆ ಕೋರ್ಟ್, ಕಚೇರಿ ಸುತ್ತುತ್ತಿದ್ದಾರೆ. ಆದರೆ ಈವರೆಗೂ ಫಲಕಾರಿಯಾಗಿಲ್ಲ.

ಯಾವಾಗ ಬೇಕಾದರೂ ಬೀಳಬಹುದಾದ ಕೋಣೆಗಳಲ್ಲಿಯೇ ಮಕ್ಕಳನ್ನು ಕೂರಿಸಿಕೊಂಡು, ಬರೀ ಅತಿಥಿ ಶಿಕ್ಷಕರೊಂದಿಗೆ ಮಕ್ಕಳ ಏಳಿಗೆಗಾಗಿ ಹೆಣಗಾಡುತ್ತಿದ್ದಾರೆ. ಆದರೆ ಇದುವರೆಗೂ ಯಾವ ಅಧಿಕಾರಿಯೂ ಇತ್ತ ಚಿತ್ತ ಹರಿಸಿಲ್ಲ.

ಆರ್.ಪಿ.ಮಂಜುನಾಥ್, ಬಿ.ಜಿ.ದಿನ್ನೆ, ಬಳ್ಳಾರಿ

ಪ್ರತ್ಯೇಕ ರೈಲು: ಇನ್ನೆಷ್ಟು ದಿನ ಕಾಯಬೇಕು?

ರೈಲ್ವೆ ಇಲಾಖೆಯು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆಗೆ ಗುರಿಯಾಗಿ, ಕೊನೆಗೂ ದೀಪಾವಳಿ ಹಬ್ಬಕ್ಕೆ ಕಲಬುರಗಿ ಮೂಲಕ ಬೀದರ್‌ಗೆ ಒಂದು ವಿಶೇಷ ರೈಲನ್ನು ಘೋಷಿಸಿದೆ. ಘೋಷಣೆಯಾದ ಕೆಲವೇ ಗಂಟೆಗಳಲ್ಲಿ ಮುಂಗಡ ಬುಕಿಂಗ್‌ನ ಎಲ್ಲ ಬರ್ತ್‌ಗಳೂ ಭರ್ತಿಯಾಗಿರುವುದು ಪ್ರಯಾಣಿಕರ ಸಾಂದ್ರತೆಯನ್ನು ಸಾಬೀತುಪಡಿಸುತ್ತದೆ. ಇಷ್ಟಾದರೂ, ಇಲಾಖೆಯು ಬೆಂಗಳೂರಿನಿಂದ ಕಲಬುರಗಿ, ಬೀದರ್‌ಗೆ ವಾರದ ಏಳು ದಿನವೂ ಸಂಚರಿಸುವ ರೈಲನ್ನು ಓಡಿಸಲು ಮನಸ್ಸು ಮಾಡುತ್ತಿಲ್ಲ. ನಮ್ಮ ರಾಜ್ಯದ ಸಂಸದರು ತುಟಿ ಬಿಚ್ಚುತ್ತಿಲ್ಲ. ಒಂದು ಪ್ರತ್ಯೇಕ ರೈಲಿಗಾಗಿ ಈ ಭಾಗದ ಜನ ಇನ್ನೆಷ್ಟು ದಿನ ಕಾಯಬೇಕು?

ವೆಂಕಟೇಶ್ ಮುದಗಲ್, ಕಲಬುರಗಿ

ಕಳಕಳಿ ಮಾತಲ್ಲಷ್ಟೇ ಇದ್ದರೆ ಸಾಲದು

ಮಂಡ್ಯ ಜಿಲ್ಲೆಯ ಕೆ.ಎಂ. ದೊಡ್ಡಿಯ ಬಳಿ ಹನುಮಂತನಗರ ಎಂಬಲ್ಲಿ ಆತ್ಮಲಿಂಗೇಶ್ವರ ಧಾರ್ಮಿಕ ಕ್ಷೇತ್ರವಿದೆ. ಪ್ರೇಕ್ಷಣೀಯ ಸ್ಥಳವೂ ಆಗಿರುವ ಇಲ್ಲಿಗೆ ನಮ್ಮ ಮಹಿಳೆಯರ ತಂಡ ಇತ್ತೀಚೆಗೆ ಭೇಟಿ ನೀಡಿತ್ತು. ಆದರೆ ಬೆಳಿಗ್ಗೆ ಎಂಟು ಗಂಟೆಗೆ ಅಲ್ಲಿಗೆ ತಲುಪಿದ ನಮಗೆ, ಸುಸ್ಥಿತಿಯಲ್ಲಿ ಇಲ್ಲದ ಅಲ್ಲಿನ ಶೌಚಾಲಯವನ್ನು ಕಂಡು ಆಘಾತವಾಯಿತು. ನಮ್ಮ ಪರಿಸ್ಥಿತಿಯಂತೂ ಯಾವ ಶತ್ರುವಿಗೂ ಬೇಡ ಎಂಬಂತಾಗಿತ್ತು.

ದಿನವೂ ನೂರಾರು ಭಕ್ತರು ದೇವಾಲಯಕ್ಕೆ ಭೇಟಿ ಕೊಡುತ್ತಾರೆ. ಅಲ್ಲಿಗೆ ಬರುವ ವಾಹನಗಳಿಗೆ ನಿಲುಗಡೆ ಶುಲ್ಕವನ್ನು ಕೂಡ ವಿಧಿಸಲಾಗುತ್ತದೆ. ಆದರೆ ಉಪಯೋಗಿಸಲು ಅರ್ಹವಾಗಿರುವ ಶೌಚಾಲಯವಿಲ್ಲ. ಮಹಿಳೆಯರಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸುವ ಕಳಕಳಿಯು ಬಾಯಿಮಾತಿನಲ್ಲಷ್ಟೇ ಇದ್ದರೆ ಸಾಲದು, ಕಾರ್ಯರೂಪಕ್ಕೆ ಬರಬೇಕು.

ನಾಗಮಣಿ ಎಸ್.ಎನ್., ಬೆಂಗಳೂರು

ಪ್ರಯಾಣ ದರ: ಬೇಕು ಕಡಿವಾಣ

ಹಬ್ಬ ಹರಿದಿನಗಳ ಸಮಯದಲ್ಲಿ ಊರುಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಸಹಜವಾಗಿಯೇ ಹೆಚ್ಚುತ್ತದೆ. ಈ ಪರಿಸ್ಥಿತಿಯ ಲಾಭ ಪಡೆಯಲು ಖಾಸಗಿ ಬಸ್ ಮಾಲೀಕರು ಪ್ರಯಾಣ ದರವನ್ನು ಎರಡು- ಮೂರು ಪಟ್ಟು ಹೆಚ್ಚಿಸುತ್ತಾರೆ. ಮಿತಿಮೀರಿ ಟಿಕೆಟ್ ದರವನ್ನು ವಸೂಲಿ ಮಾಡದಂತೆ ಖಾಸಗಿ ಬಸ್ ಮಾಲೀಕರಿಗೆ ಸಾರಿಗೆ ಇಲಾಖೆಯು ಹಲವು ವರ್ಷಗಳಿಂದಲೂ ಸೂಚನೆ ನೀಡುತ್ತಲೇ ಬಂದಿದೆ. ಬೇಕಾಬಿಟ್ಟಿಯಾಗಿ ಪ್ರಯಾಣ ದರ ಏರಿಕೆ ಮಾಡುವವರ ವಿರುದ್ಧ ಪರ್ಮಿಟ್ ರದ್ದು ಮಾಡುವಂತಹ ಕ್ರಮಗಳನ್ನು ಕೈಗೊಳ್ಳುವುದಾಗಿ ಎಚ್ಚರಿಸುತ್ತಿರುತ್ತದೆ. ಇದನ್ನು ಖಾಸಗಿ ಬಸ್ ಮಾಲೀಕರು ಲೆಕ್ಕಕ್ಕೇ ತೆಗೆದುಕೊಳ್ಳುತ್ತಿಲ್ಲ.

ಈ ವರ್ಷ ಸಹ ಎರಡನೇ ಶನಿವಾರ ಮತ್ತು ದೀಪಾವಳಿ ಹಬ್ಬದ ಕಾರಣದಿಂದ ಸಾಲುಸಾಲು ರಜೆಗಳಿವೆ. ಹೀಗಾಗಿ, ಖಾಸಗಿ ಬಸ್ ಮಾಲೀಕರು ಬಸ್ ಪ್ರಯಾಣ ದರ ಹೆಚ್ಚಿಸಿರುವ ದೂರುಗಳು ಕೇಳಿಬರುತ್ತಿವೆ. ಇಲಾಖೆ ಯಾವ ರೀತಿ ಕ್ರಮ ಜರುಗಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಬಾ ದೀಪವೇ...

ಮನೆ ಮನಗಳಲಿ
ಅಡಗಿದ ಕೊಳೆಯ ತೊಳೆದು
ಗಾಢಾಂಧಕಾರವ ಕಳೆದು
ಸತ್ಯ, ಶುದ್ಧ ಕಾಯಕದ
ಹೆದ್ದಾರಿಗೆ ಬೆಳಕು ಚೆಲ್ಲಿ
ವಿಶ್ವಪ್ರೇಮ ಮೂಡಿಸುವ
ಅಭಿವೃದ್ಧಿಯ ಬದುಕಿಗೆ
ನಂದಾದೀಪವಾಗಿ
ಬಾ... ಓ ದೀಪವೇ...

ಎಚ್.ಕೆ.ಕೊಟ್ರಪ್ಪ, ಹರಿಹರ

ಕಲಿಕೆ ಭಾಗ್ಯ: ಅನುದಾನ ಕಡಿತ ಸಲ್ಲ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ 'ಕಲಿಕೆ ಭಾಗ್ಯ' ಯೋಜನೆಯಡಿ ನೀಡುತ್ತಿದ್ದ ಶೈಕ್ಷಣಿಕ ಸಹಾಯಧನದ ಮೊತ್ತವನ್ನು ರಾಜ್ಯ ಸರ್ಕಾರ ಭಾರಿ ಪ್ರಮಾಣದಲ್ಲಿ ಕಡಿತ ಮಾಡಿರುವುದು ಆಘಾತ ತಂದಿದೆ. ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಜಾರಿಗೊಳಿಸಲು ದಶಕದಷ್ಟು ಕಾಲ ತಡಮಾಡಿದ್ದಲ್ಲದೆ, ಅನುಷ್ಠಾನದ ಹಂತದಲ್ಲಿರುವ ಸಹಾಯಧನದ ಮೊತ್ತವನ್ನು ಕಡಿತ ಮಾಡಿರುವುದು ಸಮರ್ಥನೀಯವಲ್ಲ. ಈ ಸೌಲಭ್ಯ ಒದಗಿಸಲು ಸಾವಿರಾರು ಕೋಟಿ ರೂಪಾಯಿಯ ನಿಧಿ ಲಭ್ಯವಿದ್ದರೂ ಕಡಿತ ಮಾಡಲು ಇರುವ ನೆಪಗಳು ಗೌಣ ಎಂಬಂತಿವೆ.

ಅರ್ಹರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದರೆ, ಅನುದಾನ ಹೆಚ್ಚಿಸುವ ಕಾಳಜಿ ಅಗತ್ಯ. ಅಲ್ಲದೆ ಅರ್ಹ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. ಅಸಂಘಟಿತ ವಲಯದ ಕಾರ್ಮಿಕ ಕುಟುಂಬಗಳ ಯೋಜನೆಗಳನ್ನು ಆದ್ಯತೆಯ ಮೇರೆಗೆ ಅತ್ಯಗತ್ಯವಾಗಿ ಅನುಷ್ಠಾನಕ್ಕೆ ತರಬೇಕು.

ಟಿ.ವಿ.ನಾಗರಾಜ, ಬೆಂಗಳೂರು

ತಮಿಳುನಾಡಿನಲ್ಲಿ ಮೀಸಲಾತಿ ಶೇ 69+10

ತಮಿಳುನಾಡಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳಿಗೆ ಶೇ 69ರಷ್ಟು ಮೀಸಲಾತಿ ಜಾರಿಯಲ್ಲಿದೆ. ಜಾತಿ ಗಣತಿಯ ದತ್ತಾಂಶಗಳ ಆಧಾರದಲ್ಲೇ ಆ ಮೀಸಲಾತಿಯನ್ನು ಜಾರಿಗೆ ತರಲಾಗಿತ್ತು ಮತ್ತು ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿಯನ್ನೂ ನೀಡಲಾಗಿತ್ತು. ಈ ಸಮುದಾಯಗಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇ 50ರಿಂದ ಶೇ 65ಕ್ಕೆ ಏರಿಕೆ ಮಾಡಬೇಕು ಎಂದು ಈಗ ಬಿಹಾರ ಸರ್ಕಾರ ಸಹ ಜಾತಿ ಗಣತಿಯ ಆಧಾರದಲ್ಲೇ ನಿರ್ಧಾರ ತೆಗೆದುಕೊಂಡಿದೆ. ಈ ಸಂಬಂಧ ಮಸೂದೆಯನ್ನೂ ಅಂಗೀಕರಿಸಿದೆ. ಕರ್ನಾಟಕದಲ್ಲೂ ಈಗಾಗಲೇ ಅಂತಹ ಸಮೀಕ್ಷೆ ನಡೆದಿದೆ. ಸಮೀಕ್ಷೆಯ ದತ್ತಾಂಶಗಳು ಮೀಸಲಾತಿ ಹೆಚ್ಚಳ ಮತ್ತು ಒಳಮೀಸಲಾತಿ ಬೇಡಿಕೆಗೆ ವೈಜ್ಞಾನಿಕ ತಳಹದಿ ಒದಗಿಸಲಿದೆ

ಪ್ರಜಾವಾಣಿ ವಾರ್ತೆ

ತಮಿಳುನಾಡಿನಲ್ಲಿ ಶೇ 69ರಷ್ಟು ಮೀಸಲಾತಿ ಇದೆ. ದೇಶದಲ್ಲಿ ಮಂಡಲ ಸಮಿತಿ ವರದಿ ಜಾರಿ ಆಗುವುದಕ್ಕೂ ಮೊದಲೇ ತಮಿಳುನಾಡಿನಲ್ಲಿ ಹಿಂದುಳಿದ ವರ್ಗಗಳಿಗೆ ಶೇ 50ರಷ್ಟು ಮೀಸಲಾತಿಯನ್ನು ನೀಡಲಾಗಿತ್ತು.

‘ತಮಿಳುನಾಡು ಹಿಂದುಳಿದ ಜಾತಿಗಳ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ (ಶಿಕ್ಷಣ ಸಂಸ್ಥೆ ಹಾಗೂ ಸರ್ಕಾರಿ ನೇಮಕಾತಿಯಲ್ಲಿ ಮೀಸಲಾತಿ) ಕಾಯ್ದೆ, 1993 ಅನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಈ ಮೂಲಕ ಈ ಕಾಯ್ದೆಯ ಸಿಂಧುತ್ವವನ್ನು ಯಾರೂ ನ್ಯಾಯಾಲಯದಲ್ಲಿ ಪ್ರಶ್ನಿಸದಂತೆ ಮಾಡಲಾಗಿದೆ. ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳ ರಾಜಕೀಯ ಇಚ್ಛಾಶಕ್ತಿ ಕಾರಣದಿಂದಾಗಿ ತಮಿಳುನಾಡಿನಲ್ಲಿ ಇದು ಸಾಧ್ಯವಾಗಿದೆ.

1971ಕ್ಕೂ ಮೊದಲು ರಾಜ್ಯದಲ್ಲಿ ಶೇ 41ರಷ್ಟು ಮೀಸಲಾತಿ ಇತ್ತು. ಹಿಂದುಳಿದ ವರ್ಗಗಳಿಗೆ ಶೇ 25ರಷ್ಟು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ 16ರಷ್ಟು ಮೀಸಲಾತಿ ಇತ್ತು.

ಅಣ್ಣಾದೊರೈ ಅವರ ಬಳಿಕ 1969ರಲ್ಲಿ ಡಿಎಂಕೆಯ ಎಂ. ಕರುಣಾನಿಧಿ ಅವರು ಮುಖ್ಯಮಂತ್ರಿಯಾದರು. ಈ ವೇಳೆ ಕರುಣಾನಿಧಿ ಅವರು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸಟ್ಟನಾಥನ್ ಸಮಿತಿಯನ್ನು ರಚಿಸುತ್ತಾರೆ. ಮೀಸಲಾತಿ ಹೆಚ್ಚಳದ ಅಗತ್ಯದ ಕುರಿತು ಕೆಲವು ಶಿಫಾರಸುಗಳನ್ನು ಈ ಸಮಿತಿ ನೀಡುತ್ತದೆ. ಈ ಸಮಿತಿಯ ಶಿಫಾರಸ್ಸಿನ ಮೇಲೆ ಮೀಸಲಾತಿ ಪ್ರಮಾಣವನ್ನು ಸರ್ಕಾರ ಹೆಚ್ಚಿಸುತ್ತದೆ. ಈ ಪ್ರಕಾರ, ಹಿಂದುಳಿದ ಜಾತಿಗಳಿಗೆ ಶೇ 31ರಷ್ಟು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ 18ರಷ್ಟು ಮೀಸಲಾತಿಯನ್ನು ಹೆಚ್ಚಿಸಲಾಗುತ್ತದೆ. ಅಲ್ಲಿಗೆ ರಾಜ್ಯದ ಒಟ್ಟು ಮೀಸಲಾತಿ ಪ್ರಮಾಣವು ಶೇ 49ರಷ್ಟಾಗುತ್ತದೆ.

ಈ ಬಳಿಕ ಅಧಿಕಾರವಹಿಸಿಕೊಂಡ ಎಐಎಡಿಎಂಕೆಯ ಎಂ.ಜಿ. ರಾಮಚಂದ್ರನ್ ಅವರು ಮೀಸಲಾತಿಯನ್ನು ಇನ್ನಷ್ಟು ಏರಿಸಲು ಮುಂದಾಗುತ್ತಾರೆ. ಹಿಂದುಳಿದ ಜಾತಿಗಳ ಮೀಸಲಾತಿಯನ್ನು ಶೇ 25ರಿಂದ ಶೇ 50ಕ್ಕೆ ಏರಿಸುತ್ತಾರೆ. ಅಲ್ಲಿಗೆ ರಾಜ್ಯದ ಒಟ್ಟು ಮೀಸಲಾತಿ ಪ್ರಮಾಣವು ಶೇ 68ಕ್ಕೆ ತಲುಪುತ್ತದೆ. ನಂತರ 1989ರಲ್ಲಿ ಡಿಎಂಕೆಯ ಕರುಣಾನಿಧಿ ಅವರು ಮತ್ತೊಮ್ಮೆ ಅಧಿಕಾರಕ್ಕೆ ಬರುತ್ತಾರೆ. ಈ ಬಾರಿ ಅವರು ಹಿಂದುಳಿದ ಜಾತಿಗಳಿಗೆ ನೀಡಿದ್ದ ಮೀಸಲಾತಿ ಪ್ರಮಾಣವನ್ನು ಎರಡು ವಿಭಾಗಗಳಲ್ಲಿ ವಿಂಗಡಿಸುತ್ತಾರೆ. ಅಂದರೆ, ಕರುಣಾನಿಧಿ ಅವರು ಅತಿ ಹಿಂದುಳಿದ ಜಾತಿಗಳ ವಿಭಾಗವೊಂದನ್ನು ರೂಪಿಸುತ್ತಾರೆ. ಹಿಂದುಳಿದ ಜಾತಿಗಳಿಗೆ ನೀಡಿದ್ದ ಶೇ 50ರಷ್ಟು ಮೀಸಲಾತಿಯಲ್ಲಿ ಅತಿ ಹಿಂದುಳಿದ ಜಾತಿಗಳಿಗೆ ಶೇ 20ರಷ್ಟು ಮೀಸಲಾತಿಯನ್ನು ಹಂಚುತ್ತಾರೆ.

1990ರವರೆಗೂ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿ ಎರಡಕ್ಕೂ ಸೇರಿ ಶೇ 18ರಷ್ಟು ಮೀಸಲಾತಿಯನ್ನು ನೀಡಲಾಗುತ್ತಿತ್ತು. ನಂತರ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಅಷ್ಟಕ್ಕೇ ಉಳಿಸಿಕೊಂಡು, ಪರಿಶಿಷ್ಟ ಪಂಗಡಕ್ಕೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ನೀಡಲಾಯಿತು. ಹೀಗೆ, ರಾಜ್ಯದ ಒಟ್ಟು ಮೀಸಲಾತಿ ಪ್ರಮಾಣ ಶೇ 69ಕ್ಕೆ ಏರಿತು.

ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿ



ಶೇ 50ರ ಮಿತಿ ದಾಟಿದರೂ ಮೀಸಲಾತಿ ಉಳಿಸಿಕೊಂಡ ಬಗೆ

ಇಂದಿರಾ ಸಾಹ್ನಿ ಹಾಗೂ ಇತರರ ಪ್ರಕರಣದ ತೀರ್ಪನ್ನು ಸುಪ್ರೀಂ ಕೋರ್ಟ್ 1992 ನವೆಂಬರ್ 16ರಂದು ನೀಡಿತು. ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವು ಶೇ 50ರಷ್ಟನ್ನು ಮೀರಬಾರದು’ ಎಂಬ ತೀರ್ಪನ್ನು ನ್ಯಾಯಾಲಯ ನೀಡಿತು. .

ಈ ತಕ್ಷಣವೇ ತಮಿಳುನಾಡು ಸರ್ಕಾರವು ಮದ್ರಾಸ್ ಹೈಕೋರ್ಟ್‌ನ ಕದ ತಟ್ಟಿತ್ತು. ಆಗ ಜಯಲಲಿತಾ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. 1993–94ರಲ್ಲಿ ಶಿಕ್ಷಣ ಸಂಸ್ಥೆಗಳಿಗೆ ದಾಖಲಾತಿಯನ್ನು ಶೇ 69ರಷ್ಟಿರುವ ಮೀಸಲಾತಿಯಂತೆಯೇ ನಡೆಸಬೇಕು ಎಂದು ಕೋರಿ ಸರ್ಕಾರ ಅರ್ಜಿ ಹಾಕಿತ್ತು. ಆದರೆ, ರಾಜ್ಯ ಸರ್ಕಾರವು ಇನ್ನೊಂದು ವರ್ಷವಷ್ಟೇ ಈ ಮೀಸಲಾತಿ ನೀತಿಯನ್ನು ಮುಂದುವರಿಸಬಹುದು’ ಎಂದು ನ್ಯಾಯಾಲಯ ಆದೇಶ ನೀಡಿತು. ‘1994–95ರ ಶೈಕ್ಷಣಿಕ ವರ್ಷಕ್ಕೆ ಮೀಸಲಾತಿಯನ್ನು ಶೇ 50ರ ಮಿತಿಯೊಳಗೆ ತರಬೇಕು’ ಎಂದೂ ನ್ಯಾಯಾಲಯ ಹೇಳಿತು.

ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಯಿತು. ಹಿಂದುಳಿದ ಜಾತಿಗಳ ಅಭಿವೃದ್ಧಿಯ ಪರ ಇರುವ ಈ ಮೀಸಲಾತಿ ಮಿತಿಯನ್ನು ಕಡಿತಗೊಳಿಸಲು ಅನುವು ಮಾಡಿಕೊಡಬಾರದು ಎಂಬ ಮನವಿಯನ್ನೂ ಮಾಡಿತು. ಆದರೆ, ಸುಪ್ರೀಂ ಕೋರ್ಟ್ ಸಹ ಮದ್ರಾಸ್ ಹೈಕೋರ್ಟ್ ನೀಡಿದ ಆದೇಶವನ್ನೇ ಎತ್ತಿಹಿಡಿಯಿತು.

ನ್ಯಾಯಾಲಯಗಳಿಂದ ಇಂಥ ಆದೇಶ ಬರುತ್ತಿದ್ದಂತೆಯೇ 1993 ನವೆಂಬರ್‌ನಲ್ಲಿ ಸರ್ಕಾರವು ವಿಶೇಷ ಅಧಿವೇಶನವನ್ನು ಕರೆಯಿತು. ತಮಿಳುನಾಡಿನ ಮೀಸಲಾತಿ ನೀತಿಯನ್ನು ಇದ್ದಂತೆಯೇ ಮುಂದುವರಿಸಲು ಅನುವಾಗುವಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂಬ ನಿರ್ಣಯಕ್ಕೆ ಸರ್ವಾನುಮತ ಅನುಮೋದನೆ ಪಡೆಯಿತು. ಆಗ ಕೇಂದ್ರದಲ್ಲಿ ನರಸಿಂಹ ರಾವ್ ಅವರು ಪ್ರಧಾನಿಯಾಗಿದ್ದರು.

ಆಗಲೇ ರಾಜ್ಯ ಸರ್ಕಾರವು ತಮಿಳುನಾಡು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳ (ಶಿಕ್ಷಣ ಸಂಸ್ಥೆ ಹಾಗೂ ಸರ್ಕಾರಿ ನೇಮಕಾತಿಯಲ್ಲಿ ಮೀಸಲಾತಿ) ಮಸೂದೆ, 1993 ಅನ್ನು ಮಂಡಿಸಿತು. ಇದನ್ನು ರಾಷ್ಟ್ರಪತಿ ಅಂಕಿತಕ್ಕೂ ಕಳುಹಿಸಲಾಯಿತು. ಈ ಮಸೂದೆಗೆ ಅಂಕಿತ ಹಾಕಲೇಬೇಕು ಎಂದು ಕೇಂದ್ರದ ಮೇಲೆ ಒತ್ತಡ ಹೇರುವುದಕ್ಕಾಗಿ ಜಯಲಲಿತಾ ಅವರು ರಾಜ್ಯ ಸರ್ವಪಕ್ಷಗಳ ನಾಯಕರ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋದರು. ಇದರ ಜೊತೆಯಲ್ಲಿ, ತಮಿಳುನಾಡಿನ ಈ ಕಾಯ್ದೆಯನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂದೂ ನಿಯೋಗ ಒತ್ತಡ ಹೇರಿತು.

ಈ ಬಳಿಕ ಈ ಮಸೂದೆಗೆ ರಾಷ್ಟ್ರಪತಿ ಅವರ ಅಂಕಿತ ದೊರಕಿತು. ಜೊತೆಗೆ, ಈ ಕಾಯ್ದೆಯನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೂ ಸೇರಿಸಲಾಯಿತು. ಹೀಗೆ ಶೇ 69ರಷ್ಟು ಮೀಸಲಾತಿಯನ್ನು ತಮಿಳುನಾಡು ಸರ್ಕಾರವು ಉಳಿಸಿಕೊಂಡಿತು.

ಮೀಸಲಾತಿ ಹೆಚ್ಚಳಕ್ಕೆ ಜಾತಿ ಗಣತಿಯೇ ಆಧಾರ

ತಮಿಳುನಾಡು ಸರ್ಕಾರವು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಒಟ್ಟು ಶೇ 68ರಷ್ಟು ಮೀಸಲಾತಿಯನ್ನು 80ರ ದಶಕದಲ್ಲೇ ಮಾಡಿತ್ತು. ಇಂತಹ ಮೀಸಲಾತಿಗೆ ಶೇ 50ರಷ್ಟು ಮಿತಿ ಅನ್ವಯವಾಗಬೇಕು ಎಂದು ಆಗಿನ್ನೂ ಸುಪ್ರೀಂ ಕೋರ್ಟ್ ತೀರ್ಪು ನೀಡಿರಲಿಲ್ಲ. ಅಂತಹ ತೀರ್ಪು ಬರುವುದಕ್ಕೂ ಎರಡು ವರ್ಷಗಳ ಮೊದಲೇ ಒಟ್ಟು ಮೀಸಲಾತಿಯ ಪ್ರಮಾಣ ಶೇ 69ಕ್ಕೆ ಏರಿಕೆಯಾಗಿತ್ತು. ತಮಿಳುನಾಡು ಸರ್ಕಾರವು 1983ರ ಜಾತಿ ಗಣತಿಯ ಆಧಾರದಲ್ಲಿ ಅಂತಹ ಸಾಹಸಕ್ಕೆ ತಮಿಳುನಾಡು ಸರ್ಕಾರವು ಕೈಹಾಕಿತ್ತು.

ಜಾತಿ ಗಣತಿಯ ವೇಳೆ ಜಾತಿಗಳ ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಸಮೀಕ್ಷೆಯನ್ನೂ ನಡೆಸಲಾಗಿತ್ತು. ಈ ಎಲ್ಲಾ ದತ್ತಾಂಶಗಳು ಬಿಡುಗಡೆಯಾದ ನಂತರ ಮೀಸಲಾತಿ ಹೆಚ್ಚಳಕ್ಕೆ ಆಗ್ರಹ ತೀವ್ರವಾಯಿತು. ಜಾತಿ ಗಣತಿಯ ಆಧಾರದಲ್ಲೇ ಸರ್ಕಾರವು ಮೀಸಲಾತಿಯನ್ನು ಶೇ 68ಕ್ಕೆ ಹೆಚ್ಚಿಸಿತ್ತು. ಜಾತಿ ಗಣತಿಯ ದತ್ತಾಂಶಗಳ ಕಾರಣದಿಂದಲೇ ಪರಿಶಿಷ್ಟ ಪಂಗಡಗಳಿಗೆ 1990ರಲ್ಲಿ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ಒದಗಿಸಲಾಯಿತು. ಅಲ್ಲಿಯವರೆಗೆ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಕಡಿಮೆ ಇದೆ ಎಂಬ ಕಾರಣಕ್ಕೆ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಮೀಸಲಾತಿ ಎಂಬ ಏಕ ಮೀಸಲಾತಿ ಜಾರಿಯಲ್ಲಿತ್ತು. ಜಾತಿ ಗಣತಿಯ ದತ್ತಾಂಶಗಳ ಆಧಾರದಲ್ಲಿ ಪರಿಶಿಷ್ಟ ಸಮುದಾಯದ ಜನರು ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್‌ನ ಆದೇಶದ ಮೇರೆಗೆ 1990ರಲ್ಲಿ ಸರ್ಕಾರವು ಶೇ1ರಷ್ಟು ಪ್ರತ್ಯೇಕ ಮೀಸಲಾತಿಯನ್ನು ನೀಡಿತು.

ಮತ್ತೆ ಜಾತಿ ಗಣತಿಗೆ ಸಿದ್ಧತೆ

ತಮಿಳುನಾಡು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳ ಮೀಸಲಾತಿ ಕಾಯ್ದೆಯನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲಾಗಿದೆ. 9ನೇ ಪರಿಚ್ಛೇದದಲ್ಲಿ ಇರುವ ಕಾಯ್ದೆಗಳನ್ನು ನ್ಯಾಯಾಂಗದ ವಿಮರ್ಶೆಗೆ ಒಳಪಡಿಸಲಾಗದು ಎಂದು ಸಂವಿಧಾನವು ಹೇಳುತ್ತದೆ. ಹೀಗಿದ್ದೂ ಈ ಕಾಯ್ದೆಯ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಈ ಕಾಯ್ದೆಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಿದ ವಿಧಾನವನ್ನು ಹಲವು ಅರ್ಜಿಗಳು ಪ್ರಶ್ನಿಸಿದ್ದರೆ, ಶೇ 69ರಷ್ಟು ಮೀಸಲಾತಿಯು ಇಂದಿರಾ ಸಾಹ್ನಿ ಪ್ರಕರಣದ ತೀರ್ಪನ್ನು ಮೀರುತ್ತದೆ ಎಂದು ಮತ್ತಷ್ಟು ಅರ್ಜಿಗಳು ಪ್ರತಿಪಾದಿಸುತ್ತಿವೆ. ಸುಪ್ರೀಂ ಕೋರ್ಟ್‌ನಲ್ಲಿ ಈ ಅರ್ಜಿಗಳ ವಿಚಾರಣೆ ಪದೇ–ಪದೇ ಮುಂದಕ್ಕೆ ಹೋಗುತ್ತಿದೆ. ಆದರೆ, ವಿಚಾರಣೆ ವೇಳೆಗೆ ತನ್ನ ವಾದವನ್ನು ಗಟ್ಟಿಮಾಡಿಕೊಳ್ಳಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ವೈಜ್ಞಾನಿಕ ಆಧಾರದಲ್ಲೇ ಮೀಸಲಾತಿ ನೀಡಲಾಗಿದೆ ಮತ್ತು ಅಷ್ಟೇ ಮೀಸಲಾತಿ ಈಗಲೂ ಅಗತ್ಯ ಎಂದು ಪ್ರತಿಪಾದಿಸಲು ಸರ್ಕಾರವು ಜಾತಿ ಗಣತಿಯ ಮೊರೆ ಹೋಗಿದೆ. ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಸಮೀಕ್ಷೆಯನ್ನೂ ಒಳಗೊಂಡ ಜಾತಿ ಗಣತಿಯನ್ನು ನಡೆಸಲು 2000ರಲ್ಲಿ ನ್ಯಾಯಮೂರ್ತಿ ಕುಲಶೇಖರನ್ ಸಮಿತಿಯನ್ನು ರಚಿಸಲಾಗಿದೆ. ಜಾತಿ ಗಣತಿಯ ದತ್ತಾಂಶಗಳ ಆಧಾರದಲ್ಲಿ ಎಲ್ಲಾ ಮೀಸಲಾತಿಗಳಲ್ಲಿ ಒಳಮೀಸಲಾತಿಯನ್ನು ತರಲು ಮತ್ತು ಎಂಬಿಸಿ ವರ್ಗದಲ್ಲಿ ಈಗಾಗಲೇ ಇರುವ ಒಳಮೀಸಲಾತಿಯನ್ನು ಪರಿಷ್ಕರಿಸಲಾಗುತ್ತದೆ ಎಂದು ಸರ್ಕಾರ ಹೇಳಿತ್ತು.

ಆಧಾರ: ತಮಿಳುನಾಡು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳ ಮೀಸಲಾತಿ ಕಾಯ್ದೆ, ಸಂವಿಧಾನದ 31ಬಿ ವಿಧಿ, ಇಂದಿರಾ ಸಹಾನಿ ಪ್ರಕರಣದ ತೀರ್ಪು, ಪಿಟಿಐ

ಸಿನಿ ಬಿಟ್ಸ್



ನೀನಾಸಂ ಸತೀಶ್

ನೀನಾಸಂ ಸತೀಶ್‌ಗೆ ನಿರ್ದೇಶನದ ಯೋಚನೆ

‘ಮಾದೇಶ’ ಸಿನಿಮಾದಿಂದ ಚಿತ್ರರಂಗಕ್ಕೆ ಕಾಲಿಟ್ಟ ನೀನಾಸಂ ಸತೀಶ್ ನಟನಾಗಿ 15 ವರ್ಷ, ನಾಯಕನಾಗಿ 10 ವರ್ಷಗಳು ಕಳೆದಿವೆ. “2003ರಲ್ಲಿ ನೀನಾಸಂ ಸೇರಿಕೊಂಡೆ. ನಾಟಕ, ಧಾರಾವಾಹಿಗಳಲ್ಲಿ ನಟಿಸುತ್ತಿದ್ದವನಿಗೆ 2008ರಲ್ಲಿ ಚಿತ್ರರಂಗದಲ್ಲಿ ಅವಕಾಶ ಲಭಿಸಿತು. ‘ಪರಮಪದ’ ಎಂಬ ಧಾರಾವಾಹಿಯಲ್ಲಿ ನಟಿಸುವಾಗ ಯೋಗರಾಜ್ ಭಟ್ಟರ ಪರಿಚಯವಾಯಿತು. ‘ಮನಸಾರೆ’ ಸಿನಿಮಾದಲ್ಲಿ ಅವಕಾಶ ನೀಡಿದರು. ‘ಪಂಚರಂಗಿ’ಯಲ್ಲಿಯೂ ನಟಿಸಿದೆ. ನಂತರ ‘ಡ್ರಾಮಾ’ ವೃತ್ತಿ ಬದುಕಿನ ಟರ್ನಿಂಗ್ ಪಾಯಿಂಟ್. ಕಲಾವಿದನಾಗಿ ನನ್ನನ್ನು ಗುರುತಿಸಿಕೊಳ್ಳುವಂತೆ ಮಾಡಿದ ಸಿನಿಮಾ. ‘ಲೂಸಿಯಾ’ ಸಿನಿಮಾದಿಂದ ನಾಯಕ ಎನಿಸಿಕೊಂಡೆ. ಮೊದಲ ಸಿನಿಮಾದಲ್ಲಿಯೇ ಯಶಸ್ಸು, ಪ್ರಶಸ್ತಿ ಎಲ್ಲವೂ ಸಿಕ್ಕಿದೆ. ಸಿನಿಮಾ 100 ದಿನಗಳನ್ನು ಪೂರೈಸಿತು. ದೇಶದ ಎಲ್ಲೆಡೆ ಈ ಸಿನಿಮಾ ಬಿಡುಗಡೆಯಾಗಿತ್ತು. ಪವನ್ ಒಳ್ಳೆಯ ತಂತ್ರಜ್ಞರು. ಹೀಗಾಗಿ ಆ ಸಿನಿಮಾದ ಕಥೆಯನ್ನೇ ಕೇಳಿರಲಿಲ್ಲ” ಎಂದು ನೀನಾಸಂ ಸತೀಶ್ ತೃಪ್ತಭಾವ ವ್ಯಕ್ತಪಡಿಸಿದರು.

ಸತೀಶ್, ರಚಿತಾ ರಾಮ್ ಜೊತೆಯಾಗಿ ನಟಿಸಿರುವ ‘ಮ್ಯಾಟ್ನಿ’ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ‘ಅಶೋಕ ಬ್ಲೇಡ್’ ಶೇ 70ರಷ್ಟು ಚಿತ್ರೀಕರಣವಾಗಿದೆ. ತಮಿಳಿನಲ್ಲಿ ಕೂಡ ನಟಿಸಿದ್ದಾರೆ. “ಯೋಗರಾಜ್ ಭಟ್ಟರ ತಂಡದೊಂದಿಗಿನ ದಿನಗಳನ್ನು ಯಾವತ್ತಿಗೂ ನೆನಪಿಸಿಕೊಳ್ಳಬೇಕು. ಯಶಸ್ಸಿಗಾಗಿ ಪರದಾಡುತ್ತಿದ್ದ ದಿನಗಳವು. ಜೊತೆಗೆ ಕೆಲಸ ಕಲಿಯುವ ವೇದಿಕೆಯಾಗಿತ್ತು. ನಿರ್ದೇಶಕ ಪವನ್‌ಕುಮಾರ್ ಪರಿಚಯವಾಗಿದ್ದು ಅಲ್ಲಿಯೇ. ‘ಪಂಚರಂಗಿ’, ‘ಲೈಫು ಇಷ್ಟೇನೇ’ ಸಿನಿಮಾಗಳಲ್ಲಿ ಜೊತೆಗೆ ಕೆಲಸ ಮಾಡಿದ್ದೆವು. ಆ ಕಾರಣದಿಂದಲೇ ‘ಲೂಸಿಯಾ’ದಲ್ಲಿ ಅವಕಾಶ ನೀಡಿದರು. ಅಲ್ಲಿಂದ ನಂತರದ ಸಿನಿಮಾಗಳಲ್ಲಿ ನಟನೆಯನ್ನು ಸಾಬೀತುಪಡಿಸುತ್ತ ಬಂದೆ. ‘ಲವ್ ಇನ್ ಮಂಡ್ಯ’ ‘ಅಯೋಗ್ಯ’ ಸಿನಿಮಾಗಳು ಕಮರ್ಷಿಯಲ್ ಆಗಿ ದೊಡ್ಡ ಯಶಸ್ಸು ತಂದುಕೊಟ್ಟವು. ‘ಲವ್ ಇನ್ ಮಂಡ್ಯ’ ಸಿನಿಮಾ ಒಂದು ಅದ್ಭುತ ಅನುಭವ. ಒಂದೊಳ್ಳೆ ತಂಡ. ಅರಸು ಅಂತಾರೆಯಂತಹ ಒಳ್ಳೆ ನಿರ್ದೇಶಕರ ಜೊತೆ ಕೆಲಸ ಮಾಡಿದ ಖುಷಿ. ನನ್ನನ್ನು ನಂಬಿ ಹೂಡಿಕೆ ಮಾಡಿದ್ದ ನಿರ್ಮಾಪಕರಿಗೆ ಲಾಭವಾಯ್ತು” ಎಂದು ಹಳೆಯ ದಿನಗಳನ್ನು ಸತೀಶ್ ನೆನಪಿಸಿಕೊಂಡರು.

‘ರಾಕೆಟ್’ ಸಿನಿಮಾದೊಂದಿಗೆ ನಿರ್ಮಾಪಕರಾದ ಸತೀಶ್, ಒಂದು ಸ್ಕ್ರಿಪ್ಟ್ ಅನ್ನೂ ಸಿದ್ಧಪಡಿಸಿದ್ದಾರೆ. ಒಪ್ಪಿಕೊಂಡಿರುವ ಸಿನಿಮಾಗಳು ಮುಗಿದ ಬಳಿಕ ನಿರ್ದೇಶನ ಮಾಡುವ ಇರಾದೆ ಹೊಂದಿದ್ದಾರೆ. ಮಂಡ್ಯ ಭಾಷೆಯಲ್ಲಿ ನಡೆಯುವ ಕಥೆಯಾಗಿರುವುದರಿಂದ ಅವರೇ ಈ ಚಿತ್ರಕ್ಕೆ ನಾಯಕನಾಗುವ ಬಯಕೆ ಅವರಲ್ಲಿದೆ.

“ಕಳೆದ 10 ವರ್ಷಗಳು ನನ್ನನ್ನು ಪ್ರೂವ್ ಮಾಡಿಕೊಳ್ಳಲು ಮೀಸಲಾಗಿದ್ದವು. ಹೀಗಾಗಿ ಮುಂದಿನ 10 ವರ್ಷಗಳಲ್ಲಿ ಇನ್ನೊಂದು ಹಂತ ಮುಂದಕ್ಕೆ ಹೋಗಿ ದೊಡ್ಡ ಬಜೆಟ್‌ನ ಸಿನಿಮಾಗಳನ್ನು ಮಾಡಬೇಕೆಂದುಕೊಂಡಿರುವೆ. ಗುಣಮಟ್ಟದಲ್ಲಿಯೂ ಉತ್ಕೃಷ್ಟವಾಗಿರುವ ಚಿತ್ರಗಳನ್ನು ಎದುರು ನೋಡುತ್ತಿರುವೆ. ‘ಅಶೋಕ ಬ್ಲೇಡ್’ ₹16 ಕೋಟಿ ಬಜೆಟ್‌ನ ಸಿನಿಮಾ. ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಬರುತ್ತಿದೆ. ಇಲ್ಲಿಯತನಕ ಕೈಹಿಡಿದು ನಡೆಸಿರುವ ಜನರ ಪ್ರೀತಿ, ನಂಬಿಕೆ ಉಳಿಸಿಕೊಂಡು, ನಿರ್ಮಾಪಕರಿಗೆ ಹಾಕಿದ ಬಂಡವಾಳ ಮರುಗಳಿಕೆ ಮಾಡಿಕೊಡುವಂತಹ ಸಿನಿಮಾ ಮಾಡುತ್ತೇನೆ. ನವೆಂಬರ್ ಅಂತ್ಯ ಅಥವಾ ಡಿಸೆಂಬರ್‌ನಲ್ಲಿ ‘ಮ್ಯಾಟ್ನಿ’ ತೆರೆಗೆ ಬರಲಿದೆ” ಎನ್ನುತ್ತಾರೆ ಸತೀಶ್.

ನಟನೆಯಲ್ಲದೆ ಸಮಾಜಮುಖಿ ಕೆಲಸಗಳಲ್ಲಿಯೂ ಸತೀಶ್ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ತಮ್ಮ ಗೆಳೆಯರ ಪುಟ್ಟ ತಂಡ ಕಟ್ಟಿಕೊಂಡು ಸಹಾಯ ಮಾಡಿದ್ದರು. ‘ನಟರಾಗಿ ನಾವು ಗಳಿಸಿದ್ದು ಜನರಿಂದ. ಹೀಗಾಗಿ ಅವರ ಕಷ್ಟಕ್ಕೆ, ಪ್ರೀತಿಗೆ ಸ್ಪಂದಿಸಬೇಕು. ಇದರಲ್ಲಿ ದೊಡ್ಡತನವೇನೂ ಇಲ್ಲ. ಸಮಾಜಕ್ಕೆ ಮರಳಿ ಕಿಂಚಿತ್ತಾದರೂ ನೀಡುತ್ತಿದ್ದೇವೆ ಎಂಬ ಆತ್ಮತೃಪ್ತಿಯಷ್ಟೆ’ ಎಂದು ಧನ್ಯತಾಭಾವ ವ್ಯಕ್ತಪಡಿಸಿದರು ಸತೀಶ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

✗ **‘ಉದಯಪುರದ** ಟೈಲರ್ ಕನ್ಹಯ್ಯಲಾಲ್ ಅವರ ಕೊಲೆ ಪ್ರಕರಣದಲ್ಲಿ ರಾಜಸ್ಥಾನದ ಕಾಂಗ್ರೆಸ್ ಸರ್ಕಾರವು ವಿಶೇಷ ನ್ಯಾಯಾಲಯವನ್ನು ರಚಿಸಬೇಕಿತ್ತು. ಹಾಗೆ ಮಾಡಿದ್ದಿದ್ದರೆ, ಕನ್ಹಯ್ಯಲಾಲ್ ಕೊಲೆಗಡುಕರಿಗೆ ಈ ಹೊತ್ತಿಗೆ ಗಲ್ಲು ಶಿಕ್ಷೆ ಜಾರಿಯಾಗಿರುತ್ತಿತ್ತು. ಕೊಲೆಗಡುಕರನ್ನು ಹಿಡಿಯಲೂ ಸರ್ಕಾರಕ್ಕೆ ಇಷ್ಟವಿರಲಿಲ್ಲ. ಕೇಂದ್ರದಿಂದ ಬಂದ ಎನ್‌ಐಎ ತಂಡ ಕೊಲೆಗಡುಕರನ್ನು ಬಂಧಿಸಿತು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳುತ್ತಿರುವ ಎರಡು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದರಲ್ಲಿ ಅಮಿತ್ ಶಾ ಅವರು ನೀಡುತ್ತಿರುವ ಹಲವು ವಿವರಗಳು ತಪ್ಪಾಗಿವೆ.

✓ **ಉದಯಪುರದ** ಟೈಲರ್ ಕನ್ಹಯ್ಯಲಾಲ್ ಅವರ ಹತ್ಯೆ ನಡೆದಿದದ್ದು 2022ರ ಜೂನ್ 28ರಂದು. ಹತ್ಯೆ ನಡೆದ ನಾಲ್ಕು ತಾಸಿನ ಒಳಗೆ ರಾಜಸ್ಥಾನ ಪೊಲೀಸರು ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದರು. ಹೀಗಾಗಿ ಎನ್‌ಐಎ ಆ ಆರೋಪಿಗಳನ್ನು ಬಂಧಿಸಿತು ಎಂದು ಅಮಿತ್ ಶಾ ಅವರು ಹೇಳಿದ್ದು ಸುಳ್ಳು. ಜತೆಗೆ ಜೂನ್ 29ರಂದೇ ಎನ್‌ಐಎ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿತ್ತು. ಎನ್‌ಐಎಯೇ 2022ರ ಡಿಸೆಂಬರ್‌ನಲ್ಲಿ ಆರೋಪಪಟ್ಟಿ ಸಲ್ಲಿಸಿದೆ. ಇಬ್ಬರು ಆರೋಪಿಗಳಿಗೆ ಜಾಮೀನೂ ಸಿಕ್ಕಿದೆ. ‘ಉದಯಪುರದ ಟೈಲರ್ ಕನ್ಹಯ್ಯಲಾಲ್ ಅವರ ಕೊಲೆ ಪ್ರಕರಣದಲ್ಲಿ ರಾಜಸ್ಥಾನದ ಕಾಂಗ್ರೆಸ್ ಸರ್ಕಾರವು ವಿಶೇಷ ನ್ಯಾಯಾಲಯವನ್ನು ರಚಿಸಬೇಕಿತ್ತು. ಹಾಗೆ ಮಾಡಿದ್ದಿದ್ದರೆ, ಕನ್ಹಯ್ಯಲಾಲ್ ಕೊಲೆಗಡುಕರಿಗೆ ಈ ಹೊತ್ತಿಗೆ ಗಲ್ಲು ಶಿಕ್ಷೆ ಜಾರಿಯಾಗಿರುತ್ತಿತ್ತು’ ಎಂದು ಅಮಿತ್ ಶಾ ಹೇಳಿದ್ದು 2023ರ ಜೂನ್ 30ರಂದು. 2022ರ ಜೂನ್ 29ರಿಂದ ಕೇಂದ್ರ ಸರ್ಕಾರದ ಎನ್‌ಐಎ ತನಿಖೆ ನಡೆಸುತ್ತಿದ್ದರೂ ಶಾ ಅವರು ರಾಜ್ಯ ಸರ್ಕಾರ ವಿಶೇಷ ನ್ಯಾಯಾಲಯ ರಚಿಸಬೇಕಿತ್ತು ಎಂದು ಜನರನ್ನು ಹಾದಿತಪ್ಪಿಸುವ ರೀತಿಯಲ್ಲಿ ಹೇಳಿದ್ದಾರೆ.

ಗುಂಡಣ್ಣ

ನುಡಿ ಬೆಳಗು

ಪ್ರೊ.ಎಂ. ಕೃಷ್ಣೇಗೌಡ

ಬಲೇ ತಮಾಷೆ ಇದು!

ಈ ಆನೆ ಇದೆಯಲ್ಲ, ಅದು ಸಣ್ಣ ಮರಿಯಾಗಿರುವಾಗ ಮಾವುತರು ಅದನ್ನು ಒಂದು ಮರದ ಗೂಟಕ್ಕೆ ಕಟ್ಟಿಹಾಕುತ್ತಾರೆ. ಗೂಟ ಅಂದರೆ ಬಹಳ ದೊಡ್ಡದೇನಲ್ಲ ಅದು. ಒಂದರ್ಧವೋ ಮುಕ್ಕಾಲೋ ಅಡಿ ದಪ್ಪ, ಒಂದು ಮೂರ್ನಾಲ್ಕು ಅಡಿ ಎತ್ತರದ ಮರದ ಗೂಟ ಅದು. ಆನೆಯ ಕಾಲಿಗೆ ಒಂದು ಹಗ್ಗ ಕಟ್ಟಿ ಅದನ್ನು ಆ ಗೂಟಕ್ಕೆ ಬಿಗಿಯುತ್ತಾರೆ. ಅಷ್ಟು ಚಿಕ್ಕದಿರುವಾಗ ಆನೆಗೆ ಆ ಗೂಟ ಮುರಿಯಲು ಸಾಧ್ಯವಾಗುವುದಿಲ್ಲ.

ಅಚ್ಚರಿ ಮತ್ತು ತಮಾಷೆಯೇನೆಂದರೆ ಆನೆ ದೊಡ್ಡದಾದ ಮೇಲೂ ಅದೇ ಗೂಟಕ್ಕೆ ಕಟ್ಟಿಹಾಕುತ್ತಾರೆ. ಆಗಲೂ ಆನೆ ಆ ಗೂಟವನ್ನು ಮುರಿಯುವುದಿಲ್ಲ. ಮುರಿಯಲು ಪ್ರಯತ್ನ ಮಾಡುವುದೂ ಇಲ್ಲ. ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳನ್ನೇ ಅಲ್ಲಾಡಿಸಿ ಮುರಿದು ಬಿಸಾಕುವ ಆನೆ ಈ ಮೂರಡಿ ಗೂಟವನ್ನು ಮಾತ್ರ ಮುರಿಯುವುದಿಲ್ಲ. ಯಾಕೆ? ಆನೆ ಅದರ ಚಿಕ್ಕಂದಿನಲ್ಲಿ ಒಮ್ಮೆಯೋ ಇಮ್ಮೆಯೋ ಆ ಗೂಟವನ್ನು ಮುರಿಯಲು ಕಾಲು ಝಾಡಿಸಿದ್ದಿರಬಹುದು, ಆ ವಯಸ್ಸಿನ ಅದರ ಶಕ್ತಿಗೆ ಆ ಗೂಟ ಮುರಿಯುವುದಿಲ್ಲ. ಆಗ ಆನೆ ಮರಿಗೆ ಆ ಗೂಟವನ್ನು ತನ್ನಿಂದ ಮುರಿಯಲು ಸಾಧ್ಯವಿಲ್ಲ ಎಂದು ಮನದಟ್ಟಾಗುತ್ತದೆ. ಯಾವಾಗ ಅದು ತನ್ನಿಂದ ಮುರಿಯಲಾಗದ ಗೂಟ ಎಂಬುದು ಆನೆಯಮರಿಗೆ ದೃಢವಾಗಿಬಿಡುತ್ತದೆಯೋ ಆಗಿನಿಂದ ಅದು- ದೊಡ್ಡದಾಗಿ ಬೆಳೆದ ಮೇಲೆ ಕೂಡಾ- ಆ ಗೂಟವನ್ನು ಮುರಿಯಲು ಯೋಚನೆ ಕೂಡಾ ಮಾಡುವುದಿಲ್ಲ.

ಬಹುಶಃ ನಮ್ಮಲ್ಲಿ ಬಹುಮಂದಿ ಇರುವುದು ಹೀಗೆಯೇ. ಯಾವುದೋ ಅಭಿಪ್ರಾಯ, ನಂಬಿಕೆ, ನಿಲುವಿನ ಗೂಟಕ್ಕೆ ಕಾಲುಕಟ್ಟಿಕೊಂಡು ಅಲ್ಲೇ ಬಿದ್ದಿರುತ್ತೇವೆ.

ಜಗತ್ತಿನಲ್ಲಿ ನಾವು ಕಾಣುವ ಎಷ್ಟೋ ಸಾಧಕರು ಈ ಗೂಟ ಮುರಿದವರು. ‘ನಾವು ಕುರುಡರು ಸಾರ್, ಯಾವುದೋ ಜನ್ಮದ ಶಾಪ ಸಾರ್ ಇದು...’ ಅಂತ ಅಲವತ್ತುಕೊಂಡು ಹಲುಬುವ ಜನರು ನಮ್ಮ ಸುತ್ತ ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಬೆನ್ನೋ ಜೆಫಿನ್, ಅಜಿತ್ ಕುಮಾರ್ ಯಾದವ್, ಪ್ರಾಂಜಲ್ ಪಾಟೀಲ್, ಹೀನಾ ರಾತಿ, ಪೂರ್ಣ ಸುಂದರಿ, ಆಯುಷಿ, ಇವರೆಲ್ಲಾ ಅಂಧರೇ. ಆದರೆ ಅಂಧರು ಏನೂ ಸಾಧಿಸಲಾರರು ಎಂಬ ನಂಬಿಕೆಯ ಗೂಟ ಮುರಿದವರು. ಅವರೆಲ್ಲರೂ ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡಿ ಈಗ ನಮ್ಮ ದೇಶದಲ್ಲಿ ಉನ್ನತ ಅಧಿಕಾರಿಗಳಾಗಿದ್ದಾರೆ. ಮಕ್ಕಳಿಲ್ಲದವರ ಬಾಳು ಹಾಳು ಎನ್ನುವವರ ಮಧ್ಯೆಯೇ ಮಕ್ಕಳನ್ನು ಸಾಕಲಾಗದಿದ್ದರೇನು ಮರಗಿಡಗಳನ್ನು ಸಾಕಿಯೂ ನಾಲ್ಕು ಜನರ ಬಾಳಿಗೆ ನೆರಳು ಕೊಡಬಹುದಲ್ಲಾ ಎಂದುಕೊಂಡು ಅಸಾಧ್ಯವನ್ನು ಸಾಧಿಸಿದವಳು ವೃಕ್ಷಮಾತೆ ಸಾಲುಮರದ ತಿಮ್ಮಕ್ಕ. ಕಾಲು ಕಳೆದುಕೊಂಡ ಮೇಲೆ ಬದುಕೇ ಮುಗಿಯಿತು ಎನ್ನುವವರ ನಡುವೆಯೇ ಮರದ ಕಾಲು ಕಟ್ಟಿಕೊಂಡು ಮಹಾನ್ ನೃತ್ಯಗಾರ್ತಿ, ನಟಿ ಆದವಳು ಸೋದರಿ ಸುಧಾಚಂದ್ರನ್. ಹೊತ್ತಿನ ಊಟಕ್ಕೂ ಕಷ್ಟಪಟ್ಟವರು ಮಹಾನ್ ವಿಜ್ಞಾನಿ, ರಾಷ್ಟ್ರಪತಿ, ದಾರ್ಶನಿಕರಾದವರು ಕೀರ್ತಿಶೇಷ ಡಾ. ಎ.ಪಿ. ಜೆ.ಅಬ್ದುಲ್ ಕಲಾಂ.

ಎಷ್ಟು ಉದಾಹರಣೆಗಳು ಬೇಕು? ಇವರೆಲ್ಲರೂ ಆ ಗೂಟ ಮುರಿದವರೇ. ನಾವೀಗ ನಮ್ಮನ್ನು ಕಟ್ಟಿಹಾಕಿರುವ ಗೂಟದ ಕಡೆ ನೋಡೋಣ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 10, 2023

10 ನವೆಂಬರ್ 2023 ಶುಕ್ರವಾರ
ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದ್ವಾದಶಿ ಗಂ. 12-36 ನಕ್ಷತ್ರ: ಹಸ್ತ ಗಂ. 24-08 ಯೋಗ: ವಿಷ್ಕಂಭ ಗಂ 17-05 ಕರಣ: ತೈತಿಲ ಗಂ. 12-36, ತುಲಾ ಮಾಸದ 24 ನೇ ದಿನ, ಮಳೆನಕ್ಷತ್ರ: ವಿಶಾಖ 2.
ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 25 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 6, 12

ಮೇಷ: ಅವಕಾಶ ನಿಮ್ಮನ್ನರಸಿ ಬರಲಿದೆ. ವಿವೇಚನೆಯಿಂದ ಉಪಯೋಗಿಸಿಕೊಂಡಲ್ಲಿ ಹೆಚ್ಚಿನ ಅನುಕೂಲ. ಅರ್ಧಕ್ಕೆ ನಿಂತಿದ್ದ ಗೃಹ ನಿರ್ಮಾಣ ಕೆಲಸ ಮುಂದುವರೆಯುವುದು. ದಂತ ವೈದ್ಯರಿಗೆ ಒಳ್ಳೆಯ ದಿನ.

ವೃಷಭ: ಅಹಂಕಾರದ ನಡುವಳಿಕೆ ಸೋಲು, ನಷ್ಟ, ನಿರಾಸೆಗೆ, ಏಕಾಂಗಿತನಕ್ಕೆ ನೇರ ಕಾರಣ. ಹಣ ಹೂಡಿಕೆ ವಿಷಯದಲ್ಲಿ ನಿಮ್ಮ ಅನಿಸಿಕೆಯಂತೆ ನಡೆಯುವುದು ಉತ್ತಮ. ಯಶಸ್ಸು ನಿಮ್ಮ ಪಾಲಿಗೆ ನಿಶ್ಚಿತವಾಗಿರುತ್ತದೆ.

ಮಿಥುನ: ಹೊಸ ಕ್ರಿಯಾಶೀಲ ಉದ್ಯೋಗದಿಂದ ತೃಪ್ತಿ ಹಾಗೂ ನೆಮ್ಮದಿ ಕಾಣುವಿರಿ. ಸಾಲ ಮರುಪಾವತಿ ವಿಚಾರದಿಂದಾಗಿ ತಲೆಬಿಸಿ. ವ್ಯಾಪಾರಗಳಲ್ಲಿ ನಿರೀಕ್ಷಿತ ಆದಾಯಕ್ಕಿಂತ ಹೆಚ್ಚು ಲಾಭಗಳಿಸುವಿರಿ.

ಕರ್ಕಾಟಕ: ಅರ್ಧಕ್ಕೆ ನಿಂತಿರುವ ವ್ಯವಹಾರ ಪೂರ್ತಿಗೊಳಿಸಲು ವ್ಯಕ್ತಿಗಳ ಮೊರೆ ಹೋಗುವುದು. ನೇರ ಭೇಟಿ ಮಾಡುವುದು ಉತ್ತಮ. ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ದಿನ ನಿತ್ಯದಲ್ಲಿ ರೂಢಿಸಿಕೊಳ್ಳಿ.

ಸಿಂಹ: ನಿಮ್ಮ ಕೆಲಸಕಾರ್ಯಗಳ ಅಭಿವೃದ್ಧಿಯ ಬಗ್ಗೆ ಯೋಚಿಸಲು ಮತ್ತು ಹೊಸ ಹೊಂದಾಣಿಕೆಗಳ ಬಗ್ಗೆ ಕೆಲಸ ಮಾಡಲು ಸೂಕ್ತ ದಿನ. ಬಂಧುಗಳಲ್ಲಿ ವಿಶ್ವಾಸ, ಸಂಬಂಧ ಉಳಿಸಿ-ಬೆಳೆಸಿಕೊಳ್ಳುವ ಪ್ರಯತ್ನವಿರಲಿ.

ಕನ್ಯಾ: ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲ ಹೆಚ್ಚಿಸಿದರೆ ಉದ್ಯೋಗ ಪ್ರಾಪ್ತಿಗೆ ಅನುಕೂಲ. ಗೆಳೆಯರೊಂದಿಗೆ ದೂರದ ಪ್ರಯಾಣದ ಸಾಧ್ಯತೆ. ಪತ್ರವ್ಯವಹಾರದಲ್ಲಿ ಅನುಕೂಲವಾಗಲಿದೆ.

ತುಲಾ: ದೇಹದಲ್ಲಿ ರಕ್ತ ಸಂಬಂಧ ತೊಂದರೆ ಎದುರಾಗಬಹುದು. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಮಾಧ್ಯಮ ಸಂಸ್ಥೆಗಳವರಿಗೆ ಉತ್ತಮ ದಿನ.

ವೃಶ್ಚಿಕ: ಹಣಕಾಸಿನ ವ್ಯವಹಾರಗಳೆಲ್ಲ ಸುಗಮವಾಗಿ ಸಾಗುತ್ತಿರುವುದರಿಂದ ಮನಸ್ಸು ನಿರಾಳವಾಗಿರುವುದು. ವಾಹನಗಳ ಬಿಡಿ ಭಾಗಗಳ ಮಾರಾಟದಿಂದ ಲಾಭ. ಲೇವಾದೇವಿ ವ್ಯವಹಾರದಲ್ಲಿ ವಂಚನೆಗೆ ಒಳಗಾಗುವಿರಿ.

ಧನು: ಅನಾವಶ್ಯಕವಾಗಿ ಎಳೆದುಕೊಳ್ಳುವ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು. ಸೇವೆಯ ಕಾಲದ ಆಧಾರದ ಮೇಲೆ ಕೆಲಸದಲ್ಲಿ ಬಡ್ತಿ ದೊರೆಯಲಿದೆ. ಸಂಗೀತದಲ್ಲಿನ ನಿಮ್ಮ ಆಸಕ್ತಿಗೆ ಮನೆಯವರಿಂದ ಪ್ರೋತ್ಸಾಹ.

ಮಕರ: ಸಂಶೋಧನಾ ವಿದ್ಯಾರ್ಥಿಗಳಿಗೆ ಇದುವರೆಗೆ ಕಲಿತಿರುವ ವಿಷಯಗಳನ್ನು ಪ್ರಾಯೋಗಿಕವಾಗಿ ಬಳಕೆಗೆ ತರಲು ಇದು ಸುದಿನ. ನಿಮ್ಮ ಚಟುವಟಿಕೆಗಳು ಚುರುಕುಗೊಂಡಿದ್ದು ತುಂಬಾ ಲವಲವಿಕೆಯಿಂದ ಇರುವಿರಿ.

ಕುಂಭ: ಇಂದು ಬರುವ ನೂತನ ಯೋಚನೆ ಖರ್ಚಿನದಾದರೂ ಮುಂದಿನ ದಿನದಲ್ಲಿ ಉಪಕಾರಿ. ಅದರಿಂದ ನಿಮ್ಮ ಕೀರ್ತಿ ಎಲ್ಲ ಕಡೆಗೆ ಹರಡುವುದು. ಷೇರು ವ್ಯವಹಾರದಲ್ಲಿ ಸಮಸ್ಯೆ ಅಥವಾ ನಷ್ಟ ಸಂಭವಿಸಬಹುದು.

ಮೀನ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ನಿಮ್ಮ ವ್ಯಕ್ತಿತ್ವವಿರಲಿ. ಕೆಲವು ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಬಯಸುವಿರಿ.

ಪದಬಂಧ 5496

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಗಸ ನೋಡುತ್ತಿರುವ ಮಡಿವಾಳ (3)
4.ಹೊಲದಡೆ ಹೋಗುವುದನ್ನು ತಡೆದಕ್ಕೇ ಈ ಏಟು! (3)
6.ಸಾಯುವ ಸಮಯವಿದು (5)
7.ಇದು ಸ್ತ್ರೀ ಅಥವಾ ಪುರುಷನಲ್ಲ! (4)
9.ಊರಿಗೆಲ್ಲಾ ಸಹಾಯ ಮಾಡುವವನು (4)
10.ಹಾಲು ಕೊಟ್ಟವನ ಪ್ರಾರ್ಥನೆ (4)
11.ದೂರದೂರಿಂದ ಬಂದಿರುವ ಆಚಾರಿ ನೀತಿಗೆಟ್ಟವನು! (4)
13.ಕರ ತಟ್ಟಿ ಹೊಡೆದ ಚಪ್ಪಾಳೆ (5)
16.ಸಕ್ಕರೆ ಬೇಕೆನ್ನುತ್ತಿರುವ ಅಸುರ (3)
17.ಆ ದಂಪತಿ ಹರಡಿದ್ದು ಬರೀ ಗಾಳಿಸುದ್ದಿ! (3)

ಮೇಲಿಂದ ಕೆಳಕ್ಕೆ
1.ಅವನು ಮಾನವಂತನಾಗಿದ್ದರೂ ಈ ಸಂದೇಹವೇ? (4)
2.ಇದು ಅಸಮವಲ್ಲ ಬಿಡಿ! (2)
3.ಕಾಜಾಣ ತೋರಿಸಿದ ಬುದ್ಧಿವಂತ! (2)
4.ಬೆಳೆ ಬೆಳೆಯುವ ಭೂಮಿ (2)
5.ತರತರದ ಕಾಯಿಪಲ್ಲೆ (4)
8.ಕಡ ಕೇಳುವವ ತೋರಿಸಿದ ಸಮುದ್ರ (3)
9.ಉಮೇದುವಾರ ತೋರುತ್ತಿರುವ ಹುರುಪು! (3)
10.ಆದರ ತೋರದಿರುವಿಕೆ (4)
12.ಯತಿಗೆ ಸಿಕ್ಕಿರುವ ಸೋಡಿ! (4)
13.ಕನಸಲ್ಲೇ ನೋಡಿದ ಕೊಳೆ (2)
14.ಆ ತಾವರೆ ನೋಡುವಾಗ ಕಾಣಿಸಿದ ನಕ್ಷತ್ರ (2)
15.ವನದಲ್ಲಿ ತಿರುಗಿದಾಗ ಹೊಸತು ಕಾಣುತ್ತಿದೆ (2)



5495ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅವಿವೇಕಿ 5.ಪರಂಪರೆ
6.ಪರಸತಿ 8.ನಾಡಿ 9.ಸತ್ಯ
10.ಮತಿಹೀನ 13.ಪಾರಂಗತ
14.ಸಮಾರೋಪ

ಮೇಲಿಂದ ಕೆಳಕ್ಕೆ:
1.ತಾಪತ್ರಯ 2.ಅಪರೂಪ
3.ಅನುಮತಿ 4. ಕಿಡಿಗೇಡಿ
7.ಸದ್ಗತಿ 9.ಸಹವಾಸ
10.ಮನಸ್ತಾಪ 11.ನವರಂಗ
12.ಅವಾಂತರ

ಸುಡೊಕು 5882

7	5			1			8	
	3	6	8		9	5	1	7
4			7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5581 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್

gadget for every budget!

2nd PRIZE
HONDA BIKE
Worth ₹ 75,000/-
100 WINNERS

3rd PRIZE
40" HD LED TV
Worth ₹ 29,990/- EACH
1000 WINNERS

4th PRIZE
SURPRIZE Gifts
Worth ₹ 999/- EACH
10000 WINNERS

SHOP & WIN 5.68 CRORES WORTH PRIZES
GET LUCKY DRAW COUPON ON PURCHASE OF ₹3,500/- & ABOVE

FESTIVAL BIGGEST SAVING COMBO MELA

MIXER GRINDER COMBO
Pigeon
Mixer Grinder (Glory) MRP ₹3,325
Cooker (Favourite) 3Ltr MRP ₹1,395
50% DISCOUNT
TOTAL MRP ₹4,720/- | COMBO PRICE ₹2,395/-

GAS STOVE COMBO
Pigeon
62% DISCOUNT
Pigeon Glass Cooktop two Burner MRP ₹4,399
Non Stick Favorite Duo Pack Tawa MRP ₹1,895
TOTAL MRP ₹6,294/- | COMBO PRICE ₹2,395/-

THE WHISTLE COMBO
Pigeon
Deluxe Aluminium Pressure Cooker 5L
Deluxe Aluminium Pressure Cooker 3L
Flat Tawa 280 4mm
46% DISCOUNT
COMBO MRP ₹5,035/- | Offer Price ₹2299/-

THE FIZZY COMBO
Vibrant 5 in 1 IB Set - Hard Anodized Pressure Cooker 2.5L + Flat Tawa 250 + Fry Pan 240 + Kadai 240 with glass lid
Pigeon
Induction Base
54% DISCOUNT
COMBO MRP ₹4,995/- | Offer Price ₹2299/-

WET GRINDER COMBO
Pigeon
Pigeon Wet Grinder (Dyna) MRP ₹5,755
Cooker (Favorite) 3Ltr MRP ₹1,395
36% DISCOUNT
TOTAL MRP ₹7,150/- | COMBO PRICE ₹4,590/-

CHIMNEY COMBO
Pigeon
Chimney Nebula MRP ₹14,590
4 Burner Cooktop MRP ₹7,199
54% DISCOUNT
TOTAL MRP ₹21,789/- | COMBO PRICE ₹9,990/-

Dhanteras Special Offers

LG SIDE BY SIDE REFRIGERATORS
Wi-Fi Convertible
655 Ltr.
FREE LG DOUBLE DOOR REFRIGERATOR WORTH ₹29,499/-
GET INSTANT CASH BACK UPTO ₹12,000/- ON CC & DC
EMI ₹4,990/- ONWARDS

Haier SIDE BY SIDE REFRIGERATORS INVERTER FRENCH 4 DOOR
531 Ltr.
SPECIAL PRICE ₹62,990/-
INSTANT CASHBACK CC EMI ₹9,000/-
EFFECTIVE PRICE ₹53,990/-

SAMSUNG SIDE BY SIDE REFRIGERATORS
655 Ltr.
FREE SAMSUNG 10 Kg TOP LOAD WASHING MACHINE WORTH ₹29,990/-
GET INSTANT CASH BACK UPTO ₹12,000/- ON CC & DC
EMI ₹3,990/- ONWARDS

Premium Range of REFRIGERATORS & WASHING MACHINES

PREMIUM FROST FREE REFRIGERATORS

LG Life's Good
260 Ltr.
GET INSTANT CASH BACK UPTO ₹3,000/- ON CC & DC
FESTIVAL PRICE ₹25,990/-

Whirlpool CORPORATION
340 Ltr.
GET INSTANT CASH BACK UPTO ₹3,500/- ON CC & DC
FESTIVAL PRICE ₹32,990/-

FRONT LOAD WASHING MACHINES

LG Life's Good
8 Kg.
FREE ARIEL MATIC LIQUID
GET INSTANT CASH BACK UPTO ₹4,500/- ON CC & DC
FESTIVAL PRICE ₹35,990/-

Haier
9 Kg.
FREE IRON BOX
GET INSTANT CASH BACK UPTO ₹4,500/- ON CC & DC
SPECIAL PRICE ₹36,990/-

FROST FREE & BMR REFRIGERATORS

SAMSUNG
231 Ltr.
GET INSTANT CASH BACK UPTO ₹1,500/- ON CC & DC
EMI ₹1,990/-

Haier
300 Ltr.
FREE COOKER & NON-STICK WORTH ₹3990/-
GET INSTANT CASH BACK UPTO ₹2,000/- ON CC & DC
SPECIAL PRICE ₹31,490/-

FRONT LOAD WASHING MACHINES

Whirlpool CORPORATION
7 Kg.
FREE VIP SALSA STROLLY WORTH ₹8,990/-
GET INSTANT CASH BACK UPTO ₹2,000/- ON CC & DC
SPECIAL PRICE ₹30,990/-

SAMSUNG
8 Kg.
Hygiene Steam
Digital Inverter
GET INSTANT CASH BACK UPTO ₹5,000/- ON CC & DC
EMI ₹1,490/-

FROST FREE REFRIGERATOR
Haier
240 Ltr.
GET INSTANT CASH BACK UPTO ₹2,500/- ON CC & DC
SPECIAL PRICE ₹24,990/-

DIRECT COOL REFRIGERATOR
LG Haier SAMSUNG Godrej Whirlpool
190 Ltr.
SPECIAL PRICE ₹13,600/- ONWARDS

IFB FRONT LOAD WASHING MACHINE
8 Kg.
FREE 3 PIECE NON-STICK SET WORTH ₹2,295/-
STEAM CYCLE
GET INSTANT CASH BACK UPTO ₹3,000/- ON CC & DC
EMI ₹2,990/-

TOP LOAD WASHING MACHINE
LG Haier SAMSUNG IFB Godrej Whirlpool
7.5 Kg.
GET INSTANT CASH BACK UPTO ₹1,500/- ON CC & DC
SPECIAL PRICE ₹15,990/- ONWARDS

ಬೆಂಗಳೂರು

ನೂತನ ಬಾಗಲೂರು ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕೇಲೇಜ್ ಹತ್ತಿರ Ph : 080-35712968 /35712969 9731306702
ಅಕ್ಷಯನಗರ ಡಿಎಲ್ಎಫ್ ನ್ಯೂ ಟೌನ್ ಯೂನಿಯನ್ ಬ್ಯಾಂಕ್ ಎದುರು ಯೆಲೇನಹಳ್ಳಿ ಮುಖ್ಯ ರಸ್ತೆ Ph :9731307230
ನೆಲಮಂಗಲ ಶ್ರೀ ಮಾರುತಿ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ಜೆಸಿಎಸ್ ಐಟಿಐ ಕಾಲೇಜ್ ಎದುರು Ph 9731306692 / 9686680755
ಬಿಡದಿ ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು-ಮೈಸೂರು ಹೆದ್ದಾರಿ 7702203254
ಕೋಣನಕುಂಟೆ ಸೌಧಾಮಣಿ ಚೌಲ್ಟ್ರಿ ಹತ್ತಿರ ಪೊಲೀಸ್ ಸ್ಟೇಷನ್ ಪಕ್ಕ Ph :9731306531
ಬೇಗೂರು ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604
ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು 9731307264 080-23559977
ಹೊಸಕೋಟೆ ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767
ಹೆಣ್ಣೂರು ಮುಖ್ಯ ರಸ್ತೆ. ಡಿಮಾರ್ಟ್ ಎದುರು 080-48651500/48505043 9731306596
ಮಹದೇವಪುರ ವೈಟ್‌ಫೀಲ್ಡ್ ಮೈನ್ ರೋಡ್ ಬ್ರಾಂಡ್ ಫ್ಯಾಕ್ಟರಿ ಹತ್ತಿರ 080-48148975, 9148151731
ಉತ್ತರಹಳ್ಳಿ ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575
ವೈಟ್ ಫೀಲ್ಡ್ ಉಡುಪಿ ಡೆಲಿಕೆಸಿ ಹೋಟೇಲ್ ಸಮೀಪ ರಾಮಗೊಂಡನಹಳ್ಳಿ. 080-40984677 9513499851

ಯಲಹಂಕ ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702
ಹೆಬ್ಬಗೋಡಿ ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯಾಕಾನ್ ಎದುರು. 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ ಕೇಕ್ ಪ್ಯಾಲೆಸ್ ಹತ್ತಿರ 41610910, 9731306537
ತನಿಸಂದ್ರ ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747
ವಿಜಯನಗರ ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631
ಪೀಣ್ಯ ಟಿ-ದಾಸರಹಳ್ಳಿ ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306684 28393199/4199
ಮತ್ತಿಕೆರೆ ಬಾಂಬೆ ಡೈಯಿಂಗ್ ರಸ್ತೆ. 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ 1ನೇ ಸೆಕ್ಟಾರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550
ಬನಶಂಕರಿ ಬಿಗ್ ಬಜಾರ್ ಎದುರು Ph :9731306572 080-26691262/63
ಜಯನಗರ 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306606
ಚಂದ್ರ ಲೇಔಟ್ ವಾಟರ್ ಟ್ಯಾಂಕ್ ಹತ್ತಿರ 9731306558, 080 41503359
ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616
ಮಾರತಹಳ್ಳಿ ಪಾರ್ಕ್ ಪ್ಲಾಜಾ ಎದುರು 080-42200050 9731306703

ಕೆಂಗೇರಿ, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634
ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766
ಸುಂಕದಕಟ್ಟೆ ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ. 9686680764 23288940/942
ರಾಜಾಜಿನಗರ ಡಯಾಕಾನ್ ಹಾಸ್ಪಿಟಲ್ ಎದುರು. Ph :9686446886 080-23134692
ವಿದ್ಯಾರಣ್ಯಪುರ ಬಿಡಬ್ಲ್ಯೂಎಸ್ಎಸ್‌ಬಿ ಎದುರು. 41721897/1861 9731306614
ಹೆಗ್ಗನಹಳ್ಳಿ ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ ಸೂರ್ಯ ಪ್ಲಾಜಾ, ಜಾಯಲುಕ್ಕಾಸ್ ಎದುರು ಕಮ್ಮನಹಳ್ಳಿ ಮುಖ್ಯ ರಸ್ತೆ 41687449, 9731306571 25450871
ರಾಮಮೂರ್ತಿನಗರ ಮೋರ್ ಎದುರು 41638612/13 8861007307
ಪುಟ್ಟೇನಹಳ್ಳಿ ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080-40954615/16
ಹುಳಿಮಾವು ಶಿವ ಸಾಗರ ಹೋಟೇಲ್ ಸಮೀಪ. 080-26483425 9591997254
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261

Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681

• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್®
ಎಲೆಕ್ಟ್ರೋ ವರ್ಲ್ಡ್
gadget for every budget!
BUMPER PRIZE
1 Kg GOLD
Worth ₹ 51 Lakhs
ಶುಭ ಧನ್‌ತೇರಸ್ ಸೇಲ್
1st PRIZE
MARUTHI ESPRESSO CAR
Worth ₹ 4.25 Lakhs EACH
10 WINNERS
FESTIVAL BIGGEST SAVING
KITCHEN MELA
EUREKA FORBES AO Smith HAVELLS LG pureit BRITA
RO - WATER PURIFIER
1 EMI OFF
ZERO DOWN PAYMENT
10% CASH BACK
FESTIVAL PRICE ₹ 14,490/- ONWARDS
Haier AO Smith HAVELLS V-GUARD
FREE PIPE & INSTALLATION
WATER HEATER
3 Liters ₹3,490/-
15 Liters ₹7,790/-
25 Liters ₹8,790/-
A Healthier Way To Cook
Pigeon
Digital Display with Touch
8 Preset Menu with Defrost Option
360° High Speed Air Circulation Technology
56% DISCOUNT
MRP ₹7,995/-
FESTIVAL PRICE ₹3,495/-
Butterfly FOOD PROCESSOR
INDUCTION COOKTOP
FREE + KETTLE
WORTH ₹5,048/-
PHILIPS HAVELLS Butterfly USHA
DRY IRON
FESTIVAL PRICE ₹590/- ONWARDS
STEAM IRON
FESTIVAL PRICE ₹990/- ONWARDS
PHILIPS HAND MIXER
FESTIVAL PRICE ₹2,299/-
GLASS TOP GAS STOVE
Butterfly FABER Preethi Pigeon
2 BURNER ₹1,790/-
3 BURNER ₹3,890/-
4 BURNER ₹4,290/-
BRING HOME THE GAME with BIGGER SCREEN
OLED TV
QLED TV
EMI
77 OLED ₹7,700/-
65 OLED ₹4,999/-
55 OLED ₹3,999/-
NEO 65 QLED ₹6,999/-
65 QLED ₹4,994/-
55 QLED ₹2,994/-
LG SONY Haier SAMSUNG Panasonic
3 YEARS WARRANTY* | 1 EMI FREE* | upto ₹ 20,000/- INSTANT CASH BACK ON CC & DC EMI | BIGGER SCREEN @ LOWEST EMI | LONG TENURE EMI
LG 55 UHD/4K EMI ₹2,990/-
SONY 55 UHD/4K EMI ₹2,990/-
Haier 55 UHD/4K SPECIAL PRICE ₹42,490/-
SAMSUNG 43 UHD/4K EMI ₹1,990/-
Haier 43 Google TV EMI ₹1,990/-
LG 43 UHD/4K EMI ₹1,990/-
Panasonic 43 UHD/4K EMI ₹2,190/-
BPL 55 UHD/4K FREE BPL SOUNDBAR WORTH ₹4,990/- EMI ₹2,499/-
43 UHD/4K SPECIAL PRICE ₹27,990/-
40 Smart TV SPECIAL PRICE ₹15,990/-
32 Smart TV SPECIAL PRICE ₹10,490/-
32 HD LED TV SPECIAL PRICE ₹8,990/-
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಮಾನಹಾನಿ ಪ್ರಕರಣ ಬಜರಂಗ್‌ಗೆ ಜಾಮೀನು

ನವದೆಹಲಿ (ಪಿಟಿಐ): ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ಅಂತ-ರರಾಷ್ಟ್ರೀಯ ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ದೆಹಲಿಯ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ. ಬಜರಂಗ್ ಅವರು ತಮ್ಮ ವ್ಯಕ್ತಿತ್ವಕ್ಕೆ ಕಳಂಕ ತರುವಂಥ ಆರೋಪ ಮಾಡಿದ್ದರು ಎಂದು ಅವರ ವಿರುದ್ಧ ಕುಸ್ತಿ ತರಬೇತುದಾರ ನರೇಶ್ ದಹಿಯಾ ಅವರು ಮಾನಹಾನಿ ಪ್ರಕರಣ ದಾಖಲಿಸಿದ್ದರು.

ಭಾರತ ಕುಸ್ತಿ ಫೆಡರೇಷನ್ ನಿರ್ಗಮಿತ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಏಳು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದು ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದೇಶದ ಪ್ರಮುಖ ಮಹಿಳಾ ಕುಸ್ತಿಪಟುಗಳು ಏಪ್ರಿಲ್– ಮೇ ತಿಂಗಳಲ್ಲಿ ದೆಹಲಿಯ ಜಂತರ್‌ಮಂ-ಥರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ (ಮೇ 10ರಂದು) ಮಾತನಾಡುವಾಗ, 'ಪ್ರತಿಭಟನೆ ವಿರೋಧಿಸಲು ದಹಿಯಾ ಅವರಿಗೇ ವಿಶ್ವಾಸಾರ್ಹತೆ ಇಲ್ಲ. ಅವರೇ

ಬಜರಂಗ್ ಪೂನಿಯಾ

ಅತ್ಯಾಚಾರ ಪ್ರಕರಣ ಎದುರಿಸುತ್ತಿದ್ದಾರೆ' ಎಂದು ಬಜರಂಗ್ ಹೇಳಿದ್ದರು. ಇದರ ವಿರುದ್ಧ ದಹಿಯಾ ನ್ಯಾಯಾಲಯ-ದಲ್ಲಿ ಪ್ರಕರಣ ದಾಖಲಿಸಿದ್ದರು.

'ಖುದ್ದು ಹಾಜರಾತಿಯಿಂದ ವಿನಾಯಿತಿ ಕೋರಿದ್ದ ಬಜರಂಗ್ ಅವರು ಮೊದಲ ಮೂರು ಬಾರಿ ವಿಚಾರಣೆಗೆ ಹಾಜರಿರಲಿಲ್ಲ. ಅವರು ಗುರುವಾರ ಹಾಜರಾಗಿದ್ದಾರೆ. ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ. ಮುಂದಿನ ವಿಚಾರಣೆಯನ್ನು ಮಾರ್ಚ್ 5ಕ್ಕೆ ಮುಂದೂಡಿದೆ' ಎಂದು ದಹಿಯಾ ಪರ ವಕೀಲ ರಾಜೇಶ್ ಕುಮಾರ್ ರೆಕ್ವಾಲ್ ಪಿಟಿಐಗೆ ತಿಳಿಸಿದರು.

'ಅತ್ಯಾಚಾರಕ್ಕೆ ಸಂಬಂಧಿಸಿ ಹಳೆಯ ಪ್ರಕರಣದಲ್ಲಿ ತಮ್ಮನ್ನು ನಿರ್ದೋಷಿ ಎಂದು ಕೋರ್ಟ್ ಹೇಳಿದೆ. ಬಜರಂಗ್ ಅವರ ಹೇಳಿಕೆಯಿಂದ ತಮ್ಮ ಮಾನಹಾನಿಯಾಗಿದೆ' ಎಂದು ದಹಿಯಾ ನ್ಯಾಯಾಲಯದಲ್ಲಿ ಹೇಳಿದ್ದರು.

ಆರ್ಚರಿ: ಭಾರತದ ಪರನೀತ್ ಕೌರ್‌ಗೆ ಚಿನ್ನ

ಪರನೀತ್ ಕೌರ್

ಬ್ಯಾಂಕಾಕ್ (ಪಿಟಿಐ): ಭಾರತದ ಉದಯೋನ್ಮುಖ ಆರ್ಚರಿಪಟು ಪರನೀತ್ ಕೌರ್ ಏಷ್ಯನ್ ಚಾಂಪಿಯನ್ ಷಿಪ್‌ನಲ್ಲಿ ಅನುಭವಿ ಜ್ಯೋತಿ ಸುರೇಖಾ ವೆನ್ನಂ ಅವರಿಗೆ ಆಘಾತ ನೀಡಿ, ಚಿನ್ನ ಗೆದ್ದರು

ಗುರುವಾರ ನಡೆದ ಸ್ಪರ್ಧೆಗಳಲ್ಲಿ ಭಾರತಕ್ಕೆ ಒಟ್ಟು ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳು ಒಲಿದವು.

ಪರನೀತ್ ಮತ್ತು ಜ್ಯೋತಿ ಅವರ ಹಣಾಹಣಿ ರೋಚಕವಾಗಿತ್ತು. 18 ವರ್ಷದ ಪರನೀತ್ ಸ್ಪರ್ಧೆ ಅರ್ಧ ಹಾದಿ ಕ್ರಮಿಸಿದಾಗ ಎರಡು ಪಾಯಿಂಟ್‌ಗಳಿಂದ ಹಿಂದಿದ್ದರು. ಕೊನೆಯ ಎರಡು ಸುತ್ತುಗಳಲ್ಲಿ ತಮ್ಮ ಸಾಮರ್ಥ್ಯವ-ನ್ನು ಪಣಕ್ಕೊಡ್ಡಿದರು. 145–145ರಿಂದ ಸಮ ವಾಯಿತು. ಟೈಬ್ರೇಕರ್‌ನಲ್ಲಿ ಮುನ್ನಡೆ ಸಾಧಿಸಿದರು. ಜ್ಯೋತಿ ಬೆಳ್ಳಿ ಪದಕ ಪಡೆದರು.

ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಅದಿತಿ ಸ್ವಾಮಿ ಮತ್ತು ಪ್ರಿಯಾಂಶ್ 156–151 ರಿಂದ ಥಾಯ್ಲೆಂಡ್ ತಂಡವನ್ನು ಮಣಿಸಿ ಚಿನ್ನ ಜಯಿಸಿತು.

ಕಂಪೌಂಡ್ ಮಹಿಳಾ ತಂಡ ವಿಭಾಗದಲ್ಲಿ; ಜ್ಯೋತಿ, ಪರನೀತ್, ಅದಿತಿ 234–233ರಿಂದ ಚೈನಿಸ್ ತೈಪೆ ವಿರುದ್ಧ ಗೆದ್ದು ಚಿನ್ನ ಗಳಿಸಿದರು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಅಭಿಷೇಕ್ ವರ್ಮಾ 147–146ರಿಂದ ದಕ್ಷಿಣ ಕೊರಿಯಾದ ಜೂ ಜೆಹೂನ್ ವಿರುದ್ಧ ಗೆದ್ದು ಕಂಚಿನ ಪದಕ ಪಡೆದರು. ಇದು ಭಾರತಕ್ಕೆ ಈ ಚಾಂಪಿಯನ್ ಷಿಪ್‌ನಲ್ಲಿ ಒಲಿದ ಮೂರನೇ ಕಂಚಿನ ಪದಕ.

ರಿಕರ್ವ್‌ನಲ್ಲಿ ಕಂಚು: ಭಾರತದ ರಿಕರ್ವ್ ಆರ್ಚರಿ ಪಟುಗಳ ತಂಡವು ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸುವ ಅರ್ಹತೆ ಗಿಟ್ಟಿಸಲು ವಿಫಲರಾದರು. ಆದರೆ ಮಹಿಳಾ ತಂಡ ಕಂಚು ಗಳಿಸಿತು.

ಐದನೇ ಶ್ರೇಯಾಂಕದ ಭಾರತ ತಂಡದಲ್ಲಿ ಅಂಕಿತಾ ಭಕತ್, ಭಜನ್ ಕೌರ್ ಮತ್ತು ತಿಷಾ ಪೂನಿಯಾ ಅವರಿದ್ದ ತಂಡಕ್ಕೆ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಸವಾಲು ಮೀರಲಿಲ್ಲ.

ಪುರುಷರ ವಿಭಾಗದಲ್ಲಿ ಭಾರತ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿತು. ಧೀರಜ್ ಬೊಮ್ಮದೇವರ, ತರುಣ ದೀಪ್ ರಾಯ್, ಪ್ರವೀಣ ಜಾಧವ್ ತಂಡದಲ್ಲಿದ್ದರು.

ಆರ್ಜೆಂಟೀನಾದಲ್ಲಿ ಭಾರತ ತಂಡದ ಸಿದ್ಧತೆ

ನವದೆಹಲಿ (ಪಿಟಿಐ): ಚಿಲಿಯ ಸ್ಯಾಂಟಿಯಾಗೊದಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಅಂತಿಮ ಹಂತದ ಸಿದ್ಧತೆ ನಡೆಸಲು ಭಾರತ ಜೂನಿಯರ್ ಮಹಿಳಾ ಹಾಕಿ ತಂಡವು ನೆರೆಯ ಆರ್ಜೆಂಟೀನಾದಲ್ಲಿ ತರಬೇತಿ ನಡೆಸಲಿದೆ ಮತ್ತು ಅಭ್ಯಾಸ ಪಂದ್ಯಗಳನ್ನು ಆಡಲಿದೆ. ಇದರಿಂದ ಅಲ್ಲಿನ ಹವೆಗೆ ಒಗ್ಗಿಕೊಳ್ಳಲು ನೆರವಾಗಲಿದೆ ಎಂದು ಮುಖ್ಯ ಕೋಚ್ ತುಷಾರ್ ಖಾಂಡ್ಕರ್ ಗುರುವಾರ ಇಲ್ಲಿ ತಿಳಿಸಿದರು.

ಜೂನಿಯರ್ ಮಹಿಳಾ ವಿಶ್ವಕಪ್ ನ. 29ರಿಂದ ಡಿ.10ರವರೆಗೆ ನಡೆಯಲಿದೆ. ಹಾಕಿ ಇಂಡಿಯಾ ಈಗಾಗಲೇ ತಂಡವನ್ನು ಪ್ರಕಟಿಸಿದೆ.

'ನಾವು ಚಿಲಿಗೆ ಹೋಗುವ ಮೊದಲು ಆರ್ಜೆಂಟೀನಾದಲ್ಲಿ ತರಬೇತಿ ನಡೆಸಲಿದ್ದೇವೆ ಮತ್ತು ಅಭ್ಯಾಸ ಪಂದ್ಯಗಳನ್ನು ಆಡುತ್ತೇವೆ. ಇದರಿಂದ ನಮಗೆ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳಲು ಆಟಗಾರ್ತಿಯರಿಗೆ ಸಾಧ್ಯವಾಗಲಿದೆ' ಎಂದು ಖಾಂಡ್ಕರ್ ತಿಳಿಸಿದರು.

ಭಾರತ ತಂಡವು, ಜರ್ಮನಿ, ಬೆಲ್ಜಿಯಂ ಮತ್ತು ಕೆನಡಾ ತಂಡಗಳ ಜೊತೆ 'ಸಿ' ಗುಂಪಿನಲ್ಲಿದೆ. ಅದು ತನ್ನ ಮೊದಲ ಪಂದ್ಯವನ್ನು ಕೆನಡಾ ವಿರುದ್ಧ ನವೆಂಬರ್ 29ರಂದು ಆಡಲಿದೆ. ಜರ್ಮನಿ ಮತ್ತು ಬೆಲ್ಜಿಯಂ ವಿರುದ್ಧದ ಪಂದ್ಯಗಳು ಕ್ರಮವಾಗಿ ನವೆಂಬರ್ 30, ಡಿಸೆಂಬರ್ 2ರಂದು ನಡೆಯಲಿವೆ.

ನೆದರ್ಲೆಂಡ್ಸ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಚಿಲಿ ತಂಡಗಳು 'ಎ' ಗುಂಪಿನಲ್ಲಿವೆ. ಆರ್ಜೆಂಟೀನಾ, ಸ್ಪೇನ್, ಜಿಂಬಾಬ್ವೆ ಮತ್ತು ಕೊರಿಯಾ 'ಬಿ' ಗುಂಪಿನಲ್ಲಿವೆ. 'ಡಿ' ಗುಂಪಿನಲ್ಲಿ ಇಂಗ್ಲೆಂಡ್, ಅಮೆರಿಕ, ನ್ಯೂಜಿಲೆಂಡ್ ಮತ್ತು ಜಪಾನ್ ತಂಡಗಳಿವೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ಕ್ವಾರ್ಟರ್‌ಫೈನ-ಲ್ ತಲುಪಲಿವೆ. ಕ್ವಾರ್ಟರ್‌ಫೈನಲ್ ಪಂದ್ಯಗಳು ಡಿಸೆಂಬರ್ 6 ಮತ್ತು 8ರಂದು ನಡೆಯಲಿದ್ದು, ಫೈನಲ್ 10ರಂದು ನಿಗದಿಯಾಗಿದೆ.

ಭಾರತ ಈ ಹಿಂದಿನ ವಿಶ್ವಕಪ್‌ನ-ಲ್ಲಿ ಕಂಚಿನ ಪದಕವನ್ನು ಸ್ವಲ್ಪದರಲ್ಲೇ ಕಳೆದುಕೊಂಡು ನಾಲ್ಕನೇ ಸ್ಥಾನ ಗಳಿಸಿತ್ತು.

ಭಾರತ ತಂಡವನ್ನು ಪ್ರೀತಿ ಅವರು ಮುನ್ನಡೆಸಲಿದ್ದು, ರುತುಜಾ ದಾಸಾಸೊ ಪಿಸಾಳ ಅವರು ಉಪನಾಯಕಿ ಆಗಿದ್ದಾರೆ.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com